ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮೇಲ್ಮನೆ ಸದಸ್ಯರ ಪ್ರಮಾಣ ವಚನ



ವಿಧಾನ ಪರಿಷತ್‌ಗೆ ಆಯ್ಕೆಯಾದ ನೂತನ ಸದಸ್ಯರ ಪ್ರಮಾಣ ವಚನ ಕಾರ್ಯಕ್ರಮ ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಸೋಮವಾರ ಜರುಗಿತು. ಸಿಎಂ ಸಿದ್ದರಾಮಯ್ಯ ಪುತ್ರ ಯತೀಂದ್ರ ಸಿದ್ದರಾಮಯ್ಯ, ಸಿ.ಟಿ.ರವಿ, ಎನ್.ಎ.ಬೋಸರಾಜು ಸೇರಿದಂತೆ ಒಟ್ಟು 17 ಮಂದಿಗೆ ಸಭಾಪತಿ ಬಸವರಾಜ್ ಹೊರಟ್ಟಿ ಪ್ರಮಾಣ ವಚನ ಬೋಧಿಸಿದರು. ಈ ವೇಳೆ ಸಿಎಂ ಸಿದ್ದರಾಮಯ್ಯ, ಕಾನೂನು ಸಚಿವ ಎಚ್.ಕೆ.ಪಾಟೀಲ್ ಇದ್ದರು.

ಪುಟ ತೆರೆದಂತೆ...

ಕಠಿಣ ಕ್ರಮವಿಲ್ಲದಿದ್ದರೆ ಇನ್ನಷ್ಟು ಪರೀಕ್ಷಾ ಅಕ್ರಮ ಖಚಿತ

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ

ಸಂ.ಪುಟ | 6

ಬದುಕೆಂದರೆ ಪಯಣ, ನಾವೆಲ್ಲರೂ ಪಯಣಿಗರು!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ

ಸಂ.ಗಮ | 7

ಅಧಿವೇಶನಕ್ಕೂ ಮುನ್ನ ಪ್ರಧಾನಿ ಭಾಷಣ, ಪ್ರತಿಪಕ್ಷಗಳತ್ತ ಚಾಟಿ | ತುರ್ತು ಪರಿಸ್ಥಿತಿ ನೆನಪಿಸಿಕೊಂಡ ಮೋದಿ

ಎರಡು ಅವಧಿಯ ಅಘೋಷಿತ ತುರ್ತುಪರಿಸ್ಥಿತಿ ಬಗ್ಗೆ ಮಾತನಾಡಿ ಎಂದು ಕಾಲೆಳೆದ ಮಲ್ಲಿಕಾರ್ಜುನ್ ಖರ್ಗೆ

ಮೊದಲ ದಿನವೇ ಸವಾಲ್-ಜವಾಬ್

ದೆಹಲಿ: 18ನೇ ಲೋಕಸಭೆಯ ಮೊದಲ ಅಧಿವೇಶನ ಸೋಮವಾರ ಆರಂಭವಾಗಿದೆ. ಪ್ರತಿಪಕ್ಷಗಳ ಬಲವರ್ಧನೆಯೊಂದಿಗೆ ಮೊದಲ ದಿನವೇ ಆಡಳಿತ ಪಕ್ಷ- ವಿಪಕ್ಷ ಮಧ್ಯೆ ಸವಾಲ್-ಜವಾಬ್ ಆರಂಭವಾಗಿದೆ. ಅಧಿವೇಶನ ಆರಂಭಕ್ಕೂ ಮುನ್ನ ನೂತನ ಸಂಸತ್ ಸಂಕೀರ್ಣದಲ್ಲಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ''ಜನರು ಪ್ರತಿಪಕ್ಷಗಳಿಂದ ಉತ್ತಮ ನಡೆ ನಿರೀಕ್ಷಿಸುತ್ತಾರೆ. ಆದರೆ ಪ್ರತಿಪಕ್ಷಗಳು ಆ ರೀತಿಯಲ್ಲಿ ವರ್ತಿಸುತ್ತಿಲ್ಲ. ಸಂಸತ್ತಿನಲ್ಲಿ ಜನರು ಚರ್ಚೆ ಬಯಸುತ್ತಾರೆಯೇ ವಿನಃ ಘೋಷಣೆಗಳನಲ್ಲ. ದೇಶಕ್ಕೆ ಜವಾಬ್ದಾರಿಯುತ ಪ್ರತಿಪಕ್ಷದ ಅಗತ್ಯವಿದೆ'' ಹೇಳಿದರು.

ಜೂ.25ಕ್ಕೆ ತುರ್ತು ಪರಿಸ್ಥಿತಿ ಘೋಷಣೆಯಾಗಿ 50 ವರ್ಷ ಆಗಲಿದೆ. ಈ ಸಂದರ್ಭವನ್ನು ಬಳಸಿಕೊಂಡ ಅವರು, ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು ಮೆಲುಕು ಹಾಕಿದರು. ಸಂವಿಧಾನವನ್ನು ತಿರಸ್ಕರಿಸಿ ತುರ್ತು ಪರಿಸ್ಥಿತಿ ಘೋಷಿಸಲಾಗಿತ್ತು. ಆ ದಿನ ಭಾರತದ ಪ್ರಜಾಪ್ರಭುತ್ವಕ್ಕೆ ಕಪ್ಪು ಚುಕ್ಕೆಯಾಗಿದೆ ಎಂದರು. ಸಂವಿಧಾನದ ಪ್ರತಿಗಳನ್ನು ಹಿಡಿದು ಬಂದ ಇಂಡಿಯ ಒಕ್ಕೂಟದ ಸದಸ್ಯರು, ಹಂಗಾಮಿ ಸ್ಪೀಕರ್ ಆಯ್ಕೆ ಯಲ್ಲಿ ಸರಕಾರ ಸಂವಿಧಾನ ಪ್ರಕಾರ ನಡೆದುಕೊಂಡಿಲ್ಲ ಎಂದರು.

ಪ್ರಮುಖ ಬೆಳವಣಿಗೆಗಳ ಬಗ್ಗೆ ಸೊಲ್ಲೆತ್ತದ ಮೋದಿ: ಪ್ರತಿಪಕ್ಷಗಳ ಕುರಿತು ಪ್ರಧಾನಿ ಮೋದಿ ಹೇಳಿಕೆಗೆ ಎಕ್ಸ್ ಸಾಮಾಜಿಕ ತಾಣದಲ್ಲಿ ತಿರುಗೇಟು ನೀಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ''ಅವರು 50 ವರ್ಷಗಳ ಹಿಂದಿನ ತುರ್ತು ಪರಿಸ್ಥಿತಿ ಬಗ್ಗೆ ಈಗ ಮಾತನಾಡುವುದು ಬೇಡ. 10 ವರ್ಷಗಳಿಂದ ದೇಶದಲ್ಲಿ ನಡೆಯುತ್ತಿರುವ ಅಘೋಷಿತ ತುರ್ತುಪರಿಸ್ಥಿತಿ ಬಗ್ಗೆ ಮಾತನಾಡಿ'' ಎಂದು ಕಾಲೆಳೆದಿದ್ದಾರೆ. ''ಪ್ರಧಾನಿ ವಾಡಿಕೆಗಿಂತ ದೀರ್ಘ ಭಾಷಣವನ್ನು ಮಾಡಿದ್ದಾರೆ. ಆದರೆ, ದೇಶದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಜನರು ನಿರೀಕ್ಷಿಸಿದ ಯಾವುದೇ ಒಂದು ಪ್ರಮುಖ ವಿಷಯದ ಬಗ್ಗೆಯೂ ಮಾತನಾಡಿಲ್ಲಎಂದು ಹೇಳಿದರು.

ಸಂಸದರಾಗಿ ಪ್ರಧಾನಿ ಮೋದಿ ಪ್ರಮಾಣವಚನ ಸ್ವೀಕರಿಸಿದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಸಚಿವೆ ಶೋಭಾ ಕರಂದ್ಲಾಜೆ ಮತ್ತು ಸಚಿವ ಪ್ರಲ್ಹಾದ್ ಜೋಶಿ, ವಿ. ಸೋಮಣ್ಣ ಅವರು ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಿ ಗಮನ ಸೆಳೆದರು.

ಮೋದಿ ಏಟು

- ಶ್ರೇಷ್ಠ ಭಾರತ' ಮತ್ತು 'ವಿಕಸಿತ ಭಾರತ' ನಿರ್ಮಾಣದ ಸಂಕಲ್ಪದೊಂದಿಗೆ 18ನೇ ಲೋಕಸಭಾ ಅಧಿವೇಶನ ಆರಂಭವಾಗಲಿದೆ.
- ಜನರ ಆಶೋತ್ತರಗಳನ್ನು ಈಡೇರಿಸುವಲ್ಲಿ ನಮ್ಮ ಸರಕಾರ ಎಲ್ಲರನ್ನೂ ಜತೆಯಲ್ಲಿ ಕರೆದೊಯ್ಯುಲಿದೆ. 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವ ಕನಸಿನೊಂದಿಗೆ ಹೆಜ್ಜೆ ಇಟ್ಟಿದ್ದೇವೆ.
- ದೇಶದ ಜನರಿಗೆ ಉತ್ತಮ ಆಡಳಿತ ಬೇಕೆ ಹೊರತು ಬರೀ ಘೋಷಣೆಗಳಲ್ಲ. ಎನ್‌ಡಿಎ ಸರಕಾರ ಮೂರನೇ ಅವಧಿಯಲ್ಲಿ ಜನರ ಆಶೋತ್ತರಗಳನ್ನು ಈಡೇರಿಸಲು ಮೂರು ಪಟ್ಟು ಹೆಚ್ಚಾಗಿ ಕೆಲಸ ಮಾಡಲಿದೆ.
- ಜನರಿಗೆ ಸದನದಲ್ಲಿ ಉತ್ತಮ ಚರ್ಚೆಗಳು ಆಗಬೇಕು, ಸರಾಗವಾಗಿ ಕಲಾಪ ನಡೆಯಬೇಕು, ಉತ್ತಮ ಆಡಳಿತ ಬೇಕು. ಜನರಿಗೆ, ಪ್ರತಿಭಟನೆ, ಪ್ರಹಸನ, ಕಲಾಪಕ್ಕೆ ಅಡಚಣೆ ಮಾಡುವುದು ಬೇಕಿಲ್ಲ.
- 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವ ಕನಸಿನೊಂದಿಗೆ ಹೆಜ್ಜೆ ಇಟ್ಟಿದ್ದೇವೆ. ನೂತನ ಜನಪ್ರತಿನಿಧಿಗಳಿಂದ ಉತ್ತಮ ನಿರ್ಧಾರಗಳನ್ನು ಬಯಸುತ್ತೇವೆ. ಸರಕಾರ ರಚನೆಗೆ ಬಹುಮತ ಬೇಕು, ದೇಶ ಮುನ್ನಡೆಸಲು ಒಮ್ಮತ ಬೇಕು. ಸಂಸತ್ ಕಲಾಪದ ಚರ್ಚೆಗಳಲ್ಲಿ ಒಮ್ಮತ, ಸಮ್ಮತ ಬೇಕಿದೆ.

ಖರ್ಗೆ ತಿರುಗೇಟು

- ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಸೇರಿದಂತೆ ಇತರೆ ನೇಮಕ ಪರೀಕ್ಷೆಗಳಲ್ಲಿನ ಅಕ್ರಮಗಳ ಕುರಿತು ಪ್ರಧಾನಿ ಮಾತನಾಡುತ್ತಾರೆ. ದೇಶದ ಯುವಜನತೆ ಬಗ್ಗೆ ಸಹಾನುಭೂತಿ ತೋರಿಸುತ್ತಾರೆ ಎಂದು ಜನತೆ ಕಾದಿದ್ದರು.
- ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ಸಂಭವಿಸಿದ ರೈಲು ಅಪಘಾತದ ಕುರಿತು ಪ್ರಧಾನಿ ಮೋದಿ ಮೌನವಾಗಿದ್ದಾರೆ.
- ಕಳೆದ 13 ತಿಂಗಳಿನಿಂದ ಮಣಿಪುರದಲ್ಲಿ ಹಿಂಸಾಚಾರ ಘಟನೆಗಳು ನಡೆಯುತ್ತಿವೆ. ಆದರೆ, ಈವರೆಗೆ ರಾಜ್ಯಕ್ಕೆ ಭೇಟಿ ನೀಡುವ ಕುರಿತು ಅವರು ತಲೆಕೆಡಿಸಿಕೊಂಡಿಲ್ಲ. ರಾಜ್ಯದಲ್ಲಿ ನಡೆಯುತ್ತಿರುವ ಹೊಸ ಹಿಂಸಾಚಾರದ ಕುರಿತು ಇಂದಿನ ಭಾಷಣದಲ್ಲಿ ಯಾವುದೇ ಕಾಳಜಿಯನ್ನು ವ್ಯಕ್ತಪಡಿಸಿಲ್ಲ.
- ಅಸ್ಸಾಂನಲ್ಲಿ ಸಂಭವಿಸಿದ ಪ್ರವಾಹ, ದೇಶದಲ್ಲಿನ ಬೆಲೆ ಏರಿಕೆ, ರುಪಾಯಿ ಮೌಲ್ಯದ ಐತಿಹಾಸಿಕ ಕುಸಿತ, ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಷೇರುಪೇಟೆಯ ಮಹಾಪತನ ಇದಾವುದರ ಕುರಿತು ಮೋದಿ ಮಾತನಾಡಿಲ್ಲ.
- 2021ರಲ್ಲಿ ನಡೆಯಬೇಕಿದ್ದ ಜನಗಣತಿಯನ್ನು ಮೋದಿ ಸರಕಾರ ಇನ್ನೂ ಬಾಕಿ ಉಳಿಸಿಕೊಂಡಿದೆ ಮತ್ತು ಜನಗಣತಿ ನಡೆಸುವುದರ ಕುರಿತು ಮೌನವಾಗಿದೆ.

ಪ್ರಮಾಣ ವಚನ ಸ್ವೀಕಾರ

ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸೇರಿದಂತೆ ಅನೇಕ ಸಚಿವರು ಲೋಕಸಭೆಯ ಸದಸ್ಯರಾಗಿ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ವಿದ್ಯುತ್ ಸಚಿವ ಮನೋಹರ್ ಲಾಲ್ ಖಟ್ಟರ್, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವ ಜಿತನ್ ರಾಮ್ ಮಾಂಝಿ, ಮೀನುಗಾರಿಕೆ ಮತ್ತು ಪಶುಸಂಗೋಪನೆ ಸಚಿವ ರಾಜೀವ್ ರಂಜನ್ ಸಿಂಗ್ ನೂತನ ಲೋಕ ಸಭೆಯ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇದಕ್ಕೂ ಮೊದಲು 18ನೇ ಲೋಕಸಭೆಯ ಹಂಗಾಮಿ ಸ್ಪೀಕರ್ ಆಗಿ ಬಿಜೆಪಿ ಸಂಸದ ಭರ್ತೃಹರಿ ಮಹತಾಬ್ ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಹತಾಬ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಸೋಮವಾರ 280 ಮಂದಿ ಪ್ರಮಾಣ ವಚನ ಸ್ವೀಕರಿಸಿದರು. ಜೂ.25 ರಂದು ಉಳಿದ 264 ಮಂದಿ ಸದಸ್ಯರು ಪ್ರಮಾಣ ಸ್ವೀಕರಿಸಲಿದ್ದಾರೆ.

ನಡ್ಡಾ ರಾಜ್ಯಸಭೆ ಸಭಾನಾಯಕ

ಬಿಜೆಪಿ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ಜೆ.ಪಿ.ನಡ್ಡಾ ಅವರನ್ನು ರಾಜ್ಯಸಭೆ ಯ ಸಭಾನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಸದ್ಯ ರಾಜ್ಯಸಭೆಯ ಸಭಾನಾಯಕರಾಗಿರುವ ಪಿಯೂಷ್ ಗೋಯಲ್ ಅವರ ಕಚೇರಿಯಲ್ಲಿ ಕೇಂದ್ರ ಸಚಿವರಾದ ಕಿರಣ್ ರಿಜಿಜು ಮತ್ತು ಪ್ರಲ್ಹಾದ ಜೋಶಿ ಅವರೊಂದಿಗೆ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾ ಗಿದೆ. ನಡ್ಡಾ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರಾಗಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯಸಭೆಯ ಪ್ರತಿಪಕ್ಷದ ನಾಯಕರಾಗಿದ್ದಾರೆ.

ಮಾತಂದ್ರೆ ಮಾತು

ಸಂವಿಧಾನದ ಮೇಲೆ ಪ್ರಧಾನಿ ಮತ್ತು ಅಮಿತ್ ಶಾ ನಡೆಸುತ್ತಿರುವ ದಾಳಿ ನಮಗೆ ಸ್ವೀಕಾರಾರ್ಹವಲ್ಲ. ಇದನ್ನು ನಾವು ಮಾಡಲು ಬಿಡುವುದಿಲ್ಲ. ಹಾಗಾಗಿ ಪ್ರಮಾಣ ವಚನ ಸ್ವೀಕರಿಸುವಾಗ ನಾವು ಸಂವಿಧಾನವನ್ನು ಹಿಡಿದಿದ್ದೇವೆ. ಯಾವುದೇ ಶಕ್ತಿಯಿಂದ ಭಾರತದ ಸಂವಿಧಾನವನ್ನು ಮುಟ್ಟಲು ಸಾಧ್ಯವಿಲ್ಲ. ಇಂಡಿಯಾ ಬಣ ಪ್ರಬಲ ವಿರೋಧ ಪಕ್ಷವಾಗಿ ಜನರ ಪರ ಧ್ವನಿಯನ್ನು ಎತ್ತುವುದನ್ನು ಮುಂದುವರಿಸುತ್ತದೆ.

- ರಾಹುಲ್ ಗಾಂಧಿ
ಕಾಂಗ್ರೆಸ್ ನಾಯಕ

ದಾರಿದೀಪೋಕ್ತಿ

ಇನ್ನೂ ಬೇಕು, ಮತ್ತೂ ಬೇಕು ಮತ್ತು ಸಾಕು ಎಂಬುದರ ವ್ಯತ್ಯಾಸ ಗೊತ್ತಿದ್ದವರು ಜೀವನವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ನೆಮ್ಮದಿಯ ಜೀವನವನ್ನು ಸಾಗಿಸಬಲ್ಲರು. ಬೇಕು ಮತ್ತು ಸಾಕು ಮಧ್ಯೆ, ನಮ್ಮ ಬದುಕಿನ ಉದ್ದೇಶ ಮತ್ತು ಸಾರ್ಥಕ್ಯ ಅಡಗಿದೆ.

ವಕ್ರತುಂಡೋಕ್ತಿ

ಗೂಗಲ್‌ಗೂ, ನಮಗೂ ಇರುವ ವ್ಯತ್ಯಾಸ ಅಂದ್ರೆ, ನಾವು ಗೂಗಲ್‌ನ್ನು ಹೆಚ್ಚು ಉಪಯೋಗಿಸುವುದಕ್ಕಿಂತ ಅದೇ ನಮ್ಮನು ಹೆಚ್ಚು ಉಪಯೋಗಿಸುತ್ತದೆ.

ಪರೀಕ್ಷೆ ಅಕ್ರಮ ತಡೆಗೆ ಎಐ, ಸಿಸಿಟಿವಿ ನಿಗಾ

ದೆಹಲಿ: ವಿವಿಧ ಪರೀಕ್ಷೆಗಳಲ್ಲಿ ಪರೀಕ್ಷಾ ವಂಚನೆ ತಡೆಗಟ್ಟಲು ಯುಪಿಎಸ್‌ಸಿಯು ಮುಖಚಹರೆ ಗುರುತಿಸುವ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸಿಸಿ ಟಿವಿ ನಿಗಾ ವ್ಯವಸ್ಥೆ ಅಳವಡಿಸಲು ಚಿಂತನೆ ನಡೆಸಿದೆ. ಆಧಾರ್ ಆಧರಿತ ಬೆರಳಚ್ಚು ದೃಢೀಕರಣ ಮತ್ತು ಅಭ್ಯರ್ಥಿಗಳ ಮುಖಚಹರೆ ಗುರುತು ಹಿಡಿಯುವುದು ಹಾಗೂ ಇ- ಪ್ರವೇಶಪತ್ರದ ಕ್ಯುಆರ್ ಕೋಡ್ ಸ್ಕ್ಯಾನಿಂಗ್ ಮಾಡುವ ವ್ಯವಸ್ಥೆ ಅಭಿವೃದ್ಧಿಗೆ ಟೆಂಡರ್ ಆಹ್ವಾನಿಸಿದೆ.

ಬಿಲ್ಡರ್‌ಗಳಿಗೆ ಐಟಿ ಶಾಕ್

ಬೆಂಗಳೂರು: ಬೆಂಗಳೂರು ಹಾಗೂ ಮೈಸೂರಿನ ಹಲವು ಕಡೆ ಬಿಲ್ಡರ್‌ಗಳಿಗೆ ಜಾರಿ ನಿರ್ದೇಶನಾಲಯ ಶಾಕ್ ನೀಡಿದೆ. ಎರಡೂ ನಗರಗಳ 11 ಕಡೆಗಳಲ್ಲಿ ಬಿಲ್ಡರ್‌ಗಳ ಮನೆ ಹಾಗೂ ಕಚೇರಿಗಳಿಗೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಬೆಂಗಳೂರಿನ ಯುಬಿ ಸಿಟಿಯ ಕಿಂಗ್‌ಫಿಶರ್ ಟವರ್, ಮಲ್ಲೇಶ್ವರ, ಬಸವೇಶ್ವರನಗರ, ಬನ್ನೇರುಘಟ್ಟ ರಸ್ತೆ, ಹನುಮಂತನಗರ ಹಾಗೂ ಮೈಸೂರಿನ ಎರಡು ಸ್ಥಳಗಳಲ್ಲಿ ಇಡಿ ಅಧಿಕಾರಿಗಳು ಶೋಧ ನಡೆಸಿ, ಹಲವು ದಾಖಲೆ ವಶಪಡಿಸಿಕೊಂಡರು.

ಅಂಗನವಾಡಿಗಳನ್ನೇ ಮೇಲ್ದರ್ಜೆಗೇರಿಸಲು ತೀರ್ಮಾನ

ಅಂಗನವಾಡಿಯಲ್ಲೇ ಎಲ್‌ಕೆಜಿ, ಯುಕೆಜಿ

ಬೆಂಗಳೂರು: ಸರಕಾರಿ ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ ಆರಂಭಿಸುವ ಸರಕಾರದ ತೀರ್ಮಾನಕ್ಕೆ ಅಂಗನವಾಡಿ ಕಾರ್ಯಕರ್ತರಿಂದ ಭಾರಿ ವಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ ಅಂಗನವಾಡಿ ಕೇಂದ್ರಗಳನ್ನೇ ಉನ್ನತೀಕರಿಸಲು ಸರಕಾರ ಮುಂದಾಗಿದೆ.

ಸರಕಾರಿ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸುವ ಮೂಲಕ ವಿದ್ಯಾರ್ಥಿಗಳನ್ನು ಸರಕಾರಿ ಶಾಲೆಗಳತ್ತ ಸೆಳೆಯಲು ಸರಕಾರ ಮುಂದಾಗಿತ್ತು. ಆದರೆ ಈ ರೀತಿ ಮಾಡುವುದರಿಂದ ಅಂಗನವಾಡಿಗಳ ಅಸ್ತಿತ್ವಕ್ಕೆ ಧಕ್ಕೆಯಾಗಲಿದೆ ಎನ್ನುವ ಮಾತುಗಳು ಕೇಳಿಬಂದಿದ್ದವು. ಆದ್ದರಿಂದ ಅಂಗನವಾಡಿ ಗಳಿಗೆ ಧಕ್ಕೆಯಾಗದ ರೀತಿಯಲ್ಲಿ, ಶಿಕ್ಷಣವನ್ನು ಯಾವ ರೀತಿ ವೃದ್ಧಿ ಸಬಹುದು ಎನ್ನುವ ಬಗ್ಗೆ ಚರ್ಚೆ ನಡೆದಿದ್ದು, ಈಗಿರುವ ಅಂಗನ ವಾಡಿಗಳನ್ನೇ ಮೇಲ್ದರ್ಜೆಗೆ ಏರಿಸಲು ತೀರ್ಮಾನಿಸಲಾಗಿದೆ. → 4

ಗುಣಮಟ್ಟದ ಶಿಕ್ಷಣ ಸರಕಾರಿ ಶಾಲೆ ಗಳಲ್ಲಿಯೇ ದೊರೆಯಬೇಕೆಂಬ ಕಳಕಳಿಯಿಂದ ಶಿಕ್ಷಣ ಇಲಾಖೆಯು ಸರಕಾರಿ ಮಾಂಟೆಸರಿ ಆರಂಭಿಸಲು ಮುಂದಾಗಿದ್ದು, ಈ ಬಗ್ಗೆ ಅಂಗನ ವಾಡಿ ಕಾರ್ಯಕರ್ತೆ ಯರಿಂದ ವಿರೋಧ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರ ಗಳನ್ನು ಉನ್ನತೀಕರಣ ಗೊಳಿಸಿ, ಕನ್ನಡ ಹಾಗೂ ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಕಲಿಸುವ ಚಿಂತನೆ ಇದೆ.

- ಲಕ್ಷ್ಮೀ ಹೆಬ್ಬಾಳ್ಕರ್
ಮಹಿಳಾ ಮತ್ತು ಮಕ್ಕಳ ಸಚಿವೆ

ಎಲ್ಲ ಸಮುದಾಯದವರನ್ನು ಡಿಸಿಎಂ ಮಾಡಲಿ, ಬೇಡ ಅಂದವರ್‍ಯಾರು?: ಡಿಕೆಸು
ಹೆಚ್ಚುವರಿ ಡಿಸಿಎಂಯಿಂದ ಲಾಭವಾಗುವುದಾದರೆ, ಇಡೀ ಸಂಪುಟವನ್ನೇ ಮಾಡಲಿ: ಖರ್ಗೆ

ಹೆಚ್ಚುವರಿ ಡಿಸಿಎಂಗೆ ಡಿಶುಂ ಡಿಶುಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಲೋಕಸಭಾ ಚುನಾವಣಾ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ರಾಜ್ಯದಲ್ಲಿ ಮತ್ತೆ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಯ ಬಗ್ಗೆ ಚರ್ಚೆ ಜೋರಾಗಿದ್ದು, ಇದೀಗ ಡಿಸಿಎಂ ಹುದ್ದೆ ಸೃಷ್ಟಿಯ ಬೇಡಿಕೆಗೆ ಬಹಿರಂಗವಾಗಿಯೇ ವಿರೋಧ, ಟೀಕೆಗಳು ಶುರುವಾಗಿವೆ.

ಸಚಿವರಾದ ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ ಸೇರಿ ದಂತೆ ಹಲವರು ಡಿಸಿಎಂ ಹುದ್ದೆಯನ್ನು ಹೆಚ್ಚುವರಿಯಾಗಿ ಸೃಜಿಸಿ, ಜಾತಿ ಆಧಾರದಲ್ಲಿ ನೀಡಿದರೆ ಪಕ್ಷಕ್ಕೆ ಲಾಭವಾಗಲಿದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಕೆಲವರು ಹೈಕಮಾಂಡ್ ಬಾಗಿಲನ್ನು ತಟ್ಟಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಸಚಿವರಲ್ಲಿ ಅನೇಕರು, ಡಿಸಿಎಂ ಹುದ್ದೆ ಸೃಜಿಸಬೇಕು ಎನ್ನುತ್ತಿದ್ದರೆ, ಇತ್ತ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಪ್ತರು ಹೆಚ್ಚುವರಿ ಡಿಸಿಎಂ ಹುದ್ದೆ ಬೇಡ ಎನ್ನುವ ಆಗ್ರಹವನ್ನು ಮಂಡಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಲ್ಲರಿಗೂ ಡಿಸಿಎಂ ಹುದ್ದೆ ಕೊಟ್ಟುಬಿಡಿ: ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಸಚಿವ ಪ್ರಿಯಾಂಕ್ ಖರ್ಗೆ, ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿಯಿಂದಲೇ ಎಲ್ಲವೂ ಆಗುತ್ತದೆ ಎನ್ನುವುದಾದರೆ ಮುಖ್ಯಮಂತ್ರಿಯವರನ್ನು ಬಿಟ್ಟು ಇಡೀ ಕ್ಯಾಬಿನೆಟ್ ಅನ್ನು ಡಿಸಿಎಂ ಸಂಪುಟವಾಗಿ ಘೋಷಿಸಬಹುದು. ಆದರೆ ಪ್ರಾಯೋಗಿಕವಾಗಿ ಇದು ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ.

ಡಿಸಿಎಂ ಮಾಡುವುದರಿಂದಲೇ ಎಲ್ಲವೂ ಆಗುತ್ತದೆ ಎನ್ನುವುದಾದರೆ ಮಾಡಬಹುದು. ಆದರೆ ನಮ್ಮ ಕೆಲಸ ಏನು? ಲೋಕಸಭೆ ಚುನಾವಣೆಯಲ್ಲಿ ನಿರೀಕ್ಷೆಗೆ ತಕ್ಕಂತೆ ಸೀಟುಗಳು ಬಂದಿಲ್ಲ. → 4

ಮುಸುಕಿನ ಗುದ್ದಾಟ

- ಸಿಎಂ ಸಿದ್ದರಾಮಯ್ಯ ಆಪ್ತ ಸಚಿವರಲ್ಲಿ ಅನೇಕರಿಂದ ಹೆಚ್ಚುವರಿ ಡಿಸಿಎಂ ಹುದ್ದೆ ಸೃಜಿಸಲು ಒತ್ತಾಯ
- ಡಿಸಿಎಂ ಡಿ.ಕೆ.ಶಿವಕುಮಾರ್ ಆಪ್ತರಿಂದ ಹೆಚ್ಚುವರಿ ಡಿಸಿಎಂ ಹುದ್ದೆ ಬೇಡ ಎನ್ನುವ ಆಗ್ರಹ ಮಂಡನೆ

ಒಂದೇ ಡಿಸಿಎಂ ವಾಗ್ದಾನ ನೀಡಿದ್ದ ಹೈಕಮಾಂಡ್

ಸರಕಾರ ರಚನೆಯ ಸಮಯದಲ್ಲಿಯೇ ಪಕ್ಷದ ವರಿಷ್ಠರು ಡಿ.ಕೆ.ಶಿವಕುಮಾರ್ ಅವರಿಗೆ ಮಾತ್ರ ಉಪಮುಖ್ಯಮಂತ್ರಿ ಸ್ಥಾನ ನೀಡುವುದಾಗಿ ಹೇಳಿದ್ದರಿಂದ, ಡಿಸಿಎಂ ಹುದ್ದೆಗೆ ಡಿಕೆಶಿ ಒಪ್ಪಿಕೊಂಡಿದ್ದರು. ಆದರೀಗ ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿಸಿದರೆ, ಸರಿ ಹೋಗುವುದಿಲ್ಲ ಎನ್ನುವುದು ಡಿಕೆಶಿ ಆಪ್ತರ ಅಭಿಪ್ರಾಯವಾಗಿದೆ.

ಮೂರು ಉಪಮುಖ್ಯಮಂತ್ರಿ ಸ್ಥಾನವನ್ನು ಸೃಷ್ಟಿಸಬೇಕು ಎಂದು ಸಚಿವ ರಾಜಣ್ಣ ಹೇಳಿದ್ದಾರೆ. ಈ ರೀತಿ ಹೇಳಿರುವುದು ಅವರ ವೈಯಕ್ತಿಕ ಅಭಿಪ್ರಾಯ. ಎಲ್ಲರಿಗೂ ಕೇಳುವ ಹಕ್ಕಿದೆ. ಬೇಕಿದ್ದರೆ ಹೈಕಮಾಂಡ್ ಬಳಿ ಹೋಗಿ ಕೇಳಲಿ. **-ಪ್ರಿಯಾಂಕ್ ಖರ್ಗೆ**

ಪಕ್ಷದ ಹೈಕಮಾಂಡ್ ಒಪ್ಪಿದರೆ ಎಲ್ಲ ಸಮುದಾಯದವರನ್ನೂ ಉಪಮುಖ್ಯ ಮಂತ್ರಿಯನ್ನಾಗಿ ಮಾಡಲಿ. ಬೇಡವೆಂದವರು ಯಾರು? ಎಲ್ಲ ಸಮುದಾ ಯಕ್ಕೂ ನ್ಯಾಯ ಸಿಗಲಿ. ಪಕ್ಷ ತೀರ್ಮಾನ ಮಾಡಿ ಇನ್ನೂ ಐದು ಜನರನ್ನು ಡಿಸಿಎಂ ಮಾಡಿದರೂ ಒಳ್ಳೆಯದು.
- ಡಿ.ಕೆ.ಸುರೇಶ್, ಮಾಜಿ ಸಂಸದ

ರೋಹಿಟ್ ಅಬ್ಬರ ಭಾರತ ಸೆಮಿಗೆ ಲಗ್ಗೆ

ಲೂಸಿಯಾ: ರೋಹಿತ್ ಶರ್ಮ ಹರಿಸಿದ ಸಿಕ್ಸರ್/ಬೌಂಡರಿಗಳ ಸುರಿಮಳೆಗೆ ಆಸ್ಟ್ರೇಲಿಯಾ ತತ್ತರಿಸಿದ್ದು, ನಿರ್ಣಾಯಕ ಪಂದ್ಯದಲ್ಲಿ ಭಾರತದ ವಿರುದ್ಧ ಸೋಲನು ಭವಿಸಿದೆ. ಆ ಮೂಲಕ ಭಾರತ ಸೂಪರ್ 8ರಲ್ಲಿ ಮೊದಲ ಸ್ಥಾನ ಪಡೆದಿದ್ದು, ಬುಧವಾರ ನಡೆಯಲಿರುವ ಸೆಮಿಫೈನಲ್ ಪಂದ್ಯ ದಲ್ಲಿ ಇಂಗ್ಲೆಂಡ್ ಅನ್ನು ಎದುರಿಸಲಿದೆ. ಇಲ್ಲಿನ ಡೆರೆನ್ ಸ್ಯಾಮಿ ಕ್ರೀಡಾಂಗಣದಲ್ಲಿ ಟಾಸ್ ಸೋತು ಬ್ಯಾಟಿಂಗ್ ಮಾಡಿದ ಭಾರತ 5 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿತು. ಇದರ ಬೆನ್ನು ಹತ್ತಿದ ಆಸ್ಟ್ರೇಲಿಯಾ 7 ವಿಕೆಟ್ ಕಳೆದುಕೊಂಡು 181 ರನ್‌ಗಳಿಸಿ ಸೋಲೊಪ್ಪಿಕೊಂಡಿತು. ವಿವರ → 9

ಜಿಂಬಾಬ್ವೆ ಪ್ರವಾಸ; ಭಾರತಕ್ಕೆ ಗಿಲ್ ನಾಯಕ



ದೆಹಲಿ: ಜಿಂಬಾಬ್ವೆ ಪ್ರವಾಸಕ್ಕೆ ಶುಭಮನ್ ಗಿಲ್‌ಗೆ ನಾಯಕತ್ವ ವಹಿಸಲಾಗಿದೆ. ಐಪಿಎಲ್‌ನಲ್ಲಿ ಉತ್ತಮ ಆಟವಾಡಿದ ಯುವ ಆಟಗಾರರಾದ ರಿಯಾನ್ ಪರಾಗ್, ಅಭಿಷೇಕ್ ಶರ್ಮಾ, ನಿತೀಶ್ ರೆಡ್ಡಿ ತಂಡಕ್ಕೆ ಆಯ್ಕೆಯಾಗಿದ್ದಾರೆ. ವಿವರ → 9

ಡಿ ಗ್ಯಾಂಗ್‌ನ ನಾಲ್ವರು ತುಮಕೂರು ಜೈಲಿಗೆ ಶಿಫ್ಟ್

ಬೆಂಗಳೂರು: ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ಆರಂಭದಲ್ಲಿ ಶರಣಾದ ನಾಲ್ವರು ಆರೋಪಿಗಳನ್ನು ತುಮಕೂರು ಜೈಲಿಗೆ ಶಿಫ್ಟ್ ಮಾಡಲು ಆದೇಶ 24ನೇ ಎಸಿಎಂಎಂ ಕೋರ್ಟ್ ಆದೇಶ ನೀಡಿದೆ.

ರವಿಶಂಕರ್, ಕೇಶವಮೂರ್ತಿ, ಕಾರ್ತಿಕ್ ಹಾಗೂ ನಿಖಿಲ್‌ನನ್ನು ಸ್ಥಳಾಂತರ ಮಾಡಲು ಪೊಲೀಸರು ಮುಂದಾಗಿದ್ದಾರೆ. ಅರ್ಜಿ ವಿಚಾರಣೆ ವೇಳೆ ಆರೋಪಿಗಳ ಪರ ವಕೀಲರು ತುಮಕೂರು ಜೈಲಿಗೆ ವರ್ಗಾವಣೆಗೆ ಆಕ್ಷೇಪ ವ್ಯಕ್ತಪಡಿಸಿದರು. ಆದರೆ, ಈ ನಾಲ್ವರ ಸುರಕ್ಷತೆ ದೃಷ್ಟಿಯಿಂದ ಸ್ಥಳಾಂತರ ಅಗತ್ಯವೆಂದು ಎಸ್‌ಪಿಪಿ ಪ್ರಸನ್ನ ಕುಮಾರ್ ವಾದಿಸಿದರು. ಕಾರ್ತಿಕ್, ಕೇಶವ್ ಮತ್ತು ನಿಖಿಲ್ ಕೊಲೆ ಬಗ್ಗೆ ಸಂಪೂರ್ಣವಾಗಿ ಪೊಲೀಸರ ಮುಂದೆ ಬಾಯ್ಬಿಟ್ಟಿದ್ದರು. ಇದರಿಂದ ದರ್ಶನ್ ಮತ್ತು ಗ್ಯಾಂಗ್ ಬಂಧನವಾಗಿತ್ತು.

ರಾಜಾತಿಥ್ಯ ಆರೋಪ

ಇನ್ನು ಜೈಲಿನಲ್ಲಿದ್ದರೂ ನಟ ದರ್ಶನ್‌ಗೆ ರಾಜಾತಿಥ್ಯ ನೀಡಲಾಗುತ್ತಿದೆ ಎನ್ನಲಾಗಿದೆ. ಸಾಮಾನ್ಯ ಕೈದಿಗಳನ್ನು ಭೇಟಿಯಾಗಲು ಬಂದರೆ ನೂರೊಂದು ಷರತ್ತುಗಳನ್ನು ವಿಧಿಸುವ ಪೊಲೀಸರು, ಸೆಲೆಬ್ರಿಟಿ, ರಾಜಕಾರಣಿಗಳು, ಬಲಾಢ್ಯರಿಗೆ ರಾಜಾತಿಥ್ಯ ನೀಡುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ.

ವಿಜಯಲಕ್ಷ್ಮಿ ಭೇಟಿ

ನಟ ದರ್ಶನ್ ಅವರನ್ನು ನೋಡಲು ಪತ್ನಿ ವಿಜಯಲಕ್ಷ್ಮಿ, ಪುತ್ರ ವಿನೀಶ್ ಸೋಮವಾರ ಜೈಲಿಗೆ ಆಗಮಿಸಿದ್ದರು. ಅಲ್ಲದೇ ದರ್ಶನ್ ಆಪ್ತ ವಿನೋದ್ ಪ್ರಭಾಕರ್ ಕೂಡ ಸ್ನೇಹಿತರ ಜತೆ ಆಗಮಿಸಿ ಭೇಟಿ ಮಾಡಿದರು. ಮೊದಲು ಜೈಲಿನ ಚೆಕ್ ಪೋಸ್ಟ್ ಸಮೀಪ ಕಾರು ನಿಲ್ಲಿಸಲಾಗಿತ್ತು. ಮಾಧ್ಯಮಗಳ ಕ್ಯಾಮೆರಾ ಕಂಡು ವಿಜಯಲಕ್ಷ್ಮಿ, ವಿನೀಶ್ ವಾಪಸ್ ತೆರಳಿದರು. ನಂತರ ಬೇರೊಂದು ಕಾರಿನಲ್ಲಿ ಜೈಲಿನ ಒಳಗೆ ಹೋದರು.

ಸೂರಜ್ ರೇವಣ್ಣಗೆ ಸಿಐಡಿ ಕಸ್ಟಡಿ | ಪ್ರಜ್ವಲ್‌ಗೆ ನ್ಯಾಯಾಂಗ ಬಂಧನ

ಹಾಸನ ಬ್ರದರ್ಸ್‌ಗೆ ಕಾನೂನು ಕುಣಿಕೆ

ಬೆಂಗಳೂರು: ಲೈಂಗಿಕ ದೌರ್ಜನ್ಯದ ಪ್ರತ್ಯೇಕ ಪ್ರಕಣಗಳಲ್ಲಿ ಸಿಲುಕಿರುವ ಎಚ್.ಡಿ.ರೇವಣ್ಣ ಅವರ ಪುತ್ರರಿಗೆ ಕಾನೂನು ಉರುಳು ಗಟ್ಟಿಯಾಗುತ್ತಿದೆ. ಈಗಾಗಲೇ ಮೂರು ವಾರಗಳಿಂದಲೂ ನ್ಯಾಯಾಂಗ ಬಂಧನದಲ್ಲಿರುವ ಪ್ರಜ್ವಲ್ ರೇವಣ್ಣ ಅವರನ್ನು ಇನ್ನೂ ಎರಡು ವಾರ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಅದೇ ರೀತಿ ಅಸಹಜ ಲೈಂಗಿಕ ದೌರ್ಜ ನ್ಯದ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿರುವ ಡಾ.ಸೂರಜ್ ಅವರನ್ನು 8 ದಿನ ವಿಚಾರಣೆಗೆಂದು ಸಿಐಡಿ ಪೊಲೀಸರ ಕಸ್ಟಡಿಗೆ ನೀಡಲು ನ್ಯಾಯಾಲಯ ಆದೇಶಿಸಿದೆ. → 4

ಪ್ರಜ್ವಲ್ ವಶಕ್ಕೆ ಸಿದ್ಧತೆ

ಪ್ರಜ್ವಲ್ ರೇವಣ್ಣ ಅವರು 4ನೇ ಪ್ರಕರಣದಲ್ಲಿ ಲೈಂಗಿಕ ಕಿರುಕುಳ ಆರೋಪ ಎದುರಿಸುತ್ತಿದ್ದು, ಬಾಡಿ ವಾರೆಂಟ್ ಮೂಲಕ ಅವರನ್ನು ವಿಚಾರಣೆಗಾಗಿ ಪಡೆಯಲು ಎಸ್‌ಐಟಿ ಸಿದ್ಧತೆ ನಡೆಸಿದೆ. ಈ ಸಂಬಂಧ ಮಂಗಳವಾರ ವಾದ-ಪ್ರತಿವಾದ ನಡೆಯಲಿದ್ದು, ಪ್ರಜ್ವಲ್ ಅವರನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರುಪಡಿಸಲಾಗುತ್ತದೆ ಎಂದು ಎಸ್‌ಐಟಿ ತಿಳಿಸಿದೆ.

ಬಾಡಿಗೆ ತಾಯ್ತನಕ್ಕೂ ಆರು ತಿಂಗಳು ರಜೆ

ದೆಹಲಿ: ಸರಕಾರಿ ನೌಕರಿಯಲ್ಲಿರುವ ಮಹಿಳೆ ಬಾಡಿಗೆ ತಾಯ್ತನದ ಮೂಲಕ ಮಗು ಪಡೆದರೆ ಇನ್ನು ಮುಂದೆ 180 ದಿನಗಳ ಮಾತೃತ್ವ ರಜೆ ಪಡೆಯಬಹುದು. ಇದಕ್ಕೆ ಸಂಬಂಧಿಸಿ 50 ವರ್ಷಗಳ ಹಿಂದಿನ ಕಾಯಿದೆಗೆ ತಿದ್ದುಪಡಿ ತರಲು ಕೇಂದ್ರ ಸರಕಾರ ಮುಂದಾಗಿದೆ. ಈ ವ್ಯವಸ್ಥೆಯಡಿ ಮಗು ಪಡೆಯಲಿಚ್ಛಿಸುವ ತಂದೆಗೂ 15 ದಿನಗಳ ಪಿತೃತ್ವ ರಜೆ ಪಡೆಯಲು ಹೊಸ ಕಾನೂನು ಅವಕಾಶ ಮಾಡಿಕೊಡಲಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಆನ್‌ಲೈನ್ ಪಾರ್ಸಲ್‌ನಲ್ಲಿ ಬಂತು 'ಹಾವು'

ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಮುನ್ನ 4 ಸಾವಿರಕ್ಕೂ ಹೆಚ್ಚು ಸದಸ್ಯರ ನೇಮಕಕ್ಕೆ ಕಸರತ್ತು

ನಿಗಮ ಸದಸ್ಯರ ನೇಮಕಕ್ಕೆ ಪರಂ ಸಾರಥ್ಯ

ಬೆಂಗಳೂರು: ಲೋಕಸಭಾ ಚುನಾವಣೆ ಪ್ರಕ್ರಿಯೆ ಸಂಪೂರ್ಣಗೊಂಡ ಬೆನ್ನಲ್ಲೇ, ನಿಗಮ ಮಂಡಳಿಗಳಿಗೆ ಸದಸ್ಯರ ನೇಮಕಕ್ಕೆ ಮುಂದಾಗಿರುವ ರಾಜ್ಯ ಸರಕಾರ ಇದಕ್ಕಾಗಿ ಪ್ರತ್ಯೇಕ ಸಮಿತಿ ರಚಿಸಿ ಆದೇಶ ಹೊರಡಿಸಿದೆ.

ಲೋಕಸಭಾ ಚುನಾವಣೆಗೂ ಮೊದಲೇ ರಾಜ್ಯ ಸರಕಾರ ನಿಗಮ ಮಂಡಳಿಗಳಿಗೆ ನೇಮಕ ಆದೇಶ ಹೊರಡಿಸಿತ್ತು. ಆದರೆ ಯಾವ ನಿಗಮ ಮಂಡಳಿಗಳಿಗೂ ಸದಸ್ಯ ಹಾಗೂ ನಿರ್ದೇಶಕರನ್ನು ನೇಮಿಸಿರಲಿಲ್ಲ. ಆದ್ದರಿಂದ ಇದೀಗ ಗೃಹ ಸಚಿವ ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಈ ಸಮಿತಿಯು ಮುಂದಿನ ಒಂದು ತಿಂಗಳಲ್ಲಿ ರಾಜ್ಯಮಟ್ಟದ ನಿಗಮ ಮಂಡಳಿಗಳಲ್ಲಿ ಖಾಲಿಯಿರುವ ಎಲ್ಲ ಸದಸ್ಯ ಹಾಗೂ ನಿರ್ದೇಶಕರ ಜಾಗಕ್ಕೆ ಹೆಸರುಗಳನ್ನು ಶಿಫಾರಸು ಮಾಡಬೇಕು ಎಂದು ಸೂಚನೆ ನೀಡಲಾಗಿದೆ.

ಕೇವಲ ರಾಜ್ಯಮಟ್ಟದ ಸದಸ್ಯರು ಮಾತ್ರ ವಲ್ಲದೇ ಜಿಲ್ಲೆ ಹಾಗೂ ತಾಲೂಕು ಮಟ್ಟದ ಸಮಿತಿಗಳ ನೇಮಕಕ್ಕೂ ಸಂಬಂಧಿಸಿದಂತೆ ಈಗಾಗಲೇ ಚರ್ಚೆಗಳು ನಡೆದಿವೆ. ಆದ್ದರಿಂದ ಈ ಸಮಿತಿ ಆ ಬಗ್ಗೆಯೂ ಪರಿಶೀಲನೆ ನಡೆಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಸಮಿತಿಯಲ್ಲಿ ಯಾರ್‍ಯಾರಿದ್ದಾರೆ?

ಡಾ.ಜಿ.ಪರಮೇಶ್ವರ್	ಅಧ್ಯಕ್ಷರು
ಸಂತೋಷ್ ಲಾಡ್	ಸದಸ್ಯರು
ರಿಜ್ವಾನ್ ಅರ್ಷದ್	ಸದಸ್ಯರು

ಎಚ್ಚರಿಕೆ ಹೆಜ್ಜೆಯಿಡಲು ತೀರ್ಮಾನ

ರಾಜ್ಯ ಸರಕಾರದ ವತಿಯಿಂದ ಸುಮಾರು ಎಂಟತ್ತು ಸಾವಿರ ನಾಮನಿರ್ದೇಶನಗಳಿಗೆ ಅವಕಾಶವಿರುತ್ತದೆ. ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಈ ಎಲ್ಲ ನೇಮಕಗಳನ್ನು ಮಾಡಲು ತೀರ್ಮಾನಿಸಲಾಗಿದೆ. ಈಗಾಗಲೇ ಕೆಪಿಸಿಸಿ ವತಿಯಿಂದ ಜಿಲ್ಲಾಧ್ಯಕ್ಷರು, ಶಾಸಕರು, ಸಂಸದರು ಹಾಗೂ ಪರಾಜಿತ ಅಭ್ಯರ್ಥಿಗಳಿಂದ ನಾಮನಿರ್ದೇಶನಕ್ಕೆ ಹೆಸರನ್ನು ಶಿಫಾರಸು ಮಾಡುವಂತೆ ಸೂಚನೆ ನೀಡಲಾಗಿತ್ತು. ಈಗಾಗಲೇ ಸಲ್ಲಿಕೆಯಾಗಿರುವ ಶಿಫಾರಸುಗಳನ್ನು ಮುಂದಿಟ್ಟುಕೊಂಡು ಆಯ್ಕೆ ಮಾಡಲು ತೀರ್ಮಾನಿಸಲಾಗಿದೆ ಎಂದು ತಿಳಿದುಬಂದಿದೆ.

ಖಾದ್ಯಗಳ ತಯಾರಿಯಲ್ಲಿ ಕೃತಕ ಬಣ್ಣ ಬಳಕೆ ನಿಷೇಧಿಸಿ ಸುತ್ತೋಲೆ

ಕಬಾಬ್‌ಗೆ ಬಣ್ಣ ಬೆರೆಸಿದರೆ ಜೈಲು

ಬೆಂಗಳೂರು: ಗೋಬಿ ಮಂಚೂರಿ ಮತ್ತು ಕಾಟನ್ ಕ್ಯಾಂಡಿಯಲ್ಲಿ ಕೃತಕ ಬಣ್ಣ ಬಳಕೆಗೆ ನಿಷೇಧ ಹೇರಿದ್ದ ರಾಜ್ಯ ಆರೋಗ್ಯ ಇಲಾಖೆ ಇದೀಗ ಚಿಕನ್,ಫಿಶ್ ಸೇರಿದಂತೆ ಕಬಾಬ್ ತಯಾರಿಯಲ್ಲಿ ಕೃತಕ ಬಣ್ಣ ಬೆರೆಸುವುದನ್ನು ನಿಷೇಧಿಸಿ ಆದೇಶ ಹೊರಡಿಸಿದೆ.

ಚಿಕನ್ ಕಬಾಬ್‌ಗಳಲ್ಲೂ ಕೃತಕ ಬಣ್ಣಗಳ ಬೆರಸುವಿಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಪರೀಕ್ಷೆಗೊಳಪಡಿಸಿ ಕ್ರಮ ಕೈಗೊಳ್ಳುವಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಆಹಾರ ಸುರಕ್ಷತಾ ಇಲಾಖೆ ಆಯುಕ್ತರಿಗೆ ಸೂಚನೆ ನೀಡಿದ್ದರು. → 4

ಜೀವಾವಧಿ ಸಜೆ

ಒಂದು ವೇಳೆ ಅನಧಿಕೃತವಾಗಿ ಕೃತಕ ಬಣ್ಣಗಳನ್ನು ಬಳಸಿಕೊಂಡರೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯಿದೆ- 2006ರ ನಿಯಮ 59ರಡಿ 7 ವರ್ಷಗಳಿಂದ ಜೀವಾವಧಿ ಶಿಕ್ಷೆಯ ತನಕ ಜೈಲು ಶಿಕ್ಷೆ ಮತ್ತು 10 ಲಕ್ಷ ರು. ತನಕ ದಂಡ ವಿಧಿಸಲಾಗುವುದೆಂದು ಎಚ್ಚರಿಕೆ ನೀಡಲಾಗಿದೆ. ಈ ಆದೇಶವು ಬೀದಿ ಬದಿಯ ತಳ್ಳು ಗಾಡಿ ವ್ಯಾಪಾರಿಗಳಿಂದ ಹಿಡಿದು ಪಂಚತಾರಾ ಹೋಟೆಲ್‌ವರೆಗೂ ಎಲ್ಲರಿಗೂ ಅನ್ವಯವಾಗಲಿದೆ. ಕಳೆದ ಮಾರ್ಚ್‌ನಲ್ಲಿ ಮಕ್ಕಳು ಹೆಚ್ಚಾಗಿ ಬಳಸುವ ಕಾಟನ್ ಕ್ಯಾಂಡಿ, ಗೋಬಿ ಮಂಚೂರಿಯಲ್ಲಿ ಕೃತಕ ಬಣ್ಣ ಬಳಕೆ ನಿಷೇಧಿಸಿ ಆದೇಶ ಹೊರಡಸಲಾಗಿತ್ತು.

ಸಮಾಚಾರ ಸಣ್ಣದಲ್ಲ

ಯುವಕನ ಕೊಲೆ

ಬೆಂಗಳೂರು: ಬೆಂಗಳೂರಿನಲ್ಲಿ ಯುವಕನ ಬರ್ಬರ ಕೊಲೆಯಾಗಿದೆ. ಅಬ್ಬಿಗೆರೆ ನಿವಾಸಿ ಮಂಜುನಾಥ್ (17) ಕೊಲೆಯಾದವನು. ಶನಿವಾರ ತಡರಾತ್ರಿ ಮಂಜುನಾಥ್ ತಲೆಗೆ ರಾಡ್‌ನಿಂದ ಹೊಡೆದು ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ. ಬಳಿಕ ಅಬ್ಬಿಗೆರೆ ಬಳಿಯ ಖಾಲಿ ಜಾಗದಲ್ಲಿ ಮಂಜುನಾಥ್ ಶವ ಪತ್ತೆಯಾಗಿದೆ. ಗಂಗಮ್ಮನ ಗುಡಿ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆಯನ್ನು ನಡೆಸುತ್ತಿದ್ದಾರೆ. ಮೇಲ್ನೋಟಕ್ಕೆ ಪ್ರೀತಿ ವಿಚಾರಕ್ಕೆ ಕೊಲೆ ನಡೆದಿರುವ ಶಂಕೆ ವ್ಯಕ್ತವಾಗಿದೆ. ಆರೋಪಿಗಳಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ಕ್ಷುಲ್ಲಕ ಕಾರಣಕ್ಕೆ ಕಾರ್ಮಿಕ ಹತ್ಯೆ

ಬೆಂಗಳೂರು: ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿಯೊಬ್ಬ ಕೊಲೆಯಾಗಿರುವ ಘಟನೆ ಮಲ್ಲೇಶ್ವರದಲ್ಲಿ ನಡೆದಿದೆ. ಪನ್ನೀರ್ ಸೆಲ್ವಂ (37) ಮೃತ ದುರ್ದೈವಿ. ಪನ್ನೀರ್ ಸೆಲ್ವಂ ಮಲ್ಲೇಶ್ವರದ ಎಂಡಿ ಬ್ಲಾಕ್ ನಿವಾಸಿಯಾಗಿದ್ದು, ಭಾನುವಾರ ಸಂಜೆ ಕೆ.ಸಿ ಜನರಲ್ ಆಸ್ಪತ್ರೆ ಪಾರ್ಕ್‌ನಲ್ಲಿ ಕೊಲೆಯಾದ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ಗಾರೆ ಕೆಲಸ ಮಾಡಿಕೊಂಡಿದ್ದ ಪನ್ನೀರ್ ಸೆಲ್ವಂ ಹೆಂಡತಿ, ನಾಲ್ವರು ಮಕ್ಕಳ ಜತೆ ವಾಸವಾಗಿದ್ದ. ಭಾನುವಾರ ಸಂಜೆ ಪಾರ್ಕ್ ಬಳಿ ಮೂವರು ಗಲಾಟೆ ಮಾಡಿಕೊಂಡಿದ್ದಾರೆ. ಗಲಾಟೆ ವಿಕೋಪಕ್ಕೆ ತಿರುಗಿದ್ದು, ಇಬ್ಬರು ದುಷ್ಕರ್ಮಿಗಳು ಕಲ್ಲು ಎತ್ತಿಹಾಕಿ ಸೆಲ್ವಂನನ್ನು ಕೊಲೆ ಮಾಡಿದ್ದಾರೆ. ಸದ್ಯ ಇಬ್ಬರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆಯನ್ನು ನಡೆಸಲಾಗುತ್ತಿದೆ.

ಉತ್ತರ ಪ್ರಕಟ: ಆಕ್ಷೇಪಣೆ ಅವಕಾಶ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಡಿಸಿಇಟಿ-2024ರ ತಾತ್ಕಾಲಿಕ ಸರಿ ಉತ್ತರಗಳನ್ನು ತನ್ನ ವೆಬ್‌ಸೈಟ್ www.kea.kar.nic.in ನಲ್ಲಿ ಪ್ರಕಟಿಸಿದೆ. ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್ ಪ್ರಸನ್ನ ಅವರು ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ಪ್ರಕಟಿಸಿರುವ ತಾತ್ಕಾಲಿಕ ಉತ್ತರಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಆಕ್ಷೇಪಣೆ ಸಲ್ಲಿಸಲು ಬಯಸಿದಲ್ಲಿ, ಪ್ರಾಧಿಕಾರದ ಆನ್‌ಲೈನ್ ಪೋರ್ಟಲ್ ಮೂಲಕ ಮಾತ್ರವೇ ಜೂನ್ 26ರ ಬೆಳಗ್ಗೆ 11ರೊಳಗಾಗಿ ಸಲ್ಲಿಸಬಹುದು ಎಂದು ಸೂಚಿಸಿದ್ದಾರೆ. ಈ ಸಂದರ್ಭದಲ್ಲಿ ವರ್ಷನ್ ಕೋಡ್, ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆ ಸಂಖ್ಯೆಯ ವಿವರಗಳನ್ನು ನಮೂದಿಸಿ, ಅದಕ್ಕೆ ಪೂರಕ ಸಮರ್ಥನೆಗಳನ್ನು ಪಿಡಿಎಫ್ ರೂಪದಲ್ಲಿ ಸಲ್ಲಿಸಬೇಕು.

ಜೈಲಿನಲ್ಲಿ ಸರಿಯಾಗಿ ಉಪ್ಪು ಖಾರವಿಲ್ಲದ ಸಾಂಬಾರ್, ಮುದ್ದೆ, ಅನ್ನ ತಿನ್ನಲು ಪರದಾಟ

ದರ್ಶನ್, ಪವಿತ್ರಾಗೆ ಸೇರುತ್ತಿಲ್ವಂತೆ ಜೈಲೂಟ..!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ಸೇರಿರುವ ನಟ ದರ್ಶನ್ ಜೈಲೂಟ ಸೇರದೇ ಪರದಾಡುತ್ತಿದ್ದಾನೆ. ಪವಿತ್ರಾ ಗೌಡ ಸಹ ಜೈಲಿನ ಆಹಾರ ಇಷ್ಟವಾಗದೆ ಒದ್ದಾಡುತ್ತಿದ್ದಾರೆ.

ಮೊದಲೇ ಫಿಟ್‌ನೆಸ್‌ಗಾಗಿ ಚಿಕನ್, ಮಟನ್, ಹಣ್ಣು, ಜ್ಯೂಸ್ ಸೇವಿಸುತ್ತಿದ್ದ ದರ್ಶನ್, ಜೈಲಿನಲ್ಲಿ ಸರಿಯಾಗಿ ಉಪ್ಪು ಖಾರವಿಲ್ಲದ ಸಾಂಬಾರ್, ಮುದ್ದೆ ಅನ್ನ ತಿನ್ನಲು ಕಷ್ಟಪಡುತ್ತಿದ್ದಾನೆ. ರಾತ್ರಿ ಸಹ ಜೈಲಿನ ಮೆನು ಪ್ರಕಾರ ಮುದ್ದೆ, ಅನ್ನ, ಚಪಾತಿ ತರಕಾರಿ ಸಾಂಬಾರ್ ಮತ್ತು ಮಜ್ಜಿಗೆಯನ್ನು ಜೈಲು ಸಿಬ್ಬಂದಿ ನೀಡಿದ್ದಾರೆ. ಜೈಲೂಟ ತಿನ್ನಲಾಗದೇ ದರ್ಶನ್ ಪರದಾಟ ಅನುಭವಿಸಿದ್ದಾನೆ.

ಸರಿಯಾಗಿ ಊಟ ಸೇರದೆ, ನಿದ್ದೆಯೂ ಬಾರದೆ ದರ್ಶನ್ ವಿಲವಿಲ ಒದ್ದಾಡುತ್ತಿದ್ದಾರೆ ಎನ್ನಲಾಗಿದೆ. ರಾತ್ರಿ ಸಹ ತಡವಾಗಿ ನಿದ್ರೆಗೆ ಜಾರಿದ ದರ್ಶನ್ ಬೆಳಗ್ಗೆ 6 ಗಂಟೆ ಸುಮಾರಿಗೆ ಎಚ್ಚರಗೊಂಡಿದ್ದು, ಕಾಫಿ ಸೇವಿಸದೆ ಬಿಸಿ ನೀರು ಕೇಳಿ ಪಡೆದಿದ್ದಾನೆ. ಸಹಕೈದಿಗಳು ಮಾತನಾಡಲು ಯತ್ನಿಸಿದರೂ ಅಷ್ಟಾಗಿ ಅವರ ಜತೆ ಬೆರೆಯಲಿಲ್ಲ.

ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ವಿಶೇಷ ಬ್ಯಾರಕ್‌ನಲ್ಲಿ ದರ್ಶನ್ ಇದ್ದಾರೆ. ಸೆರೆವಾಸದಲ್ಲಿ ನಟ ಚಡಪಡಿಸುತ್ತಿದ್ದು, ಮೌನಕ್ಕೆ ಜಾರಿದ್ದಾನೆ. ಸಹ ಬಂಧಿಗಳ ಜತೆ ಭದ್ರತಾ ವಿಭಾಗದ ಬ್ಯಾರಕ್‌ನಲ್ಲಿ ಸೆರೆವಾಸದಲ್ಲಿಡಲಾಗಿದೆ. ಸೊಳ್ಳೆಕಾಟದಿಂದ ದರ್ಶನ್ ಹಾಗೂ ಪವಿತ್ರಾ ಇಬ್ಬರೂ ನಲುಗಿದ್ದಾರೆ. ಭಾನುವಾರ ಕುಟುಂಬಸ್ಥರು ಮತ್ತು ಆಪ್ತರ ಭೇಟಿಗೆ ಅವಕಾಶ ನೀಡಿಲ್ಲ. ಸೋಮವಾರ ದರ್ಶನ್ ಮತ್ತು ಪವಿತ್ರಾ, ಕುಟುಂಬಸ್ಥರು ಹಾಗೂ ಆಪ್ತರ ಭೇಟಿ ನೀಡಿದ್ದಾರೆ. ಪವಿತ್ರಾ ಗೌಡ ಕೂಡ ಜೈಲು ಮೆನುವಿನಂತೆ ಚಪಾತಿ, ಅನ್ನ, ಸಾಂಬಾರ್ ಮತ್ತು ಮಜ್ಜಿಗೆ ಸೇವನೆ ಮಾಡಿದ್ದು, ಸಹಖೈದಿಗಳ ಜತೆ ಬೆರೆಯದೆ ಬೇಸರದಲ್ಲಿಯೇ ದಿನ ಕಳೆಯುತ್ತಿದ್ದಾರೆ. ರಾತ್ರಿ ಬೇಗ ಮಲಗಿದರೂ ಪದೇ ಪದೆ ಎಚ್ಚರಗೊಳ್ಳುತ್ತಿದ್ದರು ಎಂದು ಗೊತ್ತಾಗಿದೆ.

ಜೈಲಿನ ಬಳಿ ಅಭಿಮಾನಿಗಳ ಕಣ್ಣೀರು

ಭಾನುವಾರ ದರ್ಶನ್ ಭೇಟಿಗೆ ರಾಯಚೂರಿನ ಲಿಂಗಸಗೂರಿನಿಂದ ಆಗಮಿಸಿದ ಅಭಿಮಾನಿಗಳು ಭೇಟಿಗೆ ಅವಕಾಶ ಸಿಗದೆ ಜೈಲಿನ ಬಳಿ ಕಣ್ಣೀರು ಹಾಕಿದರು. ಎದೆಯ ಮೇಲೆ ದರ್ಶನ್ ಭಾವಚಿತ್ರದ ಟ್ಯಾಟೂ ಹಾಕಿಸಿಕೊಂಡಿದ್ದ ಅಭಿಮಾನಿ, ನಮ್ಮ ಬಾಸ್ ಕೆಟ್ಟದ್ದು ಮಾಡಿರಬಹುದು. ಆದರೆ ನಮ್ಮ ಬಾಸ್ ಸಾಕಷ್ಟು ಸಮಾಜ ಸೇವೆ ಮಾಡಿದ್ದಾರೆ. ಆದರೂ ಮಾಧ್ಯಮಗಳಲ್ಲಿ ಕೆಟ್ಟದಾಗಿ ತೋರಿಸಲಾಗುತ್ತಿದೆ ಎಂದಿದ್ದಾರೆ. ಭಾನುವಾರ ರಜೆ ಹಿನ್ನೆಲೆ ದರ್ಶನ್ ಭೇಟಿಗೆ ಅವಕಾಶ ನೀಡಿಲ್ಲ. ಆದ್ದರಿಂದ ಸೋಮವಾರ ಭೇಟಿ ಮಾಡಿ ವಾಪಸ್ ಹೋಗಿದ್ದಾರೆ.

ಹೇಗಿದೆ ಕೊಠಡಿ?

ಜೈಲಿನ ಮೂರನೇ ಸೆಕ್ಟರ್ ಭಾಗದಲ್ಲಿ ಇರುವ ಭದ್ರತಾ ವಿಭಾಗದಲ್ಲಿ ಒಂದು ಕೊಠಡಿ ದರ್ಶನ್‌ಗೆ ನೀಡಲಾಗಿದೆ. ಇಲ್ಲಿ ಹೊರಗಿನ ಕೈದಿಗಳಿಗೆ ಬರಲು ಅವಕಾಶ ಇಲ್ಲ. ಭದ್ರತಾ ವಿಭಾಗದ ಸಿಬ್ಬಂದಿ ಹಾಗೂ ಕೈದಿಗಳಿಗೆ ಅಷ್ಟೇ ಅವಕಾಶ ನೀಡಲಾಗಿದೆ. ದರ್ಶನ್ ಹಾಗೂ ವಿನಯ್ ಒಂದೇ ಕೊಠಡಿಯಲ್ಲಿ ಇದ್ದಾರೆ. ಪ್ರದೂಷ್ ಹಾಗೂ ಧನರಾಜ್ ಮತ್ತೊಂದು ಕೊಠಡಿಯಲ್ಲಿ ಸೆರೆವಾಸದಲ್ಲಿದ್ದರು. ಕೊಠಡಿಯ ಒಳಗೆ ಅಟ್ಯಾಚ್ ಬಾತ್ ರೂಮ್ ಕೂಡ ಇದೆ. ಮಲಗಲು ಚಾಪೆ ಹಾಗೂ ಬೆಡ್‌ಶೀಟ್ ನೀಡಲಾಗಿದೆ. ದರ್ಶನ್ ಇರುವ ಕೊಠಡಿಯಲ್ಲಿ ಯಾವುದೇ ಟಿವಿ ವ್ಯವಸ್ಥೆ ಇಲ್ಲ. ಕೊಠಡಿಯ ಒಳಗೆ ಬೇರೆ ಯಾವುದೇ ವ್ಯವಸ್ಥೆ ಇಲ್ಲ. ಯಾರಾದರೂ ಭೇಟಿಗೆ ಬಂದರೆ ಅವರನ್ನು ಸಿಬ್ಬಂದಿ ಕರೆದೊಯ್ದು ಭೇಟಿ ಮಾಡಿಸುತ್ತಾರೆ. ಭದ್ರತಾ ವಿಭಾಗದ ಸುತ್ತಮುತ್ತ ಯಾವಾಗಲೂ ಪೊಲೀಸ್ ಕಣ್ಗಾವಲು ಇರುತ್ತದೆ.

ಬಹಿರಂಗವಾಗದ ಅಧಿಕೃತ ದಾಖಲೆಗಳು

ಸೌಂದರ್ಯ ಜಗದೀಶ್‌ನಿಂದ ಪವಿತ್ರಾಗೆ ಕೋಟ್ಯಂತರ ರು.?



ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಬಂಧನಕ್ಕೊಳಗಾದ ಪವಿತ್ರಾ ಗೌಡ ಅವರ ಮನೆ ಖರೀದಿ ವಿಚಾರದಲ್ಲಿ ದಿ. ನಿರ್ಮಾಪಕ ಸೌಂದರ್ಯ ಜಗದೀಶ್ ವರ ಹೆಸರು ಕೇಳಿಬರುತ್ತಿದೆ. ಮನೆ ಖರೀದಿ ಪತ್ರಕ್ಕೆ ಸೌಂದರ್ಯ ಜಗದೀಶ್ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎನ್ನಲಾಗುತ್ತಿದೆ. ಆದರೆ ಈ ಬಗ್ಗೆ ಯಾವುದೇ ಅಧಿಕೃತ ದಾಖಲೆಗಳು ಬಹಿರಂಗವಾಗಿಲ್ಲ.

ದರ್ಶನ್ ಅವರ ಆಪ್ತ ವಲಯದಲ್ಲಿ ಸೌಂದರ್ಯ ಜಗದೀಶ್ ಅವರು ಸಹ ಗುರುತಿಸಿಕೊಂಡಿದ್ದರು. ಅಲ್ಲದೇ ಪವಿತ್ರಾ ಗೌಡ ಅವರ ಖಾತೆಗೆ ಜಗದೀಶ್ ಸುಮಾರು ಎರಡು ಕೋಟಿ ರು. ಹಣ ಕಳುಹಿಸಿದ್ದರು ಎಂದು ಹೇಳಲಾಗುತ್ತಿದೆ. ಜಗದೀಶ್ ಖಾತೆಯಿಂದ ಎರಡು ಕೋಟಿ ರು. ವರ್ಗಾವಣೆಯಾಗಿದೆ. ಈ ಹಣ ಏಕೆ ಕಳುಹಿಸಲಾಗಿದೆ? ಜಗದೀಶ್ ಆತ್ಮಹತ್ಯೆಗೂ ಇದಕ್ಕೂ ಸಂಬಂಧ ಇದೆಯೇ? ಯಾವ ವಿಚಾರಕ್ಕಾಗಿ ಪವಿತ್ರಾಗೆ ಹಣ ಕೊಟ್ಟಿದ್ದರು? ಎಂಬುದು ತನಿಖೆಯಿಂದಷ್ಟೇ ತಿಳಿಯಬೇಕಿದೆ. 2017 ನವೆಂಬರ್ 13 ರಂದು ಪವಿತ್ರಾಗೌಡಗೆ ಒಂದು ಕೋಟಿ ರು. ವರ್ಗಾವಣೆಯಾಗಿದೆ. 2018, ಜನವರಿ 23 ರಂದು ಪವಿತ್ರಾಗೌಡಗೆ ಮತ್ತೆ 1 ಕೋಟಿ ರು. ವರ್ಗಾವಣೆ ಮಾಡಲಾಗಿತ್ತು. 2018, ಜನ ವರಿ 24 ರಂದು ಪವಿತ್ರಾಗೌಡ ಮನೆ ಖರೀದಿಸಿದ್ದರು. ಟಿಜಿಎಂಸಿ ಬ್ಯಾಂಕ್ ಲಿಮಿಟೆಡ್ ರಾಜಾಜಿನಗರ ಬ್ರಾಂಚ್‌ನಲ್ಲಿ ವ್ಯವಹಾರ ಮಾಡಲಾಗಿದೆ. ಪವಿತ್ರಾಗೌಡಗೆ ಸೌಂದರ್ಯ ಜಗದೀಶ್ ಹಣ ಕೊಟ್ಟ ದಾಖಲೆ ಮಾತ್ರ ಲಭ್ಯವಾಗಿದೆ. ಈವರೆಗೂ ಸೌಂದರ್ಯ ಜಗದೀಶ್‌ಗೆ ಹಣ ವಾಪಸ್ ನೀಡಿರುವ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿಲ್ಲ ಎಂದು ಉನ್ನತ ಮೂಲಗಳು ತಿಳಿಸಿವೆ.

ಸೌಂದರ್ಯ ಜಗದೀಶ್ ಅವರು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರಿಗೆ ಉದ್ಯಮದಲ್ಲಿ ನಷ್ಟವಾಗಿತ್ತು ಎಂಬ ಸುದ್ದಿ ಹರಿದಾಡಿತ್ತು. ಅದಕ್ಕೆ ಸಂಬಂಧಿಸಿ ಡೆತ್ ನೋಟ್ ಸಹ ಸಿಕ್ಕಿತ್ತು. ಸೌಂದರ್ಯ ಜಗದೀಶ್ ಆತ್ಮಹತ್ಯೆ ಬಳಿಕ ಪಾಲುದಾರರ ಮೇಲೆ ಅವರ ಪತ್ನಿ ವಂಚನೆಯ ಆರೋಪ ಮಾಡಿದ್ದರು.

ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣ: ಇ.ಡಿ ತನಿಖೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ತನಿಖೆ ಆರಂಭಿಸಿದೆ.

ಅಕ್ರಮ ಹಣ ವರ್ಗಾವಣೆ ಆರೋಪದ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ತನಿಖೆ ಆರಂಭಿಸಿದೆ. ಹಗರಣ ಸಂಬಂಧ ಈಗಾಗಲೇ ಜೈಲಿನಲ್ಲಿರುವ ಆರೋಪಿಗಳ ವಿಚಾರಣೆ ನಡೆಸಿರುವ ಜಾರಿ ನಿರ್ದೇಶನಾಲಯವು ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ.ಜೆ ಪದ್ಮನಾಭ್ ಮತ್ತು ಪರುಶರಾಮ್ ಇಬ್ಬರ ಹೇಳಿಕೆಯನ್ನು ದಾಖಲಿಸಿಕೊಂಡಿದೆ. ಮತ್ತೊಂದೆಡೆ ಪ್ರಕರಣ ದಾಖಲಿಸಿಕೊಂಡಿರುವ ಸಿಬಿಐ ಕೂಡ ತನ್ನದೇ ಆಯಾಮದಲ್ಲಿ ತನಿಖೆ ನಡೆಸುತ್ತಿದೆ.

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣ ಪ್ರಕರಣದಲ್ಲಿ ಈವರೆಗೆ ಎಸ್‌ಐಟಿಯಿಂದ ಒಟ್ಟು 9 ಜನ ಆರೋಪಿಗಳನ್ನು ಬಂಧಿಸಲಾಗಿದೆ. ಒಟ್ಟು 94 ಕೋಟಿ 73 ಲಕ್ಷ ಅವ್ಯವಹಾರ ನಡೆದಿದೆ ಎನ್ನಲಾಗಿದ್ದು, ಈ ಪೈಕಿ ಎಸ್‌ಐಟಿ ಅಧಿಕಾರಿಗಳು 14.5 ಕೋಟಿ ರು., ನಗದು ಹಣ ವಶಕ್ಕೆ ಪಡೆದುಕೊಂಡಿದ್ದಾರೆ. ಏನಿದು ಪ್ರಕರಣ?: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧೀಕ್ಷಕ ಚಂದ್ರಶೇಖರನ್ ಕೆಲದಿನಗಳ ಹಿಂದೆಯಷ್ಟೇ ಶಿವಮೊಗ್ಗದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಆತ್ಮಹತ್ಯೆಗೂ ಮುನ್ನ ಬರೆದಿದ್ದ ಡೆತ್‌ನೋಟ್‌ನಲ್ಲಿ ಮೂವರು ಹೆಸರು ಹಾಗೂ ಬಹುಕೋಟಿ ಹಗರಣ ನಡೆದಿರುವ ಬಗ್ಗೆ ಉಲ್ಲೇಖಿಸಿದ್ದರು. ಈ ಬೆನ್ನಲ್ಲೇ ಬ್ಯಾಂಕ್‌ನಿಂದ 94 ಕೋಟಿ ರು., ಅಕ್ರಮವಾಗಿ ವರ್ಗಾವಣೆಯಾಗಿದೆ. ಹಣ ವರ್ಗಾವಣೆಯಾದ ಬಗ್ಗೆ ಯಾವುದೇ ಮೇಲ್, ಸಂದೇಶ ಬಂದಿಲ್ಲ ಎಂದು ಆರೋಪಿಸಿ ದೂರು ನೀಡಲಾಗಿತ್ತು.

ಆನ್‌ಲೈನ್ ವಂಚನೆ: 4 ವರ್ಷದಲ್ಲಿ ಏಳು ಸಾವಿರ ಪ್ರಕರಣ ದಾಖಲು

ಬೆಂಗಳೂರು: ಕಳೆದ ನಾಲ್ಕು ವರ್ಷಗಳಿಂದ ರಾಜ್ಯದಲ್ಲಿ ಆನ್‌ಲೈನ್ ವಂಚನೆಯ ಪ್ರಕರಣಗಳು ನಿರಂತರವಾಗಿ ಹೆಚ್ಚುತ್ತಿದ್ದು, ರಾಜಧಾನಿ ಬೆಂಗಳೂರು ವಂಚನೆಯ ಪ್ರಕರಣಗಳ ರಾಜಧಾನಿಯಾಗಿಯೂ ಹೊರಹೊಮ್ಮಿದೆ.

ಅಪರಾಧ ಸುದ್ದಿಗಳು

ಕಳೆದ 4ವರ್ಷಗಳಲ್ಲಿ ಅಂದರೆ ರಾಜ್ಯದಲ್ಲಿ 9,479 ಪ್ರಕಣಗಳು ದಾಖಲಾಗಿದ್ದು, ಬೆಂಗಳೂರುವೊಂದರಲ್ಲೇ 6,905 ಪ್ರಕರಣಗಳು ದಾಖಲಾಗಿವೆ. ರಾಜ್ಯ ಅಪರಾಧ ದಾಖಲೆಗಳ ಬ್ಯೂರೋ ಪ್ರಕಾರ ಶೇ.73ರಷ್ಟು ಪ್ರಕರಣಗಳು ರಾಜ್ಯ ರಾಜಧಾನಿಯಲ್ಲಿ ದಾಖಲಾಗಿವೆ. ವಿಶೇಷವಾಗಿ ಮಾಹಿತಿ ತಂತ್ರಜ್ಞಾನ ನೌಕರರು ಮತ್ತು ಶೇ.20 ರಿಂದ 30ರಷ್ಟು ವಿದ್ಯಾರ್ಥಿಗಳು ಈ ವಂಚನೆಯ ಬಲಿಪಶುಗಳಾಗಿದ್ದಾರೆ. ನಿರುದ್ಯೋಗಿಗಳು, ಆಗಷ್ಟೇ ಪದವಿ ಪಡೆದ ಪದವೀಧರರು ಮತ್ತು ಸಾರ್ವಜನಿಕರು ಈ ವಂಚನೆಗೆ ಸುಲಭವಾಗಿ ಬೀಳುತ್ತಾರೆ ಎಂದು ಮೂಲಗಳು ತಿಳಿಸಿವೆ.

ಇಳಿಮುಖಗೊಂಡ ಆನ್‌ಲೈನ್ ವಂಚನೆ: 2023ರಲ್ಲಿ 4,098 ಆನ್‌ಲೈನ್ ವಂಚನೆಯ ಪ್ರಕರಣಗಳು ದಾಖಲಾಗಿದ್ದರೆ ಈ ವರ್ಷದಲ್ಲಿ ಮೇ 25ರವರೆಗೆ 2,185 ಪ್ರಕರಣಗಳು ದಾಖಲಾಗಿವೆ. ಈ ವರ್ಷ ಇಂತಹ ಪ್ರಕರಣಗಳ ಸಂಖ್ಯೆ 5 ಸಾವಿರ ದಾಟುವ ಸಾಧ್ಯತೆಯಿದೆ . ಆದರೂ ಸಾರ್ವಜನಿಕರಲ್ಲಿ ಅರಿವು ಮೂಡುತ್ತಿದ್ದು, ಇಂತಹ ಕ್ರಮೇಣ ಇಳಿಮುಖ ವಾಗುತ್ತಿವೆ ಎಂದೂ ಹೇಳಲಾಗುತ್ತಿದೆ. ಸಾಂಪ್ರದಾಯಿಕ ಉದ್ಯೋಗ ನೀಡುವ ಹಗರಣಗಳ ವಿಸ್ತೃತ ರೂಪವೇ ಆನ್‌ಲೈನ್ ಉದ್ಯೋಗ ವಂಚನೆಯ ಪ್ರಕರಣಗಳು ದಾಖಲಾಗಿವೆ. ಸಾಂಪ್ರದಾಯಿಕ ಪ್ರಕರಣಗಳಲ್ಲಿ ವಂಚಕರು ಸಾರ್ವಜನಿಕ ಸ್ಥಳಗಳಲ್ಲಿ ಉದ್ಯೋಗ ನೀಡುವ ಮಾಹಿತಿಗಳ ಕರಪತ್ರಗಳನ್ನು ಅಂಟಿಸುತ್ತಾರೆ. ಈ ಮೂಲಕ ಸುಳ್ಳು ಹರಡುತ್ತಾ ಹಣ ಸಂಪಾದನೆ ಮಾಡುತ್ತಾರೆ. ಈಗ ಈ ವಂಚನೆ ಆನ್‌ಲೈನ್ ರೂಪ ಪಡೆದುಕೊಂಡಿದೆ. ನಿರುದ್ಯೋಗಿಗಳು ಮತ್ತು ಹೊಸ ಪದವೀಧರರು ಉದ್ಯೋಗ ಹುಡುಕಾಟದಲ್ಲಿ ಸುಲಭವಾಗಿ ಈ ವಂಚನೆಯ ಜಾಲದಲ್ಲಿ ಸಿಲುಕುತ್ತಾರೆ.

ಹೈಕೋರ್ಟ್‌ನಿಂದ ಎಫ್‌ಐಆರ್ ರದ್ದತಿ

ಡ್ರಗ್ಸ್: ಸಂಜನಾಗೆ ರಿಲೀಫ್

ಬೆಂಗಳೂರು: ಸ್ಯಾಂಡಲ್‌ವುಡ್ ಡ್ರಗ್ಸ್ ಪ್ರಕರಣದಲ್ಲಿ ನಟಿ ಸಂಜನಾ ಗಲ್ರಾನಿ ಹಾಗೂ ನಿರ್ಮಾಪಕ ಶಿವಪ್ರಕಾಶ್ ಚಿಪ್ಪಿಗೆ ಬಿಗ್ ರಿಲೀಫ್ ಸಿಕ್ಕಿದೆ.

ಸಿಸಿಬಿಯಿಂದ ನಟಿಯರು ಸೇರಿ ಡ್ರಗ್ ಪೆಡ್ಲರ್‌ಗಳ ಬಂಧನವಾಗಿತ್ತು. ಇದೀಗ ಇಬ್ಬರ ವಿರುದ್ಧ ಎಫ್‌ಐಆರ್ ರದ್ದುಗೊಳಿಸಿ ಹೈಕೋರ್ಟ್ ಆದೇಶ ನೀಡಿದೆ. ನಟಿ ಸಂಜನಾ ಗಲ್ರಾನಿ ಹಾಗೂ ನಿರ್ಮಾಪಕ ಶಿವಪ್ರಕಾಶ್ ಚಿಪ್ಪಿ ನಿರಾಳರಾಗುವಂತಾಗಿವೆ. ಮಾದಕ ವಸ್ತು ಜಾಲದ ಜತೆ ನಂಟು ಹೊಂದಿದ್ದಾರೆ ಎಂಬ ಆರೋಪದಲ್ಲಿ 2020ರ ಸೆಪ್ಟೆಂಬರ್‌ನಲ್ಲಿ ನಟಿಯರಾದ ಸಂಜನಾ ಗಲ್ರಾನಿ, ರಾಗಿಣಿ ದ್ವಿವೇದಿ, ನಿರ್ಮಾಪಕ ಶಿವಪ್ರಕಾಶ್ ಚಿಪ್ಪಿ ಸೇರಿ ಹಲವರ ಬಂಧನವಾಗಿತ್ತು. ನಂತರ ಜೈಲುಸೇರಿದ್ದ ಸಂಜನಾಗೆ ಅನಾರೋಗ್ಯದ ಹಿನ್ನೆಲೆಯಲ್ಲಿ ಡಿಸೆಂಬರ್‌ನಲ್ಲಿ ಜಾಮೀನು ಸಿಕ್ಕಿತ್ತು. ಆದರೆ, ಎಫ್‌ಐಆರ್ ರದ್ದು ಕೋರಿ ಸಂಜನಾ ಹಾಗೂ ಶಿವಪ್ರಕಾಶ್ ಹೈಕೋರ್ಟ್ ಮೆಟ್ಟಿಲೇರಿ ದ್ದರು. ಸೋಮವಾರ ಅರ್ಜಿ ವಿಚಾರಣೆ ನಡೆಸಿರುವ ಹೈಕೋರ್ಟ್ ಏಕಸದಸ್ಯ ಪೀಠ ಎಫ್‌ಐಆರ್ ರದ್ದುಗೊಳಿಸಿದೆ. 2020ರ ಆಗಸ್ಟ್ 26ರಂದು ಸೆಲಿಬ್ರಿಟಿ ಗಳು, ಸಿನಿ ನಟ, ನಟಿಯರು ಹಾಗೂ ಉದ್ಯಮಿಗಳ ಮಕ್ಕಳು ಡ್ರಗ್ಸ್ ಪಾರ್ಟಿ ಮಾಡುತ್ತಿದ್ದಾರೆ ಎಂಬ ಮಾಹಿತಿ ಆಧರಿಸಿ ಎನ್‌ಸಿಬಿ ಅಧಿಕಾರಿಗಳು ಬೆಂಗಳೂರಿನ ಕಲ್ಯಾಣ ನಗರದ ರಾಯಲ್ ಸೂಟ್ಸ್ ಹೋಟೆಲ್ ಮೇಲೆ ದಾಳಿ ಮಾಡಿದ್ದರು. ಆಗ ಅಪಾರ ಪ್ರಮಾಣದ ಮಾದಕವಸ್ತುಗಳನ್ನು ವಶಪಡಿಸಿಕೊಂಡಿದ್ದ ಅಧಿಕಾರಿಗಳು ಅನೂಪ್, ರವೀಂದ್ರನ್ ಹಾಗೂ ಡಿ. ಅಂಕಿತ ಎಂಬ ಪೆಡ್ಲರ್‌ಗಳನ್ನು ಬಂಧಿಸಿದ್ದರು. ನಂತರ ತನಿಖೆ ವೇಳೆ ಇವರು ಸ್ಯಾಂಡಲ್‌ವುಡ್ ನಟ, ನಟಿಯರಿಗೆ ಮಾದಕವಸ್ತು ಪೂರೈಕೆ ಮಾಡಲಾಗುತ್ತಿದ್ದರು ಎಂಬ ಸ್ಫೋಟಕ ಸಂಗತಿ ಹೊರಬಿದ್ದಿತ್ತು. ಬಳಿಕ ಹಲವರನ್ನು ಬಂಧಿಸಲಾಗಿತ್ತು.

Norican Group
Shaping Industry

ಡೀಸಾ ಇಂಡಿಯಾ ಲಿಮಿಟೆಡ್
ನೋಂದಾಯಿತ ಕಚೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯೂಟಿಸಿ), 6ನೇ ಮಹಡಿ, ಯೂನಿಟ್ ಸಂ. ಎಸ್-604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ-ರಾಜಾಜಿನಗರ, ಬೆಂಗಳೂರು-560055.
ಫೋನ್: +91 80 22496701, ಫ್ಯಾಕ್ಸ್: 080-22496750
ಇ-ಮೇಲ್: investor.relations@noricangroup.com www.disagroup.com
CIN No: L85110KA1984PLC006116

ಪ್ರಕಟಣೆ

(ಡೀಸಾ ಇಂಡಿಯಾ ಲಿಮಿಟೆಡ್ ಸಂಸ್ಥೆಯ ಇಕ್ವಿಟಿ ಷೇರುದಾರರ ಗಮನಕ್ಕೆ)

ಡೀಸಾ ಇಂಡಿಯಾ ಲಿಮಿಟೆಡ್ (ಸಂಸ್ಥೆ)ಯು, ಇದುವರೆಗೆ ತಮ್ಮ ಇ-ಅಂಚೆ, ದೂರವಾಣಿ ಸಂಖ್ಯೆ ಹಾಗೂ ಬ್ಯಾಂಕ್ ಖಾತೆ ವಿವರಗಳನ್ನು ನೋಂದಾಯಿಸದೆ ಇರುವ ಸದಸ್ಯರಿಗೆ ಮನವಿ ಮಾಡುವುದೇನೆಂದರೆ ಈ ವಿವರಗಳನ್ನು ವಿದ್ಯುನ್ಮಾನ ಮಾಧ್ಯಮದಲ್ಲಿ ಷೇರು ಹೊಂದಿರುವವರು ಡಿಪಾಸಿಟರಿಯಲ್ಲಿ ಹಾಗೂ ಭೌತಿಕ ಷೇರು ಹೊಂದಿರುವವರು ಸಂಸ್ಥೆಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್, ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸ್ಸ್ ಪ್ರೈವೇಟ್ ಲಿಮಿಟೆಡ್, ನಂ. 30, ರಮಣ ರೆಸಿಡೆನ್ಸಿ, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003, ಇವರಲ್ಲಿ ನೋಂದಾಯಿಸಬಹುದು. ವಿದ್ಯುನ್ಮಾನ ಮಾಧ್ಯಮದ ಮೂಲಕ ಸಂಸ್ಥೆಯ ವಾರ್ಷಿಕ ವರದಿ ಹಾಗೂ ವಾರ್ಷಿಕ ಸಭೆಯ ಪ್ರಕಟಣೆಯನ್ನು ಕಳುಹಿಸಲು ಇದು ಸಹಾಯ ಮಾಡುತ್ತದೆ.

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 20/2020 ದಿನಾಂಕ ಮೇ 5, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ. 9/2023 ದಿನಾಂಕ ಸೆಪ್ಟೆಂಬರ್ 25, 2023 ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಹೊರಡಿಸಿದ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2023/167 ದಿನಾಂಕ ಅಕ್ಟೋಬರ್ 7, 2023 ರ ಪ್ರಕಾರ, ಸಂಸ್ಥೆಯು ಸಂಸ್ಥೆಯ ವಾರ್ಷಿಕ ವರದಿ ಮತ್ತು 2023-24ನೇ ಹಣಕಾಸು ವರ್ಷದ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯನ್ನು (ರಿಮೋಟ್ ಇ-ವೋಟಿಂಗ್ ಸೂಚನೆಗಳನ್ನು ಒಳಗೊಂಡಂತೆ) ವಿದ್ಯುನ್ಮಾನ ವಿಧಾನದಲ್ಲಿ ಸ್ವೀಕರಿಸುವ ಸೀಮಿತ ಉದ್ದೇಶಕ್ಕಾಗಿ ಪ್ರಕ್ರಿಯೆಯನ್ನು ಸಕ್ರಿಯಗೊಳಿಸಿದೆ ಮತ್ತು ಸದಸ್ಯರು ತಮ್ಮ ಇ-ಅಂಚೆ ವಿಳಾಸವನ್ನು ತಾತ್ಕಾಲಿಕವಾಗಿ https://www.disagroup.com/en-in/investor-relations/financial-reports ಲಿಂಕ್ ಅನ್ನು ಪ್ರವೇಶಿಸುವ ಮೂಲಕ ನವೀಕರಿಸಬಹುದು.

ಸ್ಥಳ : ಬೆಂಗಳೂರು
ದಿನಾಂಕ: ಜೂನ್ 24, 2024

ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ
ಶ್ರೀತಿ ಎಂ ಎಸ್
ಸಂಸ್ಥೆ ಕಾರ್ಯದರ್ಶಿ

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **20.10.2022** ರಂದು ಕರೆದು ಸಾಲಗಾರ **ಜಬೀನ್ ಸುಲ್ತಾನ್ ಶೇಖ್ ಮತ್ತು ದಿಲ್‌ಶಾದ್ ಬೇಗಮ್ (ಗ್ಯಾರಂಟರ್)** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 45,57,411.31 (ರೂಪಾಯಿ ನಲ್ವತ್ತ ಐದು ಲಕ್ಷದ ಐವತ್ತ ಏಳು ಸಾವಿರದ ನಾಲ್ನೂರ ಹನ್ನೊಂದು ಮತ್ತು ಪೈಸೆ ಮೂವತ್ತ ಒಂದು ಮಾತ್ರ)** ಸಾಲ ಖಾತೆ ನಂ. **HHLBAG00325424** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **14.10.2022** ರ ವರೆಗಿನ ಮೊತ್ತ ಮತ್ತು ಆದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **21.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌**ನ ಬಾಕಿ ಇರುವ ಮೊತ್ತ **ರೂ. 45,57,411.31 (ರೂಪಾಯಿ ನಲ್ವತ್ತ ಐದು ಲಕ್ಷದ ಐವತ್ತ ಏಳು ಸಾವಿರದ ನಾಲ್ನೂರ ಹನ್ನೊಂದು ಮತ್ತು ಪೈಸೆ ಮೂವತ್ತ ಒಂದು ಮಾತ್ರ) 14.10.2022** ವರೆಗಿನ ಮೊತ್ತ ಮತ್ತು ಜೊತೆಗೆ ಆದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಗ್ರಾಮ ಸಣ್ಣತಮ್ಮನಹಳ್ಳಿ, ಗ್ರಾಮ ತಂಬುಚೆಟ್ಟಿಪಾಳ್ಯ ಗ್ರಾಮ, ಕೆ.ಆರ್.ಪುರ ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಬೆಂಗಳೂರು -560036, ಕರ್ನಾಟಕ ಇಲ್ಲಿ ಡಿ.ಸಿ, ಪರಿವರ್ತಿತ ಜಮೀನು ಸರ್ವೆ ನಂ. 6/3 , ಬಿಬಿಎಮ್‌ಪಿ ಖಾತಾ ನಂ. 334/1-1 ರಲ್ಲಿ ಇರುವ ಮತ್ತು ಅಲ್ಲಿರುವ "ಚಲಮೈರ್ಸ್" ಎಂದು ತಿಳಿಯಲಾಗುವ ಕಟ್ಟಡದಲ್ಲಿ , 3ನೇ ಮಹಡಿಯಲ್ಲಿ 1137 ಚ.ಅಡಿ ಸೂಪರ್ ಬಿಲ್ಟ್- ಅಪ್ ಏರಿಯಾದ ವಾಸ್ತವ್ಯದ ಫ್ಲ್ಯಾಟ್ ನಂ.ಟಿ-101, ಸದರಿ ಜಮೀನಿನಲ್ಲಿ 231 ಚ.ಅಡಿ ಅವಿಭಜಿತ ಪಾಲು, ಹಕ್ಕುಗಳು, ಟೈಟಲ್ ಮತ್ತು ಆಸಕ್ತಿಯೊಂದಿಗೆ.

ದಿನಾಂಕ: 21.06.2024
ಸ್ಥಳ : ಬೆಂಗಳೂರು

ಅಧಿಕಾರವಿರುವ ಅಧಿಕಾರಿ
ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಜೂ.30ರಂದು ಪ್ರಶಸ್ತಿ ಪ್ರದಾನ

ಲೇಖಕಿಯರ ಸಂಘದ ಪ್ರಶಸ್ತಿ ಪ್ರಕಟ

ಬೆಂಗಳೂರು: ಕಳೆದ ಹಲವು ವರ್ಷಗಳಿಂದ ಕರ್ನಾಟಕ ಲೇಖಕಿಯರ ಸಂಘವು ಉತ್ತಮ ಲೇಖಕಿಯರನ್ನು ಗುರುತಿಸಿ ವರ್ಷದ ಲೇಖಕಿ ಅಂಕಿತ ಪುಸ್ತಕ ಪುರಸ್ಕಾರ ವನ್ನು ನೀಡಿ ಗೌರವಿಸುತ್ತಿದೆ. ಈ ಬಾರಿ ವರ್ಷದ ಅಂಕಿತ ಪುಸ್ತಕ ಪುರಸ್ಕಾರ ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿ ಪ್ರಕಟಿಸಿದ್ದು, ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಜೂನ್ 30ರ ಭಾನುವಾರದಂದು ಬೆಳಗ್ಗೆ 10.30ಕ್ಕೆ ಸಮಾರೋಪ ಸಮಾರಂಭ ಪ್ರಾರಂಭವಾಗಲಿದ್ದು, ಅಂಕಿತ ಪುಸ್ತಕದ ಪ್ರಕಾಶ್ ಕಂಬತ್ತಳ್ಳಿ ಉಪಸ್ಥಿತರಿದ್ದರೆ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಎಚ್.ಎಲ್.ಪುಷ್ಪ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಸಿದ್ಧ ಲೇಖಕಿಯಾದ ಬಾನು ಮುಷ್ತಾಕ್ 2022ನೇ ಸಾಲಿನ ಪ್ರಶಸ್ತಿಗೆ ಭಾಜನರಾದರೆ, ಪ್ರಸಿದ್ಧ ಲೇಖಕಿ ಡಾ.ಎಚ್.ಎಸ್.ಅನುಪಮಾ 2023 ನೇ ಸಾಲಿಗೆ ಹಾಗೂ 2024 ನೇ ಸಾಲಿಗೆ ಪ್ರಸಿದ್ಧ ಕವಯತ್ರಿ ಪ್ರತಿಭಾ ನಂದಕುಮಾರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಸಂಘ ತಿಳಿಸಿದೆ.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **01.12.2023** ರಂದು ಕರೆದು ಸಾಲಗಾರ **ಕುಂಕುಮ್ ಭಟ್ಟಚಾರ್ಯ ಮತ್ತು ಸೋನಾಲಿ ಭಟ್ಟಚಾರ್ಜಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 8,38,982.10 (ರೂಪಾಯಿ ಎಂಟು ಲಕ್ಷದ ಮೂವತ್ತ ಎಂಟು ಸಾವಿರದ ಒಂಬೈ ನೂರ ಎಂಬತ್ತ ಎರಡು ಮತ್ತು ಪೈಸೆ ಹತ್ತು ಮಾತ್ರ)** ಸಾಲ ಖಾತೆ ನಂ. **HHLBAN00219972** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **29.11.2023** ರ ವರೆಗಿನ ಮೊತ್ತ ಮತ್ತು ಆದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **20.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌**ನ ಬಾಕಿ ಇರುವ ಮೊತ್ತ **ರೂ. 8,38,982.10 (ರೂಪಾಯಿ ಎಂಟು ಲಕ್ಷದ ಮೂವತ್ತ ಎಂಟು ಸಾವಿರದ ಒಂಬೈ ನೂರ ಎಂಬತ್ತ ಎರಡು ಮತ್ತು ಪೈಸೆ ಹತ್ತು ಮಾತ್ರ) 29.11.2023** ವರೆಗಿನ ಮೊತ್ತ ಮತ್ತು ಜೊತೆಗೆ ಆದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ದ್ಯಾವಸಂದ್ರ ಗ್ರಾಮ, ಜಿಗಣಿ ಹೋಬಳಿ, ಹರಗಡೆ ಗ್ರಾಮ, ಆನೆಕಲ್ ತಾಲೂಕು, ಬೆಂಗಳೂರು - 562106, ಕರ್ನಾಟಕ ಇಲ್ಲಿ ಸರ್ವೆ ನಂ. 39/1, ಖಾತಾ ನಂ. 72/87 ರಿಂದ ರಚಿಸಲಾದ ಸಾರ್ಕ್ ಗ್ರೀನ್ ಫೀಲ್ಡ್ಸ್ ಪ್ರೊಜೆಕ್ಟ್‌ನಲ್ಲಿ 30'X40' ಮಾಪನದ ಸೈಟ್ ನಂ. 87ರ ವಾಸ್ತವ್ಯದ ಆ ಎಲ್ಲಾ ತುಂಡು ಮತ್ತು ಪಾರ್ಸೆಲ್.

ಈ ಕೆಳಗಿನ ಮಾಪನದ್ದು:
ಪೂರ್ವದಿಂದ ಪಶ್ಚಿಮಕ್ಕೆ : 40 ಅಡಿ
ಉತ್ತರದಿಂದ ದಕ್ಷಿಣಕ್ಕೆ : 30 ಅಡಿ
ಒಟ್ಟಿನಲ್ಲಿ 1200 ಚದರ ಅಡಿ ಮಾಪನ ಹೊಂದಿದೆ

ಮತ್ತು ಈ ಕೆಳಗಿನಂತೆ ಸುತ್ತುವರಿಯಲ್ಪಟ್ಟಿದೆ;-
ಪೂರ್ವದಲ್ಲಿ ಇದರಿಂದ : ಸೈಟ್ ನಂ. 78 ಪಶ್ಚಿಮದಲ್ಲಿ ಇದರಿಂದ : 30 ಅಡಿ ರಸ್ತೆ
ಉತ್ತರದಲ್ಲಿ ಇದರಿಂದ : ಸೈಟ್ ನಂ. 86 ದಕ್ಷಿಣದಲ್ಲಿ ಇದರಿಂದ : ಸೈಟ್ ನಂ. 88

ದಿನಾಂಕ: 20.06.2024
ಸ್ಥಳ : ಬೆಂಗಳೂರು

ಅಧಿಕಾರವಿರುವ ಅಧಿಕಾರಿ
ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ನಿವೇಶನ ನೀಡುವುದಾಗಿ ಸಾರ್ವಜನಿಕರಿಗೆ ವಂಚನೆ,ದೂರುಗಳ ಸುರಿಮಳೆ

11 ಕಡೆ ಬಿಲ್ಡರ್‌ಗಳ ಮನೆ ಮೇಲೆ ಇಡಿ ದಾಳಿ

ಬೆಂಗಳೂರು: ಬೆಂಗಳೂರು ಹಾಗೂ ಮೈಸೂರಿನ ಹಲವು ಕಡೆ ಬಿಲ್ಡರ್‌ಗಳಿಗೆ ಜಾರಿ ನಿರ್ದೇಶನಾಲಯ ಶಾಕ್ ನೀಡಿದೆ. ಎರಡೂ ನಗರಗಳ 11 ಕಡೆಗಳಲ್ಲಿ ಬಿಲ್ಡರ್‌ಗಳ ಮನೆ ಹಾಗೂ ಕಚೇರಿಗಳಿಗೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಬೆಂಗಳೂರಿನ ಯುಬಿ ಸಿಟಿಯ ಕಿಂಗ್‌ಫಿಶರ್ ಟವರ್, ಮಲ್ಲೇಶ್ವರ, ಬಸವೇಶ್ವರನಗರ, ಬನ್ನೇರುಘಟ್ಟ ರಸ್ತೆ, ಹನುಮಂತನಗರ ಹಾಗೂ ಮೈಸೂರಿನ ಎರಡು ಸ್ಥಳಗಳಲ್ಲಿ ಇಡಿ ಅಧಿಕಾರಿಗಳು ದಾಳಿ ಮಾಡಿದರು. ಪ್ರತಿಷ್ಠಿತ ಬಿಲ್ಡರ್‌ಗಳ ಮನೆ ಹಾಗೂ ಕಚೇರಿಗಳು ದಾಳಿಗೆ ಒಳಗಾದವು. ಬೆಳ್ಳಂಬೆಳಗ್ಗೆ ದಾಳಿ ಮಾಡಿದ ಅಧಿಕಾರಿಗಳು ದಾಖಲೆಗಳ ಪರಿಶೀಲನೆ ನಡೆಸಿದರು.

ದಾಳಿಗೆ ಒಳಗಾದ ಹಲವು ಬಿಲ್ಡರ್‌ಗಳ ಹೆಸರು ನಿವೇಶನ ಕೊಡಿಸುವುದಾಗಿ ಹೇಳಿ ವಂಚನೆ, ಆಸ್ತಿಪತ್ರ ಅವ್ಯವಹಾರ, ರಿಯಲ್ ಎಸ್ಟೇಟ್ ಆಸ್ತಿಗಳ ಮೌಲ್ಯದಲ್ಲಿ ಅಕ್ರಮ, ತೆರಿಗೆ ನೋಂದಣಿಯಲ್ಲಿ ಕಳ್ಳತನ, ಹೀಗೆ ಹಲವು ಅವ್ಯವಹಾರಗಳಲ್ಲಿ ಕೇಳಿಬಂದಿದೆ ಎನ್ನಲಾಗಿದೆ. ಈ ಬಗ್ಗೆ ನೊಂದವರು ಹಾಗೂ ಬಿಲ್ಡರ್‌ಗಳ ಸಮೀಪವರ್ತಿಗಳು ದೂರು ನೀಡಿದ್ದು, ದೊರೆತುಬಂದ ಮಾಹಿತಿಯ ಹಿನ್ನೆಲೆಯಲ್ಲಿ ದಾಳಿ ನಡೆಸಲಾಗಿದೆ.

ಕೆಲವು ತಿಂಗಳ ಹಿಂದೆ ಅಕ್ರಮ ಹಣ ಲೇವಾದೇವಿ ನಡೆದಿದೆ ಎಂಬ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬೆಂಗಳೂರಿನಲ್ಲಿ ಎಂಟು ಕಡೆ ದಾಳಿ ನಡೆಸಿ 11.5 ಕೋಟಿ ರು. ವಶಪಡಿಸಿಕೊಂಡಿದ್ದರು. ಹಣ ಲೇವಾದೇವಿ ಮತ್ತು ಅಕ್ರಮ ವಹಿವಾಟಿಗೆ ಸಂಬಂಧಿಸಿ ಕೆಲವೊಂದು ಮಾಹಿತಿಯನ್ನು ಪಡೆದುಕೊಂಡಿದ್ದ ಜಾರಿ ನಿರ್ದೇಶನಾಲಯ ಅಧಿಕಾರಿಗಳು ದಾಖಲೆಗಳನ್ನು ವಶಕ್ಕೆ ಪಡೆದಿದ್ದರು.

ಗ್ರಾಹಕರಿಗೆ ವಂಚನೆ ನಡೆಸಿದ ಆರೋಪ

ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಕೆಲ ಕಂಪನಿಗಳು ಸೈಟ್ ಕೊಡಿಸುವುದಾಗಿ ವಂಚನೆ ಮಾಡಿವೆ ಎಂದು ಬೆಂಗಳೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಸೈಟ್ ಕೊಡಿಸುವುದಾಗಿ ವಂಚನೆ ಮಾಡಿದ್ದರಿಂದಾಗಿ ಪೊಲೀಸರು ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತರಕ್ಷಣಾ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದರು. ಇವರು ಜನರಿಂದ ಪಡೆದ ಹಣವನ್ನು ಬೇರೆ ಕಡೆ ಹೂಡಿಕೆ ಮಾಡಿದ್ದರು ಎಂಬ ಆರೋಪಗಳಿದ್ದವು. ಈ ವಿಚಾರಗಳು ಜಾರಿ ನಿರ್ದೇಶನಾಲಯದ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಅವರು ದಾಖಲೆ ಪರಿಶೀಲಿಸಿ, ಈಗ ದಾಳಿಯನ್ನು ಸಂಘಟಿಸಿದ್ದಾರೆ.

ವಿದ್ಯಾರ್ಥಿನಿ ಕೊಲೆ ಪ್ರಕರಣದ ಮರು ತನಿಖೆಗೆ ಸಿಎಂ ಆದೇಶ | ಪೊಲೀಸರ ಅಸಹಕಾರವೆಂದು ದೂರಿದ್ದ ಪೋಷಕರು | ಆತ್ಮಹತ್ಯೆ ಎಂದು ಬಿಂಬಿಸಲು ಯತ್ನ

ಪ್ರಬುದ್ಧ ಹತ್ಯೆ ಪ್ರಕರಣ ಸಿಐಡಿ ಹೆಗಲಿಗೆ

ಬೆಂಗಳೂರು: ಬೆಂಗಳೂರಿನ ಸುಬ್ರಮಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೇ 15ರಂದು ನಡೆದಿದ್ದ ದ್ವಿತೀಯ ಬಿಬಿಎ ವಿದ್ಯಾರ್ಥಿನಿ ಪ್ರಬುದ್ಧ ಸಾವು ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

CID

ಸಾಮಾಜಿಕ ಕಾರ್ಯಕರ್ತೆ ಆಗಿರುವ ಕೆ.ಆರ್. ಸೌಮ್ಯ ಅವರು ತಮ್ಮ ಪುತ್ರಿ ಸಾವಿನ ಪ್ರಕರಣದ ತನಿಖೆಗೆ ಒಪ್ಪಿಸಲು ಸಾಮಾಜಿಕ ಕಾರ್ಯಕರ್ತರ ನಿಯೋಗದೊಂದಿಗೆ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಮನವಿ ಮಾಡಿದರು. ಮನವಿಯನ್ನು ಪುರಸ್ಕರಿಸಿದ ಸಿಎಂ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾಯಿಸಲು ಸೂಚಿಸಿದ್ದಾರೆ.

ಮಗಳ ಭೀಕರ ಹತ್ಯೆಯ ತನಿಖೆಯಲ್ಲಿ ಸ್ಥಳೀಯ ಪೊಲೀಸರ ಅಸಹಕಾರ, ಉದ್ದೇಶಪೂರ್ವಕ ನಿರ್ಲಕ್ಷ್ಯತೆ, ಸಾಕ್ಷ್ಯ ನಾಶ ಯತ್ನ, ಕೊಲೆಗಡುಕರೊಂದಿಗಿನ ಶಾಮೀಲುದಾರಿಕೆ, ಸಂತ್ರಸ್ತ ತಾಯಿಯಾದ ನನಗೆ ಬೆದರಿಕೆ ವಿಚಾರಗಳ ಬಗ್ಗೆ ಸಮಗ್ರ ತನಿಖೆ, ನ್ಯಾಯ ಮತ್ತು ರಕ್ಷಣೆಗಾಗಿ ಸಿಐಡಿಗೆ ವಹಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತೆ ಕೆ.ಆರ್.ಸೌಮ್ಯ ಕೋರಿದ್ದಾರೆ.

ಮೇ 15ರಂದು ಸಂಜೆ ಮನೆಯಲ್ಲೇ ಮಗಳನ್ನು ಭೀಕರವಾಗಿ ಹತ್ಯೆ ಮಾಡಲಾಗಿದೆ. ಹತ್ಯೆಯ ಮೊದಲ ದಿನದಿಂದಲೂ ಸುಬ್ರಮಣ್ಯಪುರ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಮತ್ತು ಅವರ ತಂಡ ಸಂಶಯಾಸ್ಪದವಾಗಿ ವರ್ತಿಸುತ್ತಿದ್ದಾರೆ. ನನ್ನ ಮಗಳು ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಹೇಡಿಯಲ್ಲ ಎಂದು ಪದೇಪದೇ ಹೇಳಿದರೂ ಕೇಳಿಸಿಕೊಳ್ಳದೆ ತನಿಖಾ ತಂಡ ಮೊದಲ ಮೂರ್ನಾಲ್ಕು ದಿನವೂ ಇದನ್ನು ಆತ್ಮಹತ್ಯೆ ಎಂದೇ ಬಿಂಬಿಸುವ ಪ್ರಯತ್ನ ಮಾಡಿ, ಕೊಲೆಗಡುಕ ಮತ್ತು ಕೊಲೆಗಡುಕನಿಗೆ ಎಲ್ಲ ರೀತಿಯ ಸಹಾಯ ಮಾಡಿ, ಕೊಲೆಯನ್ನೇ ಮುಚ್ಚಿ ಹಾಕುವ ಪ್ರಯತ್ನ ಮಾಡಿದ್ದಾರೆ ಎಂದು ಆರೋಪಿಸಿದರು.

ಆರೋಪಿಗಳೊಂದಿಗೆ ಪೊಲೀಸರ ಸಂಪರ್ಕ: ಆರೋಪಿ ಕಡೆಯವರು ಪೊಲೀಸರೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದು, ಸಾಕ್ಷ್ಯಗಳನ್ನು ನಾಶಪಡಿಸಿದ್ದರೂ, ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೆ ಕಾಟಾಚಾರಕ್ಕೆ ಮಹಜರ್ ನಡೆಸಿದ್ದಾರೆ. ಜೆಜೆಬಿಯಲ್ಲಿ ವಕೀಲರಿಗೆ ಯಾವುದೇ ಮಾಹಿತಿ ಒದಗಿಸದೇ, ಆಪಾದಿತನಿಗೆ ಹತ್ತೇ ದಿನಕ್ಕೆ ಜಾಮೀನು ಪಡೆದಿದ್ದಾಬನೆ. ಸಿಂಗಲ್ ಪೇರೆಂಟ್ ಆಗಿ ಮಕ್ಕಳನ್ನು ಕಷ್ಟಪಟ್ಟು ಓದಿಸುತ್ತಿದ್ದ ನನಗೆ ಈಗ ಜೀವಭಯವೂ ಉಂಟಾಗಿದೆ. ನನ್ನ ವಯಸ್ಸಾದ ತಾಯಿ ಮತ್ತು ಮಗನ ಕುರಿತೂ ಆತಂಕವಾಗಿದೆ. ಹೀಗಾಗಿ ಪ್ರಬುದ್ಧ ಹತ್ಯೆಯನ್ನು ಸಿ.ಐ.ಡಿ.ಗೆ ವಹಿಸಿ ಅಪರಾಧಿ ಮತ್ತು ಅವನಿಗೆ ಬೆಂಬಲ ನೀಡಿದವರಿಗೆ ತಕ್ಕ ಶಿಕ್ಷೆ ವಿಧಿಸಲು ಕ್ರಮ ಕೈಗೊಳ್ಳಬೇಕು ಎಂದು ಸಿಎಂಗೆ ಮನವಿ ಮಾಡಿದ್ದಾರೆ.

ಏನಿದು ಪ್ರಕರಣ?

ಮೇ 15ರ ಮಧ್ಯಾಹ್ನ ಬಾಲಕಿ ಪ್ರಬುದ್ಧ ಸುಬ್ರಮಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯ ಮನೆಯ ಬಾತ್ ರೂಂನಲ್ಲಿ ಶವವಾಗಿ ಪತ್ತೆಯಾಗಿದ್ದಳು. ಆಕೆಯ ಕುತ್ತಿಗೆ ಹಾಗೂ ಕೈ ಕೊಯ್ದ ಸ್ಥಿತಿಯಲ್ಲಿ ಶವ ಪತ್ತೆಯಾಗಿದ್ದರಿಂದ ಹಲವು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿತ್ತು. ಖಾಸಗಿ ಕಾಲೇಜಿನಲ್ಲಿ ದ್ವಿತೀಯ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದ ಪ್ರಬುದ್ಧ, ಆ ದಿನ ತಾಯಿ ಸೌಮ್ಯಗೆ ಕರೆ ಮಾಡಿ ಫ್ರೆಂಡ್ಸ್ ಜತೆಗೆ ಇದ್ದೇನೆ. ಪಾನೀಪುರಿ ತಿಂದು ಮನೆಗೆ ಹೋಗುತ್ತೇನೆ ಎಂದಿದ್ದಳು. ನಂತರ ತಾಯಿ ಆಫೀಸ್ ಮುಗಿಸಿ ಮನೆಗೆ ಬಂದು ನೋಡಿದಾಗ ಬಾತ್ ರೂಮಿನಲ್ಲಿ ಬರ್ಬರವಾಗಿ ಕೊಲೆಯಾದ ಸ್ಥಿತಿಯಲ್ಲಿ ಮಗಳ ಮೃತದೇಹ ಪತ್ತೆಯಾಗಿತ್ತು. ಮನೆಯ ಮುಂದಿನ ಡೋರ್‌ಲಾಕ್ ಆಗಿತ್ತು. ಆದರೆ ಹಿಂದಿನ ಡೋರ್ ಓಪನ್ ಆಗಿತ್ತು ಎಂದು ತಾಯಿ ಸೌಮ್ಯ ಘಟನೆ ವಿವರ ನೀಡಿದ್ದರು. ಮಗಳ ಫೋನ್ ಸೋಫಾ ಮೇಲೆ ಇತ್ತು. ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬರುವಷ್ಟರಲ್ಲಿ ಫೋನ್ ಕೂಡ ಕಳ್ಳತನ ಆಗಿತ್ತು. ನನ್ನ ಮಗಳು ಆತ್ಮಹತ್ಯೆ ಮಾಡಿಕೊಳ್ಳುವವಳು ಅಲ್ಲ. ಯಾರೋ ಕೊಲೆಮಾಡಿದ್ದಾರೆ ಎಂದು ಆರೋಪಿಸಿದ್ದರು. ನಂತರ ಪ್ರಕರಣ ದಾಖಲಿಸಿಕೊಂಡು ತನಿಖೆಗಿಳಿದ ಪೊಲೀಸರು ಆರೋಪಿಯನ್ನು ಬಂಧಿಸಿದ್ದರು. ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಇದು ಆತ್ಮಹತ್ಯೆಯಲ್ಲ, ಕೊಲೆ ಎಂಬುದು ಸಾಬೀತಾಗಿತ್ತು.

ಸಮಾಚಾರ ಸಣ್ಣದಲ್ಲ

ಆಯುಕ್ತರಿಗೇ ಡೆಂಘೀ ಜ್ವರದ ಕಾಟ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಡೆಂಘೀ ಜ್ವರ ಕಾಣಿಸಿಕೊಂಡಿದೆ. ನಗರದ ಒಂದೂವರೆ ಕೋಟಿ ಜನರ ಆರೋಗ್ಯ ಮೇಲ್ವಿಚಾರಣೆ ಹೊಣೆ ಹೊತ್ತಿರುವ ಮುಖ್ಯ ಆಯುಕ್ತರಿಗೆ ಡೆಂಘೀ ಕಾಣಿಸಿಕೊಂಡಿರುವುದು ಆತಂಕಕ್ಕೆ ಕಾರಣವಾಗಿದೆ. ಅನಾರೋಗ್ಯದ ಹೊರತಾಗಿಯೂ, ಅವರು ತಮ್ಮ ಕರ್ತವ್ಯಗಳನ್ನು ಮುಂದುವರಿಸಿದ್ದಾರೆ. ಪ್ರಮುಖ ಸಭೆಗಳಿಗೆ ಹಾಜರಾಗುತ್ತಾರೆ ಮತ್ತು ಅವರ ನಿಯಮಿತ ವೇಳಾಪಟ್ಟಿಯನ್ನು ನಿರ್ವಹಿಸುತ್ತಿದ್ದಾರೆ ಎಂದು ವರದಿಯಾಗಿದೆ. ಜೂನ್ 19 ರ ಬುಧವಾರದಿಂದ ನಾಥ್ ಅವರಿಗೆ ಸೌಮ್ಯ ಜ್ವರ ಕಾಣಿಸಿಕೊಂಡಿತ್ತು. ಬಿಬಿಎಂಪಿಯ ಮುಖ್ಯ ಆರೋಗ್ಯಾಧಿಕಾರಿಗಳ ಶಿಫಾರಸಿನ ಮೇರೆಗೆ ಡೆಂಘೀ ಪರೀಕ್ಷೆ ನಡೆಸಿಕೊಂಡಾಗ ಅದು ಪಾಸಿಟಿವ್ ಆಗಿರುವುದು ಗೊತ್ತಾಗಿದೆ.

ಐದು ಲಕ್ಷ ಸಹಾಯಧನ

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕು, ಆಗುಂಬೆ ಹೋಬಳಿ ಕೇಸಲೂರು ಗ್ರಾಮದ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಗೋದಾಮು ನಿರ್ಮಾಣಕ್ಕೆ ಸಹಕಾರ ಇಲಾಖೆ ವತಿಯಿಂದ ಐದು ಲಕ್ಷ ರು. ಸಹಾಯಧನ ಮಂಜೂರಾಗಿದೆ. ಇತ್ತೀಚೆಗೆ ಕೇಸಲೂರಿಗೆ ಭೇಟಿನೀಡಿದ್ದ ಕರ್ನಾಟಕ ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷರಾದ ಡಾ. ಆರತಿ ಕೃಷ್ಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಗೋದಾಮು ನಿರ್ಮಿಸಲು ಸಹಾಯಧನ ಮಂಜೂರು ಮಾಡಲು ಕೋರಿದ್ದರು.

ಡೆಂಘೀ ಪ್ರಕರಣ ಹೆಚ್ಚಳ

ಬೆಂಗಳೂರು: ಮಳೆ ಶುರುವಾದರೆ ಸಾಕು ಇದರ ಜತೆಗೆ ಸೊಳ್ಳೆಗಳ ಕಾಟವೂ ಹೆಚ್ಚಲಿದೆ. ಹವಾಮಾನ ವೈಪರೀತ್ಯ ಮತ್ತು ಮಳೆಯಿಂದಾಗಿ ಡೆಂಘೀ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದು ಆತಂಕ ಮೂಡಿಸಿದೆ. 2022ರಲ್ಲಿ ರಾಜ್ಯದಲ್ಲಿ 7,317 ಡೆಂಘೀ ಜ್ವರ ಪ್ರಕರಣಗಳು ಪತ್ತೆಯಾಗಿದ್ದು, ಈ ಪೈಕಿ ನಾಲ್ವರು ಮೃತಪಟ್ಟಿದ್ದರು. 2023ರಲ್ಲಿ 2003 ಪ್ರಕರಣಗಳು ವರದಿಯಾಗಿದ್ದವು. 2024ರಲ್ಲಿ ಈ ವರೆಗೆ (ಜೂನ್) 85,365 ಶಂಕಿತವಾಗಿದ್ದು, ಇದರಲ್ಲಿ 37,144 ಮಂದಿಯ ರಕ್ತ ಮಾದರಿಯನ್ನು ಸಂಗ್ರಹಿಸಲಾಗಿತ್ತು. ಆ ಪ್ರಕಾರ 3,957 ಮಂದಿಗೆ ಡೆಂಘೀ ಜ್ವರ ದೃಢಪಟ್ಟಿದೆ. ಬೆಂಗಳೂರಲ್ಲಿ 1230 ಮಂದಿಗೆ ಡೆಂಘೀ ಜ್ವರ ಕಂಡು ಬಂದಿದೆ. ಈವರೆಗೆ ಡೆಂಘೀ ನಿಂದ ಮೃತಪಟ್ಟ ವರದಿವಾಗಿಲ್ಲ.

ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ

ಬೆಂಗಳೂರು: ಇಂಧನ ಇಲಾಖೆಯ ವಿದ್ಯುತ್ ಪರಿವೀಕ್ಷಣಾಲಯ ವತಿಯಿಂದ ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ-2024 ಕಾರ್ಯಕ್ರಮವನ್ನು ಜೂನ್ 26 ರಿಂದ ಜುಲೈ 2 ರವರೆಗೆ ರಾಜ್ಯಾದ್ಯಂತ ಆಚರಿಸಲಾಗುತ್ತಿದೆ. ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ-2024 ಕಾರ್ಯಕ್ರಮವನ್ನು ಜೂನ್ 26 ರಂದು ಬೆಳಿಗ್ಗೆ 8 ಗಂಟೆಗೆ ಇಂಧನ ಸಚಿವರಾದ ಕೆ.ಜೆ.ಜಾರ್ಜ್ ಅವರು ಉದ್ಘಾಟಿಸಲಿದ್ದಾರೆ. ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಗೌರವ್ ಗುಪ್ತಾ, ಸರಕಾರದ ಮುಖ್ಯ ವಿದ್ಯುತ್ ಪರಿವೀ ಕ್ಷಕರಾದ ತೀತಿರಾ. ಎನ್.ಅಪ್ಪಚ್ಚು ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ದರಪಟ್ಟಿ ಆಹ್ವಾನ

ಬೆಂಗಳೂರು: ಬೆಂಗಳೂರು ಸಿಟಿ ಸಿವಿಲ್ ಕೋರ್ಟ್ ಇತ್ತೀಚೆಗೆ ಜಾರಿಗೆ ಬಂದ ಕ್ರಿಮಿನಲ್ ಲಾ ಪುಸ್ತಕಗಳಾದ ಭಾರತೀಯ ನ್ಯಾಯ ಸಂಹಿತೆ- 2023, ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ - 2023 ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ, 2023 (ಆಂಗ್ಲ ಪುಸ್ತಕ) ಗಳನ್ನು ಖರೀದಿಸಲು ದರಪಟ್ಟಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://bengaluru.dcourts.gov.in ಜಾಲತಾಣ ವೀಕ್ಷಿಸಬಹುದಾಗಿದೆ ಎಂದು ಸಿಟಿ ಸಿವಿಲ್ ಕೋರ್ಟ್‌ನ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿಗಳ ಆಹ್ವಾನ

ಬೆಂಗಳೂರು: ಬೆಂಗಳೂರಿನ ಕೆ.ಆರ್ ವೃತ್ತದಲ್ಲಿರುವ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯವು 2023-24ನೇ ಶೈಕ್ಷಣಿಕ ವರ್ಷಕ್ಕೆ ತಾಂತ್ರಿಕೇತರ ವಿಷಯಗಳನ್ನು ಬೋಧನೆ ಮಾಡಲು ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ, ಎಐಸಿಟಿಇ/ಯುಜಿಸಿ ನಿಯಮಗಳಾನುಸಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಹಾಗೂ ಸಂಬಂಧಿತ ಮಾಹಿತಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ **www.uvce.ac.in** ನಲ್ಲಿ ಪಡೆಯಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

29ಕ್ಕೆ ಬೆಂಗಳೂರು ನಗರ ವಿವಿ ಘಟಿಕೋತ್ಸವ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ತೃತೀಯ ವಾರ್ಷಿಕ ಘಟಿಕೋತ್ಸವ ಜೂನ್ 29ರಂದು ಬೆಳಗ್ಗೆ 11.30ರ ಘಂಟೆಗೆ ಜ್ಞಾನಜ್ಯೋತಿ ಸಭಾಂಗಣ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಎಲ್ಲಾ ಚಿನ್ನದ ಪದಕ ವಿಜೇತ ಹಾಗೂ ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳು ಪದವಿ ಪಡೆಯಲು ಅರ್ಹರಾಗಿರುವ ವಿದ್ಯಾರ್ಥಿಗಳಿಗೆ ಹಾಗೂ ಪಿಎಚ್.ಡಿ ಪದವಿ ಪಡೆಯಲಿರುವ ಸಂಶೋಧನಾ ವಿದ್ಯಾರ್ಥಿಗಳು ಪ್ರಾಂಶುಪಾಲರು ನೀಡಿರುವ ಗುರುತಿನ ಪತ್ರದೊಂದಿಗೆ, ಆಮಂತ್ರಣ ಪತ್ರಿಕೆ ಮತ್ತು ಬ್ಯಾಡ್ಜ್‌ಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮೌಲ್ಯಮಾಪನ ವಿಭಾಗದ ಮೌಲ್ಯಮಾಪನ ಕುಲಸಚಿವರ ಕಚೇರಿಯಲ್ಲಿ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸೋನಿಯಾ, ರಾಹುಲ್ ದೇಶದ ಜನರ ಕ್ಷಮೆ ಕೇಳಬೇಕು | ರಾಜ್ಯ ಬಿಜೆಪಿಯಿಂದ ಪೋಸ್ಟರ್ ಅಭಿಯಾನ

ತುರ್ತು ಪರಿಸ್ಥಿತಿ ಹೇರಿದ್ದಕ್ಕೆ ಕ್ಷಮೆ ಕೇಳಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತುರ್ತು ಪರಿಸ್ಥಿತಿಯನ್ನು ಹೇರಿದ್ದ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ನಡೆಸಿದ ಬಳಿಕ ಕಾಂಗ್ರೆಸ್ ಕಚೇರಿ ಬಳಿ ಪೋಸ್ಟರ್ ಚಳವಳಿ ಮಾಡಲು ಮುಂದಾದ ಬಿಜೆಪಿಗರನ್ನು ವಶಕ್ಕೆ ಪಡೆದ ಪೊಲೀಸರು.

ದೇಶದಲ್ಲಿ ತುರ್ತುಪರಿಸ್ಥಿತಿ ಹೇರಿ 50 ವರ್ಷದ ಹಿನ್ನಲೆಯಲ್ಲಿ ರಾಜ್ಯ ಬಿಜೆಪಿಯಿಂದ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲಾಯಿತು. ಇಂದಿರಾಗಾಂಧಿ ಹೇರಿದ್ದ ತುರ್ತು ಪರಿಸ್ಥಿತಿ ಖಂಡಿಸಿದ್ದಲ್ಲದೇ, ಈ ಸಂಬಂಧ ರಾಹುಲ್ ಹಾಗೂ ಸೋನಿಯಾ ಗಾಂಧಿ ದೇಶದ ಜನರ ಕ್ಷಮೆ ಕೇಳಬೇಕೆಂದು ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪೋಸ್ಟರ್ ಅಭಿಯಾನ ನಡೆಸಲಾಯಿತು.

ಈ ವೇಳೆ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ್, ಕಾಂಗ್ರೆಸ್ ದೇಶ ವಿರೋಧಿ ಮತ್ತು ಸಂವಿಧಾನದ ವಿರೋಧಿ. ಇಂಥ ಪಕ್ಷ ಇವತ್ತು ದೇಶದ ಮುಂದೆ ತಲೆಬಾಗಿ ಕೈಕಟ್ಟಿಕೊಂಡು ತುರ್ತು ಪರಿಸ್ಥಿತಿ ಸಂಬಂಧ ದೇಶಕ್ಕೆ ದ್ರೋಹ ಬಗೆದಿದ್ದೇವೆ. ಸಂವಿಧಾನಕ್ಕೆ ಅಪ್ರಚಾರ ಮಾಡಿದ್ದೇವೆ ಎಂಬುದಾಗಿ ಒಪ್ಪಿಕೊಳ್ಳಬೇಕು ಎಂದು ಆಗ್ರಹಿಸಿದರು.

ನಾವು ಸಂವಿಧಾನ ಬದಲಿಸಿದ್ದಾಗಿ ಹೇಳುತ್ತಾರೆ. ನಾವೇನೂ ಬದಲಾವಣೆ ಮಾಡಿಲ್ಲ, ಮಾಡದೇ ಇದ್ದರೂ ನಮ್ಮ ಮೇಲೆ ಅಪವಾದ ಹೊರಿಸುತ್ತಾರೆ. ಸಂವಿಧಾನಕ್ಕೆ ಅಪಚಾರ ಬಗೆದವರು, ದ್ರೋಹ ಬಗೆದವರು ಕಾಂಗ್ರೆಸ್ಸಿಗರು ಎಂದು ಆಕ್ಷೇಪ ವ್ಯಕ್ತಪಡಿಸಿದರು. ಇಂಥ ಕಾಂಗ್ರೆಸ್ ಪಕ್ಷವು ದೇಶದ ಜನರ ಮುಂದೆ ಅಪರಾಧಿ ಸ್ಥಾನದಲ್ಲಿ ನಿಂತಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿಯವರು ರಾಮಲೀಲಾ ಮೈದಾನಕ್ಕೆ ಬಂದು ದೇಶದ ಮುಂದೆ ತಲೆಬಾಗಿ ನಿಂತು, ದೇಶದ ಜನರ ಮುಂದೆ ತಲೆಬಗ್ಗಿಸಿ, ನಾವು ಸಂವಿಧಾನಕ್ಕೆ ಅಪಚಾರ ಮಾಡಿದ್ದಾಗಿ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ಸ್ವಾತಂತ್ರ್ಯ ಉದ್ಯಾನವನದ ಮೂಲಕ ಪೋಸ್ಟರ್‌ಗಳನ್ನು ಕಾಂಗ್ರೆಸ್ ಅಂಟಿಸುವುದಾಗಿ ಬಿಜೆಪಿ ನಾಯಕರು ಪ್ರಕಟಿಸಿದರು. ಇದಕ್ಕೆ ಅವಕಾಶ ನೀಡುವುದಿಲ್ಲ ಎಂದು ಪೊಲೀಸರು ಹೇಳಿದರೂ, ಕಾಂಗ್ರೆಸ್ ಕಚೇರಿಯತ್ತ ತೆರಳಿದ್ದರಿಂದ ಬಿಜೆಪಿ ನಾಯಕರನ್ನು ಪೊಲೀಸರು ವಶಕ್ಕೆ ಪಡೆದು ಬಿಡುಗಡೆಗೊಳಿಸಿದರು. ಈ ವೇಳೆ ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ್, ಶಾಸಕ ಮುನಿರಾಜು, ವಿಧಾನಪರಿಷತ್ ಸದಸ್ಯರಾದ ಎನ್. ರವಿಕುಮಾರ್ ಸೇರಿದಂತೆ ಅನೇಕರಿದ್ದರು.

ತುರ್ತು ಪರಿಸ್ಥಿತಿ ವಿಚಾರ ಸಂಕಿರಣ

ಇನ್ನು ತುರ್ತು ಪರಿಸ್ಥಿತಿ ಹೇರಿ 50 ವರ್ಷ ಕಳೆದಿರುವ ಹಿನ್ನಲೆಯಲ್ಲಿ ರಾಜ್ಯಾದ್ಯಂತ ರಾಜ್ಯ ಬಿಜೆಪಿ ಘಟಕದ ವತಿಯಿಂದ 'ತುರ್ತು ಪರಿಸ್ಥಿತಿ ಸಂವಿಧಾನಕ್ಕೆ ಮಾಡಿದ ಅಪಮಾನ' ಎನ್ನುವ ವಿಚಾರಣ ಸಂಕಿರಣವನ್ನುಹಮ್ಮಿಕೊಳ್ಳಲಾಗಿದೆ. ಸಿಟಿಜನ್ ಫಾರ್ ಸೋಶಿಯಲ್ ಜಸ್ಟೀಸ್ ಸಂಸ್ಥೆಯ ಸಹಯೋಗದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ತುರ್ತು ಪರಿಸ್ಥಿತಿಯಲ್ಲಿನ ಹಲವು ಲೋಪಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಹಮ್ಮಿಕೊಂಡಿರುವ ವಿಚಾರ ಸಂಕಿರಣದಲ್ಲಿ ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ, ಹಿರಿಯ ಪತ್ರಕರ್ತ ರವೀಂದ್ರ ರೇಷ್ಮೆ, ದಲಿತ ಮುಖಂಡ ಪಟಾಪಟ್ ಶ್ರೀನಿವಾಸ್ ಹಾಗೂ ತುತುಪರಿಸ್ಥಿತಿ ಹೋರಾಟಗಾರ್ತಿ ಗಾಯತ್ರಿ ಹನುಮಂತರಾವ್ ಭಾಗವಹಿಸಲಿದ್ದಾರೆ.

ಸ್ಟಾರ್ಟ್‌ಅಪ್ ಉದ್ಯಮಗಳೊಂದಿಗೆ ರೈತರ ಸಂಪರ್ಕ

ಪ್ರತಿ ಜಿಲ್ಲೆಯಲ್ಲೂ 2 ದಿನ ಸಿರಿಧಾನ್ಯ ಮೇಳ: ಎನ್. ಚಲುವರಾಯಸ್ವಾಮಿ



ವಿಕಾಸಸೌಧದ ಕಚೇರಿಯಲ್ಲಿ ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಸ್ಟಾರ್ಟ್‌ಅಪ್ ಉದ್ಯಮಗಳಿಗೆ ರೈತರೊಂದಿಗೆ ಸಂಪರ್ಕಿಸುವ ಕುರಿತು ಸಭೆಯಲ್ಲಿ ಸಚಿವ ಚಲುವರಾಯಸ್ವಾಮಿ ಭಾಗವಹಿಸಿದ್ದರು. ಈ ವೇಳೆ ರಾಜ್ಯ ಸರಕಾರದ ಅಭಿವೃದ್ಧಿ ಆಯುಕ್ತರು ಹಾಗೂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ ಅನ್ಬುಕುಮಾರ್, ಕೃಷಿ ಆಹಾರ ಸಂಸ್ಕರಣೆ ಮತ್ತು ಕಟಾವು ತಂತ್ರಜ್ಞಾನದ ವಿಶೇಷ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಉಪಸ್ಥಿತರಿದ್ದರು.

ಬೆಂಗಳೂರು: ಪ್ರತಿ ಜಿಲ್ಲೆಯಲ್ಲೂ ಎರಡು ದಿನಗಳ ಸಿರಿಧಾನ್ಯ ಮೇಳ ಏರ್ಪಡಿಸುವುದರೊಂದಿಗೆ ವಿದೇಶದಲ್ಲಿ ನಡೆಯುವ ಆಹಾರ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳಗಳಲ್ಲಿ ರಾಜ್ಯದಿಂದ ಮಳಿಗೆ ಹಾಕಲು ಸಹ ನೆರವು ಒದಗಿಸಲಾಗುವುದು ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಭರವಸೆ ನೀಡಿದ್ದಾರೆ.

ವಿಕಾಸಸೌಧದ ಕಚೇರಿಯಲ್ಲಿ ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಸ್ಟಾರ್ಟ್‌ಅಪ್ ಉದ್ಯಮಗಳಿಗೆ ರೈತರೊಂದಿಗೆ ಸಂಪರ್ಕಿಸುವ ಕುರಿತು ಸಭೆ ನಡೆಸಿ ಮಾತನಾಡಿದ ಅವರು, ಸಿರಿಧಾನ್ಯ ಆಧಾರಿತ ಉದ್ಯಮಗಳನ್ನು ಬಲಪಡಿಸುವ ಅಗತ್ಯವಿದ್ದು, ಬೇಡಿಕೆ ಹೆಚ್ಚಿದ್ದರೂ ಪೂರೈಕೆ ಕೊರತೆಯಿದೆ. ಆದ್ದರಿಂದ ಪ್ರೋತ್ಸಾಹಧನ ಯೋಜನೆ ಮುಂದುವರಿಸುವುದರೊಂದಿಗೆ ಉತ್ಪಾದನೆಯನ್ನು 30 ಸಾವಿರದಿಂದ 50 ಸಾವಿರ ಹೆಕ್ಟೇರ್‌ಗೆ ಏರಿಕೆ ಮಾಡಲು ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಎಸ್‌ಟಿ ಇಳಿಕೆಗೆ ಪ್ರಸ್ತಾವನೆ: ಸಿರಿಧಾನ್ಯಗಳ ಆಹಾರ ಉತ್ಪಾದಕರಿಗೆ ತಂತ್ರಜ್ಞಾನ ವಿಸ್ತರಣೆ ಜೊತೆಗೆ ದೀರ್ಘಾವಧಿಗೆ ಆಹಾರ ಪದಾರ್ಥ ಸಂಸ್ಕರಣೆ ಗೆ ಸಿ.ಫ್.ಟಿ ಆರ್.ಐ ಮೂಲಕ ನೆರವು ಒದಗಿಸಲು ಕ್ರಮಕೈಗೊಳ್ಳಲಾಗುವುದು. ಅಲ್ಲದೇ ಪ್ರಸಕ್ತ ಸಿರಿಧಾನ್ಯಗಳ ಪುಡಿಗ ಮೇಲಿನ ಜಿಎಸ್‌ಟಿಯನ್ನು ಶೇ.18 ರಿಂದ ಶೇ.5 ಕ್ಕೆ ಇಳಿಸುವಂತೆ ಇತರ ಮೌಲ್ಯವರ್ಧಿತ ಕೃಷಿ ಆಹಾರ ಉತ್ಪನ್ನಗಳಿಗೂ ವಿಸ್ತರಿಸಬೇಕು ಎಂದು ನವೋದ್ಯಮಿಗಳು ಮನವಿ ಮಾಡಿದ್ದು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪೂರಕ ಪ್ರಸ್ತಾವನೆ ಕಳುಹಿಸಲಾಗುವುದು ಎಂದು ತಿಳಿಸಿದರು.

ಸಚಿವ ಕೆ.ಎಚ್. ಮುನಿಯಪ್ಪ ಅಧಿಕಾರಿಗಳಿಗೆ ಸೂಚನೆ

ಡಿಬಿಟಿ ಹಣ ತಿಂಗಳಾಂತ್ಯಕ್ಕೆ ಫಲಾನುಭವಿಗಳಿಗೆ ಸಿಗಲಿ

ಬೆಂಗಳೂರು: ಡಿಬಿಟಿ ಹಣವು ಪ್ರತಿತಿಂಗಳ ಅಂತ್ಯದ ಒಳಗೆ ಫಲಾನುಭವಿಗಳ ಖಾತೆಗೆ ಸಂದಾಯವಾಗುವಂತೆ ಕ್ರಮ ತೆಗೆದುಕೊಳ್ಳಬೇಕು. ಉಳಿಕೆ ಇರುವ ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ಗಳನ್ನು ಗುರುತಿಸಿ ವಿಲೇವಾರಿಗೆ ಮುಂದಾಗಬೇಕು ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಕೆ.ಎಚ್. ಮುನಿಯಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಆಹಾರ ನಿಗಮದಲ್ಲಿ ಸೋಮವಾರ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯನ್ನು ನಡೆಸಿದರು. ಇಲಾಖೆಯಲ್ಲಿನ ಲೋಪದೋಷಗಳನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ಇಲಾಖೆಯಲ್ಲಿ ಪಡಿತರದಾರರಿಗೆ ಸರಬರಾಜು ಆಗುತ್ತಿರುವ ಅಕ್ಕಿ,ರಾಗಿ, ಜೋಳ ಮತ್ತಿತರು ಉತ್ಪನ್ನಗಳು ಗುಣಮಟ್ಟದಿಂದ ಕೂಡಿರಬೇಕು. ಇಲ್ಲದಿದ್ದರೆ ಕಳಪೆ ಪೂರೈಸಿದರೆ ಅದರ ಮೇಲೆ ನಿಗಾ ಇಡಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಗೋದಾಮುಗಳಲ್ಲಿ ಸುಚಿತ್ವವನ್ನು ಕಾಪಾಡಬೇಕು ಮತ್ತು ವಿಲೇವಾರಿ ಸಂದರ್ಭದಲ್ಲಿ ಉತ್ತಮ ಗುಣಮಟ್ಟದ ಆಹಾರ ಧಾನ್ಯಗಳನ್ನು ಸರಬರಾಜು ಮಾಡಬೇಕು ಎಂದು ಇದೇ ವೇಳೆ ಸಚಿವರು ಸೂಚಿಸಿದರು.

ಈ ಸಂದರ್ಭದಲ್ಲಿ ಸರಕಾರದ ಕಾರ್ಯದರ್ಶಿ ರಮಣದೀಪ್ ಚೌದರಿ, ಆಯುಕ್ತರಾದ ವಾಸಿ ರೆಡ್ಡಿ ವಿಜಯ ಜೋತ್ಸ್ನಾ, ಆಹಾರ ನಿಗಮ ನಿರ್ದೇಶಕ ಚಂದ್ರಕಾಂತ್, ಕಾನೂನು ಮಾಪನ ಇಲಾಖೆ ನಿಯಂತ್ರಕರಾದ ಅನಿತಾ ಲಕ್ಷ್ಮೀ, ಆಹಾರ ಆಯೋಗದ ಕಾರ್ಯದರ್ಶಿ ಸುಜಾತ ಹೊಸಮನಿ, ಸಚಿವರ ಕಾರ್ಯದರ್ಶಿ ಡಾ. ಎಚ್ ನಟರಾಜ್ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮುಂಗಾರು; 7 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಮಳೆ ತನ್ನ ಆರ್ಭಟ ಮುಂದುವರೆಸಿದ್ದು, ಈ ಹಿನ್ನಲೆ ಮೂರು ದಿನಗಳಿಗೆ ಅನ್ವಯವಾಗುವಂತೆ 7 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಕರಾವಳಿ ಜಿಲ್ಲೆಗಳಾದ ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡಕ್ಕೆ ಮತ್ತು ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಕೊಡಗು ಜಿಲ್ಲೆಗಳಿಗೆ ಕೂಡ ಆರೆಂಜ್ ಅಲರ್ಟ್ ನೀಡಲಾಗಿದೆ. ದಾವಣಗೆರೆ ಜಿಲ್ಲೆಗೆ ಇಂದು, ಮೈಸೂರು ಜಿಲ್ಲೆಗೆ ನಾಳೆ ಆರೆಂಜ್ ಅಲರ್ಟ್ ಕೊಡಲಾಗಿದೆ. ಬೆಳಗಾವಿ ಜಿಲ್ಲೆಗೆ ಜೂನ್ 25 ಮತ್ತು 26 ರಂದು ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ದಾವಣಗೆರೆ ಜಿಲ್ಲೆಗಳಲ್ಲಿ 40 ರಿಂದ 50 ಕಿಲೋಮೀಟರ್ ಪ್ರತಿ ಗಂಟೆಗೆ ಗಾಳಿ ಬೀಸಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಉಳಿದ ಜಿಲ್ಲೆಗಳಲ್ಲಿ ಅನೇಕ ಸ್ಥಳಗಳಲ್ಲಿ ಸಹ ಮಳೆಯಾಗುವ ಲಕ್ಷಣಗಳು ಇವೆ ಎಂದು ತಿಳಿಸಿದೆ.

ಎಲ್ಲಿ ಅತಿ ಹೆಚ್ಚು ಮಳೆ: ದಕ್ಷಿಣ ಕನ್ನಡ ಜಿಲ್ಲೆಯ ಮಾಣಿಯಲ್ಲಿ ಅತಿ ಹೆಚ್ಚು 10 ಸೆ.ಮೀ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ವಿಮಾನ ನಿಲ್ದಾಣ ಮತ್ತು ಧರ್ಮಸ್ಥಳದಲ್ಲಿ ಕ್ರಮವಾಗಿ 9 ಮತ್ತು 7, ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರದಲ್ಲಿ 7, ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ಮತ್ತು ಪುತ್ತೂರಿನಲ್ಲಿ 6, ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ 6 ಸೆ.ಮೀ ಮಳೆಯಾಗಿದೆ.

ನೈಋತ್ಯ ಮುಂಗಾರು ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಸಾಧಾರಣವಾಗಿತ್ತು ಮತ್ತು ಉತ್ತರ ಒಳನಾಡಿನಲ್ಲಿ ದುರ್ಬಲವಾಗಿತ್ತು. ಇಂದು ಕರಾವಳಿಯ ಬಹುತೇಕ ಕಡೆಗಳಲ್ಲಿ, ಒಳನಾಡಿನ ಕೆಲವು ಕಡೆಗಳಲ್ಲಿ ಮಳೆಯಾಗಿದೆ. ಮಹಾರಾಷ್ಟ್ರ-ಕೇರಳ ಕರಾವಳಿಯಲ್ಲಿ ಸರಾಸರಿ ಸಮುದ್ರ ಮಟ್ಟದಲ್ಲಿ ಟ್ರಫ್ ಮುಂದುವರಿದಿದೆ.

-ಡಾ.ಎನ್.ಪುವಿಯರಸನ್, ಬೆಂಗಳೂರು ಹವಾಮಾನ ಕೇಂದ್ರದ ವಿಜ್ಞಾನಿ

ಮೀನುಗಾರರಿಗೆ ಎಚ್ಚರಿಕೆ

ತೀವ್ರ ಬಿರುಗಾಳಿಯಿಂದ ಕೂಡಿದ ಹವಾಮಾನವಿರಲಿದ್ದು, 55 ಕಿಮೀ ವೇಗದಲ್ಲಿ ಗಾಳಿ ಬೀಸಲಿದೆ. ರಾಜ್ಯಕ್ಕೆ ಕರಾವಳಿಯ ಉದ್ದಕ್ಕೂ ಮತ್ತು ಹೊರಗೆ ಮೇಲುಗೈ ಸಾಧಿಸುವ ಸಾಧ್ಯತೆಯಿದೆ ಆದ್ದರಿಂದ ಮೀನುಗಾರರು ಎಚ್ಚರಿಕೆಯಿಂದ ಇರಲು ಸೂಚಿಸಿದೆ. ಬೆಂಗಳೂರು ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ಆಕಾಶವಿರಲಿದೆ. ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಕೆಲವೊಮ್ಮೆ ಮೇಲ್ಮೈ ಗಾಳಿಯು ಪ್ರಬಲವಾಗಿರಲಿದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಕ್ರಮವಾಗಿ 30 ಡಿಗ್ರಿ ಮತ್ತು 21 ಡಿಗ್ರಿ ಇರಲಿದೆ ಎಂದು ಮಾಹಿತಿ ನೀಡಿದೆ.

ಶಿಕ್ಷಣ, ಕಠಿಣ ಪರಿಶ್ರಮ ಯಶಸ್ಸಿನ ಕೀಲಿ ಕೈ: ಕೆಬಿಜೆ

ಬೆಂಗಳೂರು: ಶಿಕ್ಷಣ ಮತ್ತು ಕಠಿಣ ಪರಿಶ್ರಮ ಯಶಸ್ಸಿನ ಕೀಲಿ ಕೈಗಳಿದ್ದಂತೆ. ವಿದ್ಯಾರ್ಥಿಗಳು ಇವುಗಳನ್ನು ಮೈಗೂಡಿಸಿಕೊಂಡು ಜೀವನ ದಲ್ಲಿ ಯಶಸ್ಸುಗಳಿಸಬೇಕು ಎಂದು ಸಚಿವ ಕೃಷ್ಣಬೈರೇಗೌಡ ವಿದ್ಯಾರ್ಥಿಗಳಿಗೆ ಕರೆ ನೀಡಿದ್ದಾರೆ.

ನಮ್ಮೂರ ಹೆಮ್ಮೆ ಕಾರ್ಯಕ್ರಮದಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ 650ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಭಾನುವಾರ ಪ್ರತಿಭಾ ಪುರಸ್ಕಾರ ನೀಡಿ ನಂತರ ಮಾತನಾಡಿದ ಅವರು, ವಿದ್ಯಾರ್ಥಿಗಳು ಶಿಕ್ಷಣದಲ್ಲಾಗಲೀ, ಕ್ರೀಡೆ ಅಥವಾ ಸಾಂಸ್ಕೃತಿಕ ಕಲೆಗಳಲ್ಲಿ ಆಗಲೀ ಅತ್ಯುತ್ತಮ ಸಾಧನೆ ಮಾಡಿದರೆ ಅದು ಕೇವಲ ಅವರಿಗಷ್ಟೇ ಹೆಮ್ಮೆಯ ಸಂಗತಿಯಲ್ಲ, ಅದು ಅವರು ಓದಿದ ಶಾಲೆಗೆ, ಅವರು ನೆಲೆಸಿರುವ ಗ್ರಾಮಕ್ಕೆ, ಕ್ಷೇತ್ರ, ರಾಜ್ಯ, ದೇಶ ಹೀಗೆ ಎಲ್ಲದಕ್ಕೂ ಹೆಮ್ಮೆಯ ಸಂಗತಿಯಾಗಿದೆ ಎಂದರು.

ಪ್ರತಿಭಾವಂತರಿಗೆ ಪುರಸ್ಕಾರ : 'ನಮ್ಮೂರ ಹೆಮ್ಮೆ' ಶೀರ್ಷಿಕೆಯ ಅಡಿಯಲ್ಲಿ ಕಳೆದ ಐದು ವರ್ಷಗಳಿಂದ ಬ್ಯಾಟರಾಯನಪುರ ಕ್ಷೇತ್ರದ ನಿವಾಸಿಗಳಾಗಿರುವ, ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಪಾಸಾದ 5 ಸಾವಿರ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸುತ್ತ ಬರಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಉತ್ತಮ ಶ್ರೇಣಿಗಳಿಸಲು ಪ್ರೋತ್ಸಾಹಿಸಿದಂತಾಗುತ್ತದೆ. ಈ ಕಾರ್ಯಕ್ರಮದ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರ ಸಹಕಾರ ಮತ್ತು ಕೊಡುಗೆ ಅಪಾರ. ಪ್ರತಿಮನೆಗೆ ತೆರಳಿ, ವಿದ್ಯಾರ್ಥಿಗಳನ್ನು ಸಂಪರ್ಕಿಸಿ, ಅವರ ಶೈಕ್ಷಣಿಕ ವರದಿ ಪಡೆಯುವಲ್ಲಿ ನಮ್ಮ ಕಾರ್ತಕರ್ತರು ಶ್ರಮಿಸುವ ಪ್ರಯತ್ನ ಶ್ಲಾಘನೀಯ ಎಂದು ಸಚಿವ ಕೃಷ್ಣ ಬೈರೇಗೌಡ

ಥಾಯ್ಲೆಂಡ್ ರಾಯಭಾರಿ ಪತ್ತರಾತ್ ಹಾಂಗ್‌ಟಾಂಗ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಸೌಹಾರ್ದಯುತ ಮಾತುಕತೆ ನಡೆಸಿದರು. ಈ ವೇಳೆ ಚೆನ್ನೈನಲ್ಲಿರುವ ಥಾಯ್ಲೆಂಡ್ ಕಾನ್ಸುಲ್ ಜನರಲ್ ರಚಾ ಅರಿಬಾಗರ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಇದ್ದರು.

ರಾಜಹಂಸಗಢ ಅಭಿವೃದ್ಧಿಗೆ 50 ಲಕ್ಷ

ಬೆಂಗಳೂರು: ಬೆಳಗಾವಿಯ ಛತ್ರಪತಿ ಶಿವಾಜಿ ಮಹಾರಾಜರ ರಾಜಹಂಸಗಢ ಕೋಟೆಯ ಅಭಿವೃದ್ಧಿಗೆ 50 ಲಕ್ಷ ರು. ಅನುದಾನ ನೀಡಲು ಪ್ರವಾಸೋದ್ಯಮ ಸಚಿವ ಎಚ್.ಕೆ ಪಾಟೀಲ್ ಒಪ್ಪಿಗೆ ನೀಡಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಅವರನ್ನು ಭೇಟಿ ಮಾಡಿ ಮಾತನಾಡಿದ ಅವರು, ರಾಜಹಂಸಗಢ ಕೋಟೆಯ ಅಭಿವೃದ್ಧಿಗೆ ಪ್ರತಿ ವರ್ಷ ಒಂದು ಕೋಟಿ ರು. ಅನುದಾನ ನೀಡುವಂತೆ ಮನವಿ ಸಲ್ಲಿಸಿದ್ದು, ಇದಕ್ಕೆ ಸ್ಪಂದಿಸಿದ ಎಚ್.ಕೆ. ಪಾಟೀಲ್ ಅವರು ಛತ್ರಪತಿ ಶಿವಾಜಿ ಮಹಾರಾಜರ ರಾಜಹಂಸಗಢ ಕೋಟೆಯ ಅಭಿವೃದ್ಧಿಗೆ 50 ಲಕ್ಷ ರೂಪಾಯಿ ಅನುದಾನ ಬಿಡುಗಡೆಗೊಳಿಸಲು ಒಪ್ಪಿಗೆ ನೀಡಿದ್ದಾರೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು.

ಉಪಲೋಕಾಯುಕ್ತರಾಗಿ ನ್ಯಾ.ಯ ವೀರಪ್ಪ ನೇಮಕ

ಬೆಂಗಳೂರು: ಕರ್ನಾಟಕ ಉಪ ಲೋಕಾಯುಕ್ತರಾಗಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರನ್ನು ನೇಮಕ ಮಾಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕುಮಾರ ಕೃಪಾ ಗೆಸ್ಟ್ ಹೌಸ್‌ನಲ್ಲಿ ಹಿರಿಯ ನ್ಯಾಯಾಧೀಶರ ಜತೆ ಉಪಲೋಕಾಯುಕ್ತ ಆಯ್ಕೆ ಬಗ್ಗೆ ಮಹತ್ವದ ಚರ್ಚೆ ನಡೆಸಿದ್ದರು. ಸಭೆಯಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ದಿನೇಶ್ ಕುಮಾರ್ ಶೆಟ್ಟಿ ಅಂಜಾರಿಯಾ, ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ವಿಪಕ್ಷ ನಾಯಕ ಆರ್. ಅಶೋಕ್, ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತರಿದ್ದರು.

ಪಿಎಸ್‌ಐ ನೇಮಕಾತಿ ಹಗರಣದ ತನಿಖೆ

ಈ ಹಿಂದೆ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ವೀರಪ್ಪ ಅವರು ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ಕ್ಕೆ ಅಧಿಕಾರವನ್ನು ರದ್ದುಗೊಳಿಸಿ ಲೋಕಾಯುಕ್ತ ಸಂಸ್ಥೆಯ ಅಧಿಕಾರವನ್ನು ಮರುಸ್ಥಾಪನೆ ಮಾಡಿದ್ದರು. ಅಲ್ಲದೇ ಬಿ. ವೀರಪ್ಪ ಅವರು ಈ ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಾದ ಪಿಎಸ್‌ಐ ನೇಮಕಾತಿ ಹಗರಣದ ತನಿಖಾ ವರದಿಯನ್ನು ಸಿಎಂ ಸಿದ್ದರಾಮಯ್ಯನವರಿಗೆ ಸಲ್ಲಿಸಿದ್ದರು. ಇದೀಗ ವೀರಪ್ಪ ಅವರನ್ನೇ ಕರ್ನಾಟಕ ಉಪಲೋಕಾಯುಕ್ತರನ್ನಾಗಿ ಸರಕಾರ ನೇಮಿಸಿದೆ.

ಕೋಲಾರದ ಶ್ರೀನಿವಾಸಪುರ ತಾಲೂಕಿನ ನಾಗದೇನಹಳ್ಳಿ ಗ್ರಾಮದ ವೀರಪ್ಪ ಅವರು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾಗಿ ಅತಿಹೆಚ್ಚು ವ್ಯಾಜ್ಯಗಳನ್ನು ಇತ್ಯರ್ಥಪಡಿಸುವ ಮೂಲಕ ದಾಖಲೆ ಬರೆದಿದ್ದಾರೆ. ಅಲ್ಲದೇ ರಾಜ್ಯದ ಬೊಕ್ಕಸಕ್ಕೆ ಕೋಟ್ಯಂತರ ರು.ಗಳ ಆದಾಯ ತಂದ ಸಂಚಾರಿ ನಿಯಮ ಉಲ್ಲಂಘನೆ ದಂಡದ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿದ ರಾಜ್ಯ ಸರಕಾರ ಕ್ರಮದಲ್ಲಿ ವೀರಪ್ಪ ಅವರ ಪಾತ್ರ ಪ್ರಮುಖವಾಗಿತ್ತು.

ಜಪಾನ್ ನಿಯೋಗದ ಜತೆ ಎಂ.ಬಿ ಪಾಟೀಲ್ ಚರ್ಚೆ

ಬೆಂಗಳೂರು: ಭವಿಷ್ಯದ ತಂತ್ರಜ್ಞಾನ, ಪರಿಸರ ಸ್ನೇಹಿ ಸುಸ್ಥಿರ ಇಂಧನ, ನಿರ್ವಹಣೆಯ ಮುನ್ಸೂಚನೆ, ಸೈಬರ್ ಸುರಕ್ಷತೆ ಪಾಲುದಾರಿಕೆಗೆ ಸಂಬಂಧಿಸಿದಂತೆ ಚರ್ಚೆ ನಡೆಸಲಾಯಿತು, ನಿರ್ದಿಷ್ಟವಾಗಿ ಹಣಕಾಸು ಸೇವೆಗಳಲ್ಲಿ ವ್ಯವಹಾರ ವಿಸ್ತರಿಸಲು ಹಿಟಾಚಿ ಕಂಪನಿಯು ಆಸಕ್ತಿ ವ್ಯಕ್ತಪಡಿಸಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ರಾಜ್ಯದ ಉನ್ನತ ಮಟ್ಟದ ನಿಯೋ ಗದ 5 ದಿನಗಳ ಜಪಾನ್ ಭೇಟಿಯ ಮೊದಲ ದಿನ ನಡೆದ ಸಭೆಗಳಲ್ಲಿ ಬಂಡವಾಳ ಹೂಡಿಕೆಯ ಸಾಧ್ಯತೆಗಳು ಮತ್ತು ರಾಜ್ಯ ಸರಕಾರದೊಂದಿಗಿನ ಸಹಯೋಗ ವೃದ್ಧಿಸುವುದಕ್ಕೆ ಗಮನ ಕೇಂದ್ರೀಕರಿಸಲಾಗಿತ್ತು. ಹಿಟಾಚಿ ಕಂಪನಿ ಜೊತೆಗಿನ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಜ್ಯದಲ್ಲಿ ಉದ್ಯಮ ವಿಸ್ತರಣೆ ಸಾಧ್ಯತೆಗಳ ಬಗ್ಗೆ ನಿಸಿನ್ ಫುಡ್ಸ್ ಕಂಪನಿ ಜೊತೆಗೆ ನಿಯೋಗವು ಮಾತುಕತೆ ನಡೆಸಿದ್ದು, ವಿಜಯಪುರ, ಧಾರವಾಡ ಜಿಲ್ಲೆಗಳಲ್ಲಿ ಸ್ಥಾಪಿಸಲಿರುವ ಆಹಾರ ಪಾರ್ಕ್‌ಗಳಲ್ಲಿ ಬಂಡವಾಳ ಹೂಡಿಕೆಗೆ ಅಗತ್ಯ ಬೆಂಬಲ ನೀಡಲಾಗುವುದು ಎಂದು ಸಚಿವ ಪಾಟೀಲ ನೀಡಿದರು. ಕರ್ನಾಟಕದಲ್ಲಿ ವಿದ್ಯುತ್‌ಚಾಲಿತ ವಾಹನಗಳ ತಯಾರಿಕೆ ಉಪಕ್ರಮಕ್ಕೆ ಸಂಬಂಧಿಸಿದಂತೆ ಪಾಲುದಾರಿಕೆ ಮತ್ತು ವಿಸ್ತರಣೆ ಕುರಿತು ನಿಸಾನ್ ಮೋಟರ್‌ನ ಹಿರಿಯ ಉಪಾಧ್ಯಕ್ಷ ಜೋಜಿ ತಗಾವಾ ಅವರ ಜೊತೆ ಮಾತುಕತೆ ನಡೆಸಿದರು.

ಜನರ ದಾರಿತಪ್ಪಿಸುವುದನ್ನು ಕಡಿಮೆ ಮಾಡಿಕೊಳ್ಳಬೇಕು: ಡಿ.ಕೆ. ಸುರೇಶ್

ನಮ್ಮ ಸ್ಮರಣೆಯೇ ಎಚ್‌ಡಿಕೆಗೆ ದಿನಚರಿ

ಬೆಂಗಳೂರು: ಕುಮಾರಸ್ವಾಮಿ ಪ್ರತಿ ವಿಚಾರದಲ್ಲೂ ಡಿ.ಕೆ. ಶಿವಕುಮಾರ್ ಹಾಗೂ ಡಿ.ಕೆ.ಸುರೇಶ್ ಹೆಸರನ್ನು ಸ್ಮರಿಸದಿದ್ದರೆ ಅವರ ರಾಜಕಾರಣ ಹಾಗೂ ದಿನಚರಿ ನಡೆಯಲ್ಲ ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ವ್ಯಂಗ್ಯವಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿ ವಿಚಾರದಲ್ಲೂ ನಮ್ಮ ಹೆಸರನ್ನು ಎಳೆದುತರುತ್ತಿದ್ದು, ಮುಂದೆ ನಮ್ಮ ಸರಕಾರ ಬರುತ್ತದೆ ಎಂದು ಜನರನ್ನು ಹಾಗೂ ಅಧಿಕಾರಿಗಳನ್ನು ಮೊದಲಿನಿಂದಲೂ ಬೆದರಿಸಿಕೊಂಡು ಬಂದಿರುವುದನ್ನು ಈಗಲೂ ಮುಂದುವರಿಸುತ್ತಿದ್ದಾರೆ. ಇದು ಅವರಿಗೆ ಶೋಭೆ ತರುವುದಿಲ್ಲ. ಸುಳ್ಳು ಹೇಳಿ ಜನರ ದಾರಿತಪ್ಪಿಸುವುದನ್ನು ಕಡಿಮೆ ಮಾಡಿಕೊಳ್ಳಬೇಕು ಎಂದು ಟೀಕಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ತೀರ್ಪು ಅಂತಿಮವಾಗಿದ್ದು, ಜನ ಯಾರನ್ನು ಬಯಸುತ್ತಾರೋ ಅವರು ಸ್ಪರ್ಧಿಸಿ, ಅವರ ಸೂಚನೆಯಂತೆ ಪಕ್ಷ ನಡೆಯುತ್ತದೆ. ರಾಮನಗರ ಸ್ವಂತ ಜಿಲ್ಲೆಯಾಗಿದ್ದು, ಕ್ಷೇತ್ರದಲ್ಲಿ ಶಾಸಕರು ಇಲ್ಲದ ಕಾರಣ ಪಕ್ಷದ ಅಧ್ಯಕ್ಷರು ಹಾಗೂ ಉಪಮುಖ್ಯಮಂತ್ರಿಯಾಗಿರುವ ಶಿವಕುಮಾರ್ ಮೇಲೆ ಜವಾಬ್ದಾರಿಯಿದೆ. ಆದ್ದರಿಂದ ಜನರ ಸಮಸ್ಯೆ ಆಲಿಸುತಿದ್ದು, ಜನ ಕೂಡ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿದ್ದಾರೆ. ಸಾಮಾನ್ಯ ಕಾರ್ಯಕರ್ತನಾಗಿ, ಕ್ಷೇತ್ರದ ಜನರ ಕಷ್ಟಸುಖ ಕೇಳುತ್ತಾ, ರಾಜ್ಯದ ಹಿತದೃಷ್ಟಿಯಿಂದ ಪಕ್ಷದ ಕಾರ್ಯಕರ್ತನಾಗಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ಸೋತು ತಿಂಗಳಾಗಿಲ್ಲ, ಮತ್ತೆ ಸ್ಪರ್ಧೆ ಮಾಡಿದರೆ ಜನ ನಗುತ್ತಾರೆ

ಜನ ನನ್ನನ್ನು ತಿರಸ್ಕಾರ ಮಾಡಿದ್ದು, ಸೋತು ಇನ್ನು ಒಂದು ತಿಂಗಳೂ ಕಳೆದಿಲ್ಲ. ಮತ್ತೆ ಚುನಾವಣೆಗೆ ಸ್ಪರ್ಧಿಸಿದರೆ ಜನ ನಗುತ್ತಾರೆ. ಜನ ನನಗೆ ವಿಶ್ರಾಂತಿ ಪಡೆಯಲು ಹೇಳಿದ್ದು, ಬೇರೆಯವರು ಕೆಲಸ ಮಾಡಲಿ, ನಾವು ಅವರಿಗೆ ಸಹಕಾರ ನೀಡುತ್ತೇವೆ. ಚನ್ನಪಟ್ಟಣದ ಜನ ನಮ್ಮ ಸ್ವಂತ ಜನ. ಮೊದಲಿಂದಲೂ ಅವರ ಜತೆ ಒಡನಾಟವಿದೆ. ವಿಶೇಷವಾಗಿ ಲೋಕಸಭೆಯಲ್ಲಿ ಈ ಜನ ಉತ್ತಮ ಬೆಂಬಲ ನೀಡಿದ್ದಾರೆ. ಚನ್ನಪಟ್ಟಣದಲ್ಲಿ ಪಕ್ಷಕ್ಕೆ ನೆಲೆ ಇದೆ. ಆದರೆ ಅಧಿಕಾರದ ಆಸೆಗೆ ಪಕ್ಷಾಂತರ ಮಾಡಿದ ಪರಿಣಾಮ ನಮಗೆ ಹಿನ್ನಡೆ ಆಗುತ್ತಿತ್ತು ಎಂದು ತಿಳಿಸಿದರು.

ಅಕ್ಕಿ ಜತೆ 3ಲೀ ಸೀಮೆಎಣ್ಣೆ ವಿತರಿಸಲು ಮನವಿ

ಬೆಂಗಳೂರು: ಪ್ರತಿ ಬಿಪಿಎಲ್, ಅಂತ್ಯೋದಯ ಕಾರ್ಡ್‌ಗೆ ಉಚಿತವಾಗಿ ಮೂರು ಲೀಟರ್ ಸೀಮೆಎಣ್ಣೆ ವಿತರಣೆ ಸೇರಿ ಅಕ್ಕಿ ಜತೆಗೆ ಇತರೆ ಪದಾರ್ಥ ನೀಡುವ ಬೇಡಿಕೆಯನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಸರಕಾರಿ ಪಡಿತರ ವಿತರಕ ಸಂಘ, ಕೇಂದ್ರ ಆಹಾರ ಸಚಿವ ಪ್ರಲ್ಹಾದ್ ಜೋಶಿ ಅವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದೆ. ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನಯೋಜನೆ ಯಲ್ಲಿ ಎಲ್ಲ ರಾಜ್ಯಗಳಿಗೆ ಕೇಂದ್ರವೇ ಉಚಿತವಾಗಿ ಅಕ್ಕಿ ನೀಡುತ್ತಿದೆ. ಅಂದಾಜು 80 ಕೋಟಿ ಜನರು ಇದರ ಸದುಪಯೋಗ ಪಡೆದುಕೊಂಡಿದ್ದಾರೆ. ಕಾರ್ಡ್‌ದಾರರಿಗೆ ಪಡಿತರ ವಿತರಣೆಗಾಗಿ ನೀಡಲಾಗುವ ಕಮಿಷನ್ ಒಂದೊಂದು ರಾಜ್ಯದಲ್ಲಿ ಬೇರೆ ಬೇರೆ ರೀತಿಯಲ್ಲಿದೆ. ಮಹಾರಾಷ್ಟ್ರದಲ್ಲಿ ಕ್ವಿಂಟಾಲ್‌ಗೆ 150 ರು, ತೆಲಂಗಾಣದಲ್ಲಿ ಕ್ವಿಂಟಾಲ್‌ಗೆ 140 ರು. ಗೋವಾದಲ್ಲಿ ಕ್ವಿಂಟಾಲ್‌ಗೆ 230 ರು., ಹಾಗೂ ಕರ್ನಾಟಕದಲ್ಲಿ ಕ್ವಿಂಟಾಲ್‌ಗೆ 124 ರು., ಕಮಿಷನ್ ಹಣ ನೀಡಲಾಗುತ್ತಿದೆ. ಹೀಗಾಗಿ, ದೇಶಾದ್ಯಂತ ಏಕರೂಪ ಕಮಿಷನ್ ಪದ್ಧತಿ ಜಾರಿಗೆ ಬರಬೇಕು. ಅಕ್ಕಿ ಜತೆಗೆ ಉಚಿತವಾಗಿ ಸೀಮೆ ಎಣ್ಣೆ ನೀಡಿದರೆ ಫಲಾನುಭವಿಗಳಿಗೆ ಅನುಕೂಲವಾಗುತ್ತದೆ ಎಂದು ಸಂಘದ ಅಧ್ಯಕ್ಷ ಟಿ.ಕೃಷ್ಣಪ್ಪ, ಸಚಿವರ ಗಮನಕ್ಕೆ ತಂದರು. ಅನಗತ್ಯ ಕಾರಣವೊಡ್ಡಿ ಪಡಿತರ ವಿತರಕರ ಮೇಲೆ ಜಿಎಸ್‌ಟಿ ವಿಧಿಸಲು ಕೇಂದ್ರ ಮುಂದಾಗಿದೆ. ಇದನ್ನೂ ನಾವು ತೀವ್ರವಾಗಿ ಖಂಡಿಸುತ್ತೇವೆ. ಆಹಾರಧಾನ್ಯ ವಿತರಣೆ ವೇಳೆ ಕಾರ್ಡ್‌ದಾರರಿಗೆ ಮುದ್ರಿತ ರಸೀದಿ ನೀಡುವಂತೆ ಕೇಂದ್ರ ಈಗಾಗಲೇ ಆದೇಶಿಸಿದೆ. ನಿಯಮದಂತೆ ಬಯೋಮೆಟ್ರಿಕ್ ಮೂಲಕ ಆಹಾರ ಪದಾರ್ಥ ವಿತರಿಸಲಾಗುತ್ತಿದೆ. ಪ್ರತಿ ತಿಂಗಳು ಸಾವಿರಾರು ರು.ಖರ್ಚು ಬರುತ್ತದೆ. ಈಗ ಪ್ರಿಂಟರ್‌ಗೆ ಖರೀದಿಸಲು ಇನ್ನಷ್ಟು ಆರ್ಥಿಕ ಹೊರೆಯಾಗುತ್ತದೆ ಎಂದರು.

ಸಮಾಚಾರ ಸಣ್ಣದಲ್ಲ

ನೀರುಪಾಲಾಗಿದ್ದ ಯುವಕನ ಶವ ಪತ್ತೆ

ಹೊಸನಗರ: ಭಾನುವಾರ ಯಡೂರು ತಲಾಸಿ ಅಬ್ಬಿ ಫಾಲ್ಸ್ ನಲ್ಲಿನೀರು ಪಾಲಾಗಿದ್ದ ಯುವಕನ ಶವ ಸೋಮವಾರ ಬೆಳಗ್ಗೆ ಪತ್ತೆಯಾಗಿದೆ. ಭಾನುವಾರ ಮಧ್ಯಾಹ್ನದಿಂದ ಪಿಎಸ್‌ಐ ರಮೇಶ್ ನೇತೃತ್ವದಲ್ಲಿ ಅಗ್ನಿಶಾಮಕ ದಳ, ಸ್ಥಳೀಯರಿಂದ ತೀವ್ರ ಶೋಧ ನಡೆಯಿತಾದರೂ ನೀರುಪಾಲಾಗಿದ್ದ ಬಳ್ಳಾರಿ ನಿವಾಸಿ ವಿನೋದ್ ಪತ್ತೆ ಆಗಿರಲಿಲ್ಲ. ಹೀಗಾಗಿ ವಿನೋದ್ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿತ್ತು. ಸೋಮವಾರ ವಿನೋದ ಮೃತದೇಹನ್ನು ಹೊರತೆಗೆಯಲಾಯಿತು.

ಕಬಾಬ್‌ಗೆ ಬಣ್ಣ ಬೆರೆಸಿದರೆ ಜೈಲು

← ಮೊದಲಪುಟದಿಂದ

ಸಚಿವರ ಸೂಚನೆಯ ಮೇರೆಗೆ ರಾಜ್ಯಾದ್ಯಂತ ಮಾರಾಟ ಮಾಡಲಾಗುತ್ತಿರುವ 39 ಕಬಾಬ್‌ಗಳ ಮಾದರಿಗಳನ್ನು ಸಂಗ್ರಹಿಸಿ ರಾಜ್ಯ ಪ್ರಯೋಗಾಲಯಗಳಲ್ಲಿ ಗುಣಮಟ್ಟ ಪರೀಕ್ಷೆಗೆ ಒಳಪಡಿಸಲಾಗಿತ್ತು. ಕೃತಕ ಬಣ್ಣ ಬೆರಸುವಿಕೆಯಿಂದಾಗಿ ಸಾರ್ವಜನಿಕರು ಹೋಟೆಲ್‌ಗಳಲ್ಲಿ ಮತ್ತು ಬೀದಿ ಬದಿಯಲ್ಲಿ ಮುಗಿಬಿದ್ದು ತಿನ್ನುವ ಕಬಾಬ್ ಆರೋಗ್ಯಕ್ಕೆ ಹಾನಿಕಾರಕವೆಂದು ಕಂಡು ಬಂದಿತ್ತು. ವಿಶ್ಲೇಷಣೆಗೊಳಪಡಿಸಲಾದ ಮಾದರಿಗಳಲ್ಲಿ 08 ಕಬಾಬ್‌ನ ಮಾದರಿಗಳು ಕೃತಕ ಬಣ್ಣದಿಂದ (ಸನ್‌ಸೆಟ್ ಯೆಲ್ಲೋ - 07 ಮಾದರಿಗಳು ಹಾಗೂ ಸನ್‌ಸೆಟ್ ಯೆಲ್ಲೋ ಮತ್ತು ಕಾರ್ಮೋಸಿನ್ ಹೊಂದಿರುವ ಮಾದರಿಗಳು 01) ಕೂಡಿದ್ದು ಕಂಡು ಬಂದಿತ್ತು. ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಚಿಕನ್ ಕಬಾಬ್, ಫಿಶ್ ಕಬಾಬ್ ಸೇರಿದಂತೆ ಆಹಾರದಲ್ಲಿ ಕೃತಕ ಬಣ್ಣ ಬೆರಸುವಿಕೆಯನ್ನು ನಿಷೇಧಿಸಿ ಆಹಾರ ಸುರಕ್ಷತಾ ಆಯುಕ್ತರು ಆದೇಶ ಹೊರಡಿಸಿದ್ದಾರೆ. ಈ ಬಣ್ಣದಲ್ಲಿರುವ ರೋಡಮೈನ್-ಬಿ ಅಥವಾ ಆರ್ ಎಚ್‌ಬಿ ಎಂಬ ರಾಸಾಯನಿಕವು ಆಹಾರದ ಮೂಲಕ ದೇಹ ಸೇರಿದರೆ ಕ್ಯಾನ್ಸರ್ ಕಾಯಿಲೆಗೆ ತುತ್ತಾಗಬೇಕಾಗುತ್ತದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ತೀವ್ರ ಕುತೂಹಲ ಮೂಡಿಸಿರುವ ಡಿಕೆಶಿ ನಡೆ | ಜನಸ್ಪಂದನೆ ನೆಪದಲ್ಲಿ ಚನ್ನಪಟ್ಟಣದಲ್ಲಿ ಸೋಮವಾರ ರೌಂಡ್ಸ್ | ಡಿಕೆಸು ಸ್ಪರ್ಧೆ ಬಹುತೇಕ ಅಂತಿಮ; ಈಗಿನಿಂದಲೇ ವೇದಿಕೆ ಸಿದ್ಧಪಡಿಸುತ್ತಿರುವ ಸಹೋದರ

ಮತ್ತೆ ಡಿಕೆಶಿ ಚನ್ನಪಟ್ಟಣ ರೌಂಡ್ಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚನ್ನಪಟ್ಟಣದಿಂದ ಸ್ಪರ್ಧಿಸಲ್ಲ ಎನ್ನುವ ಮಾತುಗಳನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಆಡಿದ್ದು, ಇನ್ನೊಂದೆಡೆ ಸಹೋದರ ಡಿ.ಕೆ. ಸುರೇಶ್ ಸಹ ಉಪಚುನಾವಣೆಗೆ ನಿಲ್ಲುವುದಿಲ್ಲ ಎನ್ನುತ್ತಿರುವ ನಡುವೆಯೇ ಡಿ.ಕೆ. ಶಿವಕುಮಾರ್ ಮತ್ತೊಮ್ಮೆ ಚನ್ನಪಟ್ಟಣ ರೌಂಡ್ಸ್ ಮಾಡಿದ್ದಾರೆ.

ರಾಮನಗರ ಜಿಲ್ಲೆಯ ಚನ್ನಪಟ್ಟಣ ಕ್ಷೇತ್ರ ಡಿ.ಕೆ. ಸಹೋದರರಿಗೆ ಪ್ರತಿಷ್ಠೆಯ ಕಣವಾಗಿದೆ. ಈಗಾಗಲೇ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಹಿನ್ನಡೆ ಅನುಭವಿಸಿದ್ದಕ್ಕೆ ಚನ್ನಪಟ್ಟಣದಲ್ಲಿ ನಿಂತು ಸೇಡು ತೀರಿಸಿಕೊಳ್ಳಲು ಕಾಂಗ್ರೆಸ್ ಪಡೆ ಹವಣಿಸುತ್ತಿದೆ. ಈ ನಡುವೆ ಕಳೆದ ವಾರವಷ್ಟೇ ಚನ್ನಪಟ್ಟಣದ ಟೆಂಪಲ್ ರನ್ ಮಾಡಿದ್ದ ಡಿ.ಕೆ.ಶಿವಕುಮಾರ್, ಸೋಮವಾರ ಜನಸ್ಪಂದನೆ ಕಾರ್ಯಕ್ರಮದ ನೆಪದಲ್ಲಿ ಚನ್ನಪಟ್ಟಣಕ್ಕೆ ತೆರಳಿದ್ದಾರೆ.

ಸೋಮವಾರ ಚನ್ನಪಟ್ಟಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ಯಾರು ಏನೇ ಟೀಕೆ ಮಾಡಲಿ. ನಾನು ಚನ್ನಪಟ್ಟಣ ಕ್ಷೇತ್ರದ ಜನರ ಋಣ ತೀರಿಸುತ್ತೇನೆ. ಇಲ್ಲಿ ಬಂದಿರುವ ಸಾವಿರಾರು ಜನ ತಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಅರ್ಜಿ ಸಲ್ಲಿಸಲು ಮುಗಿ ಬೀಳುತ್ತಿರುವುದನ್ನು ನೋಡಿದರೆ, ಅವರ ಪರಿಸ್ಥಿತಿ ಅರ್ಥವಾಗುತ್ತದೆ. ನನ್ನ ಬಗ್ಗೆ ಯಾರು ಏನೇ ಟೀಕೆ ಮಾಡಲಿ, ನನಗೆ ಈ ಜನರ ಸಮಸ್ಯೆಗೆ ಪರಿಹಾರ ನೀಡುವುದಷ್ಟೇ ಮುಖ್ಯ ಎಂದು ಹೇಳಿದರು.

ಈ ಹಿಂದೆ ನಾನು ಈ ಭಾಗದ ಶಾಸಕನಾಗಿದ್ದಾಗಲೂ ಅಧಿಕಾರಿಗಳನ್ನು ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಜನರ ಸಮಸ್ಯೆಗಳನ್ನು ಆಲಿಸಿ ಪರಿಹಾರ ನೀಡುವ ಕೆಲಸ ಮಾಡುತ್ತಿದ್ದೆ. ಈಗಲೂ ಅದೇ ಕೆಲಸ ಮುಂದುವರಿಸುತ್ತಿದ್ದೇನೆ. ಈ ಹಿಂದೆಯಿದ್ದ ಜನಪ್ರತಿನಿಧಿಗಳು ಈ ಕೆಲಸ ಮಾಡಬಹುದಾಗಿತ್ತು. ಆದರೆ ಮಾಡಲಿಲ್ಲ. ಏಕೆ ಮಾಡಲಿಲ್ಲ ಎಂದು ನಾನು ಪ್ರಶ್ನೆ ಮಾಡುವುದಿಲ್ಲ. ಕಳೆದ ಐದು ವರ್ಷಗಳಲ್ಲಿ ತಾಲೂಕಿನ ಬಡವರಿಗೆ ಒಂದೇ ಒಂದು ನಿವೇಶನ ಹಂಚಿಕೆ ಮಾಡಿಲ್ಲ. ಯಾರೊಬ್ಬರಿಗೂ ಬಗರ್‌ಹುಕಂ ಸಾಗುವಳಿ ಜಮೀನು ನೀಡಿಲ್ಲ. ಆಶ್ರಯ ಸಮಿತಿ ಸಭೆ ಕೂಡ ಮಾಡಿಲ್ಲ ಎಂಬ ವಿಚಾರ ತಿಳಿಯಿತು ಎಂದರು.

ಪೋಡಿ, ಜಮೀನು ಖಾತೆ, ಬಗರ್‌ಹುಕುಂ ಸಾಗುವಳಿ ಜಮೀನು, ನಿವೇಶನ, ವಸತಿ ರಹಿತರ ಸಮಸ್ಯೆ, ಸಂಧ್ಯಾ ಸುರಕ್ಷಾ ಸೇರಿದಂತೆ ವಿವಿಧ ಪಿಂಚಣಿ ಸಮಸ್ಯೆ, ರಸ್ತೆ ದುರಸ್ತಿ, ಬಸ್ ವ್ಯವಸ್ಥೆ, ದೇವಾಲಯ ಜೀರ್ಣೋದ್ಧಾರ, ಕುಡಿಯುವ ನೀರಿನ ಸಮಸ್ಯೆ, ಸರಕಾರಿ ಯೋಜನೆಗಳ ಸಮಸ್ಯೆ, ಪೊಲೀಸರಿಂದ ತೊಂದರೆ ಸೇರಿದಂತೆ ಯಾವುದೇ ಸಮಸ್ಯೆ ಇದ್ದರೂ ನಮಗೆ ಅರ್ಜಿ ಸಲ್ಲಿಸಿ. ಇದು ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಡಿ.ಕೆ. ಶಿವಕುಮಾರ್ ಅವರ ಕನಸಿನ ಯೋಜನೆ. ಈ ಯೋಜನೆ ಮೂಲಕ ಸರಕಾರವನ್ನೇ ನಿಮ್ಮ ಮನೆ ಬಾಗಿಲಿಗೆ ತಂದು ನಿಮ್ಮ ಸಮಸ್ಯೆಗಳಿಗೆ ಪರಿಹಾರ ನೀಡುವ ಪ್ರಯತ್ನ ಇದಾಗಿದೆ ಎಂದು ಹೇಳಿದರು.



ಚನ್ನಪಟ್ಟಣದಲ್ಲಿ ನಡೆದ ಜನಸ್ಪಂದನೆ ಕಾರ್ಯಕ್ರಮವನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು.

ಅಧಿಕಾರಕ್ಕಾಗಿ ಕ್ಷೇತ್ರ ಬಿಟ್ಟು ಹೋಗಲ್ಲ

ನಾನು ಚನ್ನಪಟ್ಟಣ ಬಿಟ್ಟು ಓಡಿ ಹೋಗುವವನಲ್ಲ. ಬೇರೆ ಪಕ್ಷಕ್ಕೆ ಮತಹಾಕಿದ್ದೇನೆ, ಬೇರೆ ಪಕ್ಷದ ಜತೆ ಗುರುತಿಸಿಕೊಂಡಿದ್ದೇನೆ. ಶಿವಕುಮಾರ್ ಬಳಿ ಹೋಗಿ ಹೇಗೆ ಅರ್ಜಿ ನೀಡಲಿ ಎಂಬ ಮುಜುಗರ, ಹಿಂಜರಿಕೆ ಬೇಡ. ನಾವು ಎಲ್ಲರ ಸಮಸ್ಯೆಗಳನ್ನೂ ಆಲಿಸಿ ಸ್ಪಂದಿಸುತ್ತೇವೆ. ತಾಲೂಕಿನ ಗ್ರಾಮೀಣ ಭಾಗದ ಜನರು ವಿದ್ಯಾಭ್ಯಾಸಕ್ಕಾಗಿ, ಉದ್ಯೋಗಕ್ಕಾಗಿ ಬೆಂಗಳೂರಿಗೆ ಹೋಗುತ್ತಿದ್ದಾರೆ. ಹೀಗಾಗಿ ಮಾಜಿ ಸಂಸದ ಸುರೇಶ್ ಅವರು ಸಿಎಸ್‌ಆರ್ ನಿಧಿಯಲ್ಲಿ ರಾಮನಗರದ 20 ಕಡೆಗಳಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಸದ್ಯದಲ್ಲೇ ಈ ಶಾಲೆಗಳ ನಿರ್ಮಾಣ ಆರಂಭವಾಗಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ದೊಡ್ಡ ನಾಯಕರೊಬ್ಬರು ನನಗೆ ಏನು ಮಾಡಿದ್ದೀರಿ ಎಂದು ಕೇಳಿದ್ದಾರೆ. ಇಂಧನ ಸಚಿವನಾಗಿದ್ದಾಗ ಈ ತಾಲೂಕಿನ 18 ಸಾವಿರ ರೈತರಿಗೆ ಉಚಿತ ಟಿಸಿ ನೀಡಿದ್ದೇನೆ. ಕುಮಾರಸ್ವಾಮಿ ಅವರು ಈ ಕ್ಷೇತ್ರ ಬಿಟ್ಟು ಮಂಡ್ಯಕ್ಕೆ ಹೋಗಿದ್ದಾರೆ. ಕೇಂದ್ರದಿಂದ ಹಣ ತಂದು ಅಲ್ಲಿನ ರೈತರಿಗೆ ಟಿಸಿ ಕೊಡಲಿ ನೋಡೋಣ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಗ್ರಾಪಂ ಅಧ್ಯಕ್ಷ-ಉಪಾಧ್ಯಕ್ಷರೂ ಅಸ್ವಸ್ಥ, ಆಸ್ಪತ್ರೆಗೆ ದಾಖಲು

ಕಲುಷಿತ ನೀರು:ರೈತ ಸಾವು

ಕೋಲಾರದ ಎಸ್ಸೆನ್ನಾರ್ ಆಸ್ಪತ್ರೆಯಲ್ಲಿ ಅಸ್ವಸ್ಥಗೊಂಡವರು ಚಿಕಿತ್ಸೆ ಪಡೆಯುತ್ತಿರುವುದು.

ಕೋಲಾರ: ಮುಳಬಾಗಲು ತಾಲೂಕಿನ ಮಿಣಜೇನಹಳ್ಳಿಯಲ್ಲಿ ಕುಡಿಯುವ ನೀರು ಕಲುಷಿತಗೊಂಡು ಓರ್ವ ಮೃತಪಟ್ಟಿದ್ದು ಐವರು ಅಸ್ವಸ್ಥಗೊಂಡು ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾರೆ.

ಮಿಣಜೇನಹಳ್ಳಿ ರೈತ ವೆಂಕಟರವಣಪ್ಪ (68) ಮುಳಬಾಗಲು ಸರಕಾರಿ ಆಸ್ಪತ್ರೆಯಲ್ಲಿ ಸೋಮವಾರ ಬೆಳಗ್ಗೆ ಮೃತಪಟ್ಟಿದ್ದಾರೆ. ವೆಂಕಟರವಣಪ್ಪ ಪತ್ನಿ ಮುನಿವೆಂಕಟಮ್ಮ, ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ. ಕೋಲಾರದ ಎಸ್ಸೆನ್ನಾರ್ ಆಸ್ಪತ್ರೆಯಲ್ಲಿ ರಾಜಮ್ಮ(60), ರತ್ನಮ್ಮ(59), ವೆಂಕಟರಾಮಪ್ಪ(45) ಮತ್ತು ಜಯಮ್ಮ (60) ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದು ಎಲ್ಲರೂ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಕೋಲಾರ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ವಿಜಯಕುಮಾರ್ ತಿಳಿಸಿದ್ದಾರೆ.

ಅಮರಾವತಿ(32) ಹಾಗೂ ವೆಂಕಟಮುನಿಯಪ್ಪ(70) ಅವರನ್ನು ಕೆಜಿಎಫ್ ಸಿವಿಲ್ ಆಸ್ಪತ್ರೆಗೆ ಸೇರಿಸಲಾಗಿದ್ದು ಪರಿಸ್ಥಿತಿ ಸುಧಾರಿಸಿದೆ. ಸುಮಿತ್ರಮ್ಮ(29) ಮುಳಬಾಗಲು ಸರಕಾರಿ ಆಸ್ಪತ್ರೆಯಲ್ಲಿದ್ದಾರೆ. ಊರುಕುಂಟೆ ಮಿಟ್ಟೂರು ಗ್ರಾಮಪಂಚಾಯತಿಯಿಂದ ಮನೆಮನೆಗೆ ನಲ್ಲಿ ವ್ಯವಸ್ಥೆ ಮಾಡಲಾಗಿದ್ದು ಸೋಮವಾರ ಬೆಳಗ್ಗೆ ನೀರು ಕುಡಿದವರು ಹೊಟ್ಟೆನೋವು, ವಾಂತಿ,ಬೇಧಿಯಿಂದ ಬಳಲಿದ್ದು, ಇದಕ್ಕೆ ಕಲುಷಿತ ನೀರೇ ಕಾರಣವಾಗಿದೆ.

ಸಮಸ್ಯೆಗೆ ಕಾರಣ ಏನು ..?

ಚರಂಡಿಯಲ್ಲಿ ಹಾದುಹೋಗಿರುವ ನೀರಿನ ಪೈಪ್‌ಲೈನ್‌ಗೆ ಅಲ್ಲಲ್ಲಿ ಧಕ್ಕೆಯಾಗಿರುವುದರಿಂದ ಚರಂಡಿ ನೀರು ಓವರ್‌ಟ್ಯಾಂಕ್‌ಗೆ ಸೇರಿ ಗ್ರಾಮದ ಫಿಲ್ಟರ್ ಮತ್ತು ಮನೆಗಳಿಗೆ ಸರಬರಾಜಾಗಿರುವುದು ಸಮಸ್ಯೆಗೆ ಮೂಲ. ಪಂಚಾಯತಿ ಅಧ್ಯಕ್ಷ ಅಮರಾವತಿ ಮತ್ತು ಉಪಾಧ್ಯಕ್ಷ ಬಾಲಕೃಷ್ಣ ಮಿಣಜೇನಹಳ್ಳಿ ಗ್ರಾಮದವರೇ ಆಗಿದ್ದರೂ ಅನಾಹುತ ನಡೆದಿದೆ ಎಂಬುದು ಜನರ ಆರೋಪವಾದರೆ ಪಿಡಿಓ ಎನ್.ಪದ್ಮಾ ಜನಪ್ರತಿನಿಧಿಗಳಿಗೆ ಸ್ಪಂದನೆ ನೀಡದೆ ಸರ್ವಾಧಿಕಾರಿ ಧೋರಣೆ ತೋರುತ್ತಿದ್ದಾರೆ ಎಂಬುದು ಪಂಚಾಯತಿ ಅಧ್ಯಕ್ಷರು,ಉಪಾಧ್ಯಕ್ಷರ ಆರೋಪವಾಗಿದೆ. ಸ್ಥಳಕ್ಕೆ ಭೇಟಿ ನೀಡಿದ್ದ ತಾಲೂಕು ಆರೋಗ್ಯಾಧಿಕಾರಿ ಡಾ.ಸುಗುಣಾರೆಡ್ಡಿ ನೀರಿನ ಮಾದರಿ ಸಂಗ್ರಹಿಸಿ ಜಿಲ್ಲಾಸ್ಪತ್ರೆಯ ಸರ್ವೇಯನ್ಸ್ ವಿಭಾಗಕ್ಕೆ ಪರೀಕ್ಷೆಗೆ ನೀಡಿದ್ದು ಎರಡು ದಿನದಲ್ಲಿ ವರದಿ ಬರಲಿದೆ. ಮೇಲ್ನೋಟಕ್ಕೆ ನೀರು ಕಲುಷಿತವಾಗಿರುವುದು ಕಂಡುಬಂದಿದೆ ಎಂದು ವಿಶ್ವವಾಣಿಗೆ ಪ್ರತಿಕ್ರಿಯಿಸಿದ್ದಾರೆ.

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಯಲ್ಲಾಪುರ ಉಪ ವಿಭಾಗ, ಯಲ್ಲಾಪುರ
ಕ್ರ.ಸಂ:ಎ5/ಬಿಜಿಟಿ/ಇ-ಟೆಂಡರ್/ಮಾನ್ಸೂನ್/ಸಿಆರ್-40/2024-25. ದಿನಾಂಕ: 12-06-2024.
ಟೆಂಡರ್ ಪ್ರಕಟಣೆ
2024-25 ನೇ ಸಾಲಿಗೆ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಮಾನ್ಸೂನ್ ನೆಡುತೋಪು ರಚನೆ, ಹಾಗೂ ಸಸಿಗಳ ನಿರ್ವಹಣೆ ಕುರಿತು ಅನುಬಂಧ-I ರಲ್ಲಿ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸಂಕ್ಷಿಪ್ತ ಅಲ್ಪಾವಧಿ ಇ-ಟೆಂಡರ (ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ) (ಕೆಡಬ್ಲ್ಯೂ-1 ದ್ವಿ ಲಕೋಟೆ ಪದ್ಧತಿ) ಕರೆಯಲಾಗಿದೆ. ಟೆಂಡರ್‌ನ್ನು ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12-07-2024 ಸಾಯಂಕಾಲ 4.00 ಗಂಟೆಗೆ ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಯಲ್ಲಾಪುರ ಉಪ ವಿಭಾಗ, ಯಲ್ಲಾಪುರ ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು. (ದೂರವಾಣಿ ಸಂಖ್ಯೆ: 08419-261273).
ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ ಉಪ ವಿಭಾಗ, ಯಲ್ಲಾಪುರ
DIPR/KWR/KSMCA/80/24-25 Dt.24.06.2024

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು - 10.
(E-mail:-khsdrp.divmys@gmail.com)
ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ-3&4/ಟೆಂಡರ್-02/2024-25
ದಿನಾಂಕ: 20.06.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ ಮೈಸೂರು, ಚಾಮರಾಜನಗರ, ಹಾಸನ, ದಕ್ಷಿಣ ಕನ್ನಡ ಮತ್ತು ಜಿಲ್ಲೆಗಳಲ್ಲಿ ಬ್ಲಾಕ್ ಪಬ್ಲಿಕ್ ಹೆಲ್ತ್ ಯೂನಿಟ್ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಸಾಮಾನ್ಯ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. **ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1)** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 01.07.2024 ರಂದು 16.00 ಗಂಟೆಯವರೆಗೆ. **2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 02.07.2024 ರಂದು 16.30 ಗಂಟೆಗೆ.
ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp. karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸೂಚನೆ: ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
ಸಹಿ/- ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.
DIPR/DDMYS-126/KSMCA-96/2024-25

ಹೆಚ್ಚುವರಿ ಡಿಸಿಎಂ; ಪರ-ವಿರೋಧ

← ಮೊದಲಪುಟದಿಂದ

ನಾಲ್ಕೈದು ಸ್ಥಾನ ಕಡಿಮೆ ಬಂದಿವೆ. ಅದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಬೇಕಿದ್ದರೆ ಮುಖ್ಯಮಂತ್ರಿ ಹುದ್ದೆಯನ್ನೇ ಕೇಳಬಹುದು. ಆದರೆ ಅದು ಸಾಧ್ಯವೇ? ಎಂದು ಪರೋಕ್ಷವಾಗಿ ಆಕ್ರೋಶ ಹೊರಹಾಕಿದರು.

ಎಲ್ಲ ಸಮುದಾಯವರನ್ನೂ ಡಿಸಿಎಂ ಮಾಡಲಿ: ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ, ಡಿಸಿಎಂ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಪ್ರತಿಕ್ರಿಯಿಸಿ, ಪಕ್ಷದ ಹೈಕಮಾಂಡ್ ಒಪ್ಪಿದರೆ ಎಲ್ಲ ಸಮುದಾಯದವರನ್ನೂ ಉಪಮುಖ್ಯಮಂತ್ರಿಯನ್ನಾಗಿ ಮಾಡಲಿ. ಬೇಡವೆಂದವರು ಯಾರು ಎಂದು ಪ್ರಶ್ನಿಸಿದರು.

ಮೂವರು ಡಿಸಿಎಂ ಹುದ್ದೆ ವಿಚಾರವಾಗಿ ಸಚಿವ ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯಿಸಿ, ಎಲ್ಲ ಸಮುದಾಯಕ್ಕೂ ನ್ಯಾಯ ಸಿಗಲಿ. ಪಕ್ಷ ತೀರ್ಮಾನ ಮಾಡಿ ಇನ್ನೂ ಐದು ಜನರನ್ನು ಡಿಸಿಎಂ ಮಾಡಿದರೂ ಒಳ್ಳೆಯದು. ಡಿಕೆ ವಿಚಾರ ಅಥವಾ ಮತ್ತೊಂದು ವಿಚಾರಗಳ ಬಗ್ಗೆ ಮಾಹಿತಿಯಿಲ್ಲ. ಆದರೆ ಸಂಪುಟದಲ್ಲಿ ಎಂಟು ಬಾರಿ ಗೆದ್ದಿರುವ ರಾಮಲಿಂಗಾರೆಡ್ಡಿ ಇದ್ದಾರೆ, ಈಶ್ವರ್ ಖಂಡ್ರೆ, ಸತೀಶ್ ಜಾರಕಿಹೊಳಿ, ಜಮೀರ್ ಅಹ್ಮದ್, ಕೃಷ್ಣಬೈರೇಗೌಡ, ಚಲುವರಾಯಸ್ವಾಮಿ, ದಿನೇಶ್ ಗುಂಡೂರಾವ್ ಹಾಗೂ ಆರ್.ವಿ.ದೇಶಪಾಂಡೆ ಇದ್ದಾರೆ. ಎಲ್ಲರನ್ನೂ ಡಿಸಿಎಂ ಮಾಡಲಿ, ಯಾರು ಬೇಡ ಅಂದರು ಎಂದು ವ್ಯಂಗ್ಯವಾಡಿದರು.

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂಖ್ಯೆ:ಕಾಇಂ/ಲೋಇವಿ/ಮಧು:ಸ.ಇಂ-3/ಟೆಂಡರ್/2024-25 ದಿ: 18.06.2024
ಟೆಂಡರ್ ಪ್ರಕಟಣೆ ಸಂಖ್ಯೆ:02/2024-25
(ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಪಾವಗಡ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp. karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137- 283336.
ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ 92.00 ಲಕ್ಷ ಗಳವರೆಗೆ. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 05.07.2024 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 06.07.2024 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 10.07.2024 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ : 02.07.2024 ಸಂಜೆ 4.00 ಗಂಟೆಗೆ ವರೆಗೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.
DIPR/TUM/82/KSMCA/2024-25

ಚಿರತೆ ಜೋಡಿ ಪ್ರತ್ಯಕ್ಷ

ಅರಸೀಕೆರೆ : ತಾಲೂಕಿನ ಗಂಡಸಿ ಹೋಬಳಿ ವೆಂಕಟಪುರ ಕಾವಲ್ ಬಳಿ ಹಾಡಹಗಲೇ ಚಿರತೆಗಳು ಕಾಣಿಸಿಕೊಂಡು ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿವೆ. ಎರಡು ಚಿರತೆಗಳು ಸಮೀಪದ ಗುಡ್ಡದ ಮೇಲಿನ ಕಲ್ಲಿನ ಮೇಲೆ ರಾಜಾರೋಷವಾಗಿ ಕುಳಿತಿದ್ದವು.

ಅಂಗನವಾಡಿಯಲ್ಲೇ ಎಲ್‌ಕೆಜಿ, ಯುಕೆಜಿ

← ಮೊದಲಪುಟದಿಂದ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಶಿಕ್ಷಣ ಸಚಿವ ಮಧು ಬಂಗಾರಪ್ಪ ಸೇರಿದಂತೆ ಹಿರಿಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ. ಅಂಗನವಾಡಿಯಲ್ಲಿ ಈಗಾಗಲೇ ಅನೇಕ ಪದವೀಧರು ಕಾರ್ಯನಿರ್ವಹಿಸುತ್ತಿದ್ದರಿಂದ, ಗುಣಮಟ್ಟದ ಶಿಕ್ಷಣಕ್ಕೆ ಯಾವುದೇ ಸಮಸ್ಯೆಯಿಲ್ಲ ಎನ್ನುವ ತೀರ್ಮಾನಕ್ಕೆ ಬರಲಾಗಿದೆ.

ಸಭೆಯ ಬಳಿಕ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ರಾಜ್ಯದ ಎಲ್ಲ ಅಂಗನವಾಡಿ ಕೇಂದ್ರಗಳನ್ನು ಉನ್ನತೀಕರಣಕರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮತಿ ಸೂಚಿಸಿದ್ದಾರೆ. ಕಲ್ಯಾಣ ಕರ್ನಾಟಕ ಭಾಗ ಹೊರತುಪಡಿಸಿ, ಇನ್ನುಳಿದಂತೆ ಹೊಸದಾಗಿ ಅಂಗನವಾಡಿ ಕೇಂದ್ರಗಳಲ್ಲಿಯೇ ಪೂರ್ವ ಪ್ರಾಥಮಿಕ (ಎಲ್‌ಕೆಜಿ, ಯುಕೆಜಿ) ಶಿಕ್ಷಣ ನೀಡುವ ಬಗ್ಗೆ ತಜ್ಞರ ಸಮಿತಿಯನ್ನು ರಚಿಸಲು ಸಿಎಂ ಸೂಚಿಸಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಗುಣಮಟ್ಟದ ಶಿಕ್ಷಣ, ಪೌಷ್ಠಿಕ ಆಹಾರವೇ ಉದ್ದೇಶ: ಅಂಗನವಾಡಿ ಕೇಂದ್ರಗಳಲ್ಲಿಯೇ ಪೂರ್ವ ಪ್ರಾಥಮಿಕ ಶಿಕ್ಷಣ ನೀಡಲು ತೀರ್ಮಾನಿಸಲಾಗಿದ್ದು, ಗುಣಮಟ್ಟದ ಶಿಕ್ಷಣ ಹಾಗೂ ಪೌಷ್ಠಿಕ ಆಹಾರ ನೀಡುವುದೇ ನಮ್ಮ ಉದ್ದೇಶ. ಈ ನಿಟ್ಟಿನಲ್ಲಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಮುಖ್ಯಮಂತ್ರಿಯವರು ಸಹಮತ ವ್ಯಕ್ತಪಡಿಸಿದ್ದಾರೆ. ಮಕ್ಕಳಿಗೆ ಇಲಾಖೆಯ ಮೂಲಕವೇ ಸಮವಸ್ತ್ರ, ಪುಸ್ತಕ, ಬ್ಯಾಗ್ ನೀಡಲು ತೀರ್ಮಾನಿಸಲಾಗಿದೆ. ಇದರೊಂದಿಗೆ ಶಾಲೆಗಳ ಮಾದರಿಯಲ್ಲಿಯೇ ಇನ್ನು ಮುಂದೆ ಅಂಗನವಾಡಿಗಳಿಂದ ವರ್ಗಾವಣೆ ಪತ್ರ ನೀಡಲು ಕ್ರಮವಹಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಪೂರ್ವಪ್ರಾಥಮಿಕ ಶಿಕ್ಷಣ ಆರಂಭಿಸುವ ಬಗ್ಗೆ ಅಂಗನವಾಡಿ ಕಾರ್ಯಕರ್ತರೊಂದಿಗೆ ಚರ್ಚೆ ನಡೆಸಲಾಗಿದೆ. ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕಿಯರ ಪೈಕಿ ಒಂಬತ್ತು ಸಾವಿರ ಮಂದಿ ಪದವಿ ಪಡೆದವರಾಗಿದ್ದರೆ, ಒಂದೂವರೆ ಸಾವಿರಕ್ಕಿಂತಲೂ ಹೆಚ್ಚು ಮಂದಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಹೀಗಾಗಿ, ಗುಣಮಟ್ಟದ ಶಿಕ್ಷಣ ನೀಡಿಕೆಗೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ವಿಶ್ವಾಸವ್ಯಕ್ತಪಡಿಸಿದರು.

ಸಹೋದರರಿಗೆ ಕಾನೂನು ಉರುಳು

← ಮೊದಲಪುಟದಿಂದ

ಡಾ.ಸೂರಜ್ ರೇವಣ್ಣ ಅವರನ್ನು ಜನಪ್ರತಿನಿಧಿಗಳ ವಿಶೇಷ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಸೋಮವಾರ ಜುಲೈ 1ರವರೆಗೆ ಸಿಐಡಿ ಕಸ್ಟಡಿಗೆ ನೀಡಿ ಆದೇಶಿಸಿದೆ. ನ್ಯಾಯಾಂಗ ಬಂಧನದಲ್ಲಿರುವ ಸೂರಜ್ ಅವರನ್ನು ವಿಚಾರಣೆಗಾಗಿ 14 ದಿನ ಕಸ್ಟಡಿಗೆ ನೀಡಬೇಕು ಎಂದು ಸಿಐಡಿ ಪರ ಸರಕಾರಿ ಅಭಿಯೋಜಕರು ಮ್ಯಾಜಿಸ್ಟ್ರೇಟ್ ಕೆ.ಎನ್. ಶಿವಕುಮಾರ್ ಅವರಿಗೆ ರಿಮ್ಯಾಂಡ್ ಅರ್ಜಿ ಸಲ್ಲಿಸಿ ಕೋರಿದರು.

ಇದಕ್ಕೆ ಆಕ್ಷೇಪಿಸಿದ ಸೂರಜ್ ಪರ ವಕೀಲರು ತಮ್ಮ ಅರ್ಜಿದಾರರಿಗೆ ಕಿರುಕುಳ ನೀಡುವ ಉದ್ದೇಶ ಹೊಂದಲಾಗಿದೆ. ಸೂರಜ್ ಅವರನ್ನು 2-3 ದಿನ ವಿಚಾರಣೆಗೆ ನೀಡಿದರೆ ಸಾಕು. ಘಟನೆ ನಡೆದ ತಕ್ಷಣ ದೂರು ನೀಡಿಲ್ಲ. ಸಂತ್ರಸ್ತ ಎನ್ನಲಾದ ವ್ಯಕ್ತಿಯು ಬ್ಲ್ಯಾಕ್ ಮೇಲ್ ಮಾಡಿದ್ದಾನೆ ಎಂದು ಆರೋಪಿಸಿದರು. ಇದನ್ನು ವಿರೋಧಿಸಿದ ಸರಕಾರಿ ಅಭಿಯೋಜಕರು, ಪ್ರಕರಣದಲ್ಲಿ ದೂರುದಾರನಿಗೆ ಆರೋಪಿಯಿಂದ ಬೆದರಿಕೆ ಇದ್ದುದರಿಂದ ತಡವಾಗಿ ದೂರು ನೀಡಿದ್ದಾನೆ. ಘಟನೆ ಹಾಸನ ಜಿಲ್ಲೆಯಲ್ಲಿ ನಡೆದಿದ್ದು, ವಿಚಾರಣೆ ಅಗತ್ಯವಿದೆ. ಅಲ್ಲಿ ಸ್ಥಳ ಮಹಜರು ನಡೆಸಿ, ವೈದ್ಯಕೀಯ ಪರೀಕ್ಷೆ ನಡೆಸಬೇಕಿದೆ. ಸಾಕ್ಷ್ಯ ಸಂಗ್ರಹಣೆ ಮಾಡಬೇಕಿದ್ದು, ಫೋನ್ ವಶಕ್ಕೆ ಪಡೆಯಬೇಕಿದೆ. ಸೂರಜ್ ಅವರು ವಾಟ್ಸಾಪ್ ಚಾಟ್ ನಡೆಸಿದ್ದು, ಅದನ್ನು ಪರಿಶೀಲಿಸಬೇಕಿದೆ. ಬೆದರಿಕೆ ಆರೋಪವೂ ಇರುವುದರಿಂದ ಸಾಕ್ಷ್ಯ ಸಂಗ್ರಹ ಅತಿಮುಖ್ಯವಾಗಿದೆ. ಕೃತ್ಯ ನಡೆದ ದಿನ ಆರೋಪಿ ಧರಿಸಿದ್ದ ವಸ್ತ್ರ, ವಾಹನ ಜಪ್ತಿ ಮಾಡಬೇಕಿದೆ. ಎರಡನೇ ಆರೋಪಿಯನ್ನೂ ವಶಕ್ಕೆ ಪಡೆದು, ಮುಖಾಮುಖಿ ವಿಚಾರಣೆ ನಡೆಸಬೇಕಿದೆ ಎಂದು ನ್ಯಾಯಾಧೀಶರ ಮುಂದೆ ವಾದ ಮಂಡಿಸಿದರು.

ಮುಡಾ ನಿವೇಶನ ಹಂಚಿಕೆಗೆ ತಡೆ

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದೊಳಗಿನ ಅವ್ಯವಹಾರ ಹಾಗೂ ಅಕ್ರಮ ಕುರಿತು ಸಾರ್ವಜನಿಕವಾಗಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಬೆನ್ನಲ್ಲೇ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಆಯುಕ್ತರ ನಡುವಿನ ಮುಸುಕಿನ ಗುದ್ದಾಟ ಬೀದಿಗೆ ಬಂದಿದೆ.

ಪ್ರಾಧಿಕಾರ ವಶಪಡಿಸಿಕೊಂಡ ಜಮೀನಿಗೆ ಪರಿಹಾರವಾಗಿ ಶೇ.50:50 ಅನುಪಾತದಡಿ ನಿವೇಶನ ಹಂಚಿಕೆ ಮಾಡುತ್ತಿದ್ದ ಆಯುಕ್ತರ ಕ್ರಮಕ್ಕೆ ಅಧ್ಯಕ್ಷ ಮರೀಗೌಡ ಅವರು ನೋಟಿಸ್ ನೀಡುವ ಮೂಲಕ ತಡೆ ಒಡ್ಡುವ ಕೆಲಸಕ್ಕೆ ಮುಂದಾಗಿದ್ದಾರೆ. ಶೇ.50-50ರ ಅನುಪಾತದಲ್ಲಿ ನಿವೇಶನ ಹಂಚಿಕೆಯಲ್ಲಿ ನಿಯಮಗಳ ಉಲ್ಲಂಘನೆ ಆರೋಪ ಹಿನ್ನೆಲೆಯಲ್ಲಿ ಕೂಡಲೇ ಹಂಚಿಕೆ ಸ್ಥಗಿತಗೊಳಿಸುವಂತೆ ಅಧ್ಯಕ್ಷರು ನೋಟಿಸ್ ಜಾರಿಮಾಡಿದ್ದಾರೆ. ಭೂಮಾಲೀಕರಿಗೆ ನಿವೇಶನ ಹಂಚಿಕೆಯಲ್ಲಿ ಕಾನೂನು ಉಲ್ಲಂಘಿಸಲಾಗಿದೆ ಎಂಬ ದೂರು ಬಂದ ಕಾರಣ ಈ ನಿರ್ಧಾರ ಕೈಗೊಂಡಿದ್ದಾರೆ. 2021ರಿಂದ ಹಂಚಿಕೆ ಮಾಡಿರುವ 50-50 ಅನುಪಾತದ ನಿವೇಶನಗಳ ವಿವರಣೆ ಮುಡಾ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸೂಚಿಸಿದ್ದಾರೆ. ಈ ಕುರಿತು ಸ್ವೀಕರಿಸುವ ಅರ್ಜಿಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ, ತಾಂತ್ರಿಕ ಶಾಖೆಯ ಅಭಿಯಂತರರು ಹಾಗೂ ಸರ್ವೇ ಪರಿಶೀಲಿಸಿ ಮುಡಾ ಸಭೆಯಲ್ಲಿ ಮಂಡಿಸಿ, ನಂತರ ಸರಕಾರದ ಅನುಮೋದನೆ ಪಡೆಯುವಂತೆ ಸೂಚನೆ ನೀಡಿದ್ದಾರೆ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಐ.ಎಫ್‌.ಟಿ ಸಂಖ್ಯೆ01/2024-25 ದಿನಾಂಕ: 19.06.2024
ಟೆಂಡರ್ ಅಧಿಸೂಚನೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ ಸಮುಚಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್"ನಲ್ಲಿನ ಷರತ್ತುಗಳಿಗನುಗುಣವಾಗಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 8 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅಧಿಸೂಚನೆಯಂತೆ ಕ್ರ.ಸಂ.1-5 ದಿ: 19.06.2024, ಕ್ರ.ಸಂ.6-8 ದಿ: 24.06.2024 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಟ 487.13 ಲಕ್ಷಗಳು ಮತ್ತು ಕನಿಷ್ಟ 6.75 ಲಕ್ಷಗಳು, ಗರಿಷ್ಟ ಇ.ಎಂ.ಡಿ ರೂ.7,30,800/- ಮತ್ತು ಕನಿಷ್ಟ ರೂ.13,000/- -ಗುತ್ತಿಗೆ ಕಾಲಾವಧಿ ಗರಿಷ್ಟ 6-ತಿಂಗಳು ಮತ್ತು ಕನಿಷ್ಟ 2-ತಿಂಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ಕ್ರ.ಸಂ.1-5 ದಿನಾಂಕ: 26-06-2024, ಕ್ರ.ಸಂ.6-8 ದಿನಾಂಕ: 01-07-2024 ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
DIPR/DDMYS-109/KSMCA-91/2024-25

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ-590018, ಕರ್ನಾಟಕ, ಭಾರತ
ಕ್ರಮ ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./ಕಿ.ಅ./ಇ/2024-25/ಐ.ಎಫ್.ಟಿ.ನಂ.10/1265, ದಿನಾಂಕ: **21st June 2024**
ಟೆಂಡರ ಪ್ರಕಟಣೆ ದ್ವಿ ಲಕೋಟಿ ಪದ್ಧತಿ
(ಇ-ಪ್ರೊಕ್ಯೂರಮೆಂಟ್ ಮೂಲಕ)
ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೊಂದಾಯಿತ ಫರ್ಮ/ಏಜನ್ಸಿದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ್ಸ ಕೆ.ಡಬ್ಲ್ಯೂ/ಕೆ.ಜಿ .ರ ಪ್ರಕಾರ ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿ ಹೆಸರುಗಳು:-1)ವಿತಾವಿ, "ಜ್ಞಾನ ಸಂಗಮ", ಬೆಳಗಾವಿಯಲ್ಲಿ 650KVA ಡಿಜಿ ಸೆಟ್‌ಗಳ ಅಳವಡಿಸುವುದು ಮತ್ತು ಪರೀಕ್ಷಿಸುವ ಕಾಮಗಾರಿ(2ನೇ ಕರೆ) ಮೊತ್ತ ರೂ.60,15,426/-(ಜಿಎಸ್‌ಟಿ ಸೇರಿಸಿ), ಮತ್ತು 2) ವಿತಾವಿ, "ಜ್ಞಾನ ಸಂಗಮ", ಬೆಳಗಾವಿಯ ಆವರಣದಲ್ಲಿರುವ ಬೀದಿ ದೀಪ ಕಂಬಗಳಿಗೆ ಮತ್ತು ಫೀಡರ್ ಪಿಲ್ಲರಗಳಿಗೆ ವಿದ್ಯುತ್ ಕೆಲಸಗಳನ್ನು ನಿರ್ವಹಣೆಯ ಕಾಮಗಾರಿ ಮೊತ್ತ ರೂ.9,61,000/-(ಜಿ.ಎಸ್.ಟಿ.ಸೇರಿಸಿ) 3) ವಿತಾವಿಯ ಪ್ರಾದೇಶಿಕ ಕೇಂದ್ರ ಕಲಬುರಗಿಯಲ್ಲಿ ಸೆನೆಟ್ ಸಭಾಂಗಣಕ್ಕೆ ನೇರ ಪ್ರಸಾರದೊಂದಿಗೆ ವಿಡಿಯೋ ಕಾನ್ಫರೆನ್ಸ ಸೆಟ್‌ನ್ನು ಪೂರೈಸುವ ಕಾಮಗಾರಿ ಮೊತ್ತ ರೂ.23,54,100/-(ಜಿಎಸ್‌ಟಿ ಸೇರಿಸಿ) 4)ವಿತಾವಿ ಪ್ರಾದೇಶಿಕ ಕೇಂದ್ರ, ಕಲಬುರಗಿ ಆವರಣದ ಅತಿಥಿ ಗೃಹ, ಸಿಪಿಜಿಎಸ್ ಕಟ್ಟಡ, ಆಡಳಿತ ಬ್ಲಾಕ್, ಲೈಬ್ರರಿ ಹಾಗೂ ವ್ಯಾಲ್ಯೂಯೇಶನ್ ಸೆಂಟರ್ ನಲ್ಲಿ ಸ್ಪ್ಲಿಟ್ ಮತ್ತು ಕ್ಯಾಸೆಟ್ ಹವಾನಿಯಂತ್ರಣಗಳನ್ನು ಸ್ಥಾಪಿಸಲಾಗಿದ್ದು, ಅವುಗಳಿಗೆ ವಾರ್ಷಿಕ ನಿರ್ವಹಣೆ ನಿರ್ವಹಿಸುವ ಕೆಲಸ ಮೊತ್ತ ರೂ.8,51,370/- (ಜಿ.ಎಸ್.ಟಿ.ಸೆರಿಸಿ)(2ನೇಕರೆ). ಇತರೆ ಮಾಹಿತಿಗಳನ್ನು https:// kppp. karnataka.gov.in ವೆಬ್‌ಸೈಟ್ ಮೂಲಕ ದಿನಾಂಕ:27-06-2024 ರಿಂದ ಪಡೆದುಕೊಳ್ಳಬಹುದು.
ಸಹಿ/-ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
DIPR/BGM/RO-NO-169/KSMCA/2024-25

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು, ಸಿವಿಲ್ ವಿಭಾಗ, ಸಯ್ಯಾಜಿರಾವ್ ರಸ್ತೆ, ಮೈಸೂರು. ಇ-ಮೇಲ್:eewmccmys@gmail.com
ಸಂಖ್ಯೆ:ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ-03/2024-25 ದಿನಾಂಕ: 21.06.2024
ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ)	ಇ-ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾ.ಅ(ಪ)/ ಟಿ.ಎನ್-04/2024-25 ದಿನಾಂಕ: 21.06.2024	1	303.58	21.06.2024 ಸಂಜೆ 5.00ರ ನಂತರ	29.06.2024 ಸಂಜೆ 5.30 ಗಂಟೆಗೆ	01.07.2024 ಬೆಳಿಗ್ಗೆ 10.00 ರ ನಂತರ
2.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾ.ಅ(ಪ)/ ಟಿ.ಎನ್-05/2024-25 ದಿನಾಂಕ: 24.06.2024	16	482.68	26.06.2024 ಸಂಜೆ 5.00ರ ನಂತರ	11.07.2024 ಸಂಜೆ 5.00 ಗಂಟೆಗೆ	12.07.2024 ಸಂಜೆ 5.15ರ ನಂತರ
3.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾ.ಅ(ಪ)/ ಟಿ.ಎನ್-06/2024-25 ದಿನಾಂಕ: 24.06.2024	2 service	-	24.06.2024 ಬೆಳಿಗ್ಗೆ 11 ರ ನಂತರ	08.07.2024 ಸಂಜೆ 5.30 ಗಂಟೆಗೆ	09.07.2024 ಸಂಜೆ 5.30 ನಂತರ
4.	ಹೆಚ್1/ಪವಿ/101/2022-23	1 Work	38.187	21.06.2024 ಬೆಳಿಗ್ಗೆ 11ರ ನಂತರ	06.07.2024 ಸಂಜೆ 5.30 ಗಂಟೆಗೆ	08.07.2024 ಸಂಜೆ 5.30 ನಂತರ
		1 Goods	42.69			
5.	ಟೆಂ.ಪ್ರ.ಸಂಖ್ಯೆ: ಮೈನಪಾ/ಉ.ಆ(ವಾಹನ)/ ವಿ.ಆರ್./154/2023-24 ದಿನಾಂಕ: 24.06.2024	1 Goods	43.72	26.06.2024 ಸಂಜೆ 5.00ರ ನಂತರ	03.07.2024 ಸಂಜೆ 5.00 ಗಂಟೆಗೆ	04.07.2024 ಬೆಳಿಗ್ಗೆ 11.00 ರ ನಂತರ
6.	ಟೆಂ.ಪ್ರ.ಸಂಖ್ಯೆ: ಮೈನಪಾ/ಉ.ಆ(ವಾಹನ)/ ವಿ.ಆರ್./70/2023-24 ದಿನಾಂಕ: 24.06.2024	2 service	68.88			

ಅರ್ಹ ಗುತ್ತಿಗೆದಾರರು **(https://kppp.karnataka.gov.in)** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ (ಪೂ&ಪ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:** ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ **(https://kppp.karnataka.gov.in)** ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು(ಪಶ್ಚಿಮ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/KAVITA/139/24-25

ಸಿಲಿಂಡರ್ ಸ್ಫೋಟ: ತಪ್ಪಿದ ಅನಾಹುತ

ಮುಧೋಳ: ಸಿಲಿಂಡರ್ ಸ್ಫೋಟಗೊಂಡು ಮನೆಗೆ ಹಾನಿಯಾಗಿರುವ ಘಟನೆ ಸಮೀಪದ ಶಿರೋಳ ಗ್ರಾಮದಲ್ಲಿ ಸೋಮವಾರ ಮಧ್ಯಾಹ್ನ ಸಂಭವಿಸಿದೆ.ಸಿದ್ದಪ್ಪ ಮುಂಡಗನೂರ ಅವರ ಮನೆಯಲ್ಲಿ ಶಾರ್ಟ್ ಸರ್ಕ್ಯೂಟ್ ಆಗಿ ಸಿಲಿಂಡರ್ ಸ್ಫೋಟಗೊಂಡಿದ್ದು ಸ್ಫೋಟದ ಭೀಕರತೆಗೆ ಮನೆಯ ಚಾವಣಿ ಹಾರಿಹೋಗಿದೆ. ಮಧ್ಯಾಹ್ನದ ಸಮಯದಲ್ಲಿ ಮನೆಯ ಮಂದಿಯೆಲ್ಲ ಬೀಗ ಹಾಕಿಕೊಂಡು ಕೂಲಿ ಕೆಲಸಕ್ಕೆ ತೆರಳಿದ್ದರು, ಈ ವೇಳೆ ಸಿಲಿಂಡರ್ ಸ್ಫೋಟಗೊಂಡಿದ್ದು ಹೆಚ್ಚಿನ ಅನಾಹುತ ತಪ್ಪಿದಂತಾಗಿದೆ. ಮನೆಯ ಕೆಲ ಸದಸ್ಯರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ತಿಳಿದು ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಹೆಚ್ಚಿನ ಅನಾಹುತ ತಪ್ಪಿಸಿದರು.

ಸಮಾಚಾರ ಸಣ್ಣದಲ್ಲ

ಡಿಸಿಎಂ ಸಾಂವಿಧಾನಿಕ ಹುದ್ದೆಯಲ್ಲ

ಚಾಮರಾಜನಗರ: ಡಿಸಿಎಂ ಎಂಬುದು ಸಾಂವಿಧಾನಿಕ ಹುದ್ದೆಯಲ್ಲ, ದಲಿತ ಕೋಟಾ, ಆ ಕೋಟಾ, ಈ ಕೋಟಾ ಅಂತೇನಿಲ್ಲ ಎಂದು ಸಚಿವ ಡಾ.ಎಚ್.ಸಿ. ಮಹಾದೇವಪ್ಪ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ದಲಿತರಲ್ಲಿ ಅನೇಕರು ಸಮರ್ಥರಿದ್ದಾರೆ. ಆ ಸಾಮರ್ಥ್ಯದ ಮೇಲೆ ಡಿಸಿಎಂ ಸ್ಥಾನ ಕೊಡಬೇಕು ಎಂದು ಪರೋಕ್ಷವಾಗಿ ಡಿಸಿಎಂ ಕೂಗಿಗೆ ಸಹಮತ ವ್ಯಕ್ತಪಡಿಸಿದರು. ಡಿಸಿಎಂ ವಿಚಾರದಲ್ಲಿ ಯಾವುದೇ ತೀರ್ಮಾನ ಮಾಡಿದರೂ ಕೂಡ ಕಾಂಗ್ರೆಸ್ ಹೈಕಮಾಂಡ್ ಮಾಡಲಿದೆ. ವರಿಷ್ಠರು ಈ ಬಗ್ಗೆ ಕೇಳಿದಾಗ ನನ್ನ ಅಭಿಪ್ರಾಯ ತಿಳಿಸುತ್ತೇನೆ, ಇದು ಪಕ್ಷದ ಆಂತರಿಕ ವಿಚಾರ, ಮಾಧ್ಯಮದವರೊಂದಿಗೆ ಹೇಳಲು ಸಾಧ್ಯವಿಲ್ಲ ಸಚಿವ ಮಹಾದೇವಪ್ಪ ಸ್ಪಷ್ಟಪಡಿಸಿದರು.

ಹೋರಿ ಮೇಲೆ ಚಿರತೆ ದಾಳಿ

ಚಿತ್ತಾಪುರ: ತಾಲೂಕಿನ ಯಾಗಾಪುರ, ಬೆಳಗೇರಾ ಗ್ರಾಮಗಳ ನಡುವಿನ ಅರಣ್ಯದಲ್ಲಿ ಚಿರತೆಯೊಂದು ದಾಳಿ ಮಾಡಿ ಮಲ್ಲಪ್ಪ ಮಪಟ್ಟಲ್ಲಿ ಎಂಬವರ ಹೋರಿಗೆ ಗಾಯವಾದ ಘಟನೆ ಜರುಗಿದೆ. ಗುಡ್ಡದ ಸಮೀಪ ದನಕರು, ಹೋರಿ ಮೇಯಿಸಲು ಹೋದಾಗ ಚಿರತೆ ದಾಳಿ ಮಾಡಿದ್ದು, ಅದನ್ನು ಗಮನಿಸಿದ ದನಗಾಹಿಗಳು ಜೋರಾಗಿ ಚೀರಾಡಿದ್ದರಿಂದ ಭಯಗೊಂಡ ಚಿರತೆಯು ಹೋರಿ ಬಿಟ್ಟು ಓಡಿ ಹೋಗಿದೆ. ಹೋರಿಯ ಕತ್ತಿನ ಭಾಗದಲ್ಲಿ ಗಾಯಗಳಾಗಿದ್ದು, ಪಶು ಸಂಗೋಪನೆ ಇಲಾಖೆ ವೈದ್ಯರು ಸ್ಥಳಕ್ಕೆ ಭೇಟಿ ನೀಡಿ ಚಿಕಿತ್ಸೆ ನೀಡಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಚಿರತೆ ಸೆರೆ ಹಿಡಿದು ಜನರು, ರೈತರು ಹಾಗೂ ದನಗಾಹಿಗಳಿಗೆ ಕಾಡುತ್ತಿರುವ ಭಯ, ಆತಂಕ ನಿವಾರಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕಚೇರಿಯಲ್ಲೇ ಸಿಬ್ಬಂದಿ ಆತ್ಮಹತ್ಯೆ

ಗುಂಡ್ಲುಪೇಟೆ: ನೇಣು ಬಿಗಿದುಕೊಂಡು ಖಾಸಗಿ ಫೈನಾನ್ಸ್ ಸಿಬ್ಬಂದಿಯೋರ್ವ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದ ಅಶ್ವಿನಿ ಬಡಾವಣೆಯಲ್ಲಿ ನಡೆದಿದೆ. ನಂಜನಗೂಡು ತಾಲೂಕಿನ ನಾಗಣಾಪುರ ಗ್ರಾಮದ ಅಭಿಷೇಕ್(23) ಮೃತ ಯುವಕ. ಈತ ಖಾಸಗಿ ಫೈನಾನ್ಸ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದು, ಭಾನುವಾರ ಯಾರೂ ಇಲ್ಲದ ವೇಳೆ ರಾತ್ರಿ ಕಚೇರಿಯ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ. ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವತಿಗೆ ವಂಚನೆ: ಪೇದೆ ವಿರುದ್ಧ ಪ್ರಕರಣ

ಮುಂಡಗೋಡ: ಮನೆ ಕಟ್ಟಲು ಹಣದ ಅವಶ್ಯಕತೆಯಿದೆ ಎಂದು ಯುವತಿಯನ್ನು ನಂಬಿಸಿ, ಅವರಿಂದ 18 ಲಕ್ಷ ಪಡೆದು ವಂಚಿಸಿದ ಆರೋಪದ ಮೇಲೆ ಇಲ್ಲಿನ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಗಿರೀಶ ಎಸ್.ಎಂ. ಎಂಬುವರ ಮೇಲೆ ವಿರುದ್ಧ ವಂಚನೆ ಪ್ರಕರಣ ದಾಖಲಾಗಿದೆ. ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಕಾನ್‌ಸ್ಟೆಬಲ್ ಗಿರೀಶ ಅವರು, ಅದೇ ತಾಲೂಕಿನ ಯುವತಿಯ ಕಡೆಯಿಂದ ಕಳೆದ ಐದು ವರ್ಷಗಳ ಅವಧಿಯಲ್ಲಿ ಒಟ್ಟು 18 ಲಕ್ಷ ಪಡೆದು, ಅದಕ್ಕೆ ಪ್ರತಿಯಾಗಿ ಚೆಕ್‌ಗಳನ್ನು ನೀಡಿದ್ದರಂತೆ. ಆದರೆ, ಮರಳಿ ಹಣವನ್ನು ನೀಡದೆ ಮೋಸ ಮಾಡಿದ್ದಾರೆ ಎಂದು ಯುವತಿ ದೂರು ನೀಡಿದ್ದಾರೆ. ಯುವತಿ ನೀಡಿದ ದೂರು ಆಧರಿಸಿ ಕಾನ್‌ಸ್ಟೆಬಲ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಿಪಿಐ ರಂಗನಾಥ ನೀಲಮ್ಮನವರ ತಿಳಿಸಿದ್ದಾರೆ.

ರೇವಣ್ಣ ಇಡೀ ಕುಟುಂಬಕ್ಕೆ ಕಾನೂನು ಸಂಕಷ್ಟ –ಸುದ್ದಿ



ವಿಧಾನಸೌಧದಲ್ಲಿ ನಡೆದ ಕಾರ್ಯಕ್ರಮ | ಯತೀಂದ್ರ, ಸಿ.ಟಿ. ರವಿ ಸೇರಿದಂತೆ 17 ಸದಸ್ಯರ ಪದಗ್ರಹಣ

ವಿಧಾನಪರಿಷತ್ ಸದಸ್ಯರಾಗಿ ಪ್ರಮಾಣವಚನ

ಬೆಂಗಳೂರು: ಇತ್ತೀಚಿಗೆ ನಡೆದ ವಿಧಾನ ಪರಿಷತ್‌ನ ವಿವಿಧ ಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರ ಪ್ರಮಾಣವಚನ ಕಾರ್ಯ ಕ್ರಮ ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಜರುಗಿತು.

ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆ ಯಾದ ಹಾಗೂ ಪದವೀಧರ, ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದ ನೂತನ ಪರಿಷತ್ ಸದಸ್ಯರಿಗೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಪ್ರಯಾಣ ವಚನ ಬೋಧಿಸಿದರು.

ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಆಡಳಿತಾರೂಢ ಕಾಂಗ್ರೆಸ್‌ನಿಂದ ಡಾ.ಕೆ. ಗೋವಿಂದರಾಜು, ಐವನ್ ಡಿಸೋಜಾ, ಬಲ್ಕಿಸ್ ಬಾನು, ಜಗದೇವ್ ಗುತ್ತೇದಾರ್, ಎನ್.ಎಸ್.ಬೋಸರಾಜು ಹಾಗೂ ಎ. ವಸಂತ ಕುಮಾರ್ ಪ್ರಮಾಣವಚನ ಸ್ವೀಕರಿಸಿದರು.

ಇನ್ನೂ ಪ್ರತಿಪಕ್ಷ ಬಿಜೆಪಿಯಿಂದ ಮುಳೆ ಮಾರುತಿರಾವ್, ಸಿ.ಟಿ.ರವಿ, ಎನ್.ರವಿ ಕುಮಾರ್ ಹಾಗೂ ಜೆಡಿಎಸ್‌ನಿಂದ ಟಿ.ಎನ್. ಜವರಾಯಿಗೌಡ ಪ್ರಮಾಣವಚನ ಸ್ವೀಕರಿಸಿದರು.

ಇನ್ನುಳಿದಂತೆ ಈಶಾನ್ಯ ಪದವೀಧರ ಕ್ಷೇತ್ರದಿಂದ ಆಯ್ಕೆಯಾದ ಕಾಂಗ್ರೆಸ್‌ನ ಡಾ.ಚಂದ್ರಶೇಖರ ಬಸವರಾಜ ಪಾಟೀಲ, ಬೆಂಗಳೂರು ಪದವೀಧರ ಕ್ಷೇತ್ರದ ರಾಮೋಜಿಗೌಡ, ಆಗ್ನೇಯ ಶಿಕ್ಷಕರ ಕ್ಷೇತ್ರದ ಡಿ.ಟಿ. ಶ್ರೀನಿವಾಸ ಹಾಗೂ ನೈರುತ್ಯ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಧನಂಜಯ ಸರ್ಜಿ ಮತ್ತು ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ, ದಕ್ಷಿಣ ಶಿಕ್ಷಕರ ಕ್ಷೇತ್ರದ ಕೆ. ವಿವೇಕಾನಂದ, ಆಗ್ನೇಯ ಶಿಕ್ಷಕರ ಕ್ಷೇತ್ರದ ಡಿ. ಟಿ. ಶ್ರೀನಿವಾಸ ಪ್ರಮಾಣ ವಚನ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕಾನೂನು ಸಚಿವ ಎಚ್.ಕೆ. ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

ನೂತನ ಪರಿಷತ್ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಡಾ.ಯತೀಂದ್ರ ಅವರು ಸಿಎಂ ಸಿದ್ದರಾಮಯ್ಯ, ಸಭಾಪತಿ ಬಸವರಾಜ ಹೊರಟ್ಟಿ ಅವರಿಂದ ಸದಸ್ಯರಿಗೆ ನೀಡುವ ಸೂಟ್‌ಕೇಸ್ ಸ್ವೀಕರಿಸಿದರು.

ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಅವರಿಗೆ ಅಭಿನಂದಿಸಿದ ಸಿಎಂ ಸಿದ್ದರಾಮಯ್ಯ.. ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ. ಪಾಟೀಲ್ ಹಾಜರಿದ್ದರು.

ಬಿಜೆಪಿಯ ರವಿಕುಮಾರ್ ಅವರಿಗೆ ಹೂಗುಚ್ಛ ನೀಡಿದ ಅಭಿನಂದಿಸಿದ ಸಿಎಂ ಸಿದ್ದರಾಮಯ್ಯ ಹಾಗೂ ಸ್ಪೀಕರ್ ಬಸವರಾಜ ಹೊರಟ್ಟಿ.



ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಸಿ.ಟಿ. ರವಿ ಅವರು ಸಿಎಂ ಸಿದ್ದರಾಮಯ್ಯ ಅವರ ಕಾಲು ಮುಟ್ಟಿ ಆಶೀರ್ವಾದ ಪಡೆದರು.



ಬೆಂಗಳೂರು ಪದವೀಧರ ಕ್ಷೇತ್ರದಿಂದ ಆಯ್ಕೆಯಾಗಿರುವ ರಾಮೋಜಿ ಗೌಡ ಅವರಿಗೆ ಹೂಗುಚ್ಛ ನೀಡಿದ ಅಭಿನಂದಿಸಿದ ಸಿಎಂ ಸಿದ್ದರಾಮಯ್ಯ.

ಸೋಲಿನ ಕುರಿತು ಹಲವು ಕ್ಷೇತ್ರಗಳಿಂದಲೂ ದೂರು: ಯತ್ನಾಳ

ಹೈಕಮಾಂಡ್‌ಗೆ ಪಕ್ಷ ವಿರೋಧಿ ಚಟುವಟಿಕೆ ಮಾಹಿತಿ

ವಿಜಯಪುರ: ಲೋಕಸಭೆ ಚುನಾವಣೆಯಲ್ಲಿ ದೊಡ್ಡ ದೊಡ್ಡ ಹುದ್ದೆಯಲ್ಲಿದ್ದವರೇ ಪಕ್ಷ ವಿರೋಧಿ ಚಟುವಟಿಕೆ ಮಾಡಿದ ಕುರಿತು ಹೈಕಮಾಂಡ್ ಗಮನಕ್ಕೆ ಬಂದಿದೆ. ಹೈಕಮಾಂಡ್ ಏನು ಕ್ರಮ ಕೈಗೊಳ್ಳಲಿದೆ ಎಂಬುದನ್ನು ಕಾದು ನೋಡಬೇಕಿದೆ ಎಂದು ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವ ಯಾವ ಕ್ಷೇತ್ರದಲ್ಲಿ ಏನೇನಾಗಿದೆ, ಪಕ್ಷ ವಿರೋಧಿ ಚಟುವಟಿಕೆ ಎಲ್ಲಿ ನಡೆದಿದೆ ಎಂಬುದರ ಕುರಿತು ಹೈಕಮಾಂಡ್‌ಗೆ ಮಾಹಿತಿ ರವಾನೆಯಾಗಿದೆ. ಸೋಲಿನ ಕುರಿತು ಹಲವು ಕ್ಷೇತ್ರಗಳಿಂದಲೂ ದೂರು ಕೇಳಿಬಂದಿದ್ದು, ಸತ್ಯ ಶೋಧನಾ ಸಮಿತಿ ರಚಿಸಬೇಕು. ಹೈಕಮಾಂಡ್ ಏನು ನಿರ್ಧಾರ ಕೈಗೊಳ್ಳಲಿದೆ ಎಂದು ಕಾದು ನೋಡಬೇಕಿದೆ ಎಂದರು.

ದಾವಣಗೆರೆ ಕ್ಷೇತ್ರದ ಸೋಲಿಗೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಾರಣ ಎಂದು ಪಕ್ಷ ಶಾಸಕರಾಗಿರುವ ಹರಿಹರದ ಹರೀಶ ಮಾಡಿರುವುದು ಗಂಭೀರ ಆರೋಪ. ಪಕ್ಷದ ಓರ್ವ ಶಾಸಕರೇ ಆರೋಪ ಮಾಡುತ್ತಾರೆ ಎಂದರೆ ಸಾಮಾನ್ಯವಾಗಿ ಪರಿಗಣಿಸುವಂತಿಲ್ಲ ಎಂದರು. ಲೋಕಸಭೆ ಚುನಾವಣೆಯಲ್ಲಿ ಗೆದ್ದವರು ಮಾತ್ರವಲ್ಲ ಪರಾಜಿತರು ಸಹ ಪಕ್ಷ ವಿರೋಧಿ ಚಟುವಟಿಕೆ ಕುರಿತು ದೂರಿದ್ದಾರೆ. ಹಾಗಂತ ಎಲ್ಲ ಕಡೆಗಳಲ್ಲೂ ಪಕ್ಷ ವಿರೋಧಿ ಚಟುವಟಿಕೆಯೇ ಕಾರಣವಲ್ಲ. ಕೆಲವು ಸಂಸದರು ಪಕ್ಷದ ಕಾರ್ಯಕರ್ತರೊಂದಿಗೆ ಉತ್ತಮ ಬಾಂಧವ್ಯ ಇರಿಸಿಕೊಳ್ಳದಿರುವುದು, ಕ್ಷೇತ್ರದ ಜನರ ಸಂಪರ್ಕ ಕಳೆಕೊಂಡುದು ಕೂಡ ಅವರ ಸೋಲಿಗೆ ಕಾರಣವಾಗಿದೆ. ಇಂಥಲ್ಲೆಲ್ಲ ಮೋದಿ ಅಥವಾ ಬಿಜೆಪಿ ಪಕ್ಷದ್ದೇನೂ ತಪ್ಪಿಲ್ಲ ಎಂದೂ ವಿಶ್ಲೇಷಿಸಿದರು.

ಸತ್ಯಶೋಧನಾ ಸಮಿತಿ ರಚಿಸಲಿ

ತುಮಕೂರು ಕ್ಷೇತ್ರದಲ್ಲಿ ಸೋಮಣ್ಣ ಅವರನ್ನು ಸೋಲಿಸಲು ಬಿಜೆಪಿ ಮೂಲದಿಂದಲೇ ಅಪಾರ ಪ್ರಮಾಣದ ಹಣ ಹೋಗಿರುವ ಆರೋಪವಿದೆ. ಬೀದರ್‌ನಲ್ಲಿ ಭಗವಂತ ಖೂಬಾ, ಕಲಬುರಗಿಯಲ್ಲಿ ಉಮೇಶ ಜಾಧವ್ ಇದೇ ರೀತಿಯ ಆರೋಪ ಮಾಡಿದ್ದಾರೆ. ಚಿಕ್ಕೋಡಿಯಲ್ಲಿ ಅಣ್ಣಾಸಾಹೇಬ ಜೊಲ್ಲೆ ಪರಿಸ್ಥಿತಿಯೂ ಇದೇ ಎಂದಿದ್ದಾರೆ. ಹೀಗಾಗಿ ಸತ್ಯ ಶೋಧನಾ ಸಮಿತಿ ರಚನೆಯಾಗಲಿ ಎಂದು ಆಗ್ರಹಿಸಿದರು.

ಸಚಿವ ಜಮೀರ್ ಅಹಮ್ಮದ್ ಖಾನ್ ತಿರುಗೇಟು

ವಕ್ಫ್ ಆಸ್ತಿ ಯತ್ನಾಳ್ ತಂದೆಯ ಆಸ್ತಿ ಅಲ್ಲ

ಬೀದರ್: ವಕ್ಫ್ ಆಸ್ತಿ ಯತ್ನಾಳ್ ಅವರ ತಂದೆಯ ಆಸ್ತಿಯೂ ಅಲ್ಲ ಅಥವಾ ನಮ್ಮ ತಂದೆಯ ಆಸ್ತಿಯೂ ಅಲ್ಲ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಸಚಿವ ಜಮೀರ್ ಅಹಮ್ಮದ್ ಖಾನ್ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಕ್ಫ್ ಆಸ್ತಿ ರದ್ದು ಪಡಿಸಬೇಕು ಎಂದು ಯತ್ನಾಳ್ ಪ್ರಧಾನಿಗೆ ಪತ್ರ ಬರೆದ ವಿಚಾರಕ್ಕೆ ಅವರು ಪ್ರತಿಕ್ರಿಯಿಸಿದ್ದಾರೆ. ಈ ವೇಳೆ ವಕ್ಫ್ ಆಸ್ತಿ ಜನರು ಹಾಗೂ ದಾನಿಗಳು ದಾನ ಮಾಡಿರುವ ಆಸ್ತಿಯಾಗಿದೆ. ಈ ರೀತಿ ಮುಸಲ್ಮಾನರ ಬಗ್ಗೆ ಮಾತನಾಡಿದ್ರೆ, ಬೇರೆಯವರು ಖುಷಿಯಾಗ್ತಾರೆ ಎಂದು ಯತ್ನಾಳ್ ತಿಳಿದುಕೊಂಡಿದ್ದಾರೆ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ. ಯತ್ನಾಳ್‌ಗೆ ಹಿಂದೂಗಳು ಬೇಕಿಲ್ಲ, ಯಾವ ಮುಸಲ್ಮಾನರು ಬೇಕಿಲ್ಲ. ಅವರಿಗೆ ಬರೀ ರಾಜಕೀಯ ಮಾತ್ರ ಬೇಕು. ಇದು ಕಂದಾಯ ಇಲಾಖೆ ನೀಡಿದ ಆಸ್ತಿಯಲ್ಲ, ಇದನ್ನು ಯತ್ನಾಳ್ ಮೊದಲು ಅರ್ಥ ಮಾಡಿಕೊಳ್ಳಬೇಕು. ಇದು ಸರಕಾರ ನೀಡಿದ್ದರೆ ವಾಪಸ್‌ಗೆ ಅವಕಾಶ ಇರುತ್ತದೆ ಎಂದರು.

ರಾಜ್ಯದಲ್ಲಿ 37 ಸಾವಿರ ಎಕರೆ ವಕ್ಫ್ ಜಮೀನಿದ್ದು, ಅದರಲ್ಲಿ 4570 ಎಕರೆ ಜಮೀನು ಒತ್ತುವರಿಯಾಗಿದೆ. ಹೀಗಾಗಿ ನಾನು ಬೀದರ್‌ನಿಂದ ರಾಜ್ಯಾದ್ಯಂತ ವಕ್ಫ್ ಅದಾಲತ್ ಮಾಡುತ್ತಿದ್ದೇನೆ. ಯತ್ನಾಳ್ ತಮಗೆ ಕಾನೂನು ಗೊತ್ತಿದೆ, ನಾನು ಬಹಳ ಬುದ್ಧಿವಂತ ಎಂದು ತಿಳಿದುಕೊಂಡಿದ್ದಾರೆ. 1956ರಲ್ಲಿ ನೆಹರು ವಕ್ಫ್ ಕಾಯ್ದೆ ಜಾರಿ ಮಾಡಿದ್ದು, ಪ್ರಧಾನಿಗೆ ಪತ್ರ ಬರೆದರೂ, ಅದನ್ನು ರದ್ದು ಮಾಡಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

ಡಿಸಿಎಂ ಮಾಡೋದು ಹೈಕಮಾಂಡ್‌ಗೆ ಬಿಟ್ಟ ವಿಚಾರ

ನಮ್ಮ ಅಭಿಪ್ರಾಯ ನಾವು ಹೇಳಿದ್ದೇವೆ, ನಮ್ಮ ಪಕ್ಷ ಹೈಕಮಾಂಡ್ ಪಕ್ಷವಾಗಿದ್ದು ಈಗಾಗಲೇ ನಾನು ಮತ್ತು ರಹೀಂಖಾನ್ ನಮ್ಮ ಅಭಿಪ್ರಾಯ ಹೇಳಿದ್ದೇವೆ. ಇನ್ನೂ ಡಾ.ಜಿ ಪರಮೇಶ್ವರ್, ರಾಜಣ್ಣ, ಸತೀಶ್ ಜಾರಕಿಹೊಳಿ ಹಾಗೂ ಎಂ.ಬಿ ಪಾಟೀಲ್ ಕೂಡ ಅವರ ಅಭಿಪ್ರಾಯಗಳನ್ನು ಹೇಳಿದ್ದು, ಅಂತಿಮವಾಗಿ ಡಿಸಿಎಂ ಮಾಡೋದು ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದು ಸಚಿವ ಜಮೀರ್ ಅಹಮ್ಮದ್ ಹೇಳಿದರು.

ಮಾನಗೇಡಿ ಕೆಲಸ ಮಾಡಿ ಎಂದು ನಾವು ಹೇಳಿದ್ದೇವಾ?

ಬಾಗಲಕೋಟೆ : ಮಾನಗೇಡಿ ಕೆಲಸ ಮಾಡು ಎಂದು ನಾವು ಹೇಳಿದ್ದೆವಾ? ಪ್ರಜ್ವಲ್ ಮತ್ತು ಸೂರಜ್ ಆ ಕೆಲಸ ಮಾಡಿಲ್ಲ ಎಂದು ಎಚ್.ಡಿ ಕುಮಾರಸ್ವಾಮಿ ಅವರಾದರೂ ಹೇಳಲಿ ಎಂದ ಸಚಿವ ಆರ್.ಬಿ. ತಿಮ್ಮಾಪೂರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಎಚ್‌ಡಿಕೆ ಕೇಂದ್ರ ಸಚಿವರಿದ್ದಾರೆ. ಕಾನೂನು ಎಲ್ಲರಿಗೂ ಒಂದೇ. ದೇವೇಗೌಡರ ಮೊಮ್ಮಕ್ಕಳಿಗೂ ಅಷ್ಟೆ, ನಮ್ಮ ಮಕ್ಕಳಿಗೂ ಅಷ್ಟೆ, ಬಿಎಸ್‌ವೈ, ಸಿದ್ದರಾಮಯ್ಯ ಮಕ್ಕಳಿಗೂ ಒಂದೇ ಕಾನೂನು. ಪೊಲೀಸರು ಕಾನೂನು ಪ್ರಕಾರ ತನಿಖೆ ಮಾಡುತ್ತಿದ್ದಾರೆ. ಅದಕ್ಕೆ ದೇವೇಗೌಡರ ಫ್ಯಾಮಿಲಿಯನ್ನು ಮುಗಿಸಿಬಿಡುತ್ತಾರೆಂದು ಹೇಳುವುದು ಸರಿಯಲ್ಲ ಎಂದು ಎಚ್‌ಡಿಕೆ ಹೇಳಿಕೆಗೆ ಟಾಂಗ್ ನೀಡಿದ್ದಾರೆ.

ಅವರು ಯಾವಾಗಲೂ ಅದೇ ಸಿಂಪತಿಗೆ ಏನ್ ಮಾಡಬೇಕು. ಅದರಲ್ಲಿ ಲಾಭ ಹೇಗೆ ಪಡೀಬೇಕೆಂದು ಯೋಚನೆ ಮಾಡುತ್ತಾರೆ ಎಂದ ಸಚಿವರು, ಕೇಂದ್ರ ಸಚಿವರಾಗಿ ಎಚ್‌ಡಿಡಿ ಕುಟುಂಬ ರಾಜಕೀಯವಾಗಿ ಮುಗಿಸಲು ಹುನ್ನಾರ ಎಂದು ಹೇಳಬಾರದು. ರಾಜಕೀಯ ಷಡ್ಯಂತ್ರ ಎನ್ನುತ್ತಾರೆ. ಯಾವುದರಲ್ಲಿ ಇದೆ ರಾಜಕೀಯ ಷಡ್ಯಂತ್ರ ಎಂದರು.

ಹೆಚ್ಚುವರಿ ಡಿಸಿಎಂ ಹುದ್ದೆ ವಿಚಾರವಾಗಿ ಸಚಿವ ರಾಜಣ್ಣ ಹೇಳಿಕೆ ಸಮರ್ಥಿಸಿಕೊಂಡ ಸಚಿವ ತಿಮ್ಮಾಪೂರ ಅವರು, ಅದು ನನಗೆ ಏನೇನು ಗೊತ್ತಿಲ್ಲ. ಅದು ನಮ್ಮ ಪಕ್ಷ ತೆಗೆದುಕೊಳ್ಳುವ ತೀರ್ಮಾನ ಎಂದರು.

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭೇಟಿ ನೀಡಿ, ನಾಣ್ಯಗಳಿಂದ ತುಲಾಭಾರ ಸೇವೆ ಸಲ್ಲಿಸಿದರು. ದೇವಾಲಯದ ಅರ್ಚಕ ಸತ್ಯನಾರಾಯಣ ನೂರಿತ್ತಾಯ ತುಲಾಭಾರ ಸೇವೆ ನೆರವೇರಿಸಿದರು.

ಚಂದ್ರಶೇಖರ್ ಆತ್ಮಹತ್ಯೆ ಪ್ರಕರಣ: ಆರೋಪಿಗಳು ನ್ಯಾಯಾಲಯಕ್ಕೆ ಹಾಜರು

ಶಿವಮೊಗ್ಗ: ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಸಿಐಡಿ ಅಧಿಕಾರಿಗಳು ಸೋಮವಾರ ಶಿವಮೊಗ್ಗ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಚಂದ್ರಶೇಖರ್ ಅವರು ಮೇ 26ಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಘಟನೆ ರಾಜ್ಯದಲ್ಲಿ ಸಂಚಲನ ಮೂಡಿಸಿತ್ತು. ಇದೇ ಕಾರಣಕ್ಕೆ ಸಚಿವ ನಾಗೇಂದ್ರ ರಾಜೀನಾಮೆ ನೀಡಿದ್ದರು. ಆತ್ಮಹತ್ಯೆಗೆ ಕಾರಣ ಎನ್ನಲಾಗುತ್ತಿರುವ ಆರೋಪಿಗಳಾದ ನಿಗಮ ಮಂಡಳಿ ನಿರ್ದೇಶಕ ಎ1 ಪದ್ಮನಾಭ್ ಹಾಗೂ ಮಂಡಳಿ ಅಕೌಂಟೆಂಟ್ ಸೂಪರ್ ವೈಸರ್ ಎ2 ಪರಶುರಾಮ್‌ರನ್ನು ಸೋಮವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಸಿಐಡಿ ಡಿವೈಎಸ್‌ಪಿ ಮೊಹಮ್ಮದ್ ರಫಿ ನೇತೃತ್ವದ ತಂಡವು ಇಬ್ಬರು ಆರೋಪಿಗಳನ್ನು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ.

ರಾಜ್ಯಾಧ್ಯಕ್ಷರ ತಪ್ಪಿನಿಂದ ದಾವಣಗೆರೆಯಲ್ಲಿ ಸೋಲು

ದಾವಣಗೆರೆ: ರಾಜ್ಯಾಧ್ಯಕ್ಷರ ತಪ್ಪಿನಿಂದ ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಗೆ ಸೋಲಾಗಿದೆ. ಲಗಾನ್ ಟೀಮ್ ವಿರುದ್ಧ ಶಿಸ್ತು ಕ್ರಮ ಕೈಗೊಂಡಿದ್ದರೆ ಸೋಲುತ್ತಿರಲಿಲ್ಲ ಎಂದು ಶಾಸಕ ಬಿ.ಪಿ.ಹರೀಶ್ ಅವರು ಬಿ.ವೈ. ವಿಜಯೇಂದ್ರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಆ್ಯಂಡ್ ಟೀಮ್ ದಾವಣಗೆರೆಯಲ್ಲಿ ಸುದ್ದಿಗೋಷ್ಠಿ ನಡೆಸುತ್ತಿದ್ದರು. ಅದನ್ನು ರಾಜ್ಯಾಧ್ಯಕ್ಷರು ತಡೆದಿದ್ದರೆ ಕ್ಷೇತ್ರ ಕಾಂಗ್ರೆಸ್ ಬದಲು ಬಿಜೆಪಿ ಪಾಲಾಗುತ್ತಿತ್ತು. ನಾಲ್ಕು ಗೋಡೆಗಳ ಮಧ್ಯೆ ಮಾತಾಡಬೇಕು ಎಂಬುದು ನಿಮಗೆ ಈಗ ಗೊತ್ತಾಯಿತೇ? ಎಂದು ವಾಗ್ದಾಳಿ ನಡೆಸಿದರು. ಈ ಲಗಾನ್ ಟೀಮ್ ನಿರ್ಮಾಣ ಮಾಡಿದ್ದೇ ಇದೇ ರಾಜ್ಯಾಧ್ಯಕ್ಷರು. ಗಾಯಿತ್ರಿ ಸಿದ್ದೇಶ್ವರ್‌ಗೆ ಟಿಕೆಟ್ ಕೊಟ್ಟಾಗಲೂ ಲಗಾನ್ ಟೀಮ್ ಮಾತನಾಡಿದ್ರೂ ಕೂಡ ಒಂದು ದಿನವೂ ಯಾವ ನಾಯಕರೂ ಇವರ ವಿರುದ್ಧ ಮಾತಾಡಲಿಲ್ಲ. ಆಗ ಏಕೆ ಮಾತನಾಡಬೇಡಿ ಅಂತ ಹೇಳಿಲ. ನನಗೆ ಯಾರೂ ಕೂಡ ಕರೆ ಮಾಡಿ ಮಾತಾಡಿಲ್ಲ. ಕರೆ ಮಾಡಿದರೆ ಮಾತನಾಡಿ ಉತ್ತರ ಕೊಡುವೆ. ಆದರೆ, ಬಿ.ಪಿ.ಹರೀಶ್ ಸತ್ಯ ಮಾತನಾಡಿದ ತಕ್ಷಣ ನಾಲ್ಕು ಗೋಡೆ ಗಳ ಮಧ್ಯೆ ಮಾತಾಡಿ ಎಂಬುದು ನೆನಪಾಯ್ತಾ?. ಅವರಿಗೆ ಬೇಕಾದವರು ಏನು ಬೇಕಾದರೂ ಮಾತನಾಡಬಹುದಾ ಎಂದು ಕಿಡಿಕಾರಿದರು.

ವಾಡಿಕೆಗಿಂತ ಹೆಚ್ಚು ಮಳೆ | ರಾಜ್ಯದಲ್ಲಿ 82 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ : ಸಚಿವ ಕೃಷ್ಣಬೈರೇಗೌಡ

2025ರೊಳಗೆ ಕಂದಾಯ ಇಲಾಖೆ ಡಿಜಿಟಲೀಕರಣ

ಕಲಬುರಗಿ: ರಾಜ್ಯದಲ್ಲಿ ಕಂದಾಯ ಇಲಾಖೆ ಎಲ್ಲ ಆಯಾಮಗಳಿಂದ ಡಿಜಿಟಲೀಕರಣಕ್ಕೆ ಮುಂದಾಗಿದೆ. ಈಗಾಗಲೇ ಇ-ಕಚೇರಿ ಅನುಷ್ಠಾನದಲ್ಲಿ ಶೇ.80ರಷ್ಟು ಪ್ರಗತಿ ಸಾಧಿಸಿದ್ದು, 2025ರ ಅಂತ್ಯಕ್ಕೆ ರಾಜ್ಯದ ಎಲ್ಲ ತಾಲೂಕು ಕಚೇರಿಗಳು ಡಿಜಿಟಲೀಕರಣಗೊಳ್ಳಲಿವೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭೂಸುರಕ್ಷಾ ಯೋಜನೆಯಡಿ ಕಳೆದ ಫೆಬ್ರವರಿಯಲ್ಲಿ ರಾಜ್ಯದ 31 ತಾಲೂಕು ಕಚೇರಿಗಳಲ್ಲಿ ಪ್ರಾಯೋಗಿಕವಾಗಿ ರೆಕಾರ್ಡ್ ರೂಂ ದಾಖಲೀಕರಣ ಕಾರ್ಯ ಪ್ರಾರಂಭಿಸಿದ್ದು, ಈವರೆಗೆ 3 ಕೋಟಿ ದಾಖಲೆ ಸ್ಕ್ಯಾನಿಂಗ್ ಮಾಡಲಾಗಿದೆ. ಮುಂದಿನ ಒಂದು ತಿಂಗಳಿನಲ್ಲಿ ಉಳಿದ ತಾಲೂಕುಗಳಲ್ಲೂ ಇದಕ್ಕೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ವಿ.ಎ., ಆರ್.ಐ.ಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಗುತ್ತಿದ್ದು, ಅವರು ಹಳ್ಳಿಯಲ್ಲಿಯೇ ಕುಳಿತು ಕೆಲಸ ಮಾಡಬಹುದು. ಕಂದಾಯ ಕೋರ್ಟ್ ಪ್ರಕರಣಗಳ ಸ್ಥಿತಿಗತಿ ಅರಿಯಲು ಆರ್.ಸಿ.ಸಿ.ಎಂ.ಎಸ್.(ರೆವೆನ್ಯೂ ಕೋರ್ಟ್ ಕೇಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್) ತಂತ್ರಾಂಶ ಅಭಿವೃದ್ಧಿಪಡಿಸಿದೆ. ಒಟ್ಟಾರೆ 2025ರ ಅಂತ್ಯಕ್ಕೆ ಕಂದಾಯ ಇಲಾಖೆಯನ್ನು ಸಂಪೂರ್ಣವಾಗಿ ಡಿಜಿಟಲೀಕರಣ ಮಾಡಲಾಗುವುದು ಎಂದು ಕೃಷ್ಣ ಬೈರೇಗೌಡ ಹೇಳಿದರು.

ರಾಜ್ಯದಲ್ಲಿನ ಎಲ್ಲಾ ಹೊಸ ತಾಲೂಕುಗಳಿಗೆ ತಹಸೀಲ್ದಾರ್ ಕಚೇರಿ ಮಾತ್ರ ಇವೆ. ಉಳಿದ ಇಲಾಖೆಗಳ ತಾಲೂಕು ಕಚೇರಿ ಇಲ್ಲ. ಅಗತ್ಯವಿರುವೆಡೆ ಮುಂದಿನ ಮೂರು ವರ್ಷದಲ್ಲಿ ಹಂತಹಂತವಾಗಿ ತಾಲೂಕು ಕಚೇರಿ ಆರಂಭಿಸಲಾಗುವುದು.

-ಕೃಷ್ಣಬೈರೇಗೌಡ, ಕಂದಾಯ ಸಚಿವ

ರಾಜ್ಯದಲ್ಲಿ 82 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ: ಪ್ರಸಕ್ತ ವರ್ಷ ಮುಂಗಾರುಪೂರ್ವ ಮತ್ತು ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಮಳೆಹೆಚ್ಚಾಗಿರುವುದರಿಂದ ಕೃಷಿ ಚಟುವಟಿಕೆ ಆಶಾದಾಯಕವಾಗಿವೆ. ಈ ವರ್ಷ ರಾಜ್ಯದಾದ್ಯಂತ 82 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಇದೂವರೆಗೆ 33 ಲಕ್ಷ ಹೆಕ್ಟೇರ್ ಬಿತ್ತನೆಯಾಗಿದೆ. ಇದು ಗುರಿಗೆ ಶೇ.40ರಷ್ಟು ಬಿತ್ತನೆಯಾಗಿದೆ. ಕಳೆದ ವರ್ಷ ಇದೇ ವೇಳೆ, ಕೇವಲ 8.37 ಲಕ್ಷ ಹೆಕ್ಟೇರ್ ಪ್ರದೇಶ ಮಾತ್ರ ಬಿತ್ತನೆಯಾಗಿತ್ತು.ರಾಜ್ಯದಲ್ಲಿ ಮುಂಗಾರು ಪೂರ್ವ 115 ಮಿ.ಮೀ ಮಳೆಯಾದರೆ ಜೂನ್ ಮಾಹೆಯಲ್ಲಿ ಒಟ್ಟಾರೆ 148 ಮಿ.ಮೀ ಮಳೆಯಾಗಿದೆ. ದಕ್ಷಿಣ ಒಳನಾಡಿನಲ್ಲಿ 95 ಮಿ.ಮೀ. ಮಳೆಯಾಗಿದ್ದು, ಇದು ವಾಡಿಕೆಗಿಂತ 40ಮಿ.ಮೀ ಹೆಚ್ಚು. ಅದೇ ರೀತಿ ಉತ್ತರ ಒಳನಾಡಿನಲ್ಲಿ 78 ಮಿ.ಮೀ. ವಾಡಿಕೆ ಮಳೆಯಾದರೆ, ಮಳೆ ಬಿದ್ದಿದ್ದು 134 ಮಿ.ಮೀ. ಇನ್ನು ಮಲೆನಾಡು, ಕರಾವಳಿಯಲ್ಲಿ ವಾಡಿಕೆಯಂತೆ ಮಳೆ ಬೀಳದಿದ್ದರೂ., ಇತ್ತೀಚಿನ 2-3 ದಿನದಲ್ಲಿ ಅಲ್ಲಿ ಮಳೆಯಾಗುತ್ತಿರುವುದರಿಂದ ಅಗತ್ಯಕ್ಕನುಗುಣವಾಗಿ ಅಲ್ಲಿ ಮಳೆಯಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ವಿವರಿಸಿದರು.

ಬರಗಾಲ: ರೈತರಿಗೆ ನಷ್ಟ ಪರಿಹಾರ

ರಾಜ್ಯದಲ್ಲಿ ಕಳೆದ ವರ್ಷ ಬರಗಾಲ ಕಾರಣ ಸಣ್ಣ-ಅತಿಸಣ್ಣ ರೈತರು ವಾರ್ಷಿಕ ಬೆಳೆ ನಷ್ಟದಿಂದ ತುಂಬಾ ಕಂಗಾಲಾಗಿದ್ದು, ಅವರ ಜೀವನೋಪಾಯ ನಷ್ಟ ಭರಿಸಲು 18 ಲಕ್ಷ ರೈತರಿಗೆ ತಲಾ 3,000 ರು.ಗಳಂತೆ 500 ಕೋಟಿ ರು. ಪರಿಹಾರ ವಿತರಣೆಗೆ ರಾಜ್ಯ ಸರಕಾರ ಮುಂದಾಗಿದ್ದು, ಮುಂದಿನ ಒಂದು ವಾರದಲ್ಲಿ ರೈತರ ಖಾತೆಗೆ ಈ ಹಣ ಜಮೆಯಾಗಲಿದೆ. ಕಳೆದ ವರ್ಷ ಅತ್ಯಂತ ಭೀಕರ ಬರಗಾಲದಿಂದ ರೈತ ಸಮುದಾಯ ತತ್ತರಿಸಿತ್ತು. ಹೀಗಾಗಿ ರೈತ ಸಮುದಾಯದ ರಕ್ಷಣೆಗೆ ಸರಕಾರ ಮುಂದಾಗಿದೆ. ಕಳೆದ ವರ್ಷ ಬರಗಾಲ ಕಾರಣ ಕೇಂದ್ರ ಸರಕಾರ ಕಾಲಮಿತಿಯಲ್ಲಿ ಪರಿಹಾರ ನೀಡದ ಕಾರಣ 40 ಲಕ್ಷ ರೈತರಿಗೆ ರಾಜ್ಯ ಸರಕಾರವೇ ಎಸ್‌ಡಿಆರ್‌ಎಫ್ ನಿಧಿಯಡಿ 2,451 ಕೋಟಿ ರು. ಬರಗಾಲ ಪರಿಹಾರ ನೀಡಿದೆ. ಇದು ದೇಶದಲ್ಲಿ ದೊಡ್ಡ ಮೊತ್ತದ ಪರಿಹಾರ ಆಗಿದೆ ಎಂದು ಕಂದಾಯ ಸಚಿವರು ಹೇಳಿದರು.

ವಿಶ್ವವಾಣಿ

ಸಂಪಾದಕೀಯ

ಇಸ್ರೋ ಸಾಧನೆಗೆ ಮತ್ತೊಂದು ಗರಿ

ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ) ಮತ್ತೊಮ್ಮೆ ನಮ್ಮೆಲ್ಲರ ಅಭಿಮಾನಕ್ಕೆ ಪಾತ್ರವಾಗಿದೆ. 'ಪುಷ್ಪಕ್' ಹೆಸರಿನ ಮರುಬಳಕೆ ಮಾಡಬಹುದಾದ ಉಡಾವಣಾ ವಾಹನದ (ಶ್ಚ ಔಉಗಿ03) ಮೂರನೇ ಹಾಗೂ ಅಂತಿಮ ಪ್ರಯೋಗ ಯಶಸ್ವಿಯಾಗಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ಜೂನ್ 23ರಂದು ನಡೆಸಿದ ಪ್ರಯೋಗ ಯಶಸ್ವಿಯಾಗಿದ್ದು, ವಿಶ್ವ ಬಾಹ್ಯಾಕಾಶ ಭೂಪಟದಲ್ಲಿ ಭಾರತದ ಹೆಸರು ಮತ್ತೊಮ್ಮೆ ರಾರಾಜಿಸುವಂತಾಗಿದೆ. 2023ರಲ್ಲಿ ಮೊದಲ ಪ್ರಯೋಗ ಮತ್ತು ಕಳೆದ ಮಾರ್ಚ್ ತಿಂಗಳಲ್ಲಿ 2ನೇ ಪ್ರಯೋಗ ಕಾರ್ಯಾಚರಣೆಯನ್ನು ಇಸ್ರೋ ಯಶಸ್ವಿಯಾಗಿ ನಡೆಸಿತ್ತು. ಸ್ವದೇಶಿ ಗಗನ ನೌಕೆ ಪುಷ್ಪಕ್ ಸೇರ್ಪಡೆಯಿಂದಾಗಿ ಇಸ್ರೋದ ಉಡಾವಣಾ ವೆಚ್ಚ ಭಾರಿ ಪ್ರಮಾಣದಲ್ಲಿ ಕಡಿಮೆಯಾಗಲಿದೆ. ಪುಷ್ಪಕ್ ಲಾಂಚಿಂಗ್ ವಾಹನವನ್ನು ಮರುಬಳಕೆ ಮಾಡಬಹುದಾಗಿದ್ದು, ಭವಿಷ್ಯದಲ್ಲಿ ಈ ವಾಹನ ಮತ್ತೆ ಹೊಸ ಉಪಗ್ರಹಗಳನ್ನು ಹೊತ್ತು ಬಾಹ್ಯಾಕಾಶಕ್ಕೆ ಚಿಮ್ಮಲಿದೆ. ಇಸ್ರೋದ ಬಾಹ್ಯಾಕಾಶ ಯೋಜನೆಗಳಲ್ಲಿ ಇದು ಪ್ರಮುಖ ಮೈಲಿಗಲ್ಲು ಎಂದು ಗುರುತಿಸಲಾಗಿದೆ. ಇದುವರೆಗೆ ಇಸ್ರೋ ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಒಯ್ಯುತ್ತಿದ್ದ ರಾಕೆಟ್‌ಗಳು ನಿಗದಿತ ಕಕ್ಷೆ ತಲುಪಿದ ಬಳಿಕ ಉರಿದು ಬೂದಿಯಾಗುತ್ತಿದ್ದವು. ಕೋಟ್ಯಂತರ ವೆಚ್ಚದ ಅದರ ಬಿಡಿಭಾಗಗಳು ಕಳಚಿ ಸಾಗರಕ್ಕೆ ಬೀಳುತ್ತಿದ್ದವು. ಇನ್ನು ಮುಂದೆ ಪುಷ್ಪಕ್, ಉಪಗ್ರಹಗಳನ್ನು ಅಂತರಿಕ್ಷಕ್ಕೆ ತಲುಪಿಸಿ ಮರಳಿ ಭೂಮಿಯಲ್ಲಿನ ತನ್ನ ನಿಗದಿತ ಗಮ್ಯ ಸೇರಲಿದೆ. ಇದರಿಂದ ಇಸ್ರೋದ ಉಪಗ್ರಹ ಉಡ್ಡಯನ ವೆಚ್ಚ ಶೇ.80ರಷ್ಟು ಕಡಿಮೆಯಾಗಲಿದೆ ಎಂದು ಹೇಳಲಾಗಿದೆ. ಸಾಮಾನ್ಯ ರಾಕೆಟ್‌ನಲ್ಲಿ 1 ಕೆಜಿ ಸ್ಯಾಟಲೈಟ್ ಪೇಲೋಡನ್ನು ಕಕ್ಷೆಗೆ ಕೂರಿಸಲು ತಗುಲುತ್ತಿರುವ ವೆಚ್ಚ ಕನಿಷ್ಠ 4.17 ಲಕ್ಷ ರೂಪಾಯಿ. ಮರು ಬಳಸಲ್ಪಡುವ ರಾಕೆಟ್‌ನಲ್ಲಿ 1 ಕೆಜಿ ಸ್ಯಾಟಲೈಟ್ ಪೇಲೋಡ್‌ಗೆ ತಗುಲುವ ವೆಚ್ಚ ಕೇವಲ 41,717 ರೂಪಾಯಿ. ಸಾವಿರಾರು ಕಿಲೋ ತೂಕದ ಉಪಗ್ರಹಗಳ ಉಡ್ಡಯನದಲ್ಲಿ ಆಗುವ ಉಳಿತಾಯವನ್ನು ನಾವು ಈ ಮೂಲಕ ಅಂದಾಜಿಸಬಹುದು.ಅಮೆರಿಕದ ಕೊಲಂಬಿಯಾ, ಚಾಲೆಂಜರ್, ಡಿಸ್ಕವರಿ ಹೆಸರಿನ ಉಡ್ಡಯನ ನೌಕೆಗಳ ಬಗ್ಗೆ, ರಷ್ಯಾದ ಸೂಯೆಜ್ ನೌಕೆಯ ಬಗ್ಗೆ ನಾವು ಬಹಳಷ್ಟು ಕೇಳಿದ್ದೇವೆ. ಆದರೆ ಅಮೆರಿಕ ಈಗ ಎಲಾನ್ ಮಸ್ಕ್ ಒಡೆತನದ 'ಸ್ಪೇಸ್ ಎಕ್ಸ್'ನ ಮರುಬಳಕೆಯ ರಾಕೆಟ್‌ಗಳನ್ನೇ ಹೆಚ್ಚು ನೆಚ್ಚಿಕೊಂಡಿದ್ದು, ಇದರ ನಡುವೆ, ಇಸ್ರೋ ಹೊಸ ತಂತ್ರಜ್ಞಾನದ ಗಗನ ನೌಕೆಯನ್ನು ನಿರ್ಮಿಸಿ, ಸ್ವಾವಲಂಬನೆಯತ್ತ ಹೆಜ್ಜೆ ಹಾಕಿರುವುದು ದಿಟ್ಟ ನಡೆಯಾಗಿದೆ. ಇಸ್ರೋಗೆ ಈ ಹಿಂದಿನ ಯೋಜನೆಗಳಲ್ಲಿ ಸಿಕ್ಕ ಗೆಲುವು ಇಲ್ಲೂ ಲಭ್ಯವಾಗಲಿ ಎಂದು ಹಾರೈಸೋಣ.

ಸೊಂಪಾದಕೀಯ

ಬ್ರದರ್ಸ್ ಮ್ಯಾಟರ್

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಮಾತನಾಡುವಾಗ ಯಾವಾಗಲೂ ಸಹಜವಾಗಿ ಬ್ರದರ್ ಅಂತ ಸಂಭೋದನೆ ಮಾಡುತ್ತಾರೆ. ಆದರೆ ಈಗ ಅವರ ಕುಟುಂಬದಲ್ಲಿ ಅವರ ಸೋದರ ರೇವಣ್ಣ ಅವರ ಇಬ್ಬರು ಮಕ್ಕಳು ಅಂದರೆ ಸ್ವಂತ ಬ್ರದರ್ಸ್ ಈಗ ಕೆಟ್ಟ ಕಾರಣಗಳಿಗೆ ಸುದ್ದಿಯಲ್ಲಿದ್ದಾರೆ. ಅಷ್ಟೇ ಅಲ್ಲ ಇಬ್ಬರೂ ಕೂಡ ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದಾರೆ. ಒಂದೇ ಮನೆಯ ಇಬ್ಬರು ಮಕ್ಕಳು ಅದರಲ್ಲೂ ಅಣ್ಣ ತಮ್ಮಂದಿರು ಇಬ್ಬರೂ ಈಗ ಸೆರೆಮನೆಯಲ್ಲಿ ಇರುವುದು ಒಂದು ವಿಶೇಷ ಸಂಗತಿ ಅಂತಲೇ ಹೇಳಬಹುದು. ರೇವಣ್ಣ ಅವರು ಯಾವಾಗಲೂ ತಮ್ಮ ಎರಡು ಕೈಯಲ್ಲಿ ನಿಂಬೆಹಣ್ಣುಗಳನ್ನು ಇಟ್ಟುಕೊಂಡಿರುತ್ತಾರೆ ಎನ್ನುವುದು ಅವರ ಬಗೆಗಿನ ತಮಾಷೆಯ ಮಾತು. ಅದು ಕೊಂಚ ಮಟ್ಟಿಗೆ ಸತ್ಯ ಕೂಡ ಹೌದು. ಆದರೆ ಈಗಿನ ಪರಿಸ್ಥಿತಿ ನೋಡಿದರೆ ರೇವಣ್ಣ ಅವರ ಕೈಯಲ್ಲಿರುವ ಎರಡು ನಿಂಬೆಹಣ್ಣುಗಳು ಯಾವುದೇ ಕೆಲಸ ಮಾಡುತ್ತಿಲ್ಲ ಎನಿಸುತ್ತದೆ. ಹಣ್ಣುಗಳು ಬಿಡಿ ಎರಡು ಕಣ್ಣುಗಳಂತಿದ್ದ ಇಬ್ಬರು ಮಕ್ಕಳು ಜೈಲಿಗೆ ಸೇರಿರುವುದು ಅವರಿಗೆ ಆಘಾತ ತಂದಿದೆ. ಜೊತೆಗೆ ಒಬ್ಬ ಮಗನ ಕೇಸಿನಲ್ಲಿ ರೇವಣ್ಣ ಮತ್ತು ಅವರ ಪತ್ನಿ ಭವಾನಿಯವರಿಗೂ ಕಂಟಕ ಎದುರಾಗಿತ್ತು. ಹಾಗಾಗಿ ರೇವಣ್ಣ ಅವರ ಇಡೀ ಕುಟುಂಬ ಈಗ ಕಾನೂನಿನ ಕಪಿಮುಷ್ಠಿಯಲ್ಲಿ ಇದೆ ಎಂದರೆ ತಪ್ಪಾಗಲಾರದು. ರೇವಣ್ಣ ಅವರ ನಿಂಬೆಹಣ್ಣುಗಳ ವಿಷಯ ಒಂದು ಕಡೆ ಇರಲಿ, ಪಾಪ ಈ ಕಡೆ ಹಣ್ಣು ಹಣ್ಣು ಮುದುಕರಾಗಿರುವ ಹಿರಿಯ ರಾಜಕಾರಣಿ ದೇವೇಗೌಡರಿಗೆ ಮಾತ್ರ, ಈ ಪರಿಸ್ಥಿತಿಯ ಬಗ್ಗೆ ಏನು ಹೇಳಲಾಗದೆ ಬಿಡಲಾಗದೆ ಇರುವಂತೆ ಆಗಿರೋದು ವಿಪರ್ಯಾಸ. ಸೆರೆಯಲ್ಲಿರುವ ಇಬ್ಬರ ಪೈಕಿ ಪ್ರಜ್ವಲ್ ರೇವಣ್ಣ ಅವರದು ಸೀರೆ ಹಿಂದೆ ಹೋಗಿದ್ದಾರೆ ಎನ್ನುವ ಲೈಂಗಿಕ ಕಿರುಕುಳದ ಸ್ಟ್ರೇಟ್ ಹಿಟ್ ಕೇಸ್. ಆದರೆ ರೇವಣ್ಣ ಅವರ ಇನ್ನೊಬ್ಬ ಪುತ್ರ ಸೂರಜ್ ರೇವಣ್ಣ ಅವರದು ಮಾತ್ರ 'ಸ್ಟ್ರೈಟ್' ಹಿಟ್ ಎನ್ನುವಂತಿಲ್ಲ. ಯಾಕೆಂದರೆ ಅದು ಸಲಿಂಗ ಕಾಮಕ್ಕೆ ಸಂಬಂಧಪಟ್ಟ ಕೇಸು. ಒಟ್ಟಿನಲ್ಲಿ ಕಾಮಕ್ಕೆ ಸಂಬಂಧಪಟ್ಟಂತೆ ರೇವಣ್ಣ ಅವರ ಇಬ್ಬರು ಪುತ್ರರು ಸದ್ಯಕ್ಕೆ ಸಿಕ್ಕಾಪಟ್ಟೆ ಸಂಕಷ್ಟದಲ್ಲಿದ್ದಾರೆ. ಇದಕ್ಕೆಲ್ಲ ಫುಲ್ ಸ್ಟಾಪ್ ಸಿಗೋದು ಯಾವಾಗ ಅಂತ ಯಾರಿಗೂ ಗೊತ್ತಿಲ್ಲ.

ಸಂಪಾದಕರ ಸದ್ಯಶೋಧನೆ

ಹನೋಯ್ ಸ್ಟ್ರೀಟ್ ಟ್ರೈನ್

ವಿಯೆಟ್ನಾಮಿನ ರಾಜಧಾನಿ ಹನೋಯ್‌ಗೆ ಹೋದವರು ಆ ನಗರವನ್ನೆಲ್ಲ ಸುತ್ತಿ ಟ್ರೈನ್ ಸ್ಟ್ರೀಟ್ ನೋಡದೇ ಬಂದರೆ ನಿರರ್ಥಕ. ನಗರದ ಮಧ್ಯಭಾಗದಲ್ಲಿ ಇಕ್ಕಟ್ಟಾದ ಬೀದಿ ಮಧ್ಯೆ ರೈಲು ವೇಗವಾಗಿ ಹಾದುಹೋಗುತ್ತದೆ. ಅದು ನಮ್ಮ ಮೈಯನ್ನು ಸವರಿಕೊಂಡಷ್ಟು ಹತ್ತಿರದಲ್ಲಿ ಹಾದುಹೋಗುತ್ತದೆ. ರೈಲು ಹಾದುಹೋಗುವ ತನಕ ಉಸಿರು ಬಿಗಿಹಿಡಿದು ಕುಳಿತಿರಬೇಕು. ನಿಜಕ್ಕೂ ಭಯವಾಗುತ್ತದೆ. ರೈಲಿಗೂ ನಮಗೂ ಹೆಚ್ಚೆಂದರೆ ಒಂದು ಅಡಿ ಅಂತರವಿರಬಹುದು. ರೈಲು ಬರುವುದಕ್ಕಿಂತ ಮುನ್ನ ಹಳಿಯೇ ಮಾರುಕಟ್ಟೆ. ಜನ ಹಳಿಯ ಮೇಲೆ ಮನಸೋ ಇಚ್ಛೆ ಓಡಾಡುತ್ತಿರುತ್ತಾರೆ. ಹಳಿಯ ಇಕ್ಕೆಲಗಳಲ್ಲಿ ಕುರ್ಚಿ ಹಾಕಿಕೊಂಡು ಕಾಫಿ, ಬಿಯರು ಹೀರುತ್ತಾ ಕುಳಿತಿರುತ್ತಾರೆ. ಇನ್ನೇನು ರೈಲು ಆಗಮಿಸಲು ಐದು ನಿಮಿಷಗಳಿವೆ ಎನ್ನುವಾಗ ಅಂಗಡಿಯವರು ಬಂದು ಟೇಬಲನ್ನು ಮಡಚಿ ಅಲ್ಲಿಯೇ ಇಟ್ಟು, ಹಳಿಯಿಂದ ಒಂದು ಅಡಿ ಹಿಂದಕ್ಕೆ ಜರುಗುವಂತೆ ನಮಗೆ ಹೇಳುತ್ತಾರೆ. ಕಾಲನ್ನು ಹಿಂದಕ್ಕೆ ಎಳೆದು ಕುಳಿತುಕೊಳ್ಳುವಂತೆ ಎಚ್ಚರಿಸುತ್ತಾರೆ. ಅಷ್ಟು ಹೊತ್ತಿಗೆ ಸೈರನ್ ಮೊಳಗಿಸುತ್ತಾ ರೈಲು ಆಗಮಿಸುತ್ತದೆ. ರೈಲು ಅಷ್ಟು ಹತ್ತಿರದಲ್ಲಿ ಮತ್ತು ಅಷ್ಟು ವೇಗವಾಗಿ ಹಾದು ಹೋಗಬಹುದು ಎಂಬ ಕಲ್ಪನೆಯೂ ನಮಗಿರುವುದಿಲ್ಲ. ಸುಮಾರು 15 ಬೋಗಿಗಳಿರುವ ರೈಲು ಹಾದುಹೋಗುವ ತನಕ ಜೀವವನ್ನು ಕೈಯಲ್ಲಿಟ್ಟುಕೊಳ್ಳಬೇಕು! ಅಷ್ಟು ಭಯವಾಗುತ್ತದೆ. ಈ ಟ್ರೈನ್ ಸ್ಟ್ರೀಟನ್ನು ಸುಮಾರು 125 ವರ್ಷಗಳ ಹಿಂದೆಯೇ ನಿರ್ಮಿಸಲಾಗಿದೆಯಂತೆ. ದಿನಕ್ಕೆ 2 ಸಲ (ಮಧ್ಯಾಹ್ನ 3 ಮತ್ತು ಸಾಯಂಕಾಲ 7 ಗಂಟೆಗೆ) ಈ ಹಳಿಯ ಮೇಲೆ ರೈಲು ಆಗಮಿಸುತ್ತದೆ. ಅದನ್ನು ನೋಡಲು ಅರ್ಧ-ಮುಕ್ಕಾಲು ಗಂಟೆಯ ಮುನ್ನವೇ ಆಗಮಿಸಿ ಸೀಟು ಕಾದಿರಿಸಬೇಕು. ಹನೋಯ್ ಟ್ರೈನ್ ಸ್ಟ್ರೀಟ್ ಇರುವುದು ಕೇವಲ 300 ಮೀಟರ್ ಉದ್ದ. ಅದಿಷ್ಟೇ ಇಕ್ಕಟ್ಟಾದ ಜಾಗದಲ್ಲಿ ಮನೆಗಳ ಸಾಲಿನ ಮಧ್ಯೆ ರೈಲು ಹಾದುಹೋಗುತ್ತದೆ. ಎಲ್ಲ ಮನೆಗಳೂ ಕಾಫಿ, ತಿಂಡಿ, ಜ್ಯೂಸು, ಎಳನೀರು... ಮಾರಾಟ ಮಾಡುವ ಅಂಗಡಿಗಳೇ. ಆ 300 ಮೀಟರ್ ಉದ್ದದಲ್ಲಿ, ಜೀವನದಲ್ಲಿ ರೈಲನ್ನೇ ನೋಡಿಲ್ಲವೇನೋ ಎಂಬಂತೆ ಜನ ಅದರ ಆಗಮನಕ್ಕಾಗಿ ಕುಳಿತಿರುತ್ತಾರೆ. ಅಷ್ಟು ಉದ್ದದ ರೈಲು ಹಳಿಯನ್ನೇ ಪ್ರೇಕ್ಷಣೀಯ ಸ್ಥಳವನ್ನಾಗಿ ರೂಪಿಸಿರುವುದು ವೈಶಿಷ್ಟ್ಯ. ರೈಲು ಹಾದುಹೋಗುತ್ತಿದ್ದಂತೆ, ಮೊದಲಿನ ಸ್ಥಿತಿ. ಮುಂದಿನ ರೈಲು ಆಗಮಿಸುವ ತನಕ ಅದು ಜನನಿಬಿಡ ಮಾರುಕಟ್ಟೆ. ಹನೋಯ್‌ದಲ್ಲಿ ಎರಡು ಟ್ರೈನ್ ಸ್ಟ್ರೀಟ್‌ಗಳಿವೆ. ಆ ಪೈಕಿ ಓಲ್ಡ್ ಕ್ವಾರ್ಟರ್ ಟ್ರೈನ್ ಸ್ಟ್ರೀಟ್ ಹೆಚ್ಚು ಜನಪ್ರಿಯ. ಅದಕ್ಕೆ ಕಾರಣವೆಂದರೆ, ಅಲ್ಲಿ ಹೆಚ್ಚು ಕಾಫಿ, ಬಿಯರ್‌ಗಳನ್ನು ನೀಡುವ ಕೆಫೆ ಮತ್ತು ರೆಸ್ಟೋರೆಂಟುಗಳಿವೆ. ಒಂದು ಕಾಲಕ್ಕೆ ಈ ಹಳಿಗಳ ಅಕ್ಕಪಕ್ಕದಲ್ಲಿರುವ ಮನೆಗಳು ರೈಲ್ವೆ ಸಿಬ್ಬಂದಿಗೆ ಮತ್ತು ಕಾರ್ಮಿಕರುಗಳಿಗೆ ಸೇರಿದವಾಗಿದ್ದವು. ಕಾಲಕ್ರಮೇಣ ಈ ಹಳಿಗಳು ಪ್ರೇಕ್ಷಣೀಯ ಸ್ಥಳಗಳಾಗಿ ಮಾರ್ಪಟ್ಟವು. ಕಳೆದ 20 ವರ್ಷಗಳಲ್ಲಿ ಇದು ಹನೋಯ್ ನಗರದ ಪ್ರಮುಖ ಪ್ರೇಕ್ಷಣೀಯ ತಾಣಗಳ ಪಟ್ಟಿಯಲ್ಲಿ ಸೇರಿಹೋಯಿತು. ಯಾವಾಗ ಸಾಮಾಜಿಕ ಜಾಲತಾಣಗಳು ಜನಪ್ರಿಯವಾದವೋ, ಇನ್ಸ್ಟಾಗ್ರಾಮ್ ಮತ್ತು ಫೇಸ್‌ಬುಕ್‌ಗಳಲ್ಲಿ ಇಲ್ಲಿನ ಫೋಟೋಗಳನ್ನು ನೆಟ್ಟಿಗರು ಹೆಚ್ಚಿನ ಸಂಖ್ಯೆಯಲ್ಲಿ ಶೇರ್ ಮಾಡಿಕೊಳ್ಳಲು ಆರಂಭಿಸಿದರೋ, ಆ ರೈಲ್ವೆ ಹಳಿಯ ಖದರೇ ಬದಲಾಗಿಬಿಟ್ಟಿತು. ಈ ಹಳಿಯ ಮೇಲೆ ಕುಳಿತು ಫೋಟೋ ತೆಗೆಸಿಕೊಳ್ಳಲೆಂದೇ ಪ್ರವಾಸಿಗರು ಆಗಮಿಸಲಾರಂಭಿಸಿದರು. ಹಳಿಯ ಪಕ್ಕದಲ್ಲಿ ಆಹಾರ ಸೇವಿಸುತ್ತಾ, ಕಾಫಿ/ಬಿಯರು ಹೀರುತ್ತಾ ಟ್ರೈನ್ ಆಗಮಿಸುವುದನ್ನು ನೋಡುವುದೇ ಒಂದು ರಂಜನೀಯ ಚಟುವಟಿಕೆಯಾಗಿ ಪರಿಣಮಿಸಿತು. ಮಧ್ಯಾಹ್ನ 3 ಗಂಟೆಗೆ ಆಗಮಿಸುವ ಟ್ರೈನನ್ನು ನೋಡಲು ಜನ ಒಂದು ತಾಸು ಮೊದಲೇ ಬರುವುದು ಸಾಮಾನ್ಯ. ಟ್ರೈನು ಹೋದ ನಂತರ ಜನ ಖಾಲಿ. ಅಲ್ಲಿ ಸಂಚರಿಸುವ ಎರಡು ಟ್ರೈನುಗಳನ್ನು ನೋಡಲು ವಿಶ್ವದೆಲ್ಲೆಡೆಗಳಿಂದ ಪ್ರವಾಸಿಗರು ಆಗಮಿಸುತ್ತಾರೆ ಎಂಬುದು ಗಮನಾರ್ಹ.

ಕಠಿಣ ಕ್ರಮವಿಲ್ಲದಿದ್ದರೆ ಇನ್ನಷ್ಟು ಪರೀಕ್ಷಾ ಅಕ್ರಮ ಖಚಿತ

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ರಾಷ್ಟ್ರಮಟ್ಟದಲ್ಲಿ ಕಳೆದೊಂದು ವಾರದಿಂದ ಬಹುಚರ್ಚಿತ ಹಾಗೂ ಬಹು ವಿವಾದಿತ ವಿಷಯವೆಂದರೆ, ಪರೀಕ್ಷೆಗಳ ಸಾಲುಸಾಲು ಅಕ್ರಮದ ಆರೋಪ. ಆರಂಭದಲ್ಲಿ ವೈದ್ಯಕೀಯ ಪ್ರವೇಶಕ್ಕಿರುವ ನೀಟ್‌ನಲ್ಲಿನ ಅಕ್ರಮ ಬೆಳಕಿಗೆ ಬಂದು, ಮರುಪರೀಕ್ಷೆ ನಡೆಸಲು ಸುಪ್ರೀಂ ಕೋರ್ಟ್ ಸೂಚಿಸಿತ್ತು. ಇದಾದ ಕೆಲವೇ ದಿನಗಳಲ್ಲಿ ಉಪನ್ಯಾಸ ಹುದ್ದೆಯ 'ಅರ್ಹತೆ'ಗೆ ನಡೆಯುವ ಯುಜಿಸಿ ನೆಟ್‌ನಲ್ಲಿ 'ಪಾರದರ್ಶಕ' ಕೊರತೆ ಎನ್ನುವ ಕಾರಣಕ್ಕೆ ಇಡೀ ಪರೀಕ್ಷೆಯನ್ನೇ ರದ್ದುಗೊಳಿಸಿ ಮರು ಪರೀಕ್ಷೆಗೆ ಮುಂದಾಗಿದೆ. ಪರೀಕ್ಷಾ ಅಕ್ರಮ, ಪ್ರಶ್ನೆ ಪತ್ರಿಕೆ ಸೋರಿಕೆ ದೇಶದ ಜನರಿಗೆ ಹೊಸದಲ್ಲ. ಆದರೆ ಅತಿ ವಿಶ್ವಾಸವಿಟ್ಟಿರುವ ಸಂಸ್ಥೆಗಳಿಂದ ನಡೆದ ಪರೀಕ್ಷೆಗಳಿಗೂ ಈ 'ಅಕ್ರಮ'ದ ಭೂತ ಮೆಟ್ಟಿರುವುದು ಅನೇಕರ ಅಚ್ಚರಿ ಹಾಗೂ ಆತಂಕಕ್ಕೆ ಕಾರಣವಾಗಿದೆ.

ನೀಟ್, ಯುಜಿಸಿ ನೆಟ್ ಸೇರಿದಂತೆ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ವತಿಯಿಂದ ನಡೆಸಲಾಗುತ್ತದೆ. ಸಾಮಾನ್ಯವಾಗಿ ಎನ್‌ಟಿಎ ವತಿಯಿಂದ ನಡೆಯುವ ಪರೀಕ್ಷೆಗಳೆಂದರೆ, ಶಿಸ್ತು, ಪಾರದರ್ಶಕ ಹಾಗೂ ಕಠಿಣ ನಿಯಮಗಳಲ್ಲಿ ನಡೆಯುತ್ತವೆ ಎನ್ನುವ ನಂಬಿಕೆಯಿದೆ. ಅದಕ್ಕೆ ಪೂರಕವಾಗಿ ಪರೀಕ್ಷೆಯ ದಿನ ಕೊಠಡಿಯೊಳಗೆ ಅಭ್ಯರ್ಥಿಗಳನ್ನು ಬಿಡುವಾಗ ಮಾಡುವ 'ಸ್ಟ್ರಿಕ್ಟ್' ಪರಿಶೀಲನೆಯೂ ಅನೇಕರಿಗೆ ಕಿರಿಕಿರಿಯನ್ನು ಮಾಡಿದರೂ, ಪಾರದರ್ಶಕತೆಯ ಕಾರಣಕ್ಕೆ ಬಹುತೇಕರು ಇದನ್ನು ಒಪ್ಪಿಕೊಳ್ಳುತ್ತಾರೆ. ಅಂತಹ ಕಠಿಣಾತಿಕಠಿಣ ಪ್ರಕ್ರಿಯೆಗಳನ್ನು ಅಳವಡಿಸುವ ಎನ್‌ಟಿಎದಿಂದ ನಡೆದಿರುವ ಪರೀಕ್ಷೆಯಲ್ಲಿಯೂ 'ಭಾರಿ ಅವ್ಯವಹಾರ' ನಡೆದಿರುವುದು ಅನೇಕರಿಗೆ ಹುಬ್ಬೇರುವಂತೆ ಮಾಡಿದೆ.

ಹಾಗೇ ನೋಡಿದರೆ, ದೇಶದಲ್ಲಿ ನಡೆದಿರುವ ಪರೀಕ್ಷೆಗಳಲ್ಲಿ ಅಕ್ರಮ ನಡೆದಿರುವುದು ಇದೇ ಮೊದಲಲ್ಲ. ಕರ್ನಾಟಕದಲ್ಲಿಯೇ ಕಳೆದ ವರ್ಷ ಪಿಎಸ್‌ಐ, ಪಿಡಬ್ಲ್ಯೂಡಿ ಎಂಜಿನಿಯರ್‌ಗಳ ನೇಮಕದಲ್ಲಿನ ಅಕ್ರಮ ಸೇರಿದಂತೆ ಹಲವು ಅಕ್ರಮಗಳು ಬೆಳಕಿಗೆ ಬಂದಿದ್ದು, ಈ ಎಲ್ಲವೂ ಇನ್ನು ತನಿಖಾ ಹಂತದಲ್ಲಿವೆ. ಇನ್ನು ಇದೇ ವರ್ಷ ಸಿಇಟಿ ಪರೀಕ್ಷೆಯಲ್ಲಿನ ಎಡವಟ್ಟು, ಕೆಲ ವರ್ಷದ ಹಿಂದೆ ಪಿಯುಸಿಯ ಒಂದೇ ವಿಷಯದ ಪ್ರಶ್ನೆ ಪತ್ರಿಕೆ ಮೂರು ಬಾರಿ ಸೋರಿಕೆಯಾಗಿದ್ದರಿಂದ ಪರೀಕ್ಷೆ ಮುಂದಕ್ಕೆ ಹೋಗಿದ್ದು... ಹೀಗೆ ಸಾಲು ಸಾಲು ಆರೋಪಗಳು ಪಟ್ಟಿ ಕೇವಲ ಕರ್ನಾಟಕಕ್ಕೆ ಸೀಮಿತವಾಗಿಲ್ಲ. ಪಶ್ಚಿಮ ಬಂಗಾಳದಲ್ಲಿ ಶಿಕ್ಷಕರ ನೇಮಕದಲ್ಲಿನ ಅಕ್ರಮಕ್ಕೆ, ಇಡೀ ಪ್ರಕ್ರಿಯೆಯನ್ನೇ ರದ್ದುಗೊಳಿಸಿದ್ದ ಘಟನೆ ತೀರಾ ಇತ್ತೀಚೆಗೆ ನಡೆದಿತ್ತು. ಇದೇ ರೀತಿ ಬಿಹಾರ, ಉತ್ತರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ವರ್ಷಕ್ಕೊಂದರಂತೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿಯ ಅಕ್ರಮದ ವಾಸನೆ ಕೇಳಿಬಂದಿವೆ, ಬರುತ್ತಿವೆ. ಇವುಗಳನ್ನು ಹೊರತುಪಡಿಸಿ, ದೇಶಾದ್ಯಂತ ನಡೆಯುವ 10ನೇ ಹಾಗೂ 12ನೇ ತರಗತಿ ಪರೀಕ್ಷೆಯ ಸಮಯದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದ್ದಾಗ್ಗೆ ಕೇಳಿಬರುವುದು ಸಹಜ.

ಆದರೆ ಕೇಂದ್ರ ಸರಕಾರದಿಂದ ನಡೆಯುವ ಪರೀಕ್ಷೆಗಳಲ್ಲಿ ಸಾಮಾನ್ಯವಾಗಿ ಈ ರೀತಿಯ ಆರೋಪ ಕೇಳಿಬರುತ್ತಿರಲಿಲ್ಲ. ಯುಪಿಎಸ್‌ಸಿ ಪರೀಕ್ಷೆಯ ಬಳಿಕ, 'ಅತಿ' ಪಾರದರ್ಶಕವಾಗಿ ಪರೀಕ್ಷೆ ನಡೆಯುವುದೇ ಎನ್‌ಟಿಎದಿಂದ ನಡೆಯುವ ಪರೀಕ್ಷೆಗಳು ಎನ್ನುವ ಮಾತುಗಳಿದ್ದವು. ಆದರೆ ಈ ಬಾರಿ ನೀಟ್‌ನಲ್ಲಿನ ಎಡವಟ್ಟು, ಒಂದುವರೆ ಸಾವಿರ ವಿದ್ಯಾರ್ಥಿಗಳ ಮರುಪರೀಕ್ಷೆ ಎನ್‌ಟಿಎದ ಪ್ರಕ್ರಿಯೆಯನ್ನು ಅನುಮಾನದಿಂದ ನೋಡುವಂತೆ ಮಾಡಿತ್ತು. ಆ ಪ್ರಕರಣದ ವಿವಾದ, ವಿಚಾರಣೆ ಮುಗಿಯುವ ಮೊದಲೇ, ಯುಜಿಸಿ ನೆಟ್ ಪರೀಕ್ಷೆಯಲ್ಲಿಯೇ 'ಕಾಂಪ್ರಮೈಸ್' ಆಗಿದೆ ಎನ್ನುವ ಕಾರಣಕ್ಕೆ ಇಡೀ ಪರೀಕ್ಷೆಯನ್ನೇ ರದ್ದುಗೊಳಿಸಿ ಮರುಪರೀಕ್ಷೆ ನಡೆಸುವ ತೀರ್ಮಾನಕ್ಕೆ ಕೇಂದ್ರ ಸರಕಾರ ಬಂದಿತ್ತು. ಇದಿಷ್ಟೇ ಅಲ್ಲದೇ, ಪ್ರಕರಣಗಳನ್ನು ಸಿಬಿಐನಿಂದ ತನಿಖೆ ನಡೆಸಲು ಮುಂದಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಪರೀಕ್ಷಾ ಪ್ರಕ್ರಿಯೆ, ವಿದ್ಯಾರ್ಥಿಗಳು ಪಡೆಯುತ್ತಿರುವ ಅಂಕಗಳನ್ನು ಗಮನಿಸಿದರೆ ಅನೇಕರು, ಪರೀಕ್ಷಾ ಮೌಲ್ಯವೇ ಕಳೆದುಕೊಳ್ಳುತ್ತಿವೆ ಎನ್ನುವ ಆರೋಪವನ್ನು ಮಾಡುತ್ತಿದ್ದಾರೆ. ಅದರಲ್ಲಿಯೂ 'ಔಟ್ ಆಫ್ ಔಟ್' ಎನ್ನುವ ಸಂಸ್ಕೃತಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಹಾಗೂ ವಿಜ್ಞಾನ, ವಾಣಿಜ್ಯೇತರ ವಿಷಯಗಳಲ್ಲಿ ವಿದ್ಯಾರ್ಥಿಗಳು ಪಡೆಯುತ್ತಿರುವುದರಿಂದ ಮೌಲ್ಯಮಾಪನದ ಮೇಲೆಯೇ ಅನೇಕರು ಅನುಮಾನಗಳನ್ನು ವ್ಯಕ್ತಪಡಿಸಿದ್ದರು. ಮತ್ತೊಂದು ಕಡೆ ರಾಜ್ಯ ಸರಕಾರಗಳು ನಡೆಸುವ ಔದ್ಯೋಗಿಕ ಪರೀಕ್ಷೆಗಳಲ್ಲಿನ ಗೋಲ್‌ಮಾಲ್‌ಗಳು ಒಂದೊಂದೇ ಹೊರಬರುತ್ತಿದ್ದಂತೆ, ಪ್ರತಿ ಪರೀಕ್ಷೆಯನ್ನೂ 'ಭ್ರಷ್ಟಾಚಾರ'ದ ಕನ್ನಡಕದಲ್ಲಿಯೇ ನೋಡುವ ಪರಿಸ್ಥಿತಿಗೆ ಈಗಾಗಲೇ ಬಂದಿದ್ದೇವೆ. ಈ ಎಲ್ಲದರ ಹೊರತಾಗಿಯೂ ಎನ್‌ಟಿಎ ಸಂಸ್ಥೆ ನಡೆಸುವ ಪರೀಕ್ಷೆಗಳ ಮೇಲೆ ಈಗಲೂ ಜನ ವಿಶ್ವಾಸ ಉಳಿಸಿಕೊಂಡಿದ್ದಾರೆ. ಅದನ್ನು ಹಾಗೇ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪರೀಕ್ಷಾ ಏಜೆನ್ಸಿಗಳು ಕಾರ್ಯನಿರ್ವಹಿಸಬೇಕಿದೆ.

ಯಾವುದೇ ಪರೀಕ್ಷೆಗಳಲ್ಲಿ ಅಕ್ರಮ ನಡೆದರೆ, ಅದು ಅಕ್ಷಮ್ಯ. ಶಾಲಾ, ಕಾಲೇಜು ಹಂತಗಳಲ್ಲಿ ನಡೆಯುವ ಅಕ್ರಮದಿಂದ ವಿದ್ಯಾರ್ಥಿಗಳಿಗೆ ಪೆಟ್ಟು ಬೀಳುತ್ತದೆ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಆದರೆ ಅದರ ಪರಿಣಾಮ ದೀರ್ಘಾವಧಿಗೆ ಇರುವುದಿಲ್ಲ. ಆದರೆ ಔದ್ಯೋಗಿಕ ಪರೀಕ್ಷೆಗಳಲ್ಲಿ ಈ ರೀತಿಯ ಅಕ್ರಮ ನಡೆದರೆ ಅರ್ಹ ಅಭ್ಯರ್ಥಿಗಳ ಕೆಲಸವನ್ನು ಕಸಿದುಕೊಂಡ ರೀತಿಯಾಗುತ್ತದೆ. ಅದೇ ವೈದ್ಯಕೀಯ ಸೀಟು ಪಡೆಯುವ ನೀಟ್, ಉಪನ್ಯಾಸಕರ ಹುದ್ದೆಗೆ ಅತ್ಯಾವಶ್ಯಕವಾಗಿರುವ ಯುಜಿಸಿ ನೆಟ್‌ನಂತಹ ಪರೀಕ್ಷೆಗಳಲ್ಲಿ ನಡೆಯುವ ಅಕ್ರಮಗಳಿಂದ ಭವಿಷ್ಯದ ಒಂದು ಜನರೇಷನ್ ಹಾಳಾಗುವ ಸಾಧ್ಯತೆ ದಟ್ಟವಾಗಿರುತ್ತದೆ. ಉದಾಹರಣೆಗೆ, ಕಾಪಿ ಹೊಡೆದೋ ಅಥವಾ ಸೋರಿಕೆಯಾಗಿರುವ ಪೇಪರ್ ಅನ್ನು ನೋಡಿಕೊಂಡೋ ಯುಜಿಸಿ ನೆಟ್‌ನಲ್ಲಿ ಅನರ್ಹನೊಬ್ಬ ಉತ್ತೀರ್ಣನಾಗಿ, ಯಾವುದೋ ಒಂದು ಕಾಲೇಜಿನಲ್ಲಿ ಅಧ್ಯಾಪಕನಾಗಿ ಮೂರು ದಶಕಗಳ ಸೇವೆ ಸಲ್ಲಿಸಿದರೆ, ಆ ಮೂರು ದಶಕಗಳ ಕಾಲ 'ಅನರ್ಹ' ಉಪನ್ಯಾಸಕನ ಬಳಿ ಕಲಿಯುವ 30 ಬ್ಯಾಚ್‌ನಲ್ಲಿನ ವಿದ್ಯಾರ್ಥಿಗಳಿಗೆ ಏನು ಹೇಳಿಕೊಡಬಹುದು? ಎನ್ನುವುದನ್ನು ಯೋಚಿಸಬೇಕಿದೆ. ಇದೇ ವರ್ಷದ ನೀಟ್‌ನ್ನು ಗಮನಿಸಿದರೆ, ಒಂದುವರೆ ಸಾವಿರ ಅಭ್ಯರ್ಥಿಗಳಿಗೆ ಮರುಪರೀಕ್ಷೆಗೆ ಸೂಚನೆ ನೀಡಲಾಗಿದೆ. ಒಂದು ವೇಳೆ ಈ ಅಕ್ರಮ ಬಯಲಾಗದೇ, ಈ ಎಲ್ಲರೂ ಅತ್ಯುತ್ತಮ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ಪಡೆದುಕೊಂಡು ವೈದ್ಯ ವೃತ್ತಿಗೆ ಎಂಟ್ರಿಯಾದರೆ ಅನರ್ಹ ಅಭ್ಯರ್ಥಿಗಳಿಗೆ ಉತ್ತಮ ಚಿಕಿತ್ಸೆ ಸಾಧ್ಯವೇ? ಕೇವಲ ಅನರ್ಹರಿಗೆ ಸೀಟು ಸಿಗುತ್ತದೆ ಎನ್ನುವುದಕ್ಕಿಂತ, ಅತ್ಯುತ್ತಮ ವೈದ್ಯರಾಗಬಹುದಾದ ಎಲ್ಲ ಅರ್ಹತೆಯಿರುವ ಬಡ ಅಭ್ಯರ್ಥಿಗಳಿಗೆ ಈ ಅಕ್ರಮದಿಂದಾಗಿ ಸೀಟು ತಪ್ಪಿದರೆ ಅದು ಯಾರಿಗೆ ನಷ್ಟ? ಎನ್ನುವುದನ್ನು ಯೋಚಿಸಬೇಕಿದೆ.

ಹಾಗೆಂದ ಮಾತ್ರಕ್ಕೆ, ಪರೀಕ್ಷಾ ಅಕ್ರಮಗಳೆಲ್ಲ ನಡೆದಾಗ ಕೇಂದ್ರ ಸರಕಾರ ಅಥವಾ ರಾಜ್ಯದಲ್ಲಿ ನಡೆದಾಗ ರಾಜ್ಯ ಸರಕಾರ ಕಾರಣವೆಂದು ಹೇಳಲು ಬರುವುದಿಲ್ಲ. ಈ ರೀತಿಯ ಅಕ್ರಮಗಳು ಬಹುತೇಕ ಸಮಯದಲ್ಲಿ ಸಚಿವರು ಹೋಗಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಮಟ್ಟದ ಗಮನದಲ್ಲಿಯೂ ಇರುವುದಿಲ್ಲ. ಬದಲಿಗೆ ಇಲಾಖೆಯಲ್ಲಿರುವ ಕೆಲ ಕೆಳ ಹಂತದ ಸಿಬ್ಬಂದಿಗಳ 'ಅಕ್ರಮ'ದ ಕಾರಣಕ್ಕೆ ಇಂತಹ ಸಮಸ್ಯೆಗಳು ಎದುರಾಗುತ್ತದೆ. ಈ ರೀತಿ ಪರೀಕ್ಷಾ ಅಕ್ರಮಕ್ಕೆ ಅವಕಾಶ ಕೊಡುವ ಕೆಲವರನ್ನು ಸರಿಯಾದ ರೀತಿಯಲ್ಲಿ 'ಶಿಕ್ಷಿಸುವ' ಕೆಲಸವಾಗದಿರುವುದು ಹೆಚ್ಚಿಕೊಳ್ಳಲು ಪ್ರಮುಖ ಕಾರಣವೆಂದರೆ ತಪ್ಪಾಗುವುದಿಲ್ಲ. ಅಕ್ರಮದಲ್ಲಿ ಸಿಕ್ಕಿಹಾಕಿಕೊಳ್ಳುವ ಇಂತಹವರನ್ನು ಜೈಲಿಗೆ ಕಳುಹಿಸಲಾಗುತ್ತದೆ. ನಮ್ಮಲ್ಲಿರುವ ಕಾನೂನಿನಲ್ಲಿ ಈ ರೀತಿಯ ಆರೋಪದಲ್ಲಿ ಜೈಲು ಸೇರಿದ ಕೆಲವೇ ದಿನಗಳಲ್ಲಿ ಅವರಿಗೆ ಜಾಮೀನು ಸಿಗುತ್ತದೆ. ಜಾಮೀನು ಸಿಕ್ಕು, ಆರು ತಿಂಗಳಲ್ಲಿ ಪುನಃ ಕೆಲಸಕ್ಕೆ ಹಾಜರಾಗುತ್ತಾರೆ. ಮತ್ತೆ ಅದೇ ಛಾಳಿಯನ್ನು ಮುಂದುವರೆಸಿಕೊಂಡು ಹೋಗುತ್ತಾರೆ.

ದಶಕಗಳಿಂದ ಕರ್ನಾಟಕ ಸೇರಿದಂತೆ ದೇಶಾದ್ಯಂತ ಪರೀಕ್ಷಾ ಅಕ್ರಮಗಳು ಪತ್ತೆಯಾಗುತ್ತಿದ್ದರೂ, ಈವರೆಗೆ ಕಠಿಣ ಎನ್ನುವಂತಹ ಕಾನೂನು ರೂಪಿಸಬೇಕು ಎಂದು ಆಡಳಿತದಲ್ಲಿದ್ದ ಬಹುತೇಕರಿಗೆ ಅನಿಸದಿರುವುದೇ ದುರಂತ. ಈ ರೀತಿಯ ಪ್ರಕರಣಗಳ ಆರೋಪಿಗಳ ವಿರುದ್ಧ ಬಹುತೇಕ ಸಮಯದಲ್ಲಿ 'ಸಾಕ್ಷ್ಯಾಧಾರ'ದ ಕೊರತೆಯ ನೆಪದಲ್ಲಿ ಬಹುತೇಕ ಪ್ರಕರಣಗಳು ಖುಲಾಸೆಯಾಗುತ್ತವೆ. ಇದರಿಂದ ಈ ಕೃತ್ಯದಲ್ಲಿ ಭಾಗವಹಿಸುವವರಿಗೆ ಹೆದರಿಕೆಯಿಲ್ಲವಾಗಿದೆ.

ಈ ವಿಷಯದಲ್ಲಿ ಯಾವುದೇ ಒಂದು ಸರಕಾರ, ಪಕ್ಷದ ವಿರುದ್ಧ ಬೊಟ್ಟು ಮಾಡುವ ಬದಲು ಇಡೀ ವ್ಯವಸ್ಥೆಯನ್ನು ಬದಲಾಯಿಸುವ ಅಗತ್ಯತೆಯಿದೆ. ಯಾವ ಪಕ್ಷ ಅಧಿಕಾರದಲ್ಲಿರುವಾಗ ಪ್ರಶ್ನೆ ಪತ್ರಿಕೆ ಸೋರಿಕೆಯಾಯಿತು ಎನ್ನುವುದಕ್ಕಿಂತ, ಇದರಿಂದ ಇಡೀ ಸಮುದಾಯ ಮೇಲಾಗುವ ಪರಿಣಾಮದ ಬಗ್ಗೆ ಆಲೋಚಿಸಬೇಕಿದೆ. ಉದಾಹರಣೆಗೆ ಕಳೆದ ವಾರವಷ್ಟೇ ಯುಜಿಸಿ ನೆಟ್ ಪರೀಕ್ಷೆಯ ರದ್ದತಿಯಿಂದ ಎಂಟರಿಂದ 10 ಲಕ್ಷ ವಿದ್ಯಾರ್ಥಿಗಳು ಮರು ಪರೀಕ್ಷೆ ಬರೆಯಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಇನ್ನು ಈ ರೀತಿಯ ಅಕ್ರಮದಲ್ಲಿ ತೊಡಗಿರುವವರ ವಿರುದ್ಧ ಈವರೆಗೆ ಕಠಿಣ ಕಾನೂನು ಇಲ್ಲದಿರುವುದೇ ಇಂದಿನ ಪರಿಸ್ಥಿತಿಗೆ ಕಾರಣವೆಂದರೆ ತಪ್ಪಾಗುವುದಿಲ್ಲ. ಆದ್ದರಿಂದ ಪರೀಕ್ಷಾ ಅಕ್ರಮದಲ್ಲಿ ತೊಡಗುವವರು ಇನ್ನೊಮ್ಮೆ ಮೇಲೇಳಲು ಸಾಧ್ಯವಾಗದ ರೀತಿಯಲ್ಲಿ ಕ್ರಮವಹಿಸಬೇಕಿದೆ. ಈ ನಿಟ್ಟಿನಲ್ಲಿ ಈಗಾಗಲೇ ಕೇಂದ್ರ ಸರಕಾರ ಕಠಿಣ ಕ್ರಮಕ್ಕೆ ಮುಂದಾಗಿದೆ. ಆದರೆ ಈ ಕಾನೂನು ಸಮರ್ಪಕವಾಗಿ ಜಾರಿಯಾಗಬೇಕಿರುವುದು ಇಂದಿನ ಅನಿವಾರ್ಯ.

ಸಾಲು ಸಾಲು ಪರೀಕ್ಷಾ ಅಕ್ರಮದ ಬಳಿಕ ಕೇಂದ್ರ ಸರಕಾರ ಇದೀಗ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದವರಿಗೆ ಒಂದು ಕೋಟಿ ರು.ವರೆಗೆ ದಂಡ ಹಾಗೂ 10 ವರ್ಷ ಕಾರಾಗೃಹ ಶಿಕ್ಷೆಯನ್ನು ವಿಧಿಸುವ ಕಾನೂನನ್ನು ಜಾರಿಗೊಳಿಸಲು ಮುಂದಾಗಿದೆ. ಮೇಲ್ನೋಟಕ್ಕೆ ಈ ರೀತಿಯ ಕಠಿಣ ಕಾನೂನುಗಳಿಂದ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಪರೀಕ್ಷಾ ಅಕ್ರಮವನ್ನು ನಿಯಂತ್ರಿಸಬಹುದು ಎಂದು ಹೇಳಲಾಗುತ್ತಿದೆ. ಆದರೆ ಈ ರೀತಿಯ ಆರೋಪದ ಪ್ರಕರಣಗಳಲ್ಲಿ ಬಹುತೇಕ ಪ್ರಕರಣಗಳು 'ತಾರ್ಕಿಕ ಅಂತ್ಯ'ವನ್ನೇ ಕಾಣುವುದಿಲ್ಲ. ಆರಂಭದಲ್ಲಿ ಪರೀಕ್ಷಾ ಅಕ್ರಮಗಳ ಪ್ರಕರಣಗಳಲ್ಲಿರುವ ಉತ್ಸಾಹ, ಕೆಲ ತಿಂಗಳ ಬಳಿಕ ಇರುವುದಿಲ್ಲ. ನ್ಯಾಯಾಲಯದಲ್ಲಿ ಪ್ರಕರಣ ನಡೆಯುವ ಸಮಯದಲ್ಲಿ, ಸೂಕ್ತ 'ಸಾಕ್ಷ್ಯಾಧಾರ'ದ ಕೊರತೆಯಿಂದ ಬಹುತೇಕ ಪ್ರಕರಣಗಳು ಖುಲಾಸೆಯಾಗಿರುವುದನ್ನು ನೋಡಿದ್ದೇವೆ. ಆದ್ದರಿಂದ ಆಡಳಿತದಲ್ಲಿರುವವರು, ಕಠಿಣ ಕಾನೂನು ಜಾರಿಗೊಳಿಸುವುದಷ್ಟೇ ಅಲ್ಲದೇ, ಅದನ್ನು ಸೂಕ್ತ ರೀತಿಯಲ್ಲಿ ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳಬೇಕಿದೆ. ನ್ಯಾಯಾಂಗದಲ್ಲಿ ಪ್ರಕರಣ ಗಟ್ಟಿಯಾಗಿ ನಿಲ್ಲುವಂತೆ ಹಾಗೂ ಸಾಧ್ಯವಾದಷ್ಟು ಬೇಗ ಪ್ರಕರಣ ಇತ್ಯರ್ಥವಾಗುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಿದೆ. ಇಲ್ಲದಿದ್ದರೆ, ವರ್ಷಕ್ಕೊಮ್ಮೆ, ಎರಡು ವರ್ಷಕ್ಕೊಮ್ಮೆ ಪ್ರಶ್ನೆಪತ್ರಿಕೆ ಸೋರಿಕೆ ಎನ್ನುವ ಪ್ರಕರಣಗಳು ಬರುತ್ತವೆ... ಹೋಗುತ್ತವೆ. ಪ್ರಕರಣಗಳು ಬೆಳಕಿಗೆ ಬಂದರೆ, 'ಕಠಿಣ ಕ್ರಮ'ದ ಎಚ್ಚರಿಕೆ. ಅದಾದ ಮೂರು ತಿಂಗಳ ಬಳಿಕ ಜನರು, ವಿದ್ಯಾರ್ಥಿಗಳು ಸರಕಾರ ಎಲ್ಲರೂ ಮರೆಯುತ್ತಾರೆ. ಜಾಮೀನಿನ ಮೇಲೆ ಹೊರ ಬರುವ ಆರೋಪಿಗಳು ಮತ್ತೊಂದು ಪರೀಕ್ಷೆಯಲ್ಲಿ ಮತ್ತೊಂದು ಅಕ್ರಮಕ್ಕೆ ಸದ್ದಿಲ್ಲದೇ ಸಜ್ಜಾಗುತ್ತಿರುತ್ತಾರೆ ಅಷ್ಟೇ!

ದಿ ಆರ್ ಡಾಕ್ಯುಮೆಂಟ್ ಮತ್ತು ತುರ್ತುಪರಿಸ್ಥಿತಿ

ಅಭಿಮತ

ಪ್ರಕಾಶ್ ಶೇಷರಾಘವಾಚಾರ್
Sprakashbjpgmail.com

1975ರಲ್ಲಿ ಅಲಹಾಬಾದ್ ಹೈಕೋರ್ಟ್ ಚುನಾವಣಾ ಅಕ್ರಮದ ಮೇಲೆ ಇಂದಿರಾ ಗಾಂಧಿಯವರ ಲೋಕಸಭಾ ಸದಸ್ಯತ್ವವನ್ನು ರದ್ದುಪಡಿಸುತ್ತದೆ. ಪ್ರಧಾನಿ ಪಟ್ಟವನ್ನು ತೊರೆಯದೆ ಅವರಿಗೆ ಅನ್ಯಥಾ ಬೇರೆ ಮಾರ್ಗವಿರುವುದಿಲ್ಲ, ಆದರೆ ಅಧಿಕಾರ ಬಿಟ್ಟು ಕೊಡುವ ಇರಾದೆ ಇಲ್ಲದೆ ಪ್ರಧಾನಿಯಾಗಿಯೇ ಮುಂದುವರೆಯುತ್ತಾರೆ. ಇಂದಿರಾ ಗಾಂಧಿಯವರು ತಮ್ಮ ಸದಸ್ಯತ್ವ ರದ್ದು ವಿರುದ್ಧ ಸುಪ್ರೀಂಕೋರ್ಟ್ ಬಾಗಿಲು ಬಡಿದಾಗ ನ್ಯಾಯಾಲಯವು ಸದನದೊಳಗೆ ಮತದಾನದ ಹಕ್ಕು ಇಲ್ಲದೆ ಸದನದ ಕಲಾಪದಲ್ಲಿ ಭಾಗಿಯಾಗಬಹುದು ಎಂದು ತೀರ್ಪು ನೀಡುತ್ತದೆ. ಇಂದಿರಾರವರು ಆಗಲೂ ರಾಜಿನಾಮೆ ನೀಡದೆ ಪ್ರಧಾನಿಯಾಗಿಯೇ ಮುಂದುವರೆಯುತ್ತಾರೆ. ಚುನಾವಣೆಯೇ ಇಲ್ಲದೆ ಅನಿರ್ದಿಷ್ಟಾವಧಿಯವರೆಗೂ ಪ್ರಧಾನಿ ಪಟ್ಟದಲ್ಲಿರಲು ಕಾನೂನು ತಿದ್ದುಪಡಿ ಮಾಡಿಕೊಳ್ಳುತ್ತಾರೆ.

1975 ಜೂನ್ 25ರಂದು ಇಂದಿರಾ ಗಾಂಧಿ ದೇಶದಲ್ಲಿ ತುರ್ತುಪರಿಸ್ಥಿತಿಯನ್ನು ಹೇರಿ ಸರ್ವಾಧಿಕಾರವನ್ನು ಸ್ಥಾಪಿಸುತ್ತಾರೆ. ಪತ್ರಿಕಾ ಸ್ವಾತಂತ್ರ್ಯ ಹರಣವಾಗಿ ಮಾನವ ಹಕ್ಕುಗಳು ಇಲ್ಲವಾಗುತ್ತದೆ. ದೇಶದ ಇತಿಹಾಸದಲ್ಲಿ ಕರಾಳ ಅಧ್ಯಾಯವೊಂದು 1975 ಜೂನ್ 25 ರಿಂದ ಆರಂಭವಾಗಿ ಪ್ರಜಾಪ್ರಭುತ್ವವು ಅಸ್ತಂಗತವಾಗುತ್ತದೆ.

ಶ್ರೀಮತಿ ಗಾಂಧಿಯವರು ತಮ್ಮ ನಿರಂಕುಶ ಪ್ರಭುತ್ವ ಮುಂದುವರೆಸಲು ಸಂವಿಧಾನಕ್ಕೆ ತಿದ್ದುಪಡಿ ತರಲು ಮುಂದಿನ ಹೆಜ್ಜೆ ಇಡುತ್ತಾರೆ. ಇದರ ಫಲಶ್ರುತಿಯ ಫಲವಾಗಿ 1976ರಲ್ಲಿ ಸಂವಿಧಾನದ 42ನೇ ತಿದ್ದುಪಡಿಯು ರೂಪುಗೊಳ್ಳುತ್ತದೆ. ಇಂದಿರಾರವರಿಗೆ ಅದೇನು ಒಳ್ಳೇ ಬುದ್ಧಿ ಬಂದಿತೋ ಏನೋ, ಸಂವಿಧಾನದ 42 ನೇ ತಿದ್ದುಪಡಿಯ ಬಗ್ಗೆ ದೇಶದಲ್ಲಿ ಚರ್ಚೆ ಮಾಡಬಹುದು ಎಂದು ಫರ್ಮಾನು ಹೊರಡಿಸುತ್ತಾರೆ. ತುರ್ತುಪರಿಸ್ಥಿತಿಯಲ್ಲಿ ಸಭೆ ನಡೆಸಲು ನಿರ್ಬಂಧವಿದ್ದ ಕಾರಣ ಅನುಮತಿ ಕಡ್ಡಾಯವಾಗಿ ಬೇಕಾಗಿರುತ್ತದೆ.

ಬಹುತೇಕ ವಿರೋಧ ಪಕ್ಷದ ನಾಯಕರನ್ನು ಅದಾಗಲೇ ಸೆರಮನೆಗೆ ತಳ್ಳಿದ್ದರು. ಹೊರಗಿದ್ದವರಲ್ಲಿ ಅನೇಕರು ಭೂಗತರಾಗಿದ್ದರು. ಇದರ ನಡುವೆಯೂ ಕೆಲವು ಕಾನೂನು ತಜ್ಞರು ಸಂವಿಧಾನದ 42ನೇ ತಿದ್ದುಪಡಿಯ ಅಪಾಯವನ್ನು ವಿವರಿಸುವ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ. ಸಂವಿಧಾನದ 42ನೇ ತಿದ್ದುಪಡಿ ಜಾರಿಯಾದರೆ ಅದರ ಅಪಾಯವನ್ನು ವಿವರಿಸಲು ಬೆಂಗಳೂರಿನ ಗಾಂಧೀ ಭವನದಲ್ಲಿ ನಡೆದ ಕಾರ್ಯಕ್ರಮಕ್ಕೆ ಖ್ಯಾತ ನ್ಯಾಯವಾದಿ ಶಾಂತಿಭೂಷಣ್ ರವರು ಪ್ರಮುಖ ಭಾಷಣಕಾರರಾಗಿ ಬಂದಿರುತ್ತಾರೆ. ಸಂವಿಧಾನದ 42ನೇ ತಿದ್ದುಪಡಿಯು ಬಹುಮತದ ಸರ್ಕಾರವು ದೇಶದಲ್ಲಿ ಚುನಾವಣೆಯೇ ಇಲ್ಲದೆ ನಿರಂತರವಾಗಿ ಸರ್ವಾಧಿಕಾರದ ಆಡಳಿತ ನಡೆಸಲು ಅವಕಾಶ ನೀಡುತ್ತದೆ. ದೇಶದ ಆಂತರಿಕ ಭದ್ರತೆ ಅಪಾಯದಲ್ಲಿದೆ ಎಂದು ತೀರ್ಮಾನಿಸಿ ತುರ್ಪರಿಸ್ಥಿತಿಯನ್ನು ಹೇರಲು ಆಸ್ಪದ ನೀಡುತ್ತದೆ. ತಮ್ಮ ರಾಜಕೀಯ ವಿರೋಧಿಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ಸುಲಭವಾಗಿ ಜೈಲಿಗೆ ಅಟ್ಟಲು ಸಾಧ್ಯವಾಗುವುದು. ಅತಿ ಮುಖ್ಯ ಸಂಗತಿಯು ಈ ತಿದ್ದುಪಡಿಯಿಂದ ಸಂಸತ್ತಿನಲ್ಲಿ ಅನುಮೋದನೆಯಾದ ಕಾಯಿದೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾಧ್ಯವಿಲ್ಲದ ಹಾಗೆ ಕಾನೂನು ರೂಪಿಸಲಾಗಿದೆ. ನಿರಂಕುಶ ಪ್ರಭುತ್ವ ಸ್ಥಾಪಿಸಲು 42ನೇ ತಿದ್ದುಪಡಿಯಿಂದ ಸುಲಭ ಎಂದು ಮುಂದಾಗುವ ಅಪಾಯವನ್ನು ಎಳೆಎಳೆಯಾಗಿ ಬಿಡಿಸಿ ವಿವರಿಸಿದರು.

ಶಾಂತಿಭೂಷಣ್ ರವರು ತಮ್ಮ ಭಾಷಣದಲ್ಲಿ 42 ನೇ ತಿದುಪಡಿಯು ಏನು ಮಾಡಬಹುದು ಎಂಬುದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಇಂಗ್ಲೀಷ್ ಖ್ಯಾತ ಲೇಖಕ ಈರ್ವಿನ್ ವ್ಯಾಲೇಸ್ ಬರೆದಿದ್ದ R Document ಎಂಬ ಪುಸ್ತಕವನ್ನು ಉಲ್ಲೇಖಿಸಿ ಅದನ್ನು ಓದಲು ಸಲಹೆ ನೀಡುತ್ತಾರೆ.

R Document ಕಾಲ್ಪನಿಕ ಕಥಾವಸ್ತುವನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಅಮೆರಿಕಾ ಸರಕಾರವು ಸಂವಿಧಾನಕ್ಕೆ 35ನೇ ತಿದ್ದುಪಡಿಯನ್ನು ತರಲು ಮುಂದಾಗುತ್ತದೆ. ತಿದ್ದುಪಡಿಯು ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಲು ಅವಕಾಶ ನೀಡುತ್ತದೆ. ದೇಶದ ಭದ್ರತೆಯು ಅಪಾಯದಲ್ಲಿರುವಾಗ ಜನರ ಮೂಲಭೂತ ಹಕ್ಕುಗಳನ್ನು ರದ್ದುಪಡಿಸುತ್ತದೆ. ರಾಷ್ಟ್ರೀಯ ಭದ್ರತೆಗೆ ಒದಗಿರುವ ಅಪಾಯವು ದೂರವಾಗುವ ತನಕ ಇದು ಜಾರಿಯಲ್ಲಿರುವ ಹಾಗೆ ನಿಬಂಧನೆಯಿರುತ್ತದೆ. ತುರ್ತುಪರಿಸ್ಥಿತಿಯ ಅವಧಿಯಲ್ಲಿ ಸಂಪೂರ್ಣ ಅಧಿಕಾರ ಓರ್ವ ವ್ಯಕ್ತಿಗೆ ಹಸ್ತಾಂತರವಾಗುತ್ತದೆ. ಎಫ್‌ಬಿಐ ನಿರ್ದೇಶಕನ ಅಧ್ಯಕ್ಷತೆಯಲ್ಲಿ ಸಮಿತಿಯು ರಚನೆ ಮಾಡಿ ಮುಂದಿನ ಎಲ್ಲಾ ತೀರ್ಮಾನಗಳು ಪರಿಸ್ಥಿತಿಯು ಸುಧಾರಿಸುವ ತನಕ ತುರ್ತುಪರಿಸ್ಥಿತಿಯು ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಸಂವಿಧಾನದಲ್ಲಿ ನೀಡಿರುವ ಹಕ್ಕುಗಳು ಮತ್ತು ಸವಲತ್ತುಗಳು ರದ್ದಾಗುವುದು.

ಆರ್ ಡಾಕ್ಯುಮೆಂಟ್‌ನಲ್ಲಿ ಅರಾಜಕತೆಯ ಸಮಯದಲ್ಲಿ ತುರ್ತು ಪರಿಸ್ಥಿತಿ ಹೇರುವ ಅಧಿಕಾರವಿರುತ್ತದೆ. ಹಾಗೆಯೇ 35 ನೇ ತಿದ್ದುಪಡಿಯಲ್ಲಿ ದೇಶದ ಭದ್ರತೆಗೆ ಅಪಾಯದ ಸಂದರ್ಭದಲ್ಲಿ ತುರ್ತುಪರಿಸ್ಥಿತಿ ಹೇರುವ ಅಧಿಕಾರವಿರುತ್ತದೆ. ಇರ್ವಿನ್ ವ್ಯಾಲೇಸ್ ಕಾದಂಬರಿ ಕಾಲ್ಪನಿಕ ಕಥಾವಸ್ತುವಾದರೆ ಅದರಲ್ಲಿ ಉಲ್ಲೇಖವಾಗಿದ್ದ ಹಲವಾರು ಸಂಗತಿಗಳು ಪ್ರಜಾಪ್ರಭುತ್ವಕ್ಕೆ ಅಪಾಯ ತಂದೊಡ್ಡುವ ವಿವರಗಳು ಸಂವಿಧಾನದ 42ನೇ ತಿದ್ದುಪಡಿ ಯಲ್ಲಿ ಅಡಕವಾಗಿ ರುತ್ತದೆ. ಹೀಗಾಗಿ ಶಾಂತಿಭೂಷಣ್ ಇದನ್ನು ತಮ್ಮ ಭಾಷಣದಲ್ಲಿ ಉದಾಹರಿಸುತ್ತಾರೆ. ತುರ್ತುಪರಿಸ್ಥಿತಿಯ ದುರ್ಲಾಭ ಪಡೆದು ಜಾರಿಗೆ ತಂದ 42ನೇ ತಿದ್ದುಪಡಿಯನ್ನು ಮಿನಿ ಸಂವಿಧಾನವೆಂದೇ ಕರೆಯಲಾಗಿತ್ತು. ಸಂವಿಧಾನದ 352, 356 ಮತ್ತು 360 ನೇ ವಿಧಿಗಳಿಗೆ ತಂದ ತಿದ್ದುಪಡಿಗಳು ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡಿತು. ಆದರೆ ಈ ಘೋಷಣೆಯನ್ನು ಸಂಸತ್ತಿನ ಎರಡೂ ಸದನಗಳು ಪೂರ್ವನಿರ್ಧರಿತ ಕಾಲಮಿತಿಯೊಳಗೆ ಅಂಗೀಕರಿಸುವ ನಿಬಂಧನೆಯ ಅವಧಿಯನ್ನು ಒಂದರಿಂದ ಆರು ತಿಂಗಳವರೆಗೆ ವಿಸ್ತರಿಸಲು ಅವಕಾಶ ನೀಡಿತು. ಈ ಬದಲಾವಣೆಯಿಂದ ತುರ್ತು ಸಂದರ್ಭಗಳಲ್ಲಿ ಕೇಂದ್ರ ಸರಕಾರದ ನಿಯಂತ್ರಣ ಹೆಚ್ಚಿಸಿತು ತನ್ಮೂಲಕ ಇದರ ದುರುಪಯೋಗ ಮತ್ತು ನಿರಂಕುಶಾಧಿಕಾರಕ್ಕೆ ಅವಕಾಶ ನೀಡಿತು.

ಜಯಪ್ರಕಾಶ್ ನಾರಾಯಣ್ ರವರು ಅನ್ಯಾಯದ ವಿರುದ್ಧ ಸಿಡಿದೇಳಿ ಎಂದು ಪೊಲೀಸರಿಗೆ ಮತ್ತು ಸೈನಿಕರಿಗೆ ಕೊಟ್ಟ ಕರೆಯನ್ನು ಇಂದಿರಾ ಗಾಂಧಿಯವರು ಅದನ್ನು ತಮ್ಮ ಅನುಕೂಲಕ್ಕೆ ತಿರುಚಿಕೊಂಡು ನಡುರಾತ್ರಿಯಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿಯನ್ನು ಹೇರುತ್ತಾರೆ. ಸಂವಿಧಾನಕ್ಕೆ ವಿರುದ್ಧವಾಗಿ ಲೋಕಸಭಾ ಚುನಾವಣೆ ಯನ್ನು ಒಂದು ವರ್ಷದ ಕಾಲ ಮುಂದೂಡಿ ಅಕ್ರಮವಾಗಿ ಪ್ರಧಾನಿಯಾಗಿ ಮುಂದುವರೆಯುತ್ತಾರೆ. ಸಾವಿರಾರು ಜನರು ಪೊಲೀಸರ ಚಿತ್ರಹಿಂಸೆಗೆ ತುತ್ತಾದಾರು, ಹಲವರು ತಮ್ಮ ಪ್ರಾಣವನ್ನು ಕಳೆದುಕೊಳ್ಳಬೇಕಾಯಿತು. ಪ್ರಮುಖ ವಿರೋಧ ಪಕ್ಷದ ನಾಯಕರನ್ನು ಸೆರಮನೆಗೆ ಅಟ್ಟಿ ರಾಜ್ಯಭಾರ ಮಾಡಿದ ಅಪಕೀರ್ತಿ ಇಂದಿರಾ ಅವರದ್ದು. ಭಾರತದ ಇತಿಹಾಸ ದಲ್ಲೇ ಇದೊಂದು ಕರಾಳ ಅಧ್ಯಾಯವಾಗಿತ್ತು.

ಪ್ರಜಾಪ್ರಭುತ್ವ ದಮನ ಮಾಡಿ ತುರ್ತುಪರಿಸ್ಥಿತಿಯನ್ನು ಹೇರಿದ ಕಾಂಗ್ರೆಸ್ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಕೂಗುವುದು ಅತ್ಯಂತ ಹಾಸ್ಯಾಸ್ಪದವಾದ ವಿಚಾರವು. ತಮ್ಮ ಕರಾಳ ಇತಿಹಾಸವನ್ನು ಮರೆಮಾಚಿ ಸಂವಿಧಾನ ರಕ್ಷಕರು ಎಂದು ಬಿಂಬಿಸಿಕೊಳ್ಳುವುದು ಸಾಧು ವೇಷದಲ್ಲಿ ಸೀತೆ ಅಪಹರಿಸಲು ಬಂದ ರಾವಣನ ಹಾಗಿದೆ ಇವರ ನಿಲುವು. ಇಂದಿರಾ ಗಾಂಧಿಯವರು ಬಹುಮತವಿದೆಯೆಂದು ಸಂವಿಧಾನದ ಮೂಲ ಆಶಯಕ್ಕೆ ಅಪಚಾರವೆಸಗಿದರು. ತಮ್ಮ ಸ್ಥಾನ ಭದ್ರ ಮಾಡಿಕೊಳ್ಳಲು ಕಾನೂನುಬಾಹಿರವಾಗಿ ಸಂವಿಧಾನಕ್ಕೆ ತಿದ್ದುಪಡಿ ತಂದರು. ರಾಜಕೀಯ ವಿರೋಧಿಗಳ ಹೆಡೆಮುರಿ ಕಟ್ಟಲು ಮೀಸಾ ಎಂಬ ಕರಾಳ ಕಾಯಿದೆಯನ್ನು ಜಾರಿಗೆ ತಂದು ರಾಜಕೀಯ ಪ್ರತಿಸ್ಪರ್ಧಿ ಗಳನ್ನು ತಿಂಗಳು ಗಟ್ಟಲೆ ಯಾವುದೇ ಮೊಕದ್ದಮೆಯಿಲ್ಲದೆ ಜೈಲಿಗೆ ತಳ್ಳಿದರು. ತುರ್ತುಪರಿಸ್ಥಿತಿ ಬಂದು 49 ವರ್ಷವಾಗಿದೆ. ನೊಂದವರಿಗೆ ಅದರ ನೆನಪು ಇನ್ನೂ ಹಸಿರಾಗಿಯೇ ಇರುವುದು. ಆದರೆ ಕಾಂಗ್ರೆಸ್ಸಿಗರು ಮಾತ್ರ ಅದನ್ನು ತಮ್ಮ ನೆನಪಿನ ಪಟದಿಂದಲೇ ತೆಗೆದುಹಾಕಿ ಮೋದಿಯವರನ್ನು ಪ್ರಜಾತಂತ್ರ ವಿರೋಧಿ ಎಂದು ಕೂಗುವ ದಾರ್ಷ್ಟ್ಯವನ್ನು ತೋರಿ ಭಂಡತನ ಪ್ರದರ್ಶಿಸುತ್ತಿದ್ದಾರೆ. ಇಂದಿನ ಕಾಂಗ್ರೆಸ್ಸಿಗರು ಪದೇ ಪದೇ ನೆಹರು ಕಾಲದ ಯೋಜನೆಗಳ ಬಗ್ಗೆ ಪ್ರಸ್ತಾಪಸಿ ಮೋದಿ ಸರಕಾರವನ್ನು ಟೀಕಿಸುತ್ತಾರೆ. ಆದರೆ ಕಾಂಗ್ರೆಸ್ಸಿಗರು ಇಂದಿರಾ ಕಾಲದ ಸರ್ವಾಧಿಕಾರದ ಆಡಳಿತವನ್ನು ಅಪ್ಪಿ ತಪ್ಪಿಯೂ ಪ್ರಸ್ತಾಪಿಸುವ ಎದೆಗಾರಿಕೆಯಿಲ್ಲ.

ಇರ್ವಿನ್ ವ್ಯಾಲೇಸ್ ಬರೆದ ಕಾಲ್ಪನಿಕ ಕತೆ ನಿಜ ಜೀವನದಲ್ಲಿ ಜಾರಿಗೆ ಬಂದರೆ ಅದರ ನೈಜ ಸ್ವರೂಪವು ಹೇಗೆ ಇರುತ್ತದೆ ಎಂಬುದನ್ನು ಇಂದಿರಾ ಗಾಂಧಿ ತುರ್ತುಪರಿಸ್ಥಿತಿಯನ್ನು ಹೇರಿ ಅದರ ಪ್ರತ್ಯಕ್ಷ ದರ್ಶನವನ್ನು ಮಾಡಿಸಿದರು.

2002ರ ಗುಜರಾತ್ ದಂಗೆಯಲ್ಲಿ ಬಲಿಯಾದವರ ಸಂಖ್ಯೆ 800. ಇಂದಿರಾ ಹತ್ಯೆಯ ನಂತರ ರಾಜೀವ್ ಗಾಂಧಿ ಆಡಳಿತದಲ್ಲಿ ಹತ್ಯೆಯಾದ ಸಿಖ್ಖರ ಸಂಖ್ಯೆಯು 2,000 ದಾಟಿತು. ಕಾಂಗ್ರೆಸ್ ಪ್ರಕಾರ ಗುಜರಾತಿನ ದಂಗೆಯು ಹತ್ಯಾಕಾಂಡ. ಸಿಖ್ಖ್ ವಿರೋಧಿ ಹತ್ಯೆಯು ದೊಡ್ಡ ಮರ ಬಿದ್ದಾಗ ಸುತ್ತ ಮುತ್ತಲಿನ ಭೂಮಿಯು ಅಲುಗಾಡುವುದು ಸಹಜ ಎಂಬ ಸಮರ್ಥನೆ. ನರೇಂದ್ರ ಮೋದಿಯು ಸಾವಿನ ವ್ಯಾಪಾರಿ. ಅದೇ ರಾಜೀವ್ ಗಾಂಧಿಯವರು ಮಾನವೀಯತೆಯ ಮೂರ್ತರೂಪ.

ತುರ್ತುಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವ ದಮನ ಮಾಡಿದ ಕಾಂಗ್ರೆಸ್ ಪ್ರಜಾಪ್ರಭುತ್ವದ ರಕ್ಷಕ. ಕಳೆದ ಹತ್ತು ವರ್ಷದಿಂದ ನಿರಂತರ ನಿಂದನೆಗೆ ಒಳಗಾದರೂ ಅದನ್ನು ವಿಷವನ್ನು ಕುಡಿದ ವಿಷಕಂಠನ ಹಾಗೆ ಸಹಿಸಿಕೊಂಡಿರುವ ನರೇಂದ್ರ ಮೋದಿಯವರು ಪ್ರಜಾಪ್ರಭುತ್ವದ ಹಂತಕರು ಎಂದು ಹಣೆಪಟ್ಟಿ ಕಟ್ಟುವ ಸಮಯಸಾಧಕ ನೀತಿಯನ್ನು ಕಾಂಗ್ರೆಸ್ ಅನುಸರಿಸುತ್ತಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅವಲೋಕನ ಅತ್ಯಗತ್ಯ

ರಾಮನಗರ ಕ್ಷೇತ್ರದ ಶಾಸಕ ಲೋಕಸಭೆಗೆ ಚುನಾಯಿತರಾಗಿರುವುದರಿಂದ ಈಗ ಅಲ್ಲಿ ಉಪಚುನಾವಣೆ ನಡೆಯಲಿದೆ. ಈ ಉಪಚುನಾವಣೆಗೆ ಕಾಂಗ್ರೆಸ್ ರಾಜ್ಯಾಧ್ಯಕ್ಷ ಮತ್ತು ಉಪ ಮುಖ್ಯಮಂತ್ರಿ- ಹೀಗೆ ಎರಡು ಉನ್ನತ ಹುದ್ದೆಗಳ ಜವಾಬ್ದಾರಿ ನಿರ್ವಹಿಸುತ್ತಿರುವ ಡಿಕೆಶಿ ಅವರು ಸ್ಪರ್ಧಿಸುತ್ತಾರೆ ಎನ್ನುವ ಸಂಗತಿ ಅಚ್ಚರಿ ಮೂಡಿಸುತ್ತದೆ. 2014 ಮತ್ತು 2019ರ ಲೋಕಸಭೆ ಚುನಾವಣೆಗಳಲ್ಲಿ ಕೇವಲ ನಲವತ್ತು+ ಐವತ್ತು+ ಸ್ಥಾನಗಳಿಗೆ ಕುಸಿದು ಕಳೆಗುಂದಿದ್ದ ಪಕ್ಷ ಈ ಸಲದ ಚುನಾವಣೆಯಲ್ಲಿ ದುಪ್ಪಟ್ಟು ಅಚಿದರೆ 99 ಸ್ಥಾನ ದಕ್ಕಿಸಿಕೊಂಡಿರುವುದರಿಂದ ಅದರ ಹುಮ್ಮಸ್ಸು ಇಮ್ಮಡಿಗೊಂಡಿದೆ. ಕೆಲವೇ ತಿಂಗಳಲ್ಲಿ ನಡೆಯಲಿರುವ ನಾಲ್ಕು ರಾಜ್ಯಗಳ ಸಾರ್ವತ್ರಿಕ ಚುನಾವಣೆಗಳಲ್ಲಿ ಹೆಚ್ಚಿನ ಸ್ಥಾನಗಳಿಸಬೇಕೆಂಬ ಸಂಕಲ್ಪ ಸಾಧನೆಯಲ್ಲಿ ದೇಶಾದ್ಯಂತ ಚಿರಪರಿಚಿತರಾಗಿರುವ ಡಿಕೆಶಿ ಮಹತ್ತರ ಪಾತ್ರ ವಹಿಸಬೇಕಿದೆ. ಇಂತಹ ಪರ್ವಕಾಲದಲ್ಲಿ ಅವರು ರಾಜ್ಯದ ರಾಮನಗರದ ಉಪಚುನಾವಣೆಯಲ್ಲಿ ಸ್ಪರ್ಧಿಸಿದರೆ ಅಲ್ಲಿ ಗೆಲ್ಲಲೇ ಬೇಕು, ಗೆಲ್ಲುತ್ತೇನೆ ಎನ್ನುವ ವಿಶ್ವಾಸ ಅವರದು. ಆದರೆ ನೂರಕ್ಕೆ ನೂರು ಗೆದ್ದೆ ಗೆಲ್ಲುತ್ತಾರೆಂದು ತಿಳಿದಿದ್ದ ಡಿಕೆಸು ಲೋಕಸಭೆ ಚುನಾವಣೆಯಲ್ಲಿ ಸೋತಿದ್ದು ಸೋಲು ಗೆಲವು ಸುಲಭವಲ್ಲ, ಮತದಾರ ನಿಗೂಢ ಎನ್ನುವುದನ್ನು ಸಾರಿದೆ. ಅದೂ ಅಲ್ಲದೆ ರಾಮನಗರ ಜೆಡಿಎಸ್ ಸ್ವಸ್ಥಾನ. ಸ್ವಸ್ಥಾನದಲ್ಲಿ ಇಲಿಯೂ ಹುಲಿಯನ್ನು ಸೋಲಿಸಬಲ್ಲದು ನಾಣ್ನುಡಿ. ತೀವ್ರ ಸ್ಪರ್ಧೆ ನಡೆದು ಏನೂ ಆಗಬಹುದು. ಅದೂ ಅಲ್ಲದೆ ಇವಿಎಂ. ಹ್ಯಾಕ್ ಸಂಶಯ ಭೂತ ಒಂದು ಕಡೆಯಾದರೆ ಪಕ್ಷದಲ್ಲಿನ ಹಿತಶತ್ರುಗಳು ಇನ್ನೊಂದು ಕಡೆ! ಅಕಸ್ಮಾತ್ ಜಯಸದೆ ಹೋದರೆ ಮುಖ್ಯಮಂತ್ರಿಯಾಗ ಬೇಕೆನ್ನುವ ಅವರ ಕನಸು ಹಗಲುಗನಸಾದೀತು. ಮಾತ್ರವಲ್ಲ ಈಗಿನ ಉಪಮುಖ್ಯಮಂತ್ರಿ ಹುದ್ದೆ ಉಳಿಸಿಕೊಳ್ಳುವುದು ಕಷ್ಟಸಾಧ್ಯ. ಅದೂ ಅಲ್ಲದೆ ಪ್ರತಿಷ್ಠೆಗಾಗಿ ಇರುವ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರೆ ಮತ್ತೊಂದು ಉಪಚುನಾವಣೆ ನಡೆದು ತೆರಿಗೆ ದುಡ್ಡು ಅನಾವಶ್ಯಕವಾಗಿ ವ್ಯಯವಾಗುತ್ತದೆ. ಇಷ್ಟೆಲ್ಲ ಲೆಕ್ಕಾಚಾರದೊಡನೆ ಅಲ್ಲಿ ಗೆದ್ದರೂ ಅದು ಅಂತಹ ಸಾಧನೆ ಅಲ್ಲ, ಅದು ಅವರ ವರ್ಚಸ್ಸನ್ನು ವಿಜೃಂಭಿಸುವುದಿಲ್ಲ. ಈ ಎಲ್ಲ ಸಾಧ್ಯಾಸಾಧ್ಯತೆಗಳನ್ನು ಅವಲೋಕಿಸಿ ಡಿಕೆಶಿ ಸ್ಪರ್ಧಿಯ ಬಗ್ಗೆ ತೀರ್ಮಾನಿಸುವುದು ಅಪೇಕ್ಷಣೀಯ.

-ಸತ್ಯಬೋಧ ಬೆಂಗಳೂರು

ಪೊಲೀಸರು ಶ್ಲಾಘನಾರ್ಹರು

ಇತ್ತೀಚೆಗೆ ನಡೆದ ನಟ ದರ್ಶನ್ ಭಾಗಿಯಾಗಿದ್ದಾರೆ ಎನ್ನಲಾದ ಕೊಲೆ ಪ್ರಕರಣವು ಸೇರಿದಂತೆ, ಪ್ರಜ್ವಲ್ ರೇವಣ್ಣನ ಲೈಂಗಿಕ ಕಿರುಕುಳ, ವಾಲ್ಮೀಕಿ ನಿಗಮದ ಅವ್ಯವಹಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜ್ಯದ ಪೊಲೀಸರು ಯಾರ ಪ್ರಭಾವ, ಒತ್ತಡ,ಮುಲಾಜಿಗೆ ಒಳಗಾಗದೇ ನಿರ್ವಹಣೆ ಮಾಡಿದ ರೀತಿ ಸದ್ಯ ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಗಿದೆ. ಮೊದಲಿನಿಂದಲೂ ಕರ್ನಾಟಕ ಪೊಲೀಸರೆಂದರೆ ದಕ್ಷತೆ, ಪ್ರಾಮಾಣಿಕತೆ, ಚಾಣಾಕ್ಷತನಕ್ಕೆ ಹೆಸರುವಾಸಿ. ಹೀಗೀರುವಾಗ ನಟ ದರ್ಶನ್ ಹೆಸರು ದುರ್ಘಟನೆ ಒಂದೊರಲ್ಲಿ ಪಾಲ್ಗೊಂಡಿರುವುದಕ್ಕೆ ಸಂಬಂಧಿಸಿದಂತೆ ರಾಜ್ಯದ ಜನಪ್ರತಿನಿಧಿಗಳಿಂದ ಪೊಲೀಸರಿಗೆ ತೀವ್ರ ಒತ್ತಡ ಕೇಳಿಬಂದಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಹಾಗೆಯೇ, ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರು ಲೈಂಗಿಕ ಕಿರುಕುಳ ಆರೋಪ ಕೇಳಿ ಬಂದ ಹಿನ್ನಲೆಯಲ್ಲಿ ವಿದೇಶಕ್ಕೆ ಪ್ರಯಾಣ ಮಾಡಿ ಪೊಲೀಸರಿಂದ ತಪ್ಪಿಸಿಕೊಂಡಿದ್ದರು. ಆದರೆ ಎಸ್‌ಐಟಿ ಪೊಲೀಸರ ಶಿಸ್ತು, ಖಡಕ್ಕಾದ ಚಟುವಟಿಕೆಗಳಿಗೆ ಹೆದರಿ ಪ್ರಜ್ವಲ್ ತಾನಾಗಿಯೇ ಬಂದು ಶರಣಾಗಿದ್ದರು.ಇನ್ನು ವಾಲ್ಮೀಕಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರದ ಭಾಗವಾಗಿದ್ದ ಪರಿಶಿಷ್ಟ ಪಂಗಡ ಕಲ್ಯಾಣ ಸಚಿವ ನಾಗೇಂದ್ರ ಅವರ ತಲೆದಂಡ ಆಗುವ ಸಂದರ್ಭದಲ್ಲೂ ಎಲ್ಲಿಯೂ, ಯಾರು ಜೊತೆಗೂ ರಾಜಿಯಾಗದೇ ಪೊಲೀಸರು ಅನುಸರಿಸಿದ ದಿಟ್ಟ ನಡೆ ಹಾಗೂ ಚಾಕಚಕ್ಯತೆಯನ್ನು ಮೆಚ್ಚಲೇಬೇಕು. ಇಂತಹ ಸನ್ನಿವೇಶದಲ್ಲಿ ರಾಜ್ಯದ ಪೊಲೀಸರು ದೇಶದ ಆರಕ್ಷಕ ಇಲಾಖೆ ವ್ಯವಸ್ಥೆಯಲ್ಲಿ ಇತರೆ ರಾಜ್ಯಗಳ ಪಾಲಿಗೆ ಮಾದರಿಯಾಗಿದ್ದಾರೆ. ರಾಜಕೀಯ ವ್ಯಕ್ತಿಗಳ ಪ್ರಭಾವ ಎಲ್ಲಾ ಕ್ಷೇತ್ರಗಳಲ್ಲೂ ಇದೆ. ಹೀಗೀರುವಾಗ ನಮ್ಮನ್ನು ವಾರದ ಏಳೂ ದಿನವೂ, ಇಪ್ಪತ್ತು ನಾಲ್ಕು ಗಂಟೆಯು ರಕ್ಷಣೆ ನೀಡುವುದರ ಜತೆಗೆ ಸಮಾಜದಲ್ಲಿ ನಡೆಯುವ ಮೋಸ, ವಂಚನೆ, ಅನ್ಯಾಯಗಳಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯ ಪಾತ್ರ ಗಣನೀಯ, ಗಮನಾರ್ಹ. ಇಂತಹ ಸಂದರ್ಭದಲ್ಲಿ ರಾಜ್ಯದ ನಮ್ಮ ಪೊಲೀಸ್ ಇಲಾಖೆಯ ಸಿಬ್ಬಂದಿಗೆ ಅಭಿನಂದನೆಗಳು.

-ಶ್ರೀಧರ್ ಡಿ.ರಾಮಚಂದ್ರಪ್ಪ ತುರುವನೂರು

ಡಿಸಿಎಂ ಹುದ್ದೆ ಅವಶ್ಯವೇ?

ಮೂರು ಡಿಸಿಎಂ ಹುದ್ದೆಯ ಸೃಷ್ಟಿ ಮತ್ತೆ ಮುನ್ನಲೆಗೆ ಬಂದಿದೆ. ಹಾಗೆ ಮಾಡಿದರೆ ವಿವಿಧ ಸಮುದಾಯಗಳಿಗೆ ಪ್ರಾತಿನಿಧ್ಯ ದೊರೆತು ಪಕ್ಷ ಬಲವರ್ಧನೆಯಾಗುತ್ತದೆಂದು ವಾದಿಸುವ ಮತ್ತು ಅದರಿಂದ ತೊಂದರೆಯೇನೆಂದು ಪ್ರಶ್ನಿಸುವ ಕೆಲ ಸಚಿವರು, ಲೋಕಸಭಾ ಚುನಾವಣೆ ಮಧ್ಯೆ, ಬಂದು ಎಐಸಿಸಿ ಅಧ್ಯಕ್ಷರು ಸಾರ್ವಜನಿಕವಾಗಿ ಆ ಬಗ್ಗೆ ಪ್ರಸ್ತಾಪಿಸುವುದು ಬೇಡ ಎಂದಿದ್ದರಿಂದ ಸುಮ್ಮನಾಗಿದ್ದುದಾಗಿ ಹೇಳುತ್ತಾರೆ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಆ ವಿಷಯ ಪ್ರಸ್ತಾಪಿಸುವುದು ಸರಿಯಲ್ಲ ಎಂದರೆ, ಇಂತಹ ಅನವಶ್ಯಕ ಹುದ್ದೆಗಳ ಸೃಜನೆಗೆ ಸಾರ್ವಜನಿಕರ ಸಮ್ಮತಿಯಿಲ್ಲ, ಇದರಿಂದ ಪಕ್ಷಕ್ಕೆ ಹಿನ್ನಡೆಯಾಗುತ್ತದೆಂದೇ ಅರ್ಥ! ಮೂರ್ನಾಲ್ಕು ಸಮುದಾಯಗಳಿಗೆ ಉಪ ಮುಖ್ಯ ಮಂತ್ರಿ ಹುದ್ದೆ ದೊರೆತರೆ, ದೊರೆಯದ ಇತರ ಸಮುದಾಯ/ಜಾತಿಯವರು ಅಸಮಾಧಾನಗೊಂಡು ತಮಗೂ ಆ ಹುದ್ದೆ ಬೇಕೆಂದು ಪಟ್ಟುಹಿಡಿಯುವ, ಸರಕಾರದಲ್ಲಿ ಭಿನ್ನಮತ ಕಾಣಿಸಿಕೊಳ್ಳುವ ಸಾಧ್ಯತೆ ಇದ್ದೇ ಇದೆ. ಹೆಚ್ಚು ಉಪಮುಖ್ಯಮಂತ್ರಿ ಹುದ್ದೆಗಳ ಸೃಜನೆಯ ಈ ಸಮರ್ಥನೆ, ಕಣ್ಣಳತೆಗೆ ಸಿಗುವಷ್ಟು ಮಾತ್ರವಲ್ಲ, ಅದರಾಚೆಗೂ ಇದ್ದಂತಿದೆ; ಇದಕ್ಕೆ ಬೇರೆ ಬೇರೆ ಆಯಾಮಗಳು ಮತ್ತು ರಾಜಕೀಯ ಹಿತಾಸಕ್ತಿಗಳೂ ಇದ್ದಂತಿವೆ. ಅಷ್ಟಕ್ಕೂ, ಸಂವಿಧಾನದಲ್ಲಿಲ್ಲದ ಆ ಹುದ್ದೆಯನ್ನು ಸೃಜಿಸಿಕೊಂಡು ಪಡೆಯುವುದರಿಂದಲೇ ಸಾರ್ವಜನಿಕ ಸೇವೆ ಸಾಧ್ಯ, ಸಾಮಾನ್ಯ ಸಚಿವರಾಗಿ ಸಾಧ್ಯವಿಲ್ಲ ಎಂಬಂತಹ ವಾದ ಎಷ್ಟರಮಟ್ಟಿಗೆ ಸರಿ?

-ತಿಪ್ಪೂರು ಪುಟ್ಟೇಗೌಡ ಬೆಂಗಳೂರು

ಕಚೇರಿಯಲ್ಲಿ ಶಿಸ್ತು ಅತ್ಯಗತ್ಯ

ಕೇಂದ್ರ ಸರಕಾರಿ ನೌಕರರು ಸಮಯಕ್ಕೆ ಸರಿಯಾಗಿ ಕಚೇರಿಗೆ ಬರದೆ ಹದಿನೈದು ನಿಮಿಷಕ್ಕಿಂತ ಹೆಚ್ಚು ತಡವಾದರೆ ಅವರ ಅರ್ಧ ದಿನದ ರಜೆಯನ್ನು ಕಡಿತಗೊಳಿಸಲಾಗುವುದು ಎಂದು ಸರಕಾರವು ಸುತ್ತೋಲೆ ಹೊರಡಿಸಿದುದು ಸರಿಯಾಗಿಯೇ ಇದೆ. ಗ್ರಾಹಕರಿಗೆ, ಸಾರ್ವಜನಿಕರಿಗೆ ಸೇವೆ ನೀಡಲೆಂದು ಇರುವ ಸಂಸ್ಥೆಗಳೆಲ್ಲವೂ ಹೀಗೆ ಸಮಯಕ್ಕೆ ಸರಿಯಾಗಿ ತೆರೆದು ಸಿಬ್ಬಂದಿಗಳೆಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಿದರೆ, ನಮ್ಮ ಹಲವಾರು ಸಮಸ್ಯೆಗಳು ತನ್ನಿಂದ ತಾನಾಗಿಯೇ ಪರಿಹಾರಗೊಂಡೀತು. ನಾವೆಲ್ಲ ಹೇಗೆ ಅಂದರೆ ಬಸ್ಸು, ರೈಲು, ವಿಮಾನ ಗಳೆಲ್ಲ ಸಮಯಕ್ಕೆ ಸರಿಯಾಗಿ ಚಲಿಸಬೇಕು ಎಂದು ಬಯಸುತ್ತೇವೆ, ಆದರೆ ನಾವು ಮಾತ್ರ ಸಮಯ ಪರಿಪಾಲನೆಯಲ್ಲಿ ಹಿಂದೆಯೇ!

-ಬಿ ಎನ್ ಭರತ್, ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ಮೂರ್ತಿ, ಮಾವಳ್ಳಿ**
ಪ್ರೇಮಿಗಳು ಒಳ್ಳೆಯವರಂತೆ ಹೌದಾ ?
- ಅವರ ತಂದೆ-ತಾಯಿಗಳಿಗೆ ಮಾತ್ರ ಅಲ್ಲ !

● **ನರಸಿಂಹ ಜೋಶಿ, ರಾಯಚೂರು**
'ನಡುವೆ ಅಂತರವಿರಲಿ' ಎಂದು ಯಾಕೆ ಬರೆದಿರುತ್ತಾರೆ?
- 'ನಡು' ಎಂದು ಬರೆದಿದ್ರೆ ತಪ್ಪಾಯ್ತು ನೋಡು !

● **ಸೌಮ್ಯ ಹೆಗಡೆ, ಹೊನ್ನಾವರ**
ನನ್ನ ಹೃದಯವನ್ನು ಬಾಡಿಗೆಗೆ ಕೊಡಬೇಕೆಂದಿರುವೆ, ನಿಮ್ಮ ಅಭಿಪ್ರಾಯ ?
- ವಾಸ್ತು ನೋಡಿ ಹೇಳಲಾ ?

● **ಸದಾಶಿವ ದೊಣ್ಣೆಹಳ್ಳಿ, ಹಾಸನ**
ಸುಳ್ಳು ಹೇಳುವುದಿಲ್ಲ ಎನ್ನುವ ರಾಜಕಾರಣಿಯನ್ನು ನಂಬಬಹುದಾ?
- 'ನಾನು ನಿಜ ಹೇಳ್ತೇನೆ' ಎನ್ನುವ ರಾಜಕಾರಣಿಗಳನ್ನು ನಂಬೋದು ಕಷ್ಟ

● **ರಾಜೀವ್ ಕೆ.ಗೌಡ, ಕೋರಮಂಗಲ**
ಹೆಂಡತಿ ಪರಪುರುಷರನ್ನು ನೋಡಿದರೆ ಗಂಡನಿಗೆ ಕೋಪ ಬರುವುದೇಕೆ?
- ನಮ್ಮ ವೈಫೈ ಬೇರೆಯವರು ಬಳಸಿದರೆ ಕೋಪ ಬರೊಲ್ವಾ?!

● **ಯೋಗರಾಜ ಬಣತಿ, ಬೆಂಗಳೂರು**
ನಮ್ಮನ್ನು ಸರಿಯಾಗಿ ಅರ್ಥಮಾಡಿಕೊಳ್ಳುವವರು ಯಾರು?
- ನಮಗೆ ಸಾಲ ಕೊಟ್ಟವರು!

● **ಲಕ್ಷ್ಮಿನಾರಾಯಣ ಆಚಾರ್ಯ, ಮೈಸೂರು**
ಎಷ್ಟೋ ವರ್ಷಗಳ ಸ್ನೇಹಿತರು ಭೇಟಿಯಾದಾಗಲೂ ಮೊಬೈಲ್ನ್ನೇ ನೋಡ್ತಾ ಇರ್ತಾರಲ್ಲ?
-ಮುಖಾಮುಖಿ ಮಾತುಕತೆಗಿಂತ ಚಾಟಿಂಗೇ ವಾಸಿ!

● **ಗೌರೀಶ ಬಡಿಯೂರು, ಅರಸೀಕೆರೆ**
ರಾಜಕಾರಣಿಯಾಗಲು ಯಾವ ಲಕ್ಷಣಗಳಿರಬೇಕು?
-ಹೇಳಿದ ಮಾತನ್ನು ಮರೆಯಬೇಕು ಹಾಗೂ ಹೊಸ ಸುಳ್ಳುಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು!

● **ಜಾನಕಿ ರಾಮದಾಸ, ಚನ್ನಪಟ್ಟಣ**
ಎಲ್ಲ ಗಂಡಂದಿರೂ ಹೀಗೇನಾ?
- ಸಮಸ್ಯೆಯೇನೆಂದರೆ ಎಲ್ಲ ಹೆಂಡತಿಯರು ಹಾಗೇ?!

● **ಗಜಾನನ ಶಿಂತ್ರಿ, ಧಾರವಾಡ**
ನಾನು ಏನೇ ಮಾಡಿದರೂ ನನ್ನ ಹೆಂಡತಿಗೆ ಸಮಾಧಾನವಿಲ್ಲವಲ್ಲ?
-ಹೆಂಡತಿ ಹಾಗೂ ಸಮಾಧಾನವೆಂಬುದು ವಿರುದ್ಧಾರ್ಥಕ ಪದಗಳು ಗುರು!

ಬದುಕೆಂದರೆ ಪಯಣ, ನಾವೆಲ್ಲರೂ ಪಯಣಿಗರು!

ಸಾಮಾನ್ಯವಾಗಿ ಸ್ಪ್ಯಾನಿಶರು ಎಂದಲ್ಲ ಎಲ್ಲ ಯೂರೋಪಿಯನ್ನರು ಹದಿನಾರು ವರ್ಷದಿಂದ 30 ಅಥವಾ 35 ವರ್ಷದ ವರೆಗೆ ಜೀವನ ಎಂದರೆ ಮೋಜಿಗಾಗಿ ಇರುವುದು ಎನ್ನುವಂತೆ ಕಳೆಯುತ್ತಾರೆ. ಎಲ್ಲರೂ ಅಂತಲ್ಲ ಬಹುತೇಕರು ಕಳೆಯುವುದು ಹೀಗೆ. ಜೀವನ ವೆಂದರೆ ಕುಣಿಯುವುದು, ಕುಡಿಯುವುದು ಮತ್ತು ತಿನ್ನುವುದು ಎನ್ನುವಂತೆ ಕಳೆಯುತ್ತಾರೆ.

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಜೀವಮಾನದಲ್ಲಿ ಸಾಧ್ಯವಾದರೆ ಸ್ಪೇನ್ ಅನ್ನು ಒಮ್ಮೆಯಾದರೂ ನೋಡಬೇಕು. ಅದಕ್ಕೆ ಅನೇಕ ಕಾರಣಗಳಿವೆ, ವಯೋಮಾನಕ್ಕೆ ತಕ್ಕಹಾಗೆ ಅವರವರಿಗೆ ಬೇಕಾದ ಎಲ್ಲವನ್ನೂ ಸ್ಪೇನ್ ನೀಡುತ್ತದೆ. ಅದರಲ್ಲೂ ನೀವು ಇಪ್ಪತ್ತರಿಂದ ಮೂವತ್ತು ವರ್ಷದ ಆಸುಪಾಸಿನವರಾಗಿದ್ದರೆ ಇದು ಸ್ವರ್ಗ. ಸ್ಪೇನ್ ದೇಶದಲ್ಲಿನ 'ಇಬಿಸ' ಎನ್ನುವ ಐಲ್ಯಾಂಡ್ ಹೀಗೆ ಯುವಕ ಯುವತಿಯರು ನಡೆಸುವ ಪಾರ್ಟಿಗೆ ವಿಶ್ವ ಪ್ರಸಿದ್ಧ. ಯೂರೋಪಿನ ಎಲ್ಲ ದೇಶಗಳ ಜೊತೆ ಅಮೆರಿಕ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಹೀಗೆ ಜಗತ್ತಿನ ಎಲ್ಲ ಕಡೆಯಿಂದ ಯುವ ಜನತೆ ಇಲ್ಲಿಗೆ ಮೋಜು ಮಾಡಲು ಬರುತ್ತಾರೆ. ಅಂದಹಾಗೆ ಸ್ಪೇನ್‌ನಲ್ಲಿ ಐದಾರು ಗ್ರಾಂ ತನಕ ಮಾರುವನ (ಗಾಂಜಾ) ಎನ್ನುವ ಮಾದಕ ವಸ್ತುವನ್ನ ಕೊಳ್ಳುವುದು, ಸೇವಿಸುವುದು ಕಾನೂನು ಬದ್ಧವಾಗಿದೆ. ಹೀಗಾಗಿ ಇಲ್ಲಿ ಎಗ್ಗಿಲ್ಲದೆ ಎಲ್ಲೆಡೆಯಿಂದ ಕೇವಲ ತಿನ್ನುವುದಕ್ಕೆ, ಕುಡಿಯುವುದಕ್ಕೆ ಮತ್ತು ಮೋಜು ಮಾಡುವುದಕ್ಕೆ ಯುವ ಜನತೆ ಬಂದು ಸೇರುತ್ತಾರೆ. ಎಲ್ಲಿಗೆ ಹೊರಟೆ ಎಂದು ಯಾರಾದರೂ ಕೇಳಿದರೆ ಅದಕ್ಕೆ ನಿಮ್ಮ ಉತ್ತರ ಇಬಿಸ, ಸ್ಪೇನ್ ಎಂದು ಹೇಳಿದರೆ, ಹುಬ್ಬೇರಿಸಿ, ಮಜಾ ಮಾಡಿ ಎಂದು ಹೇಳುವುದು ಖಚಿತ.

ಊರು ಯಾವುದಾದರೂ ಆಗಿರಲಿ ಅದು ನನ್ನ ಜೀವನ ಶೈಲಿಯನ್ನ ಬದಲಿಸಲು ಆಗಿಲ್ಲ. ಪೀಣ್ಯ ಮನೆಯಲ್ಲಿದ್ದಾಗ ನೀರಿಗಾಗಿ ಪಟ್ಟ ಪರಿಪಾಟಲು ಒಂದೆರೆಡಲ್ಲ, ನೀರಿಗಾಗಿ ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಅಭ್ಯಾಸವಾಗಿ ಹೋಗಿತ್ತು. ಹೀಗಾಗಿ ಅದು ಇಂದಿಗೂ ಮುಂದುವರಿದಿದೆ. ರಾತ್ರಿ ಒಂಬತ್ತು ಅಥವಾ ಒಂಬತ್ತುವರೆಗೆ ನಿದ್ದೆ. ಹೀಗಾಗಿ ಯಾವುದೇ ದೇಶದಲ್ಲಿದ್ದರೂ ಅದೇ ನಿಯಮಾವಳಿಗಳನ್ನ ಪಾಲಿಸಿಕೊಂಡು ಬಂದಿದ್ದೇನೆ. ಒಂದು ಔನ್ಸ್ ಬಿಯರ್ ಕೂಡ ಕುಡಿಯದ, ಒಂದು ತುಂಡು ಮೊಟ್ಟೆ ತಿನ್ನದ, ರಾತ್ರಿ ಒಂಬತ್ತಕ್ಕೆ ನಿದ್ರಾದೇವಿಯ ತೆಕ್ಕೆಯಲ್ಲಿ ಪವಡಿಸುವ ನನ್ನಂತಹವರಿಗೆ ಇಬಿಸ ಅಲ್ಲವೇ ಅಲ್ಲ. ಅಲ್ಲಿನ ಬದುಕು ಶುರುವಾಗುವುದೇ ರಾತ್ರಿ 11 ರ ನಂತರ! ಬೆಳಗ್ಗಿನ ಐದೂವರೆ ಅಥವಾ ಆರಕ್ಕೆ ಪಾರ್ಟಿ ಮುಗಿಯುತ್ತದೆ. ಬೆಳಗಿನ ಜಾವ ಮೂರು ಅಥವಾ ನಾಲ್ಕರಿಂದ ಜನ ನಿಧಾನವಾಗಿ ಹೋಟೆಲ್ ರೂಮ್ ಸೇರಿಕೊಳ್ಳುತ್ತಾರೆ. ಹೆಚ್ಚು ದೈಹಿಕ ಶಕ್ತಿ ಇದ್ದವರು ಬೆಳಿಗ್ಗೆ ಆರರವರೆಗೆ ಪಾರ್ಟಿ ಮಾಡುತ್ತಲೆ ಇರುತ್ತಾರೆ. ನನಗೆ ಇಬಿಸಗೆ ಹೋಗಬೇಕು ಎನ್ನುವ ಮನಸ್ಸು ಇರಲಿಲ್ಲ. ಏಕೆಂದರೆ ಅಲ್ಲಿ ಬರಿ ಗಲಾಟೆ ಮತ್ತು ಗದ್ದಲ ಬಿಟ್ಟು ಬೇರೇನೂ ಇಲ್ಲ. ಹೀಗೆ ಯುವ ಜನತೆ ಸೇರಿದ ಮೇಲೆ ಮತ್ತು ಹೇಳಿಕೇಳಿ ಅದು ಮೋಜಿಗೆ ಪ್ರಸಿದ್ಧ ಎಂದ ಮೇಲೆ ಅಲ್ಲಿ ಹೊಡೆದಾಟ ಮತ್ತು ಕಿತ್ತಾಟ ಕೂಡ ಇದ್ದೆ ಇರುತ್ತದೆ. ಹೀಗಾಗಿ ಈ ಎಲ್ಲ ಗದ್ದಲಗಳಿಂದ ನಾನು ಮಾರುದೂರ. ಹೀಗಿದ್ದೂ ಎರಡು ದಿನದ ಮಟ್ಟಿಗೆ ಅಲ್ಲಿ ವಾಸ ಮಾಡಿದ ಅನುಭವ ಮರೆಯುವಂತಿಲ್ಲ. ಸಾಮಾನ್ಯವಾಗಿ ಸ್ಪ್ಯಾನಿಶರು ಎಂದಲ್ಲ ಎಲ್ಲ ಯೂರೋಪಿಯನ್ನರು ಹದಿನಾರು ವರ್ಷದಿಂದ 30 ಅಥವಾ 35 ವರ್ಷದ ವರೆಗೆ ಜೀವನ ಎಂದರೆ ಮೋಜಿಗಾಗಿ ಇರುವುದು ಎನ್ನುವಂತೆ ಕಳೆಯುತ್ತಾರೆ. ಎಲ್ಲರೂ ಅಂತಲ್ಲ ಬಹುತೇಕರು ಕಳೆಯುವುದು ಹೀಗೆ. ಜೀವನ ವೆಂದರೆ ಕುಣಿಯುವುದು, ಕುಡಿಯುವುದು ಮತ್ತು ತಿನ್ನುವುದು ಎನ್ನುವಂತೆ ಕಳೆಯುತ್ತಾರೆ. ಸಂಬಂಧಗಳ ಬಗ್ಗೆ ಕೂಡ ಸೀರಿಯಸ್ ಆಗಿರುವವರ ಸಂಖ್ಯೆ ಈ ವಯೋಮಾನದಲ್ಲಿ ಕಡಿಮೆ.

ಇನ್ನೊಂದು ಇದೆ ರೀತಿ ಜರ್ಮನ್ ಮತ್ತು ಬ್ರಿಟಿಷ್ ಜನರಿಗೆ ಇಷ್ಟವಾದ ಮೋಜಿನ ತಾಣ ಯೋರೆತ್ ದೆ ಮಾರ್. ಇಲ್ಲಿ ಕೂಡ ಸದಾ ಕಾಲ ಅಂದರೆ ಚಳಿಗಾಲ ಒಂದು ಬಿಟ್ಟು ಮಿಕ್ಕ ಸಮಯದಲ್ಲಿ ಪ್ರವಾಸಿಗರಿಂದ ತುಂಬಿ ತುಳುಕುತ್ತದೆ. ಇಬಿಸದಲ್ಲಿನ ಮಟ್ಟದ ಮೋಜಿಗಿಂತ ಒಂದಿಪತ್ತು ಪ್ರತಿಶತ ಕಡಿಮೆ ಎನ್ನಬಹುದು, ಮಿಕ್ಕಂತೆ ಉಳಿದೆಲ್ಲ ಇಲ್ಲೂ ಸೇಮ್. ಹೀಗಾಗಿ ಮೋಜನ್ನ ಬಯಸುವ ವಿಶ್ವದ ಎಲ್ಲೆಡೆಯಿಂದ ಇಂತಹ ಸ್ಥಳಕ್ಕೆ ಯುವ ಜನತೆ ಹಿಂಡುಹಿಂಡಾಗಿ ಬರುತ್ತಾರೆ. ಯೋರೆತ್ ದೆ ಮಾರ್‌ನಲ್ಲಿ ಸಂಸಾರ ಸಮೇತ

ಹಲವಾರು ತಿಂಗಳು ಕಳೆದಿದ್ದೇನೆ. ಅವರು ಮಾಡುವ ಯಾವುದನ್ನೂ ಮಾಡದೆ ನಮ್ಮದೇ ಆದ ಜೀವನವನ್ನ ಎಲ್ಲಿ ಬೇಕಾದರೂ ಕಟ್ಟಿಕೊಳ್ಳಬಹುದು ಎನ್ನುವುದನ್ನ ಅನುಭವಿಸಿ ಕಲಿತಿದ್ದೇನೆ.

ಮೊದಲ ಸಾಲಿನಲ್ಲಿ ಸ್ಪೇನ್‌ಗೆ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಸಾಧ್ಯವಾದರೆ ಭೇಟಿ ಕೊಡಬೇಕು ಎನ್ನುವ ಸಲಹೆಯನ್ನ ನೀಡಲು ನನ್ನ ಪ್ರಕಾರ ಕೆಲವು ಕಾರಣಗಳಿವೆ ಅವುಗಳನ್ನ ನಿಮಗಾಗಿ ಪಟ್ಟಿ ಮಾಡುತ್ತೇನೆ.

ಫುಡ್: ಸ್ಪ್ಯಾನಿಷ್ ಆಹಾರ ಜಗತ್ ವಿಖ್ಯಾತ. ಅದರಲ್ಲೂ ಸ್ಪ್ಯಾನಿಷ್ ತಾಪಸ್, ಪಿಕಾಪಿಕಾ ಬಹಳ ಪ್ರಸಿದ್ಧವಾಗಿದೆ. ಭಾರತೀಯರಂತೆ ಇಲ್ಲಿ ಕೂಡ ಹಲವಾರು ರೀತಿಯ ಖಾದ್ಯಗಳನ್ನ ತಯಾರಿಸುತ್ತಾರೆ. ಇಷ್ಟು ರೀತಿಯ ಆಹಾರ ಯೂರೋಪಿನ ಇತರ ನಗರಗಳಲ್ಲಿ ಅಥವಾ ದೇಶಗಳಲ್ಲಿ ಕಾಣಲು ಸಾಧ್ಯವಿಲ್ಲ. ಅಲ್ಲದೆ ಯೂರೋಪಿನ ಇತರ ನಗರಗಳಿಗೆ ಹೋಲಿಸಿದರೆ ಸ್ಪೇನ್‌ನ ಯಾವುದೇ ನಗರವೂ ಅಷ್ಟೊಂದು ದುಬಾರಿಯಲ್ಲ. ಆಹಾರದ ಗುಣಮಟ್ಟದ ಮುಂದೆ ನಾವು ನೀಡುವ ಹಣ ಏನೂ ಅಲ್ಲ ಎನ್ನಿಸುತ್ತದೆ.

ವೈನ್: ಸ್ಪೇನ್ ದೇಶದಲ್ಲಿ ತಯಾರಾಗುವ ವೈನ್ ವಿಶ್ವಮಾನ್ಯತೆ ಪಡೆದಿದೆ. ಇಲ್ಲಿ ವೈನ್ ಟೂರಿಸಂ ಎನ್ನುವುದು ಕೂಡ ಪ್ರಸಿದ್ಧವಾಗಿದೆ. ಇಲ್ಲಿನ ಹಳ್ಳಿ ಪ್ರದೇಶದಲ್ಲಿನ ಜೀವನ ಶೈಲಿಗೆ ಮರುಳಾಗದವರೇ ಕಡಿಮೆ.

ಬೀಚುಗಳು: ಬೀಚುಗಳು ಎಂದ ತಕ್ಷಣ ನಿಮಗೆ ಕೆರೆಬಿಯನ್ ಬೀಚುಗಳು ನೆನಪಿಗೆ ಬರುತ್ತದೆ ಅಲ್ಲವೇ? ಅದು ಸತ್ಯ ಕೂಡ. ಹಾಗೆಯೇ ಸ್ಪೇನ್ ದೇಶದ ಬೀಚುಗಳು ಕೂಡ ವಿಶ್ವಮಾನ್ಯ. ಕೋಸ್ಟಾ ಬ್ರಾವಾವನ್ನ ಸ್ಪೇನ್ ದೇಶದ ಬೀಚುಗಳ ಮುಕುಟಮಣಿ ಎಂದು ಕರೆಯಲಾಗುತ್ತದೆ. ಅಲ್ಲಿನ ಪ್ರಕೃತ್ತಿ ಸೌಂದರ್ಯವನ್ನ ಅನುಭವಿಸಿಯೇ ತಿರಬೇಕು. ಅಲ್ಲದೆ ಸ್ಪೇನ್‌ನ ಹಲವಾರು ಬೀಚುಗಳು ನ್ಯೂಡ್ ಬೀಚುಗಳು. ಹೀಗಾಗಿ ವಿಶ್ವದಾದಂತ್ಯ ಜನ ಇಲ್ಲಿಗೆ ಬರುತ್ತಾರೆ. ಸಾಮಾನ್ಯ ಬೀಚಿಗೂ ಮತ್ತು ನ್ಯೂಡ್ ಬೀಚಿಗೂ ಮಧ್ಯೆ ಗೆರೆಯೇನೂ ಎಳೆದಿರುವುದಿಲ್ಲ, ಹೀಗಾಗಿ ಸ್ವಲ್ಪ ದೂರದಿಂದ ಎಲ್ಲರಿಗೂ ಎಲ್ಲವೂ ಕಾಣುತ್ತಿರುತ್ತದೆ. ಹೀಗೆ ಅಪ್ಪ ಅಮ್ಮನನ್ನ ಬಾರ್ಸಿಲೋನಾ ಬೀಚಿಗೆ ಕರೆದುಕೊಂಡು ಹೋಗಿದ್ದೆ. ಹುಟ್ಟುಡುಗೆಯಲ್ಲಿದ್ದ ಅಲ್ಲಿನ ಜನರನ್ನ ಕಂಡು ಅಮ್ಮ 'ಪ್ರಾರಬ್ಧ ಮುಂಡೇದೆ ಇದೆಲ್ಲಿಗೆ ಕರೆದುಕೊಂಡು ಬಂದೆ ?' ಎಂದು ಗದರಿದ್ದಳು. ಆಮೇಲೆ ಅವರನ್ನ ಎಂದೆದಿಗೂ ಬೀಚಿಗೆ ಕರೆದುಕೊಂಡು ಹೋಗುವ ಸಾಹಸ ಮಾಡಲಿಲ್ಲ.

ಫೆಂಟಾಸ್ಟಿಕ್ ಫೀಯಸ್ತಾಸ್: ಸ್ಪೇನ್‌ನಲ್ಲಿ ಒಂದಲ್ಲ ಎರಡಲ್ಲ ಅನೇಕ ಹಬ್ಬಗಳಿವೆ, ಹಬ್ಬ ಎಂದ ತಕ್ಷಣ ಯಾವುದೋ ಧರ್ಮಕ್ಕೆ ಸಂಬಂಧ ಪಟ್ಟ ಆಚರಣೆ ಇರುತ್ತದೆ ಎನ್ನುವ ಭಾವನೆ ಬೇಡ. ಇವು ಫನ್ ಹಬ್ಬಗಳು, ಉದಾಹಣೆಗೆ ಗೂಳಿ ಓಟ ಅಥವಾ ಬುಲ್ ರನ್, ತಮಾತಿನ (ಟೊಮೋಟಿನ), ಕೊರ್ರೆ ಫೋಕ್.. ಹೀಗೆ ಧಾರ್ಮಿಕ ಹಬ್ಬಗಳ ಹೊರತು ಪಡಿಸಿ ಎಲ್ಲರೂ ಸೇರಿ ಕುಣಿಯಬಹುದಾದ ಹಬ್ಬಗಳಿಗೆ ಸ್ಪೇನ್‌ನಲ್ಲಿ ಕೊರತೆಯಿಲ್ಲ. ಇಲ್ಲೇನಿದ್ದರೂ, ಕೊಮೆರ್, ಕಾಂತರ್ ಮತ್ತು ಬೈಲಾರ್ ಅಂದರೆ ತಿನ್ನುವುದು, ಹಾಡುವುದು ಮತ್ತು ಕುಣಿಯುವುದು ಮುಖ್ಯವಾಗುತ್ತದೆ. ಜಗತ್ತಿನ ಬೇರಾವ ಭಾದೆಗಳು ಇಲ್ಲಿ ಬಾಧಿಸುವುದಿಲ್ಲ ಎನ್ನುವ ಮಟ್ಟದಲ್ಲಿ ಮೋಜು ಮಾಡುತ್ತಾರೆ.

ಯುನೆಸ್ಕೋ ಹೆರಿಟೇಜ್ ಸ್ಥಳಗಳು: ಸ್ಪೇನ್ ದೇಶದಲ್ಲಿ ಒಟ್ಟು 45 ಯುನೆಸ್ಕೋದಿಂದ ಮಾನ್ಯತೆ ಪಡೆದಿರುವ ಪ್ರೇಕ್ಷಣೀಯ ಸ್ಥಳಗಳಿವೆ. ಒಂದಕ್ಕಿಂತ ಒಂದನ್ನ ಜತನದಿಂದ ಕಾಯ್ದಿಟ್ಟಿದ್ದಾರೆ. ಜಗತ್ತಿನೆಲ್ಲೆಡೆಯಿಂದ ಜನ ಇವುಗಳ ವೀಕ್ಷಣೆಗೆ ಬರುತ್ತಾರೆ. ಫ್ರಾನ್ಸ್ ದೇಶದ ಪ್ಯಾರಿಸ್ ನಗರ ಮತ್ತು ಇಂಗ್ಲೆಂಡ್ ದೇಶದ ಲಂಡನ್‌ನಂತರ ಯೂರೋಪಿನಲ್ಲಿ ಅತಿ ಹೆಚ್ಚು ಜನ ಭೇಟಿ ನೀಡಿರುವ ಜಾಗ ಎನ್ನುವ ಕೀರ್ತಿಗೂ ಬಾರ್ಸಿಲೋನಾ ಭಾಜನವಾಗಿದೆ.

ಫುಟಬಾಲ್: ಬಾರ್ಸಿಲೋನಾ ಫುಟಬಾಲ್ ಕ್ಲಬ್ ಮತ್ತು ರಿಯಲ್ ಮ್ಯಾಡ್ರಿಡ್ ಫುಟ್ ಬಾಲ್ ಕ್ಲಬ್ ನಡುವಿನ ಆಟ ಅದು ಆಟವಲ್ಲ ಕದನ ಎನ್ನುವಂತಿರುತ್ತದೆ. ಸ್ಟೇಡಿಯಂನಲ್ಲಿನ ವಾತಾವರಣ ಕೂಡ ಭಾರತ ಮತ್ತು ಪಾಕಿಸ್ತಾನದ ನಡುವಿನ ಆಟದ ನೆನಪನ್ನ ತರಿಸುವಂತಿರುತ್ತದೆ. ಈ ಭಾಗದಲ್ಲಿ ಕ್ರಿಕೆಟ್ ಮತ್ತು ಇಂಗ್ಲಿಷ್ ಎರಡಕ್ಕೂ ಕವಡೆ ಕಿಮ್ಮತ್ತು ಇಲ್ಲ. ಇಲ್ಲಿ ಏನಿದ್ದರೂ ಅವರ ಭಾಷೆ ಅವರಿಗೆ ದೊಡ್ಡದು. ಇನ್ನು ಕ್ರಿಕೆಟ್ ಇಲ್ಲಿನ ಆಡುವುದೇ ಇಲ್ಲ. ಫುಟಬಾಲ್ ಇಲ್ಲಿನ ಪ್ರಮುಖ ಕ್ರೀಡೆ.

ವಿಶ್ವವಿಖ್ಯಾತ ಪ್ರವಾಸಿ ತಾಣಗಳು: ಸ್ಪೇನ್ ದೇಶದಲ್ಲಿ ಟೆನೆರಿಫ್ ಎನ್ನುವ ದ್ವೀಪವಿದೆ, ಇಬಿಸ ದ್ವೀಪವಿದೆ. ಮಯೋರ್ಕರ್, ಮೆನೊರ್ಕರ್, ಬಾರ್ಸಿಲೋನಾ, ಗ್ರನಾದ, ಅಲಿಕಾಂತೆ, ವಾಲೆನ್ಸಿಯಾ, ಮ್ಯಾಡ್ರಿಡ್, ಬಿಲ್ಬಾವ್ ಹೀಗೆ ವಿಖ್ಯಾತ ಸ್ಥಳಗಳ ಪಟ್ಟಿ ಬಹಳ ದೊಡ್ಡದಿದೆ. ಪ್ರತಿ ನಗರದಲ್ಲೂ ವಾರಗಟ್ಟಲೆ ಕಳೆಯಬಹುದಾದ ಅಂದರೆ ನೋಡಲು ಅಷ್ಟು ಸ್ಥಳಗಳಿವೆ. ಸ್ಪೇನ್ ದೇಶ ಪೂರ್ತಿ ಇಂಚಿಂಚೂ ನೋಡಲು ಅರ್ಹ ಸ್ಥಳಗಳಿಂದ ತುಂಬಿದೆ ಎಂದರೆ ಅದು ಅತಿಶಯೋಕ್ತಿ ಎನ್ನಿಸಿಕೊಳ್ಳುವುದಿಲ್ಲ.

ಇವೆಲ್ಲಕ್ಕಿಂತ ಅತ್ಯಂತ ಮುಖ್ಯವಾದ ಇನ್ನೊಂದು ಕಾರಣ ಇಲ್ಲಿನ ಜನ. ಹೌದು ಇಲ್ಲಿನ ಜನ ಬಹಳ ಒಳ್ಳೆಯವರು. ಅಲ್ಪಸ್ವಲ್ಪ ಸ್ಪ್ಯಾನಿಷ್ ಮಾತನಾಡಿದರೂ ಸಾಕು ನಮ್ಮವನು ಎಂದು ಅಪ್ಪಿಕೊಳ್ಳುವ ಮನೋಭಾವದವರು. ಸ್ಪೇನ್‌ನಲ್ಲಿ ಕಳೆದ ಒಂದೂವರೆ ದಶಕಕ್ಕೂ ಮೀರಿದ ವೇಳೆಯಲ್ಲಿ ನನಗೆ ರೇಸಿಸಂ ಕಾಡಿದ್ದು ಇಲ್ಲವೇ ಇಲ್ಲ ಎನ್ನಬಹುದು. ಆದ್ರೆ ಪಕ್ಕದಲ್ಲೇ ಇರುವ ಇಂಗ್ಲೆಂಡ್‌ನಲ್ಲಿ ಒಂದಲ್ಲ ಹಲವಾರು ಬಾರಿ ನಾನು ರೇಸಿಸಂ ಕಣ್ಣಾರೆ ಕಂಡಿದ್ದೇನೆ. ಟೀನ್ ಏಜ್ ಹುಡುಗ ಹುಡುಗಿಯರ ಗುಂಪು, ಅಂದರೆ 8 ರಿಂದ ಹತ್ತು ಜನರ ಗುಂಪು ಯಾವಾಗ ನಿಮ್ಮ ಮೇಲೆ ಅಟ್ಯಾಕ್ ಮಾಡುತ್ತದೆ ಹೇಳಲು ಬಾರದು. ವಿದ್ಯೆಗೆ ನೇವೇದ್ಯ ಹೇಳಿರುವ ಇಂತಹ ಮಕ್ಕಳಿಂದ ಬೇರೇನೂ ನಿರೀಕ್ಷಿಸಲು ಸಾಧ್ಯವಿಲ್ಲ. ಇಂಗ್ಲೆಂಡ್‌ನ ರಸ್ತೆಗಳಲ್ಲಿ ಒಂದಲ್ಲ ಹತ್ತಾರು ಬಾರಿ ಯು ಬ್ಲ.. ಇಂಡಿಯನ್ ಎಂದು ಕಿರುಚಿ ನಾವು ತಿರುಗಿ ನೋಡುವ ಮುಂಚೆ ಏನೂ ಆಗದಂತೆ ಸಾಗಿ ಹೋಗುವ ಜನರನ್ನ ಕಂಡಿದ್ದೇನೆ. ನೇರಾನೇರಾ ನೀವು ಬಂದು ನಮ್ಮ ಉದ್ಯೋಗ, ಬದುಕು ಕಸಿದು ಬಿಟ್ಟಿರಿ ಎನ್ನುವ ಆರೋಪವನ್ನ ಕೂಡ ಕೇಳಿದ್ದೇನೆ. ಆ ಕಾರಣಕ್ಕೆ ಮತ್ತು ಅಲ್ಲಿನ ಸದಾ ಮೋಡ ಕವಿದ ವಾತಾವರಣದ ಕಾರಣ ಇಂಗ್ಲೆಂಡ್ ಎಂದರೆ ನನ್ನ ಮಟ್ಟಿಗೆ ಅಷ್ಟಕಷ್ಟೇ. ಇಂತಹ ಕೆಟ್ಟ ಅನುಭವ ನನಗೆ ಬಾರ್ಸಿಲೋನಾದಲ್ಲಿ ಆಗಲೇ ಇಲ್ಲ, ಇಲ್ಲಿನ ಜನ ಪ್ರವಾಸಿಗರನ್ನ ಕೂಡ ಅಷ್ಟೇ ಪ್ರೀತಿಯಿಂದ ಕಾಣುತ್ತಾರೆ.

ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಸೌಂದರ್ಯ ಇದ್ದೆ ಇರುತ್ತದೆ. ನಾವೇಕೆ ಅಲ್ಲಿಗೆ ಹೋಗಬೇಕು ಎನ್ನುವುದಕ್ಕೆ ಸಬಲ ಕಾರಣಗಳು ಇರುತ್ತವೆ. ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಇದ್ದೆ ಇರುತ್ತದೆ. ಒಳಿತನ್ನ ತನ್ನದಾಗಿಸಿಕೊಳ್ಳುತ್ತಾ, ಕೆಟ್ಟದನ್ನ ಬಿಟ್ಟು ಮುಂದೆ ಸಾಗುವ ಪ್ರಯಾಣವೇ ಬದುಕು. ಅಂತಹ ಬದುಕು ನಮ್ಮದಾಗಲಿ.

ಪ್ರಸ್ತುತ

ರಾಸುಮ ಭಟ್

ಮಹಾರಾಷ್ಟ್ರದ ಉದ್ಧಟತನಕ್ಕೆ ಕಡಿವಾಣ ಅಗತ್ಯ

ಭಾರತದಲ್ಲಿ ಒಂದು ಪ್ರದೇಶದದಿಂದ ಇನ್ನೊಂದು ಪ್ರದೇಶದಲ್ಲಿ ಆಚಾರ -ವಿಚಾರ, ಭಾಷೆ, ವೇಷ, ಆಹಾರ ಪದ್ಧತಿ ವಿಭಿನ್ನವಾಗಿದ್ದರು ದೇಶದ ವಿಚಾರಕ್ಕೆ ಬಂದಾಗ ಏಕತೆಯನ್ನು ಪ್ರತಿಯೊಬ್ಬರು ಪ್ರದರ್ಶಿಸುತ್ತಾರೆ.

ಇತ್ತೀಚಿಗೆ ಮಹಾರಾಷ್ಟ್ರದ ಗಡಿಯಲ್ಲಿನ ಕನ್ನಡ ಶಾಲೆಗಳಿಗೆ ಮಾರಾಠಿ ಶಿಕ್ಷಕರನ್ನು ನೇಮಕ ಮಾಡುವ ಮೂಲಕ ವ್ಯವಸ್ಥಿತವಾಗಿ ಕನ್ನಡವನ್ನು ತುಳಿಯುವ ಪ್ರಯತ್ನವಾಗಿದ್ದು ಕನ್ನಡಿಗರು ಇದರ ವಿರುದ್ಧ ಹೋರಾಟ ಮಾಡುವುದು ಅನಿವಾರ್ಯವಾಗಿದೆ. ಭಾರತ ಸ್ವಾತಂತ್ರ್ಯವಾದ ಮೇಲೆ ಭಾಷಾ ಪ್ರಾಂತ್ಯಗಳ ರಚನೆಯಾಯಿತು. ಅದಕ್ಕೆ ಮೂಲ ಕಾರಣ ಆಂಧ್ರದ ಪೊಟ್ಟಿ ಶ್ರೀರಾಮುಲು, 1952ರಲ್ಲಿ ಅಖಂಡ ಆಂಧ್ರಪ್ರದೇಶ ರಾಜ್ಯ ರಚನೆಗೆ ಒತ್ತಾಯಿಸಲಾಯಿತು, ಮಹಾತ್ಮ ಗಾಂಧಿಯ ಅನುಯಾಯಿಯಾಗಿದ್ದ ಚೆನ್ನೈನ ಪೊಟ್ಟಿ ಶ್ರೀರಾಮುಲು(ಅಮರಜೀವಿ ಶ್ರೀರಾಮುಲು) 58 ದಿನಗಳ ಕಾಲ ಅನ್ನಾಹಾರ ತ್ಯಜಿಸಿದರು ಹಾಗೂ ಕೊನೆಗೆ ಡಿಸೆಂಬರ್ 15ರ ನಡುರಾತ್ರಿಯಲ್ಲಿ ಮರಣಹೊಂದಿದರು. ಇದಾದ ನಂತರ ಭಾರತದ ಮೊಟ್ಟ ಮೊದಲ ಭಾಷಾವಾರು ಪ್ರಾಂತ್ಯವಾಗಿ ಆಂಧ್ರಪ್ರದೇಶ ಹುಟ್ಟಿಕೊಂಡಿತು. ಇದೆ ಸಮಯದಲ್ಲಿ ಕನ್ನಡ ಮಾತಾನಾಡುವ ಪ್ರದೇಶಗಳಲ್ಲಿ ಹೋರಾಟ ಮೈಸೂರು ರಾಜ್ಯವಾಗಿ ನಂತರ ಕರ್ನಾಟಕ ರಾಜ್ಯವಾಯಿತು, ಈ ಸಮಯದಲ್ಲಿ ಕನ್ನಡ ಬಾಷಿಕರು ಮಹಾರಾಷ್ಟ್ರದಲ್ಲಿ ಮತ್ತು ಮರಾಠಿ ಬಾಷಿಕರು ಕರ್ನಾಟಕದ ಪ್ರದೇಶಗಳಲ್ಲಿ ಉಳಿಯುವಂತಾಯಿತು. ನಂತರ 1956 ಭಾಷಾವಾರು ಪ್ರಾಂತ್ಯಗಳ ರಚನೆಯಾಯಿತು, ಈ ರಚನೆಯ ಉದ್ದೇಶ ಪ್ರಾದೇಶಿಕ ಭಾಷೆಗಳು ಉಳಿಯಬೇಕು, ಬೆಳೆಯಬೇಕು ಮತ್ತು ಅಭಿವೃದ್ಧಿ ಹೊಂದಬೇಕು ಎಂಬುದು. ಮಕ್ಕಳು ಯಾವ ಭಾಷೆಯನ್ನಾದರೂ ಕಲಿಯಲಿ, ಎಷ್ಟು ಭಾಷೆಗಳನ್ನಾದರೂ ಕಲಿಯಲಿ, ಆದರೆ ಪ್ರಾದೇಶಿಕ ಭಾಷೆಗೆ ಆದ್ಯತೆ ನೀಡವು ಮುಖ್ಯವಾಗಿರುತ್ತದೆ. ಆದರೆ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಮಧ್ಯೆ 1956 ರ ರಾಜ್ಯಗಳ ಮರುಸಂಘಟನೆ ಕಾಯಿದೆಯ ಪ್ರಕಾರ ರಾಜ್ಯ ಗಡಿಗಳನ್ನು ಭಾಷಾವಾರು ರೇಖೆಗಳ ಮೇಲೆ ಪುನಃ ರಚಿಸಿದಾಗ, ಬೆಳಗಾವಿಯು ಹಿಂದಿನ ಮೈಸೂರು ರಾಜ್ಯದ ಭಾಗವಾಯಿತು. ಈ ಕಾಯಿದೆಯು 1953 ರಲ್ಲಿ ನೇಮಕ ಗೊಂಡ ನ್ಯಾಯಮೂರ್ತಿ ಫಜಲ್ ಅಲಿ ಆಯೋಗದ ಸಂಶೋಧ ನೆಗಳನ್ನು ಆಧರಿಸಿದೆ ಮತ್ತು ಎರಡು ವರ್ಷಗಳ ನಂತರ ತನ್ನ ವರದಿಯನ್ನು ಸಲ್ಲಿಸಿತು. ಮರಾಠಿ ಪ್ರಾಬಲ್ಯವಿರುವ ಬೆಳಗಾವಿಯ ಭಾಗಗಳು ಮಹಾರಾಷ್ಟ್ರದಲ್ಲಿ ಉಳಿಯಬೇಕು ಎಂದು ಮಹಾರಾಷ್ಟ್ರ ಪ್ರತಿಪಾದಿಸುತ್ತಿರುವುದು ಎರಡು ರಾಜ್ಯಗಳ ನಡುವಿನ ಮುಖ್ಯ ವಿವಾದವಾಗಿದೆ. ಮಹಾರಾಷ್ಟ್ರ ಸರಕಾರ ಸದಾ ಗಡಿ ವಿವಾದ ತೆಗೆದು ಕನ್ನಡಿಗರಿಗೆ ನೋವುಂಟು ಮಾಡುತ್ತಲೆಯಿರುತ್ತದೆ. ಕರ್ನಾಟಕ ರಾಜ್ಯ ಶೇ.60 ರಷ್ಟು ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸಿದ್ದನ್ನು ಮಹಾರಾಷ್ಟ್ರ ಸರಕಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿರುವುದು, ಗಡಿ ಭಾಗದಲ್ಲಿ ಕನ್ನಡಿಗರು ಹೆಚ್ಚಿರುವ ಪ್ರದೇಶದಲ್ಲಿ ಮರಾಠಿ ಅಧಿಕಾರಿಗಳನ್ನು ನೇಮಿಸುವ ಮೂಲಕ ಅಧಿಕಾರ ಸ್ಥಾಪಿಸಲು ಪ್ರಯತ್ನ ಪಡುವುದು ಮತ್ತು ಮಹಾರಾಷ್ಟ್ರದ ಚಂದಾಪುರದಲ್ಲಿ ಕಲ್ಲಿದ್ದಲು ಮಾಫಿಯಾದವರಿಂದ ಕರ್ನಾಟಕ ವಿದ್ಯುತ್ ಪ್ರಸರಣೆ ಇಲಾಖೆಯಲ್ಲಿನ 40 ಅಧಿಕಾರಿಗಳ ಮೇಲೆ ದಾಳಿಮಾಡಿಸಿರುವುದು ಭಾರತದಂತಹ ಒಕ್ಕೂಟ ವ್ಯವಸ್ಥೆಯಲ್ಲಿ ಉತ್ತಮ ಬೆಳವಣಿಗೆಯಲ್ಲ.

ಈಗ ಮಹಾರಾಷ್ಟ್ರ ಸರಕಾರ ಒಂದು ಹೆಜ್ಜೆ ಮುಂದೆ ಹೋಗಿ ಗಡಿ ಭಾಗದ ಸಾಂಗ್ಲಿ ಮತ್ತು ಸೊಲ್ಲಾಪುರದ ಕನ್ನಡ ಶಾಲೆಗಳಿಗೆ ಮರಾಠಿ ಅಧಿಕಾರಿಗಳನ್ನು ನೇಮಿಸುವ ಮೂಲಕ ಗಡಿ ಪ್ರದೇಶದಲ್ಲಿ ಕನ್ನಡ ಭಾಷೆಯನ್ನು ಭವಿಷ್ಯದಲ್ಲಿ ಅಳಿಸಿ ಹಾಕುವ ಹುನ್ನಾರವನ್ನು ಮಹಾರಾಷ್ಟ್ರ ಸರಕಾರದ ಧೋರಣೆಯಾಗಿದೆ, ಇದನ್ನು ಕರ್ನಾಟಕ ಸರಕಾರ ತಡೆಯಬೇಕು ಮತ್ತು ಸರಕಾರಕ್ಕೆ ಎಲ್ಲ ಕನ್ನಡಿಗರು ಬೆಂಬಲ ನೀಡಬೇಕು. 1980 ರ ದಶಕದಲ್ಲಿ ಕನ್ನಡಕ್ಕಾಗಿ ಗೋಕಾಕ್ ಚಳುವಳಿ ನಡೆದು ಯಶ್ವಸಿ ಸಹ ಆಗಿತ್ತು, ಪ್ರಸ್ತುತ ಇಂತಹ ಚಳುವಳಿಯ ಅಗತ್ಯವಿದ್ದು ಕನ್ನಡ ಚಿತ್ರರಂಗ, ಕನ್ನಡ ಹೋರಾಟ ಸಂಘಟನೆಗಳು ಸರಕಾರಕ್ಕೆ ಬೆಂಬಲ ನೀಡುವ ಮೂಲಕ ಮಹಾರಾಷ್ಟ್ರ ಸರಕಾರದ ಕನ್ನಡ ಬಾಷೆಯ ಮೇಲಿನ ದೌರ್ಜನ್ಯವನ್ನು ತಡೆಯಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವಂತೆ ಮಾಡುವ ಮೂಲಕ ಕನ್ನಡವನ್ನು ರಕ್ಷಿಸಬೇಕು.

(ಲೇಖಕರು: ಸಂಶೋಧನಾ ವಿದ್ಯಾರ್ಥಿ, ಹವ್ಯಾಸಿ ಬರಹಗಾರರು)

ಸಂಸದೀಯ ಚುನಾವಣೆ ಹೇಳಿ ಹೋದ ಪಾಠಗಳು

ಅಭಿಮತ

ಪ್ರೊ.ಆರ್.ಜಿ.ಹೆಗಡೆ
Sprakashbjpgmail.com

ಚುನಾವಣೆ ಎಬ್ಬಿಸಿದ ಧೂಳು ಗಾಳಿಯಲ್ಲಿ ಕರಗಿಹೋಗಿ ವಾತಾವರಣ ಸ್ವಚ್ಛವಾದಂತೆ ಅದು ಹೇಳಿ ಹೋದ ಪಾಠಗಳು ಸ್ಪಷ್ಟವಾಗಿ ಗೋಚರಿಸಲಾರಂಭಿಸಿವೆ. ಮೊದಲ ಪಾಠ 'ಬಹಿರಂಗ' ಪ್ರಚಾರದ ಸಂಪೂರ್ಣ ಅಪ್ರಸ್ತುತತೆ ಮತ್ತು ಅದನ್ನು ರಾಜಕೀಯ ಪಕ್ಷಗಳು ಹಾಗೂ ಜನತೆ ಗುರುತಿಸಿದಂತಿರುವುದು. ಬಹಿರಂಗ ಪ್ರಚಾರ ಎಂದರೇನು ಎಂಬುದು ಎಲ್ಲರಿಗೂ ಗೊತ್ತಿದೆ. ರಾಜಕೀಯ ಪಕ್ಷಗಳು ಜನರನ್ನು ತಮ್ಮ ಕಡೆ ಸೆಳೆಯಲು ಪ್ರಚಾರ ನಡೆಸುತ್ತವೆ. ಇಂತಹ ಪ್ರಚಾರದ ಭಾಗವಾಗಿ ಪಕ್ಷಗಳ ದೊಡ್ಡ ದೊಡ್ಡ ನಾಯಕರು ದೇಶದ ವಿವಿಧ ಭಾಗಗಳಿಗೆ ಹೋಗುತ್ತಾರೆ. ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಭಾಷಣ ಮಾಡುತ್ತಾರೆ. ತಮ್ಮ ರಾಜಕೀಯ ತತ್ವಜ್ಞಾನವನ್ನು ಜನರ ಮುಂದೆ ಪ್ರಸ್ತುತ ಪಡಿಸುತ್ತಾರೆ. ಅದನ್ನು ಒಪ್ಪಿಕೊಳ್ಳುವಂತೆ ಹಾಗೂ ತಮ್ಮ ವಿರೋಧಿಗಳ ವಿಚಾರಧಾರೆಯನ್ನು ತಿರಸ್ಕರಿಸುವಂತೆ ಜನರ ಮನವೊಲಿಸಲು ಪ್ರಯತ್ನಿಸುತ್ತಾರೆ. ಇನ್ನೊಂದು ತಂತ್ರ ರೋಡ್ ಶೋಗಳನ್ನು ನಡೆಸುವುದು. ಬೈಸಿಕಲ್ ಅಥವಾ ಮೋಟರ್ ಸೈಕಲ್ ರ್‍ಯಾಲಿಗಳೂ ಇದರ ಭಾಗ. ಅಂದರೆ ನಾಯಕರು ಬೀದಿಗಳಲ್ಲಿ ನಡೆದುಕೊಂಡು ಅಥವಾ ವಾಹನಗಳ ಮೇಲೆ ನಿಂತು ಜನರ ಹತ್ತಿರದ ಸಂಪರ್ಕಕ್ಕೆ ಬರುವುದು. ಆ ಮೂಲಕ ಪಕ್ಷ ಮತ್ತು ಜನರ ನಡುವೆ ಮಾನಸಿಕ ಸಂಪರ್ಕ ಏರ್ಪಡಿಸಲು ಪ್ರಯತ್ನಿಸುವುದು. ಕಾರ್ಯಕರ್ತರು ಗುಂಪು ಗುಂಪಾಗಿ ಮನೆ ಮನೆಗೆ ತೆರಳಿ ಜನರ ಮನವೊಲಿಸುವುದು ಮತ್ತೊಂದು ತಂತ್ರ. ಮೈಕುಗಳು ಮೊಳಗುತ್ತಿರುತ್ತವೆ. ಗೌಜು ಗದ್ದಲವಿರುತ್ತದೆ. ಜನ ತಮಗೆ ಮತ ನೀಡುವ ರೀತಿಯ ಮಾನಸಿಕ 'ಹವಾ' ಸೃಷ್ಟಿಸುವುದು ನಾಯಕರ/ಪಕ್ಷಗಳ ಗುರಿ. ಸುದ್ದಿ ಮಾಧ್ಯಮಗಳು ಕಡಿಮೆಯಿದ್ದ, ದೃಶ್ಯ ಮಾಧ್ಯಮ ಮತ್ತು ಸೋಶಿಯಲ್ ಮೀಡಿಯಾ ಇಲ್ಲದೆಯೇ ಹೋಗಿದ್ದ ಹಿಂದಿನ ದಿನಗಳಲ್ಲಿ ಇವೆಲ್ಲವುಗಳ ಅಗತ್ಯತೆ ಇತ್ತು. ನಾಯಕರನ್ನು ನೋಡಲು ಅಥವಾ ಕೇಳಲು ಬಹಿರಂಗ ಪ್ರಚಾರ ಬಿಟ್ಟರೆ ಬೇರೆ ದಾರಿಯೇ ಇರಲಿಲ್ಲ. ಹಾಗಾಗಿ ಸಭೆಗಳಿಗೆ ಜನ ಸೇರುತ್ತಿದ್ದರು. ಸಹಜವಾಗಿ ಚುನಾವಣೆಗಳು ಗದ್ದಲದ ಸಂತೆಗಳಾಗಿದ್ದವು. ರಾಜಕೀಯ ಜಾತ್ರೆಗಳಾಗಿದ್ದವು. ಜನ ಆಯಾ ಪಕ್ಷದ ಗುರುತಾದ ಬಣ್ಣದ ಶಾಲು ಹೊದೆದು, ಹಣೆಗೆ ಬಣ್ಣಬಣ್ಣದ ತಿಲಕ ಹಚ್ಚಿ, ಕೈ ಮುಗಿಯುತ್ತ, ಕಾಲು ಹಿಡಿಯುತ್ತ ಗಡಿಬಿಡಿಯಲ್ಲಿ ಅಡ್ಡಾಡುತ್ತಿದ್ದರು. ತಮ್ಮಟೆಗಳು, ಜಾಗಟೆಗಳು, ಡೋಲುಗಳು ಇತರ ಕರ್ಕಶ ವಾದ್ಯಗಳು ಕಿವಿಯನ್ನು ಅಪ್ಪಳಿಸುತ್ತಿದ್ದವು.

ಮತ್ತೆ ಕೆಲವು ವರ್ಷಗಳ ಹಿಂದೆ ಬೇರೆಯವೂ ಇದ್ದವು. ಅಪರಿಮಿತ ಪೋಸ್ಟರ್‌ಗಳು, ಪಕ್ಷಗಳ ಧ್ವಜಗಳು, ಪತಾಕೆಗಳು, ಗೋಡೆಬರಹಗಳು, ಭಿತ್ತಿಚಿತ್ರಗಳು ಬಹಿರಂಗ ಪ್ರಚಾರದ ಭಾಗವಾಗಿದ್ದವು. ಆದರೆ ಟಿ.ಎನ್ ಶೇಷನ್ ದೇಶದ ಮುಖ್ಯ ಚುನಾವಣಾ ಆಯುಕ್ತರಾಗಿ ಬಂದು ಅವಕ್ಕೆಲ್ಲ ಕಡಿವಾಣ ಹಾಕಿದ ನಂತರ ಕ್ರಮೇಣ ಅಂಥವು ಕಡಿಮೆಯಾಗುತ್ತ ಹೋಗಿ ಈಗಂತೂ ಅವೆಲ್ಲ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾಗಿ ಹೋಗಿವೆ. ಉಳಿದಂತೆ ಮೇಲೆ ಹೇಳಿದ ರೀತಿಯ ಬಹಿರಂಗ ಪ್ರಚಾರ, ಗೌಜು ಗದ್ದಲ ಕಡಿಮೆಯಾಗುತ್ತ ಬಂದರೂ ಉಳಿದೇ ಇತ್ತು, ಇತ್ತೀಚಿನವರೆಗೂ.

ಆದರೆ ಈ ಚುನಾವಣೆಯ ವಿಶೇಷವೆಂದರೆ ಹೆಚ್ಚು ಕಡಿಮೆ ಬಹಿರಂಗ ಪ್ರಚಾರ ಅಪ್ರಸ್ತುತವೇ ಆಗಿಹೋಗಿದ್ದು. ಹಾಗೆಯೇ ಅದರ ಅಪ್ರಸ್ತುತತೆ ರಾಜಕಾರಣಿಗಳಿಗೆ ಹಾಗೂ ಜನತೆಗೆ ಸಂಪೂರ್ಣವಾಗಿ ಅರ್ಥವಾಗಿ ಹೋಯಿತು ಅನಿಸುತ್ತದೆ. ಏಕೆಂದರೆ ರಾಜಕಾರಣಿಗಳು ಮೊದಲಿನ ರೀತಿಯಲ್ಲಿ ಬಹಿರಂಗ ಪ್ರಚಾರದಲ್ಲಿ ತೊಡಗಲೇ ಇಲ್ಲ. ಅಥವಾ ಬಹಳ ಕಡಿಮೆ. ಬಹುಶಃ ಇದಕ್ಕೆ ಹಲವು ಕಾರಣಗಳಿವೆ. ಒಂದನೆಯದು, ರಾಷ್ಟ್ರೀಯವಾಗಿ ಜನರನ್ನು ಸೆಳೆಯುವ ಆಕರ್ಷಣೆ ಇರುವ ನಾಯಕರು ಈಗ ಇರುವುದು ಒಬ್ಬರು ಅಥವಾ ಇಬ್ಬರು. ಹಿಂದಿನಂತೆ ಇಡೀ ಜನಸಮೂಹವನ್ನು ತಮ್ಮ ಮಾತಿನ ತಾಳಕ್ಕೆ ಕುಣಿಸಬಲ್ಲ ಪ್ರಖರ ವಾಗ್ಮಿಗಳು ತೀರ ಕಡಿಮೆ. ಒಬ್ಬಿಬ್ಬರು ಮಾತ್ರ. ಇನ್ನೊಂದು ಕಡೆಯಿಂದ ನೋಡಿದರೆ ಇರುವ ಮಹಾನಾಯಕರ ಇಡೀ ಭಾಷಣವನ್ನು ಕೇಳುವ ಪುರುಸೊತ್ತು ಇರುವ ಜನ ಕೂಡ ಕಡಿಮೆಯೇ. ದ್ರಶ್ಯ ಮಾಧ್ಯಮ ಕೈ ಬೆರಳ ತುದಿಯಲ್ಲಿ ಲಭ್ಯವಿರುವ ಇಂದಿನ ದಿನಗಳಲ್ಲಿ ಮನೆಗಳಲ್ಲಿ ಕುಳಿತು, ಅಥವಾ ಮೊಬೈಲುಗಳಲ್ಲಿ ಮಾತನ್ನು 'ನೋಡುವುದು' ಸುಖ ಎಂಬ ಭಾವನೆ ಜನರಿಗೆ ಬಂದಿದೆ. ಹೀಗಾಗಿ ಸಾರ್ವಜನಿಕ ಪ್ರಚಾರದಲ್ಲಿ ಭಾಗವಹಿಸುವುದು ಅವರಿಗೆ ಇಷ್ಟವಿಲ್ಲ. ಮನೆಯಿಂದ ಹೊರಬರುವುದೂ ಹೆಚ್ಚಿನವರಿಗೆ ಇಷ್ಟವಿಲ್ಲ. ಅಲ್ಲದೆ ಹಲವು ಜನರ ಅಭಿಪ್ರಾಯದಲ್ಲಿ ರಾಜಕಾರಣಿಗಳ ಮಾತಿನಲ್ಲಿ ಅಂತಹ ಕೇಳಲೇಬೇಕಾದ ವಿಷಯವೇನೂ ಇರುವುದಿಲ್ಲ. ಅಲ್ಲಿರುವುದು ಬರೀ ಕೆಸರು ಚೆಲ್ಲಾಟ ಎನ್ನುವ ಭಾವನೆ ಅವರದು.

ಬಹುಶಃ ರಾಜಕಾರಣಿಗಳ ಅಭಿಪ್ರಾಯ ಇದಕ್ಕೆ ವಿರುದ್ಧವಾಗಿದೆ. ಅವರ ಪ್ರಕಾರ ದೊಡ್ಡ ದೊಡ್ಡ, ರಾಷ್ಟ್ರೀಯ- ಅಂತಾರಾಷ್ಟ್ರೀಯ ವಿಷಯ ಹೇಳಿದರೆ ಜನರಿಗೆ ಅರ್ಥವಾಗುವುದೇ ಇಲ್ಲ. ಅದೆಲ್ಲ ಅವರಿಗೆ ಬೇಡ. ಸರಕಾರಗಳಿಂದ, ರಾಜಕಾರಣದಿಂದ ತಮಗೇನು ಸಿಗುತ್ತದೆ ಎನ್ನುವುದಷ್ಟೇ ಜನರಿಗೆ ಬೇಕಿರುವುದು. ಹಾಗೆಯೇ ರಾಜಕಾರಣಿಗಳ ಅಭಿಪ್ರಾಯದಲ್ಲಿ ಜನರನ್ನು 'ಸೇರಿಸುವುದು' ಬಹಳ ಕಠಿಣವಾದ, ಅಲ್ಲದೆ ತುಟ್ಟಿಯ ವಿಷಯ. ಬರುವ ಜನರಿಗೆ ಊಟ, ತಿಂಡಿ, ಆಳು ಪಗಾರು, 'ಮತ್ತಿತರ' ವ್ಯವಸ್ಥೆ ಮಾಡಬೇಕು. ವಾಹನ ಬಾಡಿಗೆ ಭರಿಸಬೇಕು. ಇದೆಲ್ಲ ಮಾಡುವುದಕ್ಕಿಂತಲೂ ನೇರವಾಗಿ ಜನರಿಗೆ ಕವರ್‌ನಲ್ಲಿ ಹಾಕಿ 'ವ್ಯವಸ್ಥೆ' ಮಾಡಿಬಿಟ್ಟರೆ ಹೆಚ್ಚು ಕೊಡಲು ಪೂರೈಸುತ್ತದೆ. ಅಲ್ಲದೆ ಬರುವವರು ಹೆಚ್ಚು ಕಡಿಮೆ ಬಾಡಿಗೆ ಜನ. ಎಲ್ಲ ಪಕ್ಷದ ರ್‍ಯಾಲಿಗಳಿಗೂ ಬರುವವರು ಅವರೇ. ಬಂದವರೆಲ್ಲ ಪರವಾಗಿ ಮತಹಾಕಿಬಿಡುತ್ತಾರೆ ಎಂದೇನೂ ಇಲ್ಲ. ಮತ್ತೆ ರಾಜಕಾರಣಿಗಳಿಗೆ ಗೊತ್ತಿದೆ. ಬಹಿರಂಗ ಪ್ರಚಾರಕ್ಕಿಂತಲೂ 'ಅಂತರಂಗ' ಪ್ರಚಾರವೇ ಮೇಲು. ಅದಕ್ಕೇ ಹೆಚ್ಚಿನ 'ಶಕ್ತಿ' ಇದೆ. ಬಹಿರಂಗದ ಮಾತು ಜೊಳ್ಳಾಗಿ ಹಾರಿಹೋಗುತ್ತದೆ.

ಈ ಕಾರಣಗಳಿಂದಾಗಿ ಬಹಿರಂಗ ಪ್ರಚಾರದ ವಿಷಯದಲ್ಲಿ ರಾಜಕಾರಣಿಗಳು ಮತ್ತು ಜನರ ಆಶಯ, ಲೆಕ್ಕ, ಹೋಗಿ, ಹೋಗಿ, ಒಂದೇ ಕಡೆ ಕೂಡಿ ಬಿಡುತ್ತವೆ. ಹಾಗಾಗಿ ಬಹುಶಃ ಎರಡೂ ಕಡೆಯವರಿಗೂ ಬಹಿರಂಗ ಪ್ರಚಾರದಲ್ಲಿ ವಿಶೇಷ ಆಸಕ್ತಿಯಿಲ್ಲ. ಈ ದೃಷ್ಟಿಯಿಂದ ಈ ಚುನಾವಣೆ ಹಿಂದಿನ ಚುನಾವಣೆಗಳಂತಿರಲಿಲ್ಲ. ಬಹುತೇಕ ಕಡೆ ಅಬ್ಬರ, ಗದ್ದಲ, ಜೈಕಾರ ಇತ್ಯಾದಿ ಕೇಳಿಸಲೇ ಇಲ್ಲ. ಡೋಲು, ತಮಟೆ, ತಾಳ ಇತ್ಯಾದಿ ವಾದ್ಯಗಳ ಗೌಜು ಬಹಳ ಕಡಿಮೆ ಇತ್ತು. ಚುನಾವಣೆ ಬಂದಿದ್ದು ಹೋಗಿದ್ದು ತಿಳಿಯಲೇ ಇಲ್ಲ.ಪ್ರಚಾರಕ್ಕೆ ಜನರ ಪ್ರತಿಕ್ರಿಯೆಯ ರೀತಿ ಎಷ್ಟು ನೀರಸವಾಗಿತ್ತೆಂದರೆ ಸಾರ್ವಜನಿಕ ಪ್ರಚಾರದ ಅವಧಿಯನ್ನು ಅರ್ಧಕ್ಕೆ ಇಳಿಸಿದರೂ ಸಾಕು ಅನಿಸುತ್ತದೆ. ಹೇಗೂ ಚುನಾವಣೆಗೆ ಸ್ಪರ್ಧಿಸಿದವರ ವಿವರ ಇತ್ಯಾದಿಗಳು ಜನರಿಗೆ ಮಾಧ್ಯಮಗಳ ಮೂಲಕ ಬೇಕಾದಷ್ಟು ತಿಳಿದಿರುತ್ತವೆ. ಅಂತರಂಗದ ಪ್ರಚಾರಕ್ಕೆ ಅಷ್ಟೊಂದು ದಿನಗಳೇನೂ ಬೇಡ.

ಈ ಸಲದ ಚುನಾವಣೆಯಲ್ಲಿ ಬಸ್ಸುಗಳಲ್ಲಿ, ಅಂಗಡಿ ಕಟ್ಟೆಗಳ ಮುಂದೆ, ಬಾರುಗಳಲ್ಲಿ ಅಂತಹ ಸ್ಥಳಗಳಲ್ಲಿ ರಾಜಕೀಯ ಚರ್ಚೆಗಳೂ ಮೆಲುದನಿಯಲ್ಲೇ ಇದ್ದವು. ಸಾಮಾನ್ಯವಾಗಿ ಹಿಂದೆಲ್ಲ ಇಂತಹ ಸ್ಥಳಗಳಲ್ಲಿ ಏರುದನಿಯ ಜೋರು, ಬಿಸಿಬಿಸಿ ಚರ್ಚೆ ನಡೆದಿರುತ್ತಿತ್ತು. ಮಾತು ಮೆಲುವಾಗಿದ್ದಕ್ಕೆ ಕಾರಣವಿದೆ. ಏನೆಂದರೆ ಜನರಿಗೆ ಗೊತ್ತಾಗಿದೆ. ರಾಜಕೀಯ, ಸಮಾಜ ತೀವ್ರವಾಗಿ (ಭಯಾನಕವಾಗಿ) ಒಡೆದು ಹೋಗಿರುವ ದಿನಗಳು ಇವು. ಇಂದಿನ ದಿನಗಳಲ್ಲಿ ತಮ್ಮ ರಾಜಕೀಯ ನಿಲುವನ್ನು ಸಾರ್ವಜನಿಕವಾಗಿ ಪ್ರಕಟಿಸುವುದು ಬಹಳ ಅಪಾಯಕಾರಿ ಕೂಡ. ಮನಸ್ಸಿನಲ್ಲಿದ್ದುದನ್ನು ಸಾರ್ವಜನಿಕವಾಗಿ ಕೇಳಿಸುವಂತೆ ಹೇಳಿಬಿಡುವುದು ದೊಡ್ಡ ಭಾನಗಡಿಗೆ ಕಾರಣವಾಗಬಹುದು.ಯಾರಾದರೂ ಮಾತನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿ ಸಂಬಂಧಪಟ್ಟವರಿಗೆ ಮುಟ್ಟಿಸಿಬಿಡಬಹುದು ಎಂಬ ಭಯ ಜನತೆಯಲ್ಲಿ ಸೃಷ್ಟಿಯಾಗಿದೆ. ಒಮ್ಮೆ ಹಾಗೆ ಆದರೆ ಮಾತನಾಡಿದ ಮನುಷ್ಯ ಇಂತಹ ಪಕ್ಷದವನು ಎಂದು ಬ್ರ್ಯಾಂಡ್ ಆಗುತ್ತಾನೆ. ಯಾವುದೋ ಒಂದು ಪಕ್ಷದ ವಿರೋಧಿ

ಎಂದು ಗುರುತಿಸಲ್ಪಡುತ್ತಾನೆ. ಆತ ತನ್ನ ಮಾತುಗಳನ್ನು ಮುಗ್ಧವಾಗಿ ಹೇಳಿದ್ದರೂ ಕೂಡ. ಈಗಿನ ರಾಜಕೀಯದಲ್ಲಿ ಮಧ್ಯಮಕ್ಕೆ, ತಟಸ್ಥ ಅಭಿಪ್ರಾಯಗಳಿಗೆ ಕೂಡ ಸ್ಥಾನವಿಲ್ಲ. ಹೆಚ್ಚಿನ ಜನ ತೀವ್ರ ಎಡ ಅಥವಾ ತೀವ್ರ ಬಲ. ಮತ್ತು ಇವೆರಡರ ನಡುವೆ ಹಾವು ಮುಂಗಸಿಯ ಸಂಬಂಧವಿದೆ. ಹಾಗಾಗಿ ಬೇಡವಾದ ಅಭಿಪ್ರಾಯ ಯಾರಾದರೂ ವ್ಯಕ್ತ ಪಡಿಸಿದರೆ ವಿರೋಧ ಪಕ್ಷದವರು ಕಾದು ನೋಡಿ ಅವನಿಗೆ ಸಮಸ್ಯೆ ಸೃಷ್ಟಿಸುತ್ತಾರೆ. ಆತನಿಗೆ ಅರಿವಿಲ್ಲದೆಯೇ. ಆಯಾ ವ್ಯಕ್ತಿಯ ಲೆವೆಲ್‌ನ ಕಿರುಕುಳ ಬರುತ್ತದೆ. ಅವಮಾನಿಸಲಾಗುತ್ತದೆ. ಎಷ್ಟರ ಮಟ್ಟಿನದೆಂದರೆ ಸಾರ್ವಜನಿಕ ಸ್ಥಳದಲ್ಲಿ ಮೂತ್ರಕ್ಕೆ ನಿಂತಿದ್ದರೆ ಅದನ್ನು ವಿಡಿಯೋ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ತೇಲಿಬಿಡಲಾಗುತ್ತದೆ. ಅಥವಾ ವ್ಯಕ್ತಿಗೆ ಎಲ್ಲಿ ಸಾಧ್ಯವೋ ಅಲ್ಲೆಲ್ಲ ಕಿರುಕುಳ ನೀಡಲಾಗುತ್ತದೆ.ಈ ಹಿನ್ನೆಲೆಯಲ್ಲಿ ರಾಜಕೀಯದಲ್ಲಿ ಕೈ ಹಾಕಿಕೊಳ್ಳಬಾರದು ಎಂಬ ವಿಷಯ ಎಲ್ಲರಿಗೂ ಅರ್ಥವಾದಂತಿದೆ. ಹಾಗಾಗಿ ರಾಜಕೀಯ, ಚುನಾವಣೆ ವಿಷಯ ಈಗ ಜನ ಸಾರ್ವಜನಿಕವಾಗಿ ಮಾತನಾಡುವುದು ಕಡಿಮೆ. ಅದಕ್ಕಾಗಿಯೂ ಗೌಜು ಗದ್ದಲ ಕಡಿಮೆ. ಮತ್ತು ಬಹಿರಂಗ ಪ್ರಚಾರ, ಮಾತು ಕಡಿಮೆ.

ಆಳವಾಗಿ ವಿಭಜನೆಗೊಂಡಿರುವ ಇಂತಹ ರಾಜಕೀಯದಿಂದಾಗಿಯೇ ಈ ಬಾರಿ ಜನ ತಿಂಗಳುಗಟ್ಟಲೆ ಮೊದಲೇ ಯಾರಿಗೆ ಮತಹಾಕುವುದು ಎನ್ನುವುದನ್ನು ನಿರ್ಧಾರ ಮಾಡಿದಂತಿತ್ತು. ಈ ಕಾರಣದಿಂದಾಗಿಯೂ ಸಾರ್ವಜನಿಕ ಪ್ರಚಾರ ಅಪ್ರಸ್ತುತವಾಗಿ ಹೋಯಿತು. ಕೆಲವು ಜಿಲ್ಲೆಗಳಲ್ಲಿಯಂತೂ 'ಅಂತರಂಗ' ಪ್ರಚಾರ ಕೂಡ ಕಡಿಮೆಯೇ ಇದ್ದಂತಿತ್ತು. ಏಕೆಂದರೆ ಹಣ ಹರಿಯುತ್ತಿದ್ದರೆ ಗೊತ್ತಾಗಿಬಿಡುತ್ತದೆ. ಆಗ ಚುನಾವಣೆಯ 'ಪರಿಮಳ' ಮೂಗಿಗೆ ಹೊಡೆಯುವಂತೆ ಹರಡಿರುತ್ತದೆ. ಮತ್ತೆ ರಸ್ತೆಗಳ ನಡುವೆ ಒಬ್ಬೊಬ್ಬರೇ ನಿಂತು ಜೋರಾಗಿ ಭಾಷಣ ಮಾಡುತ್ತಿರುತ್ತಾರೆ. ಆದರೆ ಈ ವರ್ಷ ಅಂಥವರು ವಿಶೇಷ ಕಾಣಲಿಲ್ಲ. ಕಾರ್ಯಕರ್ತರ ನಾಯಕರ, ಮಟ್ಟದಲ್ಲಿ ಹಣ ಹರಿದಿರಬಹುದು ಅಥವಾ ಇಲ್ಲದಿರಬಹುದು. ಹೇಳಲಾಗುವುದಿಲ್ಲ. ಆದರೆ ಸಾರ್ವಜನಿಕವಾಗಿ ಅಷ್ಟೊಂದು, ಹರಿಯಲಿಲ್ಲ ಎಂದೇ ಭಾವನೆ. ಅಥವಾ ತೆಗೆದುಕೊಂಡರೂ ಕೂಡ ಜನ ಮತ ಮಾತ್ರ ಯಾರಿಗೆ ಹಾಕಬೇಕಿತ್ತೋ ಅಲ್ಲಿಗೇ ಹಾಕಿದರು ಎಂದೇ ಭಾವನೆ. ಅಂದರೆ ಹಣ ಚುನಾವಣಾ ಫಲಿತಾಂಶವನ್ನು ತೀವ್ರವಾಗಿ ಬದಲಾಯಿಸಲಿಲ್ಲ. ಖರ್ಚು ಮಾಡಿದಂತೆ ಅನಿಸಿದವರು ಸೋತರು. ಮಾಡದಿದ್ದಂತೆ ಅನಿಸಿದವರು ಗೆದ್ದರು. ಅಥವಾ ಮಾಡಿದ ಖರ್ಚಿಗೂ, ಬಿದ್ದ ಮತಕ್ಕೂ ಸಂಬಂಧವೇ ಇರಲಿಲ್ಲ. ಹೇಳಬೇಕಾಗಿದ್ದೆಂದರೆ ಹಣ ಅಥವಾ ಬೇರೆ ಬೇರೆ ಸಂಪನ್ಮೂಲಗಳು ಕೂಡ ಪ್ರಸ್ತುತ ಚುನಾವಣೆಯಲ್ಲಿ ಅಪ್ರಸ್ತುತವಾಗಿಯೇ ಹೋದವು. ಖರ್ಚು ಮಾಡುವವರು ಮಾಡಿದರು. ಇಲ್ಲದವರು ಮಾಡಲಿಲ್ಲ. ಆದರೆ ಪಲಿತಾಂಶ ಸ್ಪಷ್ಟಪಡಿಸಿದ್ದೆಂದರೆ ಖರ್ಚು ಮಾಡುವುದಕ್ಕೂ/ ಮಾಡದೆ ಇರುವುದಕ್ಕೂ ಗೆಲ್ಲುವುದಕ್ಕೂ ಸಂಬಂಧವಿಲ್ಲ. ಬಹುಶಃ ಈ ರೀತಿಯ ಮಹತ್ವದ ಬೆಳವಣಿಗೆ ನಡೆದಿದ್ದು ಈ ಚುನಾವಣೆಯಲ್ಲಿ. ಅಂದರೆ ಹಣ ಕೂಡ ಅಪ್ರಸ್ತುತವಾಗಿ ಹೋಯಿತು.

ಇಂತಹ ಹೊಸ ಬೆಳವಣಿಗೆಗೆ ಬಹುಶಃ ಒಂದು ಮುಖ್ಯ ಕಾರಣವಿದೆ. ಏನೆಂದರೆ ಈ ಸಲದ ಚುನಾವಣೆ ರಾಜಕೀಯ ತತ್ವ ಜ್ಞಾನಗಳ ನಡುವೆ ನಡೆದ ಹಣಾಹಣಿ: 'ಬಲಪಂಥ' ಮತ್ತು 'ಎಡಪಂಥಗಳ' ನಡುವೆ. ಹಾಗೆಯೇ 'ಜಾಗತೀಕರಣದ ರಾಜಕೀಯ' ಮತ್ತು ರಿಸರ್ವೇಶನಿಷ್ಟ್ ರಾಜಕೀಯಗಳ ನಡುವೆ. ಅಥವಾ ಆಧುನಿಕತೆ ಬಯಸುವ ಭಾರತದ 'ನವಮಧ್ಯಮ ವರ್ಗ' ಮತ್ತು 'ಸಾಮಾಜಿಕ ನ್ಯಾಯ'ದ ಪರವಾಗಿರುವ ವರ್ಗಗಳ ನಡುವೆ. ಇಂತಹ ತತ್ವಜ್ಞಾನಗಳನ್ನು ಎರಡು ರಾಷ್ಟ್ರೀಯ ರಾಜಕೀಯ ಪಕ್ಷಗಳು ಪ್ರತಿನಿಧಿಸಿ ಎದುರುಬದುರಾಗಿ ನಿಂತವ. ಇಂತಹ ಹಣಾಹಣಿಯಲ್ಲಿ ತಮ್ಮ ಬೆಂಬಲಿತ ವರ್ಗ ಸೋತರೆ ಏನಾಗುತ್ತದೆಂಬ ಕಲ್ಪನೆ ಮತ್ತು ಭಯ ಎರಡೂ ತತ್ವಜ್ಞಾನದ ಬೆಂಬಲಿಗರಿಗೆ ಇತ್ತು. ಹಾಗಾಗಿ ಬೆಂಬಲಿಗರು ಬೇರೆ ಯಾವ ಆಮಿಷಕ್ಕೂ ಒಳಗಾಗದೆ ನೇರವಾಗಿ ತಮ್ಮ ತಮ್ಮ ಪ್ರಾತಿನಿಧಿಕ ಪಕ್ಷಗಳಿಗೆ ಮತ ನೀಡಿಬಿಟ್ಟರು. ಅಂದರೆ ಈ ಚುನಾವಣೆ ಹೇಳಿದ ಮೂರನೆಯ ಪಾಠವೆಂದರೆ 'ತತ್ವಜ್ಞಾನ' ಆಧರಿತ ಚುನಾವಣೆಯಲ್ಲಿ ಆಮಿಷಗಳು ಕೆಲಸಮಾಡುವುದಿಲ್ಲ. ಮತ ಬೀಳುವುದು, ಬಿದ್ದಿದ್ದು ಅಭ್ಯರ್ಥಿಗಳಿಗಲ್ಲ. ತತ್ವಜ್ಞಾನಗಳಿಗೆ. ಹೀಗಾಗಿ ಕಾರ್ಲ್ ಮಾರ್ಕ್ಸ್ ಹೇಳಿದ ಮಾತು 'There is nothing more powerful than an idea whose time has come'ಸತ್ಯವೆಂದು ಸಾಬೀತಾಗಿ ಹೋಯಿತು.

ಚುನಾವಣೆಯ ಫಲಿತಾಂಶವೂ ಕೂಡ ಒಂದು ಮಹತ್ವದ ಪಾಠ ಹೇಳಿದೆ. ಏನೆಂದರೆ ದೇಶದಲ್ಲಿ 'ಎಡ' ಮತ್ತು 'ಬಲ' ವನ್ನು ಸಮರ್ಥಿಸುವ (ಎರಡು) ವರ್ಗಗಳು ಸಾಕಷ್ಟು ಬಲಿಷ್ಟವಾಗಿಯೇ ಇವೆ. ಅವುಗಳ ನಡುವೆ ತೀವ್ರ ಹಣಾಹಣಿ ಇದೆ. ಇದು ಬಹಳ ಆಳವಾದ ವಸ್ತುವನ್ನುಳ್ಳ ಯುದ್ಧ. ಮತ್ತು ತೀವ್ರ ಭಾವನಾತ್ಮಕ ಯುದ್ಧ ಕೂಡ ಹೌದು. ಈ ಎರಡು ಧ್ರುವಗಳು ಅಥವಾ ವಸ್ತುಗಳಿಗೆ ತಲಾ ಸುಮಾರು ಎರಡು ನೂರು ಸೀಟು ಗೆಲ್ಲುವ ಸಾಮರ್ಥ್ಯವಿದೆ. ಅದರ ಮುಂದಿನ ಸ್ಥಾನಗಳಿಗಾಗಿ ತೀವ್ರ ಹೋರಾಟ ಸ್ಪರ್ಧೆ ನಡೆಯುತ್ತದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 183

ಸಮಾಚಾರ ಸಣ್ಣದಲ್ಲ

ರಾಜ್ಯಸಭೆ: ಸಚಿವ ನಡ್ಡಾ ಸಭಾ ನಾಯಕ

ದೆಹಲಿ: ರಾಜ್ಯಸಭೆ ಸಭಾನಾಯಕರನ್ನಾಗಿ ಬಿಜೆಪಿ ಹಿರಿಯ ಸಚಿವ ಜೆ.ಪಿ. ನಡ್ಡಾ ಅವರನ್ನು ಆಯ್ಕೆ ಮಾಡಲಾಗಿದೆ. ಈ ಮೊದಲು ಪಿಯೂಷ್ ಗೋಯಲ್ 2021ರ ಜು.14ರಿಂದ ರಾಜ್ಯಸಭೆ ಸಭಾನಾಯಕರಾಗಿದ್ದರು.

ಫೆಬ್ರವರಿಯಲ್ಲಿ ಜೆ.ಪಿ. ನಡ್ಡಾ ಸೇರಿ 41 ಮಂದಿ ಮೇಲ್ಮನೆಗೆ ಅವಿರೋಧವಾಗಿ ಆಯ್ಕೆಯಾಗಿದ್ದರು. ಅಶ್ವಿನಿ ವೈಷ್ಣವ್, ಎಲ್. ಮುರುಗನ್ ಹಾಗೂ ಪಕ್ಷದ ವಕ್ತಾರ ಸುಧಾಂಶು ತ್ರಿವೇದಿ ಎರಡನೇ ಅವಧಿಗೆ ಮರು ಆಯ್ಕೆಗೊಂಡರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯಸಭೆ ಪ್ರತಿಪಕ್ಷ ನಾಯಕರಾಗಿದ್ದಾರೆ. ಜೆ.ಪಿ ನಡ್ಡಾ ಬಿಜೆಪಿ ರಾಷ್ಟ್ರಾಧ್ಯಕ್ಷ ಹುದ್ದೆಯಲ್ಲಿಯು ಕಾರ್ಯನಿರ್ವಹಿಸುತ್ತಿದ್ದು ಅವಧಿ ಜೂ.30ಕ್ಕೆ ಮುಕ್ತಾಯಗೊಳ್ಳಲಿದೆ. ನಡ್ಡಾ ಸ್ಥಾನಕ್ಕೆ ಸೂಕ್ತ ವ್ಯಕ್ತಿಯ ಹುಡುಕಾಟ ಆರಂಭವಾಗಿದ್ದು ಸದ್ಯದಲ್ಲೇ ಬಿಜೆಪಿ ಗೆ ನೂತನ ಅಧ್ಯಕ್ಷರ ಆಯ್ಕೆ ಆಗಲಿದೆ.

ಕೇಜ್ರಿ ಅರ್ಜಿ ಸುಪ್ರೀಂ ವಿಚಾರಣೆ ಬುಧವಾರಕ್ಕೆ

ದೆಹಲಿ: ದೆಹಲಿ ಅಬಕಾರಿ ನೀತಿ ಪ್ರಕರಣದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ತಮಗೆ ವಿಚಾರಣಾ ನ್ಯಾಯಾಲಯ ನೀಡಿದ್ದ ಜಾಮೀನಿಗೆ ದೆಹಲಿ

ಹೈಕೋರ್ಟ್ ತಡೆಯಾಜ್ಞೆ ನೀಡಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ರಜಾಕಾಲದ ಪೀಠ ಜೂ.26ಕ್ಕೆ ಮುಂದೂಡಿದೆ. ನ್ಯಾಯಮೂರ್ತಿ ಮನೋಜ್ ಮಿಶ್ರಾ ಮತ್ತು ನ್ಯಾ. ಎಸ್.ವಿ.ಎನ್. ಭಟ್ಟಿ ಅವರ ದ್ವಿಸದಸ್ಯ ಪೀಠ, ಕೇಜ್ರಿವಾಲ್ ಮನವಿಗೆ ತಕ್ಷಣ ಆದೇಶ ನೀಡಲು ನಿರಾಕರಿಸಿದೆ. ದೆಹಲಿ ಹೈಕೋರ್ಟ್ ಆದೇಶದ ದಾಖಲೆಗಳು ಬಂದ ಮೇಲೆ ಮುಂದಿನ ವಾರ ವಿಚಾರಣೆ ನಡೆಸಬಹುದು ಎಂದು ಪೀಠ ಹೇಳಿತು.

ದೇವರಂಥ ಮತದಾರರ ನಿರೀಕ್ಷೆಗೆ ತಕ್ಕಂತೆ ಕೆಲಸ

ದೆಹಲಿ: ದೇವರಂತಹ ಅಯೋಧ್ಯೆಯ ಮತದಾರರ



ನಿರೀಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡುವೆ ಎಂದು ಫೈಜಾಬಾದ್ ಲೋಕಸಭಾ ಕ್ಷೇತ್ರದ ನೂತನ ಸಂಸದ, ಸಮಾಜವಾದಿ ಪಕ್ಷದ ನಾಯಕ ಅವಧೇಶ್ ಪ್ರಸಾದ್ ಸೋಮವಾರ ಹೇಳಿದ್ದಾರೆ. 18ನೇ ಲೋಕಸಭೆ ಅಧಿವೇಶನದ ಮೊದಲ ದಿನ ಸುದ್ದಿಗಾರರ ಜತೆ ಮಾತನಾಡಿದ ಅವಧೇಶ್, ದೇವರಂತಹ ಮತದಾರರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತೇನೆ ಎಂದರು. ಶ್ರೀ ರಾಮ ಮಂದಿರ ನಿರ್ಮಾಣವಾದ ಅಯೋಧ್ಯೆಯಲ್ಲಿಯೇ ಬಿಜೆಪಿ ಸಂಸದ ಲಲ್ಲು ಸಿಂಗ್ ಅವರನ್ನು ಸೋಲಿಸಿ ಅವಧೇಶ್ ಭಾರೀ ಸುದ್ದಿಯಾಗಿದ್ದಾರೆ. ಅಯೋಧ್ಯೆಯಲ್ಲಿ ಬಿಜೆಪಿ ನಿರೀಕ್ಷೆ ಮಾಡದ ರೀತಿಯಲ್ಲಿ ಭಾರೀ ಆಘಾತ ನೀಡಿದ್ದಾರೆ.

ಸಂಸತ್‌ಗೆ ಮರಳಿದ ಯೋಧರು: ಮಹುವಾ

ದೆಹಲಿ: 18ನೇ ಲೋಕಸಭೆಯ ಮೊದಲ ವಿಶೇಷ ಅಧಿವೇಶನ ಸೋಮವಾರ ಆರಂಭವಾಗಿದೆ. ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಸಂಸದೆ ಮಹುವಾ ಮೊಯಿತ್ರಾ, ಇಂಡಿ ಒಕ್ಕೂಟದ ಮಹಿಳಾ ಸಂಸದರ ಫೋಟೊ ಹಂಚಿಕೊಂಡು 'ಸಂಸತ್‌ಗೆ ಮರಳಿದ ಯೋಧರು' ಎಂದು ಬರೆದಿದ್ದಾರೆ. 2019 ಮತ್ತು 2024ರ ಫೋಟೊ ಹಂಚಿಕೊಂಡಿರುವ ಮಹುವಾ, ನಾವೆಲ್ಲ ಸಂಸತ್‌ಗೆ ವಾಪಸ್ಸಾಗಿದ್ದು ಈ ಬಾರಿ ಡಿಂಪಲ್ ಯಾದವ್ ಹೆಚ್ಚುವರಿಯಾಗಿ ಸೇರಿಕೊಂಡಿದ್ದಾರೆ ಎಂದು ಗಮನ ಸೆಳೆದಿದ್ದಾರೆ. ಫೋಟೊದಲ್ಲಿ ಟಿಎಂಸಿಯ ಮಹುವಾ ಮೊಯಿತ್ರಾ, ಸಮಾಜವಾದಿ ಪಕ್ಷದ ಡಿಂಪಲ್ ಯಾದವ್, ಎನ್‌ಸಿಪಿ(ಎಸ್‌ಪಿ) ಸಂಸದೆ ಸುಪ್ರಿಯಾ ಸುಳೆ, ಡಿಎಂಕೆಯ ಕನಿಮೊಳಿ, ಡಾ. ತಮಿಳಚ್ಚಿ ತಂಗಪಂಡಿಯನ್ ಮತ್ತು ಕಾಂಗ್ರೆಸ್‌ನ ಜ್ಯೋತಿಮಣಿ ಅವರನ್ನು ಕಾಣಬಹುದಾಗಿದೆ. 2019ಕ್ಕೆ ಹೋಲಿಸಿದರೆ ಈ ಬಾರಿ ಮಹಿಳಾ ಸಂಸದರ ಆಯ್ಕೆಯಲ್ಲಿ ಕೊಂಚ ಇಳಿಕೆಯಾಗಿದೆ. ಕಳೆದ ಬಾರಿ 78 ಮಹಿಳಾ ಸಂಸದರಿದ್ದರೆ ಈ ಬಾರಿ 74 ಸಂಸದೆಯರು ಆಯ್ಕೆ ಆಗಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಅತಿಹೆಚ್ಚು ಅಂದರೆ 11 ಮಹಿಳಾ ಸಂಸದರು ಆಯ್ಕೆಯಾಗಿದ್ದಾರೆ. 2023ರಲ್ಲಿ ಪ್ರಶ್ನೆಗಾಗಿ ಹಣ ಪಡೆದ ಆರೋಪದ ಮೇಲೆ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಲೋಕಸಭೆ ಸದಸ್ಯ ಸ್ಥಾನದಿಂದ ಉಚ್ಚಾಟಿಸಲಾಗಿತ್ತು.

{ ಮಹುವಾ ಮೊಯಿತ್ರಾ } ಟಿಎಂಸಿ ಸಂಸದೆ

ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ ಬಹುಮತ ಕೊರತೆಯಾಗಿದೆ. ಬಿಜೆಪಿ ಸಂವಿಧಾನಕ್ಕೆ ವಿರುದ್ಧ ಎಂಬುದನ್ನು ಜನರು ಅರಿತಿದ್ದಾರೆ. 303 ಸ್ಥಾನದಿಂದ ಬಿಜೆಪಿ 240ಕ್ಕೆ ಕುಸಿದಿದೆ. ಒಂದೆಡೆ ಬಿಜೆಪಿ, ಇನ್ನೊಂದೆಡೆ ಸಂವಿಧಾನ ಇದೆ ಎಂಬುದನ್ನು ಜನ ಅರ್ಥ ಮಾಡಿಕೊಂಡಿದ್ದಾರೆ. ಜನ ಸಂವಿಧಾನ ಆಯ್ಕೆ ಮಾಡಿದ್ದಾರೆ. ಬಿಜೆಪಿ 10 ವರ್ಷಗಳಿಂದ ಅಘೋಷಿತ ತುರ್ತು ಪರಿಸ್ಥಿತಿ ನಡೆಸುತ್ತಿದೆ. ಜನ ಅದನ್ನು ಒಪ್ಪಿಲ್ಲ.



ಮೊದಲ ದಿನವೇ ಪ್ರತಿಭಟನೆ

ಸಂವಿಧಾನ ಪ್ರತಿ ಹಿಡಿದ ಪ್ರತಿಪಕ್ಷ ನಾಯಕರು | ನೀಟ್, ನೆಟ್ ಪರೀಕ್ಷಾ ವೈಫಲ್ಯಕ್ಕೆ ಖಂಡನೆ | 10 ವಿವಾದ ಉಲ್ಲೇಖಿಸಿ ಇಂಡಿ ಒಕ್ಕೂಟ ಧರಣಿ

ದೆಹಲಿ: 18ನೇ ಲೋಕಸಭೆಯ ವಿಶೇಷ ಅಧಿವೇಶನ ನೂತನ ಸಂಸತ್ ಕಟ್ಟಡದಲ್ಲಿ ಸೋಮವಾರ ಆರಂಭವಾಗಿದ್ದು, ಮೊದಲ ದಿನವೇ ಪ್ರತಿಪಕ್ಷಗಳು ಸಂವಿಧಾನ ಪ್ರತಿ ಹಿಡಿದು ಭಾರೀ ಪ್ರತಿಭಟನೆ ನಡೆಸಿದವು.

ಸಮಾನ ಮನಸ್ಕ 26 ಪಕ್ಷಗಳ ಒಕ್ಕೂಟವಾದ ಇಂಡಿಯದ ನಾಯಕರೆಲ್ಲರೂ ಸಂವಿಧಾನ ಪ್ರತಿ ಹಿಡಿದು ಸಂಸತ್ ಪ್ರವೇಶ ಮಾಡಿ ಪ್ರತಿಭಟನೆ ವ್ಯಕ್ತಪಡಿಸಿದರು.

ಸಂವಿಧಾನದ ಮೇಲಿನ ದಾಳಿ ಹಾಗೂ ನೀಟ್, ನೆಟ್ ಪರೀಕ್ಷೆ ವೈಫಲ್ಯ ಸೇರಿ 10 ವಿವಾದಗಳನ್ನು ಉಲ್ಲೇಖಿಸಿ ಬಿಜೆಪಿ ನೇತೃತ್ವದ ಎನ್ ಡಿಎ ಸರಕಾರದ ವಿರುದ್ಧ ಸಂಸತ್ ಭವನದ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಟಿಎಂಸಿ ನಾಯಕ ಸುದೀಪ್ ಬಂದೋಪಾಧ್ಯಾಯ, ಡಿಎಂಕೆ ನಾಯಕ ಟಿ.ಆರ್.ಬಾಲು, ಈ ಹಿಂದೆ ಮಹಾತ್ಮಾ ಗಾಂಧಿ ಪ್ರತಿಮೆ ಇದ್ದ ಸ್ಥಳದಲ್ಲಿ ನಿಂತು 'ಪ್ರಜಾಪ್ರಭುತ್ವ ಅಮರವಾಗಲಿ', ನಾವು ಸಂವಿಧಾನವನ್ನು ರಕ್ಷಿಸುತ್ತೇವೆ, 'ಪ್ರಜಾಪ್ರಭುತ್ವ ರಕ್ಷಿಸಿ' ಎಂದು ಘೋಷಣೆ ಕೂಗಿದರು.

'ಸಂವಿಧಾನದ ಮೇಲಿನ ದಾಳಿ ಸಹಿಸಲ್ಲ , ನಮ್ಮ ಸಂದೇಶ ಜನರಿಗೆ ತಲುಪುತ್ತಿದೆ. ಯಾವ ಶಕ್ತಿಯೂ ಸಂವಿಧಾನವನ್ನು ಮುಟ್ಟಲು ಸಾಧ್ಯವಿಲ್ಲ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಸೋಮವಾರ ಒಟ್ಟೂ 280 ಸಂಸದರು ಪ್ರಮಾಣವಚನ ಸ್ವೀಕರಿಸಿದ್ದು, ಜೂನ್ 25ರಂದು 264 ಮಂದಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ

ಭರ್ತೃಹರಿ ನೇಮಕಕ್ಕೆ ವಿರೋಧ

ಹಂಗಾಮಿ ಸ್ಪೀಕರ್ ಆಗಿ ಭರ್ತೃಹರಿ ಮಹತಾಬ್ ಅವರ ನೇಮಕವನ್ನು ಇಂಡಿ ಒಕ್ಕೂಟ ವಿರೋಧಿಸಿದ್ದು ಅಧಿವೇಶನದ ಮೊದಲ ದಿನ ಪ್ರತಿಭಟನೆ ಕೂಡ ನಡೆಸಿದೆ. ಬಿಜೆಪಿ ಸರಕಾರ ಅಹಂಕಾರವನ್ನು ಬಿಟ್ಟಿಲ್ಲ. ದೇಶದ ಪ್ರಮುಖ ವಿಚಾರವನ್ನು ನಿರ್ಲಕ್ಷಿಸುತ್ತಿದೆ. ಕೆ.ಸುರೇಶ್ ಅವರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಕ ಮಾಡದೇ ದಲಿತ ಸಮುದಾಯವನ್ನು ಕಡೆಗಣಿಸಿದೆ ಎಂದು ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಆರೋಪಿಸಿದ್ದಾರೆ. ಹಂಗಾಮಿ ಸ್ಪೀಕರ್ ಆಯ್ಕೆ ವಿಧಾನ ಸಂವಿಧಾನಕ್ಕೆ ವಿರೋಧವಾಗಿದೆ ಎಂದು ವಿಪಕ್ಷ ನಾಯಕರು ಕಿಡಿಕಾರಿದ್ದಾರೆ.

ಮಾತೃಭಾಷೆ ಸಂಭ್ರಮ

ನೂತನ ಸಂಸತ್ ಭವನದಲ್ಲಿ 18ನೇ ಲೋಕಸಭೆಯ ಸಂಸದರು, ಸಚಿವರು ಪ್ರಮಾಣ ವಚನ ಸ್ವೀಕರಿಸಿದ್ದು ಬಹುತೇಕ ಎಲ್ಲರೂ ತಮ್ಮ ಮಾತೃ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿ ಗಮನ ಸೆಳೆದಿದ್ದಾರೆ. ಈ ಹಿನ್ನೆಲೆ ಹಿಂದಿ, ಕನ್ನಡ, ಸಂಸ್ಕೃತ, ಒಡಿಯಾ, ಡೋಗ್ರಿ, ಅಸ್ಸಾಮಿ, ಬೆಂಗಾಲಿ ಭಾಷೆಗಳು ಲೋಕಸಭೆಯಲ್ಲಿ ಕೇಳಿಬಂದಿವೆ.

ಪ್ರಧಾನಿ ಮೋದಿ, ಅಮಿತ್ ಶಾ, ರಾಜನಾಥ ಸಿಂಗ್, ನಿತಿನ್ ಗಡ್ಕರಿ, ಅನ್ನಪೂರ್ಣ ದೇವಿ, ಜ್ಯೋತಿರಾಧಿತ್ಯ ಸಿಂಧ್ಯ , ಎಮ್ ಎಲ್ ಖಟ್ಟರ್ ಸೇರಿ ಹಲವರು ಹಿಂದಿಯಲ್ಲಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಕೇರಳದ ಸುರೇಶ್ ಗೋಪಿ, ಶ್ರೀಕೃಷ್ಣ, ಗುರುವಾಯುರಪ್ಪ ದೇವರ ಉಲ್ಲೇಖದೊಂದಿಗೆ ಮಲೆಯಾಳಂ ಭಾಷೆಯಲ್ಲಿ, ಗೋವಾದ ಶ್ರೀಪಾದ ಯೆಸ್ಸೊ ನಾಯ್ಕ್, ವಿಶ್ವೇಶ್ವರ ಹೆಗಡೆ ಕಾಗೇರಿ ಸಂಸ್ಕೃತದಲ್ಲಿ, ಸುಕಾಂತ ಮಜುಮ್‌ದಾರ್ ಬೆಂಗಾಲಿ ಭಾಷೆಯಲ್ಲಿ ಹಾಗೂ ಮುರಳೀಧರ ಮೊಹೊಲ್ ಮರಾಠಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಕರ್ನಾಟಕದ ಎಚ್.ಡಿ. ಕುಮಾರಸ್ವಾಮಿ ಮತ್ತು ಪ್ರಹ್ಲಾದ ಜೋಶಿ ಕನ್ನಡ ಭಾಷೆಯಲ್ಲಿ , ಜಿತೇಂದ್ರ ಸಿಂಗ್ ಡೋಗ್ರಿ ಭಾಷೆಯಲ್ಲಿ, ಸರ್ಬಾನಂದ ಸೋನೊವಾಲ್ ಅಸ್ಸಾಮೀ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಜಿ.ಕಿಶನ್ ರೆಡ್ಡಿ ಮತ್ತು ರಾಮಮೋಹನ್ ನಾಯ್ಡು ತೆಲುಗು ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಹಂಗಾಮಿ ಸ್ಪೀಕರ್ ಆಗಿ ಭರ್ತೃಹರಿ ಅಧಿಕಾರ ಸ್ವೀಕಾರ

18ನೇ ಲೋಕಸಭೆಯ ಹಂಗಾಮಿ ಸ್ಪೀಕರ್ ಆಗಿ ಭರ್ತೃಹರಿ ಮಹತಾಬ್ ಪ್ರಮಾಣ ವಚನ ಸ್ವೀಕರಿಸಿ ಬಳಿಕ ನೂತನ ಸಂಸದರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಭರ್ತೃಹರಿ ಆಯ್ಕೆಗೆ ವಿಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದು ಬಿಜೆಪಿ ಸರಕಾರ ಕೆ. ಸುರೇಶ್ ಆಯ್ಕೆ ಮಾಡದೇ ದಲಿತ ಸಮುದಾಯವನ್ನು ಕಡೆಗಣಿಸಿದೆ ಎಂದು ಆರೋಪಿಸಿದ್ದಾರೆ.

ಸಂವಿಧಾನ ಪ್ರತಿ ಪ್ರದರ್ಶನ

ಸಂವಿಧಾನ ರಕ್ಷಣೆ ವಿಚಾರವಾಗಿ ಪ್ರತಿಪಕ್ಷಗಳು ಗಮನಸೆಳೆಯುವ ಪ್ರಯತ್ನ ಮಾಡಿದ್ದು ಪ್ರಧಾನಿ ಮೋದಿ ಲೋಕಸಭೆ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿ ರಾಹುಲ್ ಗಾಂಧಿ ಸಂವಿಧಾನ ಪ್ರತಿಯನ್ನು ಎತ್ತಿ ಹಿಡಿದಿದ್ದಾರೆ. ಇನ್ನೊಂದೆಡೆ ಮೋದಿ.. ಮೋದಿ.. ಎಂಬ ಉದ್ಘೋಷಗಳು ಲೋಕಸಭೆಯನ್ನು ತುಂಬಿತ್ತು. ಜೂ. 27ರಂದು ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ ಮಾಡಲಿದ್ದಾರೆ. ಜು.2 ಅಥವಾ 3 ರಂದು ಕಲಾಪದ ಚರ್ಚೆಗೆ ಪ್ರಧಾನಿ ಪ್ರತಿಕ್ರಿಯೆ ನೀಡುವ ಸಾಧ್ಯತೆ ಇದೆ.

ಬಿಜೆಪಿ ಅಧ್ಯಕ್ಷ ಹುದ್ದೆ

ತಾವ್ಡೆ, ಬನ್ಸಾಲ್ ಪ್ರಧಾನಿ ಆಯ್ಕೆ

ರಾಜನಾಥ್, ಶಿವರಾಜ್ ಸಿಂಗ್ ರತ್ತ ಆರೆಸೆಸ್ ಒಲವು
ಹಾಲಿ ಅಧ್ಯಕ್ಷ ಜೆಪಿ ನಡ್ಡಾ ಅವಧಿ ಜೂ.30ಕ್ಕೆ ಕೊನೆ

ದೆಹಲಿ: ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅಧಿಕಾರದ ಅವಧಿ ಜೂ.30ಕ್ಕೆ ಕೊನೆಗೊಳ್ಳುತ್ತಿದೆ. ವಿಶ್ವದಲ್ಲೇ ದೊಡ್ಡ ರಾಜಕೀಯ ಪಕ್ಷವಾಗಿರುವ ಬಿಜೆಪಿಯ ನೇತೃತ್ವ ಯಾರು ವಹಿಸಲಿದ್ದಾರೆ ಎಂಬುದೇ ಸದ್ಯದ ಪ್ರಶ್ನೆ.



ರಾಜನಾಥ್ ಸಿಂಗ್

ಶಿವರಾಜ್ ಸಿಂಗ್



ಸುನೀಲ ಬನ್ಸಲ್

ವಿನೋದ್ ತಾವ್ಡೆ

ಸಂಘಟನಾ ಶಕ್ತಿ ಇರುವ, ಎಲ್ಲರಿಗೂ ಒಪ್ಪಿಗೆಯಾಗುವ, ಸೂಕ್ತ ಮತ್ತು ಸಮರ್ಥ ಅಭ್ಯರ್ಥಿಯನ್ನು ಹುಡುಕಲು ಪಕ್ಷದ ನಾಯಕತ್ವ ಸದ್ಯ ಆರೆಸೆಸ್ ಜತೆ ಚರ್ಚೆ ನಡೆಸಿದೆ.

ಕೇಂದ್ರ ಸಚಿವರಾದ ರಾಜನಾಥ್ ಸಿಂಗ್ ಮತ್ತು ಶಿವರಾಜ್ ಸಿಂಗ್ ಚೌಹಾಣರತ್ತ ಆರೆಸೆಸ್ ಒಲವು ಹೊಂದಿದೆ ಎಂದು ಮೂಲಗಳು ತಿಳಿಸಿವೆ. ಈ ಇಬ್ಬರಲ್ಲಿ ಒಬ್ಬರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಪಕ್ಷದ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂಬುದು ಸಂಘ ಪರಿವಾರದ ಆಶಯ ಎಂದು ಹೇಳಲಾಗುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಪಕ್ಷದ ಮಾಜಿ ಅಧ್ಯಕ್ಷರು ಆದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ಇಬ್ಬರೂ ಸಚಿವರನ್ನು ಸಂಪುಟದಿಂದ ಬಿಟ್ಟುಕೊಡಲು ಒಪ್ಪುತ್ತಿಲ್ಲ.

ಪಕ್ಷದಲ್ಲಿ ಹಾಲಿ ಪದಾಧಿಕಾರಿಗಳಲ್ಲಿಯೇ ಉತ್ತಮ ಸಾಮರ್ಥ್ಯದ ಒಬ್ಬರನ್ನು ಪಕ್ಷದ ಅಧ್ಯಕ್ಷ ಹುದ್ದೆಗೆ ಕೂರಿಸಲು ಪ್ರಧಾನಿ ಮತ್ತು ಗೃಹ ಸಚಿವರು ಬಯಸುತ್ತಿದ್ದಾರೆ. ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾಗಿರುವ ವಿನೋದ್ ತಾವ್ಡೆ ಮತ್ತು ಸುನಿಲ್ ಬನ್ಸಾಲ್ ಅವರ ಹೆಸರು ಸದ್ಯ ಕೇಳಿಬರುತ್ತಿದೆ. ಈ ಇಬ್ಬರೂ ನಾಯಕರು ಉನ್ನತ ಶ್ರೇಣಿಯಲ್ಲಿ ಪಕ್ಷದ ಸಂಘಟನಾ ಕಾರ್ಯಗಳಲ್ಲಿ ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ. ಹಾಗಾಗಿ ಇವರಿಬ್ಬರಲ್ಲಿ ಒಬ್ಬರನ್ನು ಪಕ್ಷದ ಅಧ್ಯಕ್ಷ ಹುದ್ದೆಗೆ ನೇಮಿಸುವ ಆಸಕ್ತಿ ಮೋದಿ ಮತ್ತು ಅಮಿತ್ ಶಾ ಅವರದ್ದಾಗಿದೆ.

ಈ ಮಹತ್ವದ ನೇಮಕ ಪ್ರಕ್ರಿಯೆಯಲ್ಲಿ ಬಿಜೆಪಿ ನಾಯಕತ್ವದ ಮೇಲೆ ಆರೆಸೆಸ್ ಒತ್ತಡ ಹೇರುತ್ತಿದೆ. ಪಕ್ಷದ ಮೇಲಿನ ನಿಯಂತ್ರಣ ಬಿಟ್ಟುಕೊಡಲು ಪ್ರಧಾನಿ ಮೋದಿ ಸಿದ್ಧರಿಲ್ಲ ಎನ್ನಲಾಗುತ್ತಿದೆ. ಹಾಗಾಗಿ ತಾವ್ಡೆ ಅಥವಾ ಬನ್ಸಾಲ್ ಅವರನ್ನು ಕಾರ್ಯಕಾರಿ ಅಧ್ಯಕ್ಷರನ್ನಾಗಿ ನೇಮಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಆರೆಸೆಸ್‌ನೊಂದಿಗೆ ಸಂಘರ್ಷಕ್ಕಿಳಿಯುವುದನ್ನು ತಪ್ಪಿಸಲು ಪಕ್ಷವು ಜೆ.ಪಿ.ನಡ್ಡಾ ಅವರ ಅವಧಿಯನ್ನು ಕೆಲಕಾಲದವರೆಗೆ ಮುಂದುವರಿಸುವ ಸಾಧ್ಯತೆಯೂ ಇದೆ ಎನ್ನಲಾಗುತ್ತಿದೆ.

'ಜನಹಿತಕ್ಕಿಂತ ಮೋದಿ ಸರಕಾರ ಉಳಿಸುವಲ್ಲಿ ಬಿಜಿ'

ನೂತನ ಸರಕಾರ ರಚಿಸಿದ 15 ದಿನಗಳಲ್ಲಿ 10 ಅವಾಂತರ ಪಟ್ಟಿ ಮಾಡಿದ ರಾಹುಲ್ ಗಾಂಧಿ

ದೆಹಲಿ: ಎನ್‌ಡಿಎ ಸರಕಾರ ಅಧಿಕಾರಕ್ಕೆ ಬಂದ ಎರಡು ವಾರಗಳಲ್ಲಿ ಆಗಿರುವ 10 ಅವಾಂತರಗಳನ್ನು ಪಟ್ಟಿ ಮಾಡಿರುವ ರಾಹುಲ್ ಗಾಂಧಿ, ಪ್ರಧಾನಿ ನರೇಂದ್ರ ಮೋದಿ 3.0 ಸರಕಾರವನ್ನು ಟೀಕಿಸಿದ್ದಾರೆ.

ನೀಟ್ ಅಕ್ರಮ, ನೆಟ್- ಯುಜಿಸಿ ಪ್ರಶ್ನೆ ಪತ್ರಿಕೆ ಸೋರಿಕೆ, ರೈಲು ಅಪಘಾತ ಸೇರಿ ಹಲವು ವಿಚಾರಗಳನ್ನು ಪ್ರಸ್ತಾಪಿಸಿದ ರಾಹುಲ್, ಮೋದಿ ತಮ್ಮ ಸರಕಾರವನ್ನು ಉಳಿಸಿಕೊಳ್ಳುವುದರಲ್ಲಿ ಬಿಜಿಯಾಗಿದ್ದಾರೆ ಎಂದು ಅಣಕಿಸಿದ್ದಾರೆ. ನೂತನ ಸರಕಾರ ರಚಿಸಿದ 15 ದಿನಗಳಲ್ಲಿ 10 ಅವಾಂತರ ಆಗಿವೆ ಎಂದು ರಾಹುಲ್ ಎಕ್ಸ್ ಸಂದೇಶ ಮೂಲಕ ಕೇಂದ್ರ ಸರಕಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದೆಲ್ಲದರಿಂದ ಮೋದಿ ಸರಕಾರ ಮಾನಸಿಕವಾಗಿ ಕುಗ್ಗಿದೆ. ಇಂಡಿ ಒಕ್ಕೂಟ ಪ್ರಬಲ ಪ್ರತಿಪಕ್ಷವಾಗಿದೆ. ಉತ್ತರದಾಯಿತ್ವ ಇಲ್ಲದೆ ಪ್ರಧಾನಿಯನ್ನು ತಪ್ಪಿಸಿಕೊಳ್ಳಲು ಬಿಡುವುದಿಲ್ಲ ಎಂದು ರಾಹುಲ್ ಹೇಳಿದ್ದಾರೆ.

ಅವಾಂತರಗಳ ಪಟ್ಟಿ

- ರೈಲು ಅಪಘಾತ
- ಕಾಶ್ಮೀರ ಉಗ್ರರ ದಾಳಿ
- ರೈಲುಗಳಲ್ಲಿ ಪ್ರಯಾಣಿಕರ ದುಸ್ಥಿತಿ
- ನೀಟ್ ಹಗರಣ
- ಯುಜಿಸಿ ನೆಟ್ ಪೇಪರ್ ಸೋರಿಕೆ
- ಹಾಲು-ಬೇಳೆಕಾಳು ಟೋಲ್-ಗ್ಯಾಸ್ ದುಬಾರಿ
- ಕಾಡ್ಗಿಚ್ಚು
- ನೀರಿನ ಬಿಕ್ಕಟ್ಟು
- ಬಿಸಿಗಾಳಿ ಸಾವು
- ನೀಟ್ ಪಿಜಿ ರದ್ದು

ವಯನಾಡು ಜನತೆಗೆ ರಾಹುಲ್ ಗಾಂಧಿ ಪತ್ರ

ಪ್ರಿಯಾಂಕಾಗೆ ಅವಕಾಶ ನೀಡುವಂತೆ ಮನವಿ

ದೆಹಲಿ: 18ನೇ ಲೋಕಸಭೆಯಲ್ಲಿ ರಾಯಬರೇಲಿ ಸಂಸದರಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರಮಾಣವಚನ ಸ್ವೀಕರಿಸಿದರು. ಅದಕ್ಕೂ ಮುನ್ನ ರಾಹುಲ್ ಕೇರಳ ವಯನಾಡು ಕ್ಷೇತ್ರದ ಜನತೆಗೆ ಭಾವನಾತ್ಮಕ ಪತ್ರ ಬರೆದಿದ್ದಾರೆ. ಎರಡೂ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ರಾಹುಲ್ ಗಾಂಧಿ ನಿಯಮದ ಪ್ರಕಾರ ಒಂದು ಕ್ಷೇತ್ರ

ಉಳಿಸಿಕೊಳ್ಳಬೇಕಾಗಿತ್ತು. ಹೀಗಾಗಿ ರಾಯಬರೇಲಿ ಆಯ್ಕೆ ಮಾಡಿಕೊಂಡಿದ್ದಾರೆ. ವಯನಾಡು ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಪ್ರಿಯಾಂಕಾ ಗಾಂಧಿ ಸ್ಪರ್ಧಿಸಲಿದ್ದಾರೆ.

ವಯನಾಡು ಸಂಸದ ಸ್ಥಾನಕ್ಕೆ ರಾಹುಲ್ ಗಾಂಧಿ ರಾಜೀನಾಮೆ ನೀಡಿದ್ದಾರೆ. ಆದರೆ ವಯನಾಡಿನ ಜನತೆಗೆ ನನ್ನ ಮನೆ ಬಾಗಿಲು ತೆರೆದಿರುತ್ತದೆ ಎಂದು ಹೇಳಿದ್ದಾರೆ. ಆ ಮೂಲಕ ವಯನಾಡಿನ ಜನರ ಕಷ್ಟಕ್ಕೆ ಸ್ಪಂದಿಸುವುದಾಗಿ ತಿಳಿಸಿದ್ದಾರೆ. ವಯನಾಡಿನ ಜನರಿಗೆ ಪತ್ರ ಬರೆದಿರುವ ನೀವು ನನ್ನ ರಕ್ಷಕರು, ನನ್ನ ಮನೆ ಎಂದು ವಯನಾಡನ್ನು ಬಣ್ಣಿಸಿದ್ದಾರೆ.

'ನಾನು ನಿತ್ಯ ಟೀಕೆಗಳಿಗೆ ಗುರಿಯಾಗಿದ್ದಾಗ ನಿಮ್ಮ ಅಪರಿಮಿತ ಪ್ರೀತಿ ನನ್ನನ್ನು ರಕ್ಷಿಸಿದೆ. ನೀವೇ ನನ್ನ ರಕ್ಷಕರು, ನನ್ನ ಮನೆ, ಕುಟುಂಬ. ಒಂದು ಕ್ಷಣವೂ ನೀವು ನನ್ನನ್ನು ಅನುಮಾನಿಸಿದ್ದೀರಿ ಎಂದು ಅನಿಸಲಿಲ್ಲ, ನನಗೆ ಬೇಸರವಾಗಿದೆ. ಆದರೆ ನನ್ನ ಸಹೋದರಿ ಪ್ರಿಯಾಂಕಾ ನಿಮ್ಮ ಕ್ಷೇತ್ರ ಪ್ರತಿನಿಧಿಸುತ್ತಾರೆ ಎಂದು ಸಮಾಧಾನವಾಗಿದೆ. ಅವಳಿಗೊಂದು ಅವಕಾಶ ನೀಡಿದರೆ ಸಂಸದೆಯಾಗಿ ಆಕೆ ಉತ್ತಮ ಕೆಲಸಗಳನ್ನು ಮಾಡುತ್ತಾಳೆ ಎಂಬ ನಂಬಿಕೆ ಇದೆ' ಎಂದು ಪ್ರಿಯಾಂಕಾ ಗಾಂಧಿ ಆಯ್ಕೆಗೆ ರಾಹುಲ್ ಮನವಿ ಮಾಡಿದ್ದಾರೆ.

'2019ರಲ್ಲಿ ಮೊದಲ ಬಾರಿ ಬೆಂಬಲ ಕೋರಿ ನಿಮ್ಮ ಬಳಿ ಬಂದಾಗ ನಾನು ನಿಮಗೆ ಅಪರಿಚಿತನಾಗಿದ್ದೆ. ನೀವು ನನ್ನ ಮೇಲೆ ನಂಬಿಕೆ ಇಟ್ಟಿರಿ. ನನಗೆ ಪ್ರೀತಿ ನೀಡಿದಿರಿ. ಪ್ರವಾಹದ ಸಂದರ್ಭದ ಕ್ಷಣಗಳನ್ನು ಎಂದಿಗೂ ಮರೆಯುವುದಿಲ್ಲ. ನೀವು ನನಗೆ ನೀಡಿದ ಲೆಕ್ಕವಿಲ್ಲದಷ್ಟು ಚಪ್ಪಾಳೆ, ಪ್ರೀತಿ, ಅಪ್ಪುಗೆಯನ್ನು ಮರೆಯುವುದಿಲ್ಲ. ನಿಮಗಾಗಿ ನಾನು ಸದಾ ಇರುತ್ತೇನೆ' ಎಂದು ರಾಹುಲ್ ಪತ್ರದಲ್ಲಿ ಬರೆದಿದ್ದಾರೆ.

ಬಿಜೆಪಿ-ಬಿಜೆಡಿ ಸಂಬಂಧ ಕಟ್

ಭುವನೇಶ್ವರ: ಒಡಿಶಾದಲ್ಲಿ ಹಲವು ವರ್ಷಗಳಿಂದ ಬಿಜೆಪಿಯನ್ನು ಬೆಂಬಲಿಸಿಕೊಂಡು ಬರುತ್ತಿದ್ದ ಬಿಜು ಜನತಾ ದಳ (ಬಿಜೆಡಿ), ವಿಧಾನಸಭೆ ಚುನಾವಣೆ ಸೋಲಿನ ನಂತರ ಕೇಸರಿ ಪಕ್ಷದ ಜತೆಗಿನ ಸಂಬಂಧಕ್ಕೆ ಕೊನೆ ಹಾಡಿದೆ. ರಾಜ್ಯ ವಿಧಾನಸಭೆಯಲ್ಲಿ ಪ್ರಬಲ ಪ್ರತಿಪಕ್ಷವಾಗಿ ಕೆಲಸ ಮಾಡುವುದಾಗಿ ಘೋಷಿಸಿದೆ.

ಸಂಸತ್ತಿನಲ್ಲಿ ಕಳೆದ ಹಲವು ವರ್ಷಗಳಿಂದ ಅನೇಕ ವಿಚಾರಗಳಲ್ಲಿ ಬಿಜೆಪಿಯನ್ನು ಬಿಜೆಡಿ ಬೆಂಬಲಿಸುತ್ತಾ ಬಂದಿತ್ತು. 2019 ಮತ್ತು 2024ರಲ್ಲಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಗೆಲ್ಲುವಲ್ಲಿಯೂ ನೆರವಾಗಿತ್ತು.

ಸೋಮವಾರ ಪಕ್ಷದ 9 ರಾಜ್ಯಸಭಾ ಸಂಸದರೊಂದಿಗೆ ಸಭೆ ನಡೆಸಿದ ಬಿಜೆಡಿ ಅಧ್ಯಕ್ಷ ನವೀನ್ ಪಟ್ನಾಯಕ್, ಜೂ.27ರಂದು ಪ್ರಾರಂಭವಾಗುವ ಸಂಸತ್ತಿನ ಮುಂಬರುವ ಅಧಿವೇಶನದಲ್ಲಿ ಮೇಲ್ಮನೆಯಲ್ಲಿ ಪ್ರಬಲ ಪ್ರತಿಪಕ್ಷವಾಗಿ ಹೊರಹೊಮ್ಮುವಂತೆ ಸೂಚಿಸಿದರು. ರಾಜ್ಯದ ಹಿತಾಸಕ್ತಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸೂಕ್ತವಾದ ರೀತಿಯಲ್ಲಿ ಪ್ರಸ್ತಾಪಿಸಲು ಸಂಸದರಿಗೆ ಹೇಳಿದ್ದಾರೆ.

ಸಭೆ ನಂತರ ಸುದ್ದಿಗಾರರ ಜತೆ ಮಾತನಾಡಿದ ರಾಜ್ಯಸಭೆ ಪಕ್ಷದ ನಾಯಕ ಸಸ್ಮಿತ್ ಪಾತ್ರ, ಬಿಜೆಡಿ ಸಂಸದರು ಈ ಬಾರಿ ಕೇವಲ ಸಮಸ್ಯೆಗಳ ಬಗ್ಗೆ ಮಾತನಾಡಲು ಸೀಮಿತರಾಗಲ್ಲ. ಆದರೆ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ಒಡಿಶಾದ ಹಿತಾಸಕ್ತಿಗಳನ್ನು ನಿರ್ಲಕ್ಷಿಸಿದರೆ ಹೋರಾಟ ಮಾಡಲು ನಿರ್ಧರಿಸಲಾಗಿದೆ ಎಂದರು.

ಒಡಿಶಾಗೆ ವಿಶೇಷ ಸ್ಥಾನಮಾನ ಬೇಡಿಕೆ, ಮೊಬೈಲ್ ಟವರ್ ಬೇಡಿಕೆಯನ್ನು ಕೇಂದ್ರ 10 ವರ್ಷಗಳಿಂದ ನಿರ್ಲಕ್ಷಿಸಿದೆ. ಇದು ರಾಜ್ಯದ ಜನರಿಗೆ ಹೆಚ್ಚಿನ ನಷ್ಟ ಮಾಡುತ್ತಿದೆ. 9 ರಾಜ್ಯಸಭೆ ಸಂಸದರು ವಿರೋಧ ಪಕ್ಷದವರಾಗಿ ಪ್ರಬಲರಾಗಿರುವಂತೆ, ರಾಜ್ಯದ ಜನರ ಹಕ್ಕನ್ನು ರಕ್ಷಿಸಲು ಹೋರಾಡುವಂತೆ ಪಟ್ನಾಯಕ್ ಸೂಚನೆ ನೀಡಿದ್ದಾರೆ. ಬಿಜೆಪಿಗೆ ಇನ್ನು ಮುಂದೆ ಬೆಂಬಲ ನೀಡಲ್ಲ, ಕೇವಲ ವಿರೋಧ ಪಕ್ಷವಷ್ಟೇ. ರಾಜ್ಯದ ಹಿತಾಸಕ್ತಿ ರಕ್ಷಿಸಲು ಯಾವುದೇ ಹಂತಕ್ಕೂ ಹೋಗಲು ಸಿದ್ಧ ಎಂದು ಅವರು ಹೇಳಿದರು. ರಾಜ್ಯಸಭೆಯಲ್ಲಿ ಬಿಜೆಡಿಯ 9 ಸಂಸದರಿದ್ದಾರೆ.

ದುರ್ಬಲಗೊಂಡ ಬಿಜೆಡಿ

ನವೀನ್ ಪಟ್ನಾಯಕ್

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಒಡಿಶಾ ರಚನೆಯಾದ 1997ರ ನಂತರ ಇದೇ ಮೊದಲ ಬಾರಿಗೆ ಒಂದೇ ಒಂದು ಸ್ಥಾನವನ್ನು ಗೆದ್ದಿಲ್ಲ. ಅಲ್ಲದೇ ವಿಧಾನಸಭೆ ಚುನಾವಣೆಯಲ್ಲಿ ಕಳೆದ 24 ವರ್ಷಗಳಿಂದ ಆಡಳಿತ ನಡೆಸಿದ ಬಿಜೆಡಿಯನ್ನು ಅಧಿಕಾರದಿಂದ ದೂರ ಇಡುವಲ್ಲಿ ಬಿಜೆಪಿ ಯಶಸ್ವಿಯಾಗಿದೆ.

ಬಾಡಿಗೆ ತಾಯ್ತನದಿಂದ ಮಗು ಪಡೆದವರಿಗೂ ಆರು ತಿಂಗಳ ರಜೆ

ದೆಹಲಿ: ಬಾಡಿಗೆ ತಾಯ್ತನ ಮೂಲಕ ಮಕ್ಕಳನ್ನು ಪಡೆವ ಮಹಿಳಾ ಸರಕಾರಿ ನೌಕರರು 180 ದಿನಗಳ ಹೆರಿಗೆ ರಜೆ ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ.

ಕೇಂದ್ರ ನಾಗರಿಕ ಸೇವೆಗಳ(ರಜೆ) ನಿಯಮ-1972ರಲ್ಲಿ ಮಾಡಲಾದ ಬದಲಾವಣೆಗಳ ಪ್ರಕಾರ ಸರೊಗಸಿ ಮೂಲಕ ಮಗು ಪಡೆವ ತಾಯಿಗೆ 6 ತಿಂಗಳು ರಜೆ ಸಿಗಲಿದೆ.

ತಂದೆಗೆ 15 ದಿನ ಪಿತೃತ್ವ ರಜೆ

ಬಾಡಿಗೆ ತಾಯಿ ಮೂಲಕ ಮಗು ಪಡೆದು ತಂದೆ ಆದವರಿಗೆ 15 ದಿನಗಳ ಪಿತೃತ್ವ ರಜೆ ಮತ್ತು ಮಕ್ಕಳ ಆರೈಕೆ ರಜೆ ಸಹ ನೀಡಲಾಗಿದೆ. ಕೇಂದ್ರ ಸರಕಾರ 50 ವರ್ಷಗಳ ಹಿಂದಿನ ನಿಯಮಕ್ಕೆ ತಿದ್ದುಪಡಿ ಮಾಡುವುದಾಗಿ ಘೋಷಿಸಿದ ನಂತರ ಈ ಬದಲಾವಣೆ ಆಗಿದೆ.

ಬಾಡಿಗೆ ತಾಯ್ತನದ ಮೂಲಕ ಮಗು ಪಡೆಯುವ ಮಹಿಳಾ ಸರ್ಕಾರಿ ನೌಕರರಿಗೆ ಹೆರಿಗೆ ರಜೆ ಪಡೆಯಲು ಈವರೆಗೂ ಯಾವುದೇ ನಿಯಮ ಇರಲಿಲ್ಲ.

ಬಾಡಿಗೆ ತಾಯ್ತನ ಮೂಲಕ ಮಗು ಪಡೆಯುವ ಸರಕಾರಿ ನೌಕರ ತಂದೆಗೆ ಮಗು ಹುಟ್ಟಿದ ದಿನದಿಂದ 6 ತಿಂಗಳೊಳಗೆ 15 ದಿನಗಳ ಪಿತೃತ್ವ ರಜೆ ಸಿಗಲಿದೆ ಎಂದು ಹೊಸ ನಿಯಮ ಹೇಳುತ್ತಿದೆ.

ಕೇರಳಂ ಆಗಿರುವ ದೇವರ ಸ್ವಂತನಾಡು

ತಿರುವನಂತಪುರಂ: ಕೇರಳ ರಾಜ್ಯದ ಹೆಸರನ್ನು 'ಕೇರಳಂ' ಎಂದು ಬದಲಾಯಿಸುವ ನಿರ್ಣಯವನ್ನು ಕೇರಳ ವಿಧಾನಸಭೆಯಲ್ಲಿ ಸರ್ವಾನುಮತದಿಂದ ಸೋಮವಾರ ಅಂಗೀಕರಿಸಲಾಗಿದೆ. ಈ ಮೊದಲು ಕೂಡ ಹೆಸರು ಬದಲಾವಣೆ ನಿರ್ಣಯ ಅಂಗೀಕಾರಗೊಂಡಿತ್ತು. ಆದರೆ ಕೇಂದ್ರ ಗೃಹ ಸಚಿವಾಲಯ ಕೆಲವು ತಾಂತ್ರಿಕ ಬದಲಾವಣೆಯನ್ನು ಸೂಚಿಸಿದ್ದರಿಂದ ಈಗ ಮತ್ತೆ ಅಂಗೀಕರಿಸಲಾಗಿದೆ. ನಿರ್ಣಯ ಮಂಡಿಸಿದ ಸಿಎಂ ಪಿಣರಾಯಿ ವಿಜಯನ್ ಸಂವಿಧಾನದ 8ನೇ ಪರಿಚ್ಛೇದದಲ್ಲಿರುವ ಎಲ್ಲಾ ಭಾಷೆಗಳಲ್ಲೂ ಹೆಸರು ಬದಲಾವಣೆಗೆ ಅವಕಾಶವಿದೆ. ವಿಧಿ 3ರ ಅಡಿಯಲ್ಲಿ ಕೇರಳಂ ಎಂದು ಬದಲಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಸರಕಾರವನ್ನು ಈ ವಿಧಾನಸಭೆ ಒತ್ತಾಯಿಸುತ್ತದೆ ಎಂದು ಸಿಎಂ ಹೇಳಿದ್ದಾರೆ.

ಮೆಕ್ಕಾ ಬಿಸಿಲಾಘಾತ: ಸಾವಿನ ಸಂಖ್ಯೆ 1,301ಕ್ಕೆ

ಭಾರತದ ಯಾತ್ರಿಕರಲ್ಲಿ 98 ಮಂದಿ ಸಾವು | 95 ಯಾತ್ರಿಕರು ಆಸ್ಪತ್ರೆಗಳಲ್ಲಿ ಚಿಕಿತ್ಸೆ

ಮೆಕ್ಕಾ: ಬಿಸಿಲ ಆಘಾತದಿಂದ ಸೌದಿ ಅರೇಬಿಯಾದಲ್ಲಿ ಹಜ್ ಯಾತ್ರಿಕರ ಸಾವಿನ ಸಂಖ್ಯೆ ಹೆಚ್ಚುತ್ತಲೇ ಇದೆ. ಸೋಮವಾರ ವೇಳೆಗೆ 1,301 ಹಜ್ ಯಾತ್ರಿಕರು ಮೃತಪಟ್ಟಿರುವುದು ವರದಿಯಾಗಿದೆ.

ಮೃತ 1,301 ಯಾತ್ರಿಕರಲ್ಲಿ ಶೇ.83 ಮಂದಿ ಹಜ್ ಯಾತ್ರೆಗೆ ಪರವಾನಗಿ ಪಡೆಯದೇ, ನೋಂದಣಿ ಮಾಡಿಕೊಳ್ಳದೆ ಬಂದವರು. ಇಲ್ಲಿ ಅವರಿಗೆ ಉಳಿದುಕೊಳ್ಳಲು ಸರಿಯಾದ ವ್ಯವಸ್ಥೆ ಇಲ್ಲದೇ ಮೃತಪಟ್ಟಿದ್ದಾರೆ ಎಂದು ಸೌದಿ ಆರೋಗ್ಯ ಸಚಿವ ಫಹದ್ ಬಿನ್ ಅಬ್ದುರ್ರಹ್ಮಾನ್ ಅಲ್-ಜಲಾಜೆಲ್ ಹೇಳಿದ್ದಾರೆ.

ಇನ್ನೂ 95 ಯಾತ್ರಿಕರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಲ್ಲಿ ಕೆಲವರನ್ನು ಚಿಕಿತ್ಸೆಗಾಗಿ ವಿಮಾನದಲ್ಲಿ ರಾಜಧಾನಿ ರಿಯಾದ್‌ಗೆ ಕಳುಹಿಸಲಾಗಿದೆ ಎಂದು ಹೇಳಿದರು. ಸೌದಿಯಲ್ಲಿ ಹಜ್ ಯಾತ್ರಿಕರು ಮೃತಪಟ್ಟರೆ ಅವರನ್ನು ಗುರುತಿಸುವುದು ಅತ್ಯಂತ ಕಷ್ಟಕರ ಕೆಲಸ. ಏಕೆಂದರೆ ಮೃತರು ನೋಂದಣಿ ಮಾಡದೇ ಬಂದಿದ್ದರೆ ಅವರ ಬಳಿ ಯಾವುದೇ ಅಧಿಕೃತ ದಾಖಲೆಗಳು ಇರುವುದಿಲ್ಲ. ಹಾಗಾಗಿ ಗುರುತು ಪತ್ತೆ ಕಷ್ಟ ಎಂದು ಹೇಳಿದ್ದಾರೆ.

ಗುರುತು ಪತ್ತೆ ಹಚ್ಚಲಾಗದ ಯಾತ್ರಾರ್ಥಿಗಳನ್ನು ಮೆಕ್ಕಾದಲ್ಲಿಯೇ ಸಮಾಧಿ ಮಾಡಲಾಗಿದೆ ಎಂದು ಸಚಿವರು ಹೇಳಿದ್ದಾರೆ.

ಅನಧಿಕೃತ ಯಾತ್ರಾರ್ಥಿಗಳಲ್ಲಿ ಹೆಚ್ಚಿನವರು ಕಾಲ್ನಡಿಗೆಯಲ್ಲಿ ಮೆಕ್ಕಾ ತಲುಪಿದ್ದಾರೆ. ಇದರಿಂದಾಗಿ ಅವರು ಬಿಸಿಲಿನ ಶಾಖದಿಂದ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗಿದೆ.

ಮೃತರು ಎಲ್ಲಿಯವರು

ಈಜಿಪ್ಟ್	660
ಇಂಡೋನೇಷ್ಯ	165
ಭಾರತ	98
ಜೋರ್ಡಾನ್	
ಟ್ಯುನಿಷಿಯ	
ಮೊರಾಕೊ	
ಅಲ್ಜೀರಿಯ	
ಮಲೇಷ್ಯಾ	378

ಈಜಿಪ್ಟ್‌ನವರೆ ಹೆಚ್ಚು

ಬಿಸಿಲಿನ ತಾಪಕ್ಕೆ ಮೆಕ್ಕಾದಲ್ಲಿ ಮೃತಪಟ್ಟವರಲ್ಲಿ 660 ಈಜಿಪ್ಟ್ ನಾಗರಿಕರೇ ಆಗಿದ್ದಾರೆ ಎಂದು ಸೌದಿ ಅಧಿಕಾರಿಗಳು ತಿಳಿಸಿದ್ದಾರೆ. 31 ಮಂದಿ ಹೊರತುಪಡಿಸಿ ಎಲ್ಲರೂ ಅನಧಿಕೃತ ಯಾತ್ರಿಕರು. ಹಜ್ ಯಾತ್ರಾರ್ಥಿಗಳ ಸಾವಿನ ನಂತರ, ಅನಧಿಕೃತ ಯಾತ್ರಿಕರಿಗೆ ಸೌದಿ ಅರೇಬಿಯಾಕ್ಕೆ ಪ್ರಯಾಣಿಸಲು ಸಹಾಯ ಮಾಡುತ್ತಿದ್ದ 16 ಟ್ರಾವೆಲ್ ಏಜೆನ್ಸಿಗಳ ಪರವಾನಗಿ ರದ್ದುಗೊಳಿಸಲಾಗಿದೆ.

ಆರೋಪಿಗಳೆಲ್ಲ ಇಂಜಿನಿಯರ್‌ಗಳು

ಪ್ರಶ್ನೆ ಪತ್ರಿಕೆ ಸೋರಿಕೆ- ಮತ್ತೆ 6 ಮಂದಿ ಸೆರೆ

ಲಖನೌ: ಸಹಾಯಕ ಪರಿಶೀಲನಾ ಅಧಿಕಾರಿ ಹುದ್ದೆಗೆ ನಡೆದ ಪರೀಕ್ಷೆಯಲ್ಲಿ ಭಾರಿ ಅಕ್ರಮ ನಡೆದಿದ್ದು ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪದಲ್ಲಿ ಉತ್ತರಪ್ರದೇಶ ವಿಶೇಷ ತನಿಖಾದಳ ಸೋಮವಾರ ಮತ್ತೆ 6 ಮಂದಿಯನ್ನು ಬಂಧಿಸಿದೆ.

ಫೆ.11ರಂದು ನಡೆದ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ

ಆಗಿದ್ದರಿಂದ ಮಾ.2ರಂದು ಪರೀಕ್ಷೆಯನ್ನೇ ರದ್ದುಗೊಳಿಸಲಾಗಿತ್ತು. ಬಂಧನಕ್ಕೊಳಗಾದ ಆರೋಪಿಗಳೆಲ್ಲ ಇಂಜಿನಿಯರ್‌ಗಳಾಗಿದ್ದು ತಾಂತ್ರಿಕ ಕೆಲಸದಲ್ಲಿ ಪ್ರವೀಣರು ಎಂದು ತಿಳಿದುಬಂದಿದೆ.

10 ಲಕ್ಷ ಅಭ್ಯರ್ಥಿಗಳು ಈ ಪರೀಕ್ಷೆ ಬರೆದಿದ್ದರು. ಮೊದಲು ಎಸ್‌ಟಿಎಫ್ ಪ್ರಯಾಗ್‌ರಾಜ್‌ನ ಬಿಶಪ್ ಜಾನ್ಸನ್ ಶಾಲೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾದ ಬಗ್ಗೆ ಅನುಮಾನ ವ್ಯಕ್ತವಾಗಿತ್ತು. ಬಳಿಕ ಭೋಪಾಲ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಲು ಪ್ರೆಸ್ ನೌಕರ 10 ಲಕ್ಷ ರು. ಪಡೆದಿದ್ದು ತನ್ನ ಇಂಜಿನಿಯರಿಂಗ್ ಕಾಲೇಜಿನ ಮಾಜಿ ಸಹಪಾಠಿಗಳ ಜತೆ ಸೇರಿ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದ್ದಾರೆ ಎಂದು ತಿಳಿದು ಬಂದಿದೆ.

ಸುನಿಲ್ ರಘುವಂಶಿ ಎಂಬಾತ ಪ್ರಶ್ನೆ ಪತ್ರಿಕೆಯ ಮುದ್ರಣವನ್ನು ಸೂಕ್ಷ್ಮವಾಗಿ ಗಮನಿಸಿ ಸಣ್ಣದೊಂದು ಸಮಸ್ಯೆಯನ್ನು ಉಲ್ಲೇಖಿಸಿ ಪ್ರಶ್ನೆ ಪತ್ರಿಕೆಯನ್ನು ತೆಗೆದಿಟ್ಟುಕೊಂಡಿದ್ದ. ಫೆ.3 ರಂದು ಮಷೀನ್ ದುರಸ್ತಿ ನೆಪದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ನೀರಿನ ಬಾಟಲ್‌ನಲ್ಲಿ ತುಂಬಿ ಮನೆಗೆ ಕದ್ದೊಯ್ದಿದ್ದ. ಬಳಿಕ ಮಿತ್ರರಾದ ವಿಶಾಲ್ ದುಬೆ, ರಾಜೀವ್ ಮಿಶ್ರಾಗೆ ಮಾಹಿತಿ ನೀಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಹೋಟೆಲ್‌ನಲ್ಲಿ ಪ್ರಶ್ನೆಪತ್ರಿಕೆ ಹಂಚಿಕೆ

ಫೆ.8ರಂದು ಕೋಮಲ್ ಹೋಟೆಲ್‌ಗೆ ಪರೀಕ್ಷಾರ್ಥಿಗಳನ್ನು ಕರೆಸಿದ ಆರೋಪಿಗಳು ಪ್ರಶ್ನೆ ಪತ್ರಿಕೆಯ ಪ್ರತಿಗಳನ್ನು ನೀಡಿದ್ದು ಮೊಬೈಲ್ ಫೋನ್ ಮೂಲಕ ಉತ್ತರ ಹುಡುಕಿ ಅಭ್ಯರ್ಥಿಗಳಿಗೆ ಉತ್ತರಗಳನ್ನೂ ಕಳಿಸಿ ಕೊಟ್ಟಿದ್ದಾರೆ. ಪ್ರಶ್ನೆ ಪತ್ರಿಕೆಗೆ ಪ್ರತಿ ಅಭ್ಯರ್ಥಿಯಿಂದ 12 ಲಕ್ಷ ರು. ಪಡೆಯಲಾಗಿದೆ ಎಂದು ತಿಳಿದುಬಂದಿದೆ. ಪ್ರಶ್ನೆ ಪತ್ರಿಕೆಗಳ ಫೋಟೊ ತೆಗೆದು ತನ್ನ ಗ್ಯಾಂಗ್ ಸದಸ್ಯರಿಗೆ ರವಾನಿಸಿದ್ದು ಸೋಶಿಯಲ್ ಮೀಡಿಯಾದಲ್ಲಿ ಹರಿದಾಡಿದೆ. ಪ್ರಕರಣದಲ್ಲಿ 6 ಮಂದಿಯನ್ನು ಬಂಧಿಸಲಾಗಿದ್ದು, ಶಾಲೆ ಆಡಳಿತ, ಪ್ರಿಂಟಿಂಗ್ ಪ್ರೆಸ್ ಸೇರಿ ಹಲವೆಡೆ ತನಿಖೆ ಮುಂದುವರೆದಿದೆ. ಯುಪಿ ಪೊಲೀಸ್ ಕಾನ್ಸ್‌ಟೇಬಲ್ ಪರೀಕ್ಷೆಯಲ್ಲೂ ಇದೇ ರೀತಿ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಲಾಗಿತ್ತು.



ಪ್ರಸಕ್ತ ಚುಟುಕು ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡ ಇದುವರೆಗೂ ಅತ್ಯಮೋಘ ಪ್ರದರ್ಶನ ತೋರಿದೆ. ತಂಡದಲ್ಲಿರುವ ಎಲ್ಲ 11 ಆಟಗಾರರು ಉತ್ತಮ ಲಯದಲ್ಲಿದ್ದಾರೆ. ಅಲ್ಲದೆ ಎಲ್ಲಾ ವಿಭಾಗ ಗಳನ್ನು ಉತ್ತಮ ರೀತಿಯಲ್ಲಿ ನಿಭಾಯಿಸಿದ್ದೇವೆ. ಇದೇ ಲಯವನ್ನು ಮುಂದು ವರಿಸಿಕೊಂಡು ಹೋದರೆ, ಭಾರತ ಚಾಂಪಿಯನ್ ಆಗುವುದು ಖಚಿತ.

ಹರ್ಭಜನ್ ಸಿಂಗ್, ಮಾಜಿ ಕ್ರಿಕೆಟಿಗ

ಫಿಕ್ಸಿಂಗ್: ಪತ್ರಕರ್ತನ ವಿರುದ್ಧ ಮಾನನಷ್ಟ



ಕರಾಚಿ: ವಿಶ್ವಕಪ್ ವೇಳೆ ತನ್ನ ವಿರುದ್ಧ ಅನುಚಿತ ವರ್ತನೆ ತೋರಿದ ಪತ್ರಕರ್ತನ ವಿರುದ್ಧ ಪಾಕಿಸ್ತಾನ ನಾಯಕ ಬಾಬರ್ ಆಜಂ 1 ಬಿಲಿಯನ್ ಪಿಕೆಆರ್ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಯೂಟ್ಯೂಬರ್‌ಗಳು ಮತ್ತು ಮಾಜಿ ಕ್ರಿಕೆಟಿಗರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವ ಆಯ್ಕೆಯನ್ನು ಪರಿಗಣಿಸುವುದಾಗಿ ಅವರು ಆರಂಭದಲ್ಲಿ ಬೆದರಿಕೆ ಹಾಕಿದ ನಂತರ, ಈ ವಿಷಯದ ಬಗ್ಗೆ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಮುಬಶೀರ್ ಲುಕ್ಮಾನ್ ಎಂಬ ಪತ್ರಕರ್ತ ಸಾಮಾಜಿಕ ಮಾಧ್ಯಮದಲ್ಲಿ ಮ್ಯಾಚ್ ಫಿಕ್ಸಿಂಗ್ ಬಗ್ಗೆ ವ್ಯಂಗ್ಯವಾಡಿದ ನಂತರ ಬಾಬರ್ ಇದೀಗ 1 ಬಿಲಿಯನ್ ಪಿಕೆಆರ್ ಮೌಲ್ಯದ ನೋಟಿಸ್ ನೀಡಿದ್ದಾರೆ. ಈ ಹಿಂದೆ ಆಡಿ ಇ-ಟ್ರಾನ್ ಮತ್ತು ಆಸ್ಟ್ರೇಲಿಯಾ ಮತ್ತು ದುಬೈನಲ್ಲಿ ಐಷಾರಾಮಿ ಅಪಾರ್ಟ್‌ಮೆಂಟ್‌ಗಳಂತಹ ದುಬಾರಿ ಉಡುಗೊರೆಗಳನ್ನು ಅಜಮ್ ಪಡೆದಿದ್ದಾರೆ ಎಂದು ಲುಕ್ಮನ್ ಆರೋಪಿಸಿದ್ದರು. ಆ ನಿಟ್ಟಿನಲ್ಲಿ ಬಾಬರ್ ಪತ್ರಕರ್ತನ ವಿರುದ್ಧ ಮಾನಹಾನಿ ಕೇಸ್ ದಾಖಲಿಸಿದ್ದಾರೆ.

ಇರ್ಫಾನ್ ಮೇಕಪ್ ಆರ್ಟಿಸ್ಟ್ ನೀರುಪಾಲು

ಆಂಟಿಗುವಾ: ಮಾಜಿ ಕ್ರಿಕೆಟಿಗ ಹಾಗೂ ವೀಕ್ಷಕ ವಿವರಣೆಗಾರ ಇರ್ಫಾನ್ ಪಠಾಣ ಅವರ ಮೇಕಪ್ ಆರ್ಟಿಸ್ಟ್ ಫಯಾಝ್ ಅನ್ಸಾರಿ ಹೋಟೆಲ್‌ನ ಈಜು ಕೊಳವೊಂದರಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಸೂಪರ್ ಎಂಟರ ಘಟ್ಟದ ಪಂದ್ಯಗಳು ವೆಸ್ಟ್ ಇಂಡೀಸ್‌ನಲ್ಲಿ ನಡೆಯುತ್ತಿದ್ದು, ಈ ಟೂರ್ನಿಯ ವೀಕ್ಷಕ ವಿವರಣೆಗಾರರಾಗಿ ವೆಸ್ಟ್ ಇಂಡೀಸ್‌ಗೆ ತೆರಳಿದ್ದ ಇರ್ಫಾನ್ ಪಠಾಣ್, ತಮ್ಮೊಂದಿಗೆ ಮೇಕಪ್ ಆರ್ಟಿಸ್ಟ್ ಫಯಾಝ್ ಅನ್ಸಾರಿಯನ್ನೂ ಕರೆದೊಯ್ದಿದ್ದರು. ವೆಸ್ಟ್ ಇಂಡೀಸ್ನ ಹೋಟೆಲೊಂದರಲ್ಲಿ ವಾಸ್ತವ್ಯ ಹೂಡಿದ್ದ ಫಯಾಝ್ ಅನ್ಸಾರಿ, ಹೋಟೆಲ್‌ನ ಈಜು ಕೊಳದಲ್ಲಿ ಈಜುವಾಗ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗಿದೆ. 22 ವರ್ಷದ ಫಯಾಝ್ ಅನ್ಸಾರಿ ಪಶ್ಚಿಮ ಬಂಗಾಳದ ಬಿಜ್ನೋರ್ ಜಿಲ್ಲೆಯ ನಾಗಿನ ತಾಲೂಕಿನ ಮೊಹಲ್ಲಾ ಖಾಝಿ ಸರಾಯಿ ಗ್ರಾಮದ ನಿವಾಸಿಯಾಗಿದ್ದರು ಎಂದು ಗುರುತಿಸಲಾಗಿದೆ.

ದಾಖಲೆ ಬರೆದ ಸ್ಮೃತಿ

ಬೆಂಗಳೂರು: ಏಕದಿನ ಕ್ರಿಕೆಟ್ ಪಂದ್ಯಗಳಲ್ಲಿ ಅತಿ ಹೆಚ್ಚು ರನ್ ಗಳಿಸಿದ ಮಹಿಳಾ ಆಟಗಾರ್ತಿ ಎಂಬ ಹಿರಿಮೆಗೆ ಭಾರತೀಯ ಕ್ರಿಕೆಟ್ ಮಹಿಳಾ ತಂಡದ ಉಪ ನಾಯಕಿ ಸ್ಮೃತಿ ಮಂದಾನ ಭಾಜನರಾಗಿದ್ದಾರೆ. ಭಾನುವಾರ ಬೆಂಗಳೂರಿನಲ್ಲಿ ನಡೆದ ದಕ್ಷಿಣ ಆಫ್ರಿಕಾ ವಿರುದ್ಧದ ಭಾರತದ ಮೂರನೇ ಏಕದಿನ ಪಂದ್ಯದಲ್ಲಿ ಮಂದಾನ ಅವರು ಈ ಸಾಧನೆ ಮಾಡಿದ್ದು, ಆ ಪಂದ್ಯದಲ್ಲಿ ಅವರು 90 ರನ್ ಗಳಿಸಿದರು. ಇದಕ್ಕೂ ಮೊದಲು ಅವರು ಎರಡನೇ ಏಕದಿನ ಪಂದ್ಯದಲ್ಲಿ 117 ರನ್, ಮೊದಲ ಪಂದ್ಯದಲ್ಲಿ 136 ರನ್ ಬಾರಿಸಿದ್ದರು. ಈ ಮೂರು ಪಂದ್ಯಗಳಲ್ಲಿ ಅವರು 343 ರನ್ ಗಳಿಸಿದ್ದು, ಆ ಮೂಲಕ ಸರಣಿ ಯೊಂದರಲ್ಲಿ ಅತಿ ಹೆಚ್ಚು ರನ್ ಬಾರಿಸಿದ ಆಟಗಾರ್ತಿಯ ಪಟ್ಟಿಯಲ್ಲಿ 2ನೇ ಸ್ಥಾನಕ್ಕೆ ತಲುಪಿ ದ್ದಾರೆ. ದ್ವಿಪಕ್ಷೀಯ ಏಕದಿನ ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ್ತಿಯ ಪಟ್ಟಿಯಲ್ಲಿ ಆಸ್ಟ್ರೇಲಿಯಾದ ಮಾಜಿ ಆಟಗಾರ್ತಿ ಕರೆನ್ ರೋಲ್ಟನ್ ಮೊದಲ ಸ್ಥಾನದಲ್ಲಿ ಇದ್ದಾರೆ.

ಸೆಮಿಯಲ್ಲಿ ಭಾರತಕ್ಕೆ ಇಂಗ್ಲೆಂಡ್ ಸವಾಲು | ಹೆಡ್ ಹೋರಾಟ ವಿಫಲ

ರೋಹಿಟ್‌ಗೆ ಶರಣಾದ ಆಸಿಸ್

ಲೂಸಿಯಾ: ನಾಯಕ ರೋಹಿತ್ ಶರ್ಮ ಅವರ ಬೌಂಡರಿ ಹಾಗೂ ಸಿಕ್ಸರ್ ಸುರಿಮಳೆಗೆ ಆಸ್ಟ್ರೇಲಿಯಾ ತತ್ತರಿಸಿದ್ದು, ಮಹತ್ವದ ಪಂದ್ಯದಲ್ಲಿ ಭಾರತದ ವಿರುದ್ಧ ಸೋಲನುಭವಿಸಿದೆ. ಆ ಮೂಲಕ ಭಾರತ ಸೂಪರ್ 8ರಲ್ಲಿ ಮೊದಲ ಸ್ಥಾನ ಪಡೆದಿದ್ದು, ಸೆಮಿಫೈನಲ್ 1ರಲ್ಲಿ ಆಂಗ್ಲರನ್ನು ಎದುರಿಸಲಿದೆ. ಮತ್ತೊಂದೆಡೆ, ಆಸ್ಟ್ರೇಲಿಯಾ ಸೋಲನುಭವಿಸಿದ್ದು, ಇಂದು ನಡೆಯಲಿರುವ ಅಫ್ಘಾನಿಸ್ತಾನ ಹಾಗೂ ಬಾಂಗ್ಲಾ ನಡುವಣ ಪಂದ್ಯವು ಕಾಂಗರೂಗಳ ಪಾಲಿಗೆ ನಿರ್ಣಾಯಕವಾಗಲಿದೆ. ಇಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 5 ವಿಕೆಟ್ ಕಳೆದುಕೊಂಡು 205 ರನ್ ಗಳಿಸಿತು. ಅದನ್ನು ಬೆನ್ನುಹತ್ತಿದ ಆಸ್ಟ್ರೇಲಿಯಾ ಹೋರಾಟದ ನಡುವೆಯೂ 7 ವಿಕೆಟ್ ಕಳೆದುಕೊಂಡು 181 ರನ್ ಗಳಿಸಲಷ್ಟೇ ಶಕ್ತವಾಯಿತು.

ಆರಂಭದಿಂದಲೂ ಸಿಡಿದ ರೋಹಿತ್

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತಕ್ಕೆ ರೋಹಿತ್ ಶರ್ಮ ಮತ್ತು ವಿರಾಟ್ ಕೊಹ್ಲಿ ದೊಡ್ಡ ಆರಂಭ ನೀಡಲಿಲ್ಲ. ವಿರಾಟ್ ಕೊಹ್ಲಿ ಮತ್ತೊಮ್ಮೆ ಶೂನ್ಯಕ್ಕೆ ಔಟಾಗಿ ವೈಫಲ್ಯ ಅನುಭವಿಸಿದರು. ಆದರೆ ಅವರು ಔಟಾಗಿದ್ದೇ ಸರಿ ರೋಹಿತ್ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ರಿಷಭ್ ಪಂತ್ ನಾಯಕನಿಗೆ ಉತ್ತಮ ಸಾಥ್ ನೀಡಿದರು. ಎರಡನೇ ವಿಕೆಟ್‌ಗೆ 87 ರನ್‌ಗಳ ಪಾಲುದಾರಿಕೆಯಲ್ಲಿ ಜತೆಯಾದರು. ಈ ವೇಳೆ 14 ಎಸೆತಗಳಲ್ಲಿ 15 ರನ್ ಗಳಿಸಿ ಔಟಾದರು. ಆ ಬಳಿಕ ಸೂರ್ಯಕುಮಾರ್ ಯಾದವ್ ಕೂಡ ಅಬ್ಬರಿಸಿದರು. ಕೇವಲ 16 ಎಸೆತಗಳಲ್ಲಿ 31 ರನ್ ಗಳಿಸಿದರು. ಇನ್ನು ನಾಯಕ ರೋಹಿತ್ ಶರ್ಮ ಕೇವಲ 41 ಎಸೆತಗಳಲ್ಲಿ 92 ರನ್ ಬಾರಿಸಿ 8 ರನ್‌ಗಳಿಂದ ಶತಕ ವಂಚಿತರಾದರು. ಇನ್ನು ಶಿವಂ ದುಬೆ 22 ಎಸೆತಗಳಲ್ಲಿ 28 ರನ್ ಗಳಿಸಿದರೆ, ಉಪನಾಯಕ ಹಾರ್ದಿಕ್ ಪಾಂಡ್ಯ 17 ಎಸೆತಗಳಲ್ಲಿ ಅಜೇಯ 27 ರನ್ ಬಾರಿಸಿದರು. ಕೊನೆಯಲ್ಲಿ ರವೀಂದ್ರ ಜಡೇಜಾ 5 ಎಸೆತಗಳಲ್ಲಿ ಅಜೇಯ 9 ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಆಸ್ಟ್ರೇಲಿಯಾ ಪರ ಮಿಚೆಲ್ ಸ್ಟಾರ್ಕ್ 45 ರನ್ ನೀಡಿ 2 ವಿಕೆಟ್ ಕಬಳಿಸಿದರೆ, ಮಾರ್ಕಸ್ ಸ್ಟೋಯಿನಿಸ್ 56 ರನ್ ನೀಡಿ 2 ವಿಕೆಟ್ ಪಡೆದರೆ, ಜೋಶ್ ಹೇಜಲ್‌ವುಡ್14 ರನ್ ನೀಡಿ 1 ವಿಕೆಟ್ ಕಬಳಿಸಿದರು.

ಕಾಟ ಕೊಟ್ಟ ಹೆಡ್

ಅದನ್ನು ಬೆನ್ನುಹತ್ತಿದ ಆಸ್ಟ್ರೇಲಿಯಾಗೂ ಉತ್ತಮ ಆರಂಭ ಸಿಗಲಿಲ್ಲ. ಆರಂಭದಲ್ಲೇ ವಾರ್ನರ್ 6 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆದರೆ ಈ ವೇಳೆ ಜತೆಗೂಡಿದ ಹೆಡ್ ಮತ್ತು ನಾಯಕ ಮಾರ್ಷ್ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ಹೆಡ್ ಆಡುವುದನ್ನು ನೋಡಿದರೆ, 2023ರ ವಿಶ್ವಕಪ್ ಫೈನಲ್ ನೆನಪಾಯಿತು. ಆದರೆ ಈ ವೇಳೆ ಮಾರ್ಷ್ 37 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಮ್ಯಾಕ್ಸ್‌ವೆಲ್ ಆರಂಭದಲ್ಲೇ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಆದರೆ 20 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಸ್ಟೋಯಿನಿಸ್ 2 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆರಂಭದಿಂದಲೂ ಕಾಟ ಕೊಟ್ಟ ಹೆಡ್ 76 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅವರು ಔಟಾಗಿದ್ದೇ ಸರಿ ಭಾರತ ಯಾವ ಅವಕಾಶಗಳನ್ನೂ ನೀಡದೇ ಪಂದ್ಯ ವಶ ಮಾಡಿಕೊಂಡಿತು. ಉಳಿದಂತೆ ಡೇವಿಡ್ 15 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಭಾರತದ ಪರ ಅರ್ಶ್‌ದೀಪ್ 37/3 ಪಡೆದರೆ, ಕುಲ್ದೀಪ್ 24/2 ಪಡೆದರು.

ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಘರ್ಜಿಸಿದ ರೋಹಿತ್ ಶರ್ಮ.

ಭಾರತ ಆರ್ಚರಿ ತಂಡಕ್ಕೆ ಒಲಿಂಪಿಕ್ಸ್ ಟಿಕೆಟ್

ದೆಹಲಿ: ವರ್ಲ್ಡ್ ಆರ್ಚರಿ ರ್‍ಯಾಂಕಿಂಗ್ ಪಟ್ಟಿ ಬಿಡುಗಡೆಯಾಗಿದ್ದು, ಅದನ್ನು ಆಧರಿಸಿ ಭಾರತದ ಪುರುಷರ ಹಾಗೂ ಮಹಿಳೆಯರ ಆರ್ಚರಿ ತಂಡವು ಈ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ನ ಅರ್ಹತೆ ಪಡೆದುಕೊಂಡಿವೆ. ಪುರುಷರ ಹಾಗೂ ಮಹಿಳೆ ಯರ ಎರಡೂ ತಂಡಗಳು ಟೀಮ್ ಕೋಟಾಗಳನ್ನು ಗಿಟ್ಟಿಸಿಕೊಂಡಿವೆ. ಭಾರತವು ಪ್ಯಾರಿಸ್‌ನಲ್ಲಿ ಪುರುಷರ ಹಾಗೂ ಮಹಿಳೆಯರ ಟೀಮ್‌ಗಳು, ವೈಯಕ್ತಿಕ ಹಾಗೂ ಮಿಶ್ರ ವಿಭಾಗಗಳು ಸೇರಿದಂತೆ ಎಲ್ಲ ಐದು ಪದಕ ಸ್ಪರ್ಧೆಗಳಲ್ಲಿ ಸ್ಪರ್ಧಿಸುವ ಅರ್ಹತೆ ಪಡೆದಿದೆ. ಪುರುಷರ ವಿಭಾಗದಲ್ಲಿ ಭಾರತ ಹಾಗೂ ಚೀನಾ ಸ್ಥಾನ ಗಿಟ್ಟಿಸಿಕೊಂಡರೆ, ಮಹಿಳೆಯರ ವಿಭಾಗದಲ್ಲಿ ಇಂಡೋ ನೇಷ್ಯಾ ತಂಡ ಟೀಮ್ ಒಲಿಂಪಿಕ್ ಕೋಟಾ ಗಿಟ್ಟಿಸಿ ಕೊಂಡ ಎರಡನೇ ದೇಶವಾಗಿದೆ. ಟೀಮ್ ಸ್ಪರ್ಧೆಗಳಲ್ಲಿ ಪ್ರತಿ ವಿಭಾಗದಲ್ಲಿ 12 ತಂಡಗಳು ಇರುತ್ತವೆ.

ಕೊಹ್ಲಿ, ರೋಹಿತ್, ಪಂತ್‌ಗೆ ವಿರಾಮ | ಗಿಲ್ ನೂತನ ನಾಯಕ

ಜಿಂಬಾಬ್ವೆಗೆ ಎಳೆಯರ ಬಳಗ

ದೆಹಲಿ: ಟಿ20 ವಿಶ್ವಕಪ್ ಪಂದ್ಯಾವಳಿ ಮುಗಿದ ಬಳಿಕ, ಭಾರತ ಕ್ರಿಕೆಟ್ ತಂಡವು 5 ಪಂದ್ಯಗಳ ಟಿ20 ಸರಣಿಗಾಗಿ ಜಿಂಬಾಬ್ವೆ ಪ್ರವಾಸ ಕೈಗೊಳ್ಳಲಿದ್ದು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸೋಮವಾರ ಭಾರತ ತಂಡವನ್ನು ಪ್ರಕಟಿಸಿದೆ. ಅನುಭವಿ ಗಳಾದ ರೋಹಿತ್ ಶರ್ಮ, ವಿರಾಟ್ ಕೊಹ್ಲಿ, ರಿಷಭ್ ಪಂತ್, ಹಾರ್ದಿಕ್ ಪಾಂಡ್ಯ ಮತ್ತು ಜಸ್‌ಪ್ರೀತ್ ಬುಮ್ರಾ ಅವರಂತಹ ಪ್ರಮುಖ ಆಟಗಾರರಿಗೆ ವಿಶ್ರಾಂತಿ ನೀಡಲಾಗಿದ್ದು, ಶುಭ್ಮನ್ ಗಿಲ್ ಅವರಿಗೆ ನಾಯಕನ ಜವಾಬ್ದಾರಿ ಹೇರಲಾಗಿದೆ. ಅಲ್ಲದೆ, ನಾಲ್ವರು ಐಪಿಎಲ್ ಆಟಗಾರರು ಭಾರತ ರಾಷ್ಟ್ರೀಯ ತಂಡಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ.

ಮುಖೇಶ್ ಕುಮಾರ್ ಹಿರಿಯ ಆಟಗಾರ

ಜಿಂಬಾಬ್ವೆ ವಿರುದ್ಧದ ಸರಣಿಗೆ ಪ್ರಕಟಿಸಲಾದ ಭಾರತ ತಂಡದಲ್ಲಿ ಮುಖೇಶ್ ಕುಮಾರ್ ಅವರು ತಂಡದ ಅತ್ಯಂತ ಹಿರಿಯ ಸದಸ್ಯರಾಗಿದ್ದಾರೆ. ಯಶಸ್ವಿ ಜೈಸ್ವಾಲ್, ರುತುರಾಜ್ ಗಾಯಕ್ವಾಡ್, ರಿಂಕು ಸಿಂಗ್, ಸಂಜು ಸ್ಯಾಮ್ಸನ್, ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯ್ ಮತ್ತು ನಾಯಕ ಶುಭ್ಮನ್ ಗಿಲ್ ಕೂಡ ಅನುಭವಿ ಆಟಗಾರರಾಗಿದ್ದಾರೆ. ಅದರಂತೆ ಟೆಸ್ಟ್ ತಂಡಕ್ಕೆ ಪದಾರ್ಪಣೆ ಮಾಡಿದ ಧ್ರುವ್ ಜುರೆಲ್ ಅವರು ಟಿ20 ಕ್ರಿಕೆಟ್‌ನಲ್ಲಿ ಚೊಚ್ಚಲ ಪಂದ್ಯಕ್ಕೂ ಸಹ ಪದಾರ್ಪಣೆ ಮಾಡಲಿದ್ದಾರೆ.

ಐಪಿಎಲ್ ವೀರರಿಗೆ ಬಂಪರ್

ಈ ಬಾರಿ ಐಪಿಎಲ್‌ನಲ್ಲಿ ಮಿಂಚಿದ್ದ ಆಟಗಾರರಿಗೆ ಟಿ20 ವಿಶ್ವಕಪ್‌ನಲ್ಲಿ ಸ್ಥಾನ ಸಿಗಬಹುದು ಎಂದು ಹೇಳಲಾಗಿತ್ತು. ಆದರೆ, ವಿಶ್ವಕಪ್ ತಂಡದಲ್ಲಿ ಬಹುತೇಕ ಹಳೆಯ ಆಟಗಾರರನ್ನು ಕಣಕ್ಕಿಳಿಸಲಾಗಿತ್ತು. ಹೀಗಾಗಿ ತಂಡದ ಆಯ್ಕೆ ಬಗ್ಗೆ ಚರ್ಚೆ ಮತ್ತು ಅಸಮಾಧಾನ ಕಂಡುಬಂದಿತ್ತು. ಅದಕ್ಕಾಗಿ ಇದೀಗ ಬಹುತೇಕ ಐಪಿಎಲ್ ವೀರರಿಗೆ ತಂಡದಲ್ಲಿ ಅವಕಾಶ ನೀಡಲಾಗಿದ್ದು, ಅಭಿಷೇಕ್ ಶರ್ಮ, ಗಾಯಕ್ವಾಡ್ ಅಂತಹ ಆಟಗಾರರಿಗೆ ಭಾರೀ ಅವಕಾಶ ನೀಡಲಾಗಿದೆ.

ಭಾರತ ತಂಡ

ಶುಭ್ಮನ್ ಗಿಲ್ (ನಾಯಕ), ಯಶಸ್ವಿ ಜೈಸ್ವಾಲ್, ರುತುರಾಜ್ ಗಾಯಕ್ವಾಡ್, ಅಭಿಷೇಕ್ ಶರ್ಮ, ರಿಂಕು ಸಿಂಗ್, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಧ್ರುವ್ ಜುರೆಲ್ (ವಿಕೆಟ್ ಕೀಪರ್), ನಿತೀಶ್ ಕುಮಾರ್ ರೆಡ್ಡಿ, ರಿಯಾನ್ ಪರಾಗ್, ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯ್, ಅವೇಶ್ ಖಾನ್, ಖಲೀಲ್ ಅಹ್ಮದ್, ಮುಖೇಶ್ ಕುಮಾರ್, ತುಷಾರ್ ದೇಶಪಾಂಡೆ.

ವಿಂಡೀಸ್ ವಿರುದ್ಧ ದ.ಆಫ್ರಿಕಾ ಗೆಲುವು ದಾಖಲಿಸಿದ್ದು, ಕೆರೆಬಿಯನ್ನರು ಚೇಸ್ ಮಾಡುತ್ತಿರುವ ವೇಳೆ ಮೊದಲ ವಿಕೆಟ್ ಬಿದ್ದಾಗ ಸಂಭ್ರಮಿಸಿದ ದ.ಆಫ್ರಿಕ ಪಡೆ.

ಸೂಪರ್ 8 ಬಿ ಗುಂಪಿನ ಪಂದ್ಯಗಳು ಅಂತ್ಯ | ಹರಿಣಗಳಿಗೆ ವರುಣ ಕೃಪೆ

ವಿಶ್ವಕಪ್: ಆತಿಥೇಯರು ಹೊರಕ್ಕೆ

ಆಂಟಿಗುವಾ: ಟಿ20 ವಿಶ್ವಕಪ್ ಸೂಪರ್ 8ರ ಬಿ ಗುಂಪಿನ ಪಂದ್ಯಗಳು ಮುಕ್ತಾಯಗೊಂಡಿದ್ದು, ವಿಶ್ವಕಪ್ ಆತಿಥ್ಯರಾದ ವೆಸ್ಟ್‌ಇಂಡೀಸ್ ಹಾಗೂ ಅಮೆರಿಕ ಟೂರ್ನಿಯಿಂದ ಹೊರಬಿದ್ದಿವೆ. ಆ ಮೂಲಕ ದ.ಆಫ್ರಿಕಾ ಹಾಗೂ ಇಂಗ್ಲೆಂಡ್ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದ್ದು, ಕ್ರಮವಾಗಿ ಮೊದಲನೇ ಹಾಗೂ ಎರಡನೇ ಸ್ಥಾನದಲ್ಲಿ ಇವೆ.

ಶಮ್ಸಿ ಅವರ ಮಾರಿಕ ದಾಳಿ ಹಾಗೂ ಮಧ್ಯಮ ಕ್ರಮಾಂಕ ಬ್ಯಾಟರ್‌ಗಳ ಚುರುಕು ಬ್ಯಾಟಿಂಗ್ ನಿಂದಾಗಿ ವೆಸ್ಟ್‌ಇಂಡೀಸ್ ತತ್ತರಿಸಿದ್ದು, ವಿರೋಚಿತ ಸೋಲನುಭವಿಸಿದೆ. ಅಲ್ಲದೆ ವಿಶ್ವಕಪ್‌ನ ತನ್ನ ಪಯಣ ಅಂತ್ಯಗೊಳಿಸಿದೆ. ಇಲ್ಲಿನ ವಿವಿನ್ ರಿಚರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್‌ಇಂಡೀಸ್ 8 ವಿಕೆಟ್ ಕಳೆದುಕೊಂಡು 135 ರನ್ ಗಳಿಸಿತು. ಅದನ್ನು ಬೆನ್ನುಹತ್ತಿದ ದ. ಆಫ್ರಿಕಾಗೆ ಮಳೆ ಅಡ್ಡಿ ಆಯಿತು ಆ ನಿಟ್ಟಿನಲ್ಲಿ ಪಂದ್ಯವನ್ನು 17 ಓವರ್‌ಗಳಲ್ಲಿ 123 ರನ್ ಗುರಿ ನೀಡಲಾಗಿತ್ತು. ಅದಕ್ಕೆ ಉತ್ತರವಾಗಿ 16.1 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 124 ಗಳಿಸಿ ಡಿಎಲ್‌ಎಸ್ ನಿಯಮದಿಂದ ದ.ಆಫ್ರಿಕಾ ಗೆಲುವು ಸಾಧಿಸಿತು.

ಚೇಸ್ ಏಕಾಂಗಿ ಹೋರಾಟ

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ವೆಸ್ಟ್ ಇಂಡೀಸ್ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಆರಂಭಿಕ ಆಟಗಾರ ಶಾಯ್ ಹೋಪ್ ಮೊದಲ ಓವರ್‌ನಲ್ಲೇ ವಿಕೆಟ್ ಒಪ್ಪಿಸಿದರೆ, ನಿಕೋಲಸ್ ಪೂರನ್ ಕೇವಲ 1 ರನ್ ಗಳಿಸಿ ನಿರ್ಗಮಿಸಿದರು. ಇದಾಗ್ಯೂ ಮತ್ತೊಂದೆಡೆ ಕೈಲ್ ಮೇಯರ್ಸ್ ಜವಾಬ್ದಾರಿಯುತ ಬ್ಯಾಟಿಂಗ್‌ನೊಂದಿಗೆ 34 ಎಸೆತಗಳಲ್ಲಿ 35 ರನ್ ಬಾರಿಸಿದರು. ಮಧ್ಯಮ ಕ್ರಮಾಂಕದಲ್ಲಿ ರೋಸ್ಟನ್ ಚೇಸ್ 42 ಎಸೆತಗಳಲ್ಲಿ 52 ರನ್ ಬಾರಿಸಿದರು. ಆದರೆ ಚೇಸ್ ಔಟಾಗುತ್ತಿದ್ದಂತೆ ದಿಢೀರ್ ಕುಸಿತಕ್ಕೊಳಗಾದ ವೆಸ್ಟ್ ಇಂಡೀಸ್ ಅಂತಿಮವಾಗಿ 8 ವಿಕೆಟ್ ಕಳೆದುಕೊಂಡು ಕೇವಲ 135 ರನ್‌ಗಳಿಸಲಷ್ಟೇ ಶಕ್ತವಾಯಿತು.

ಸೆಮಿಸ್‌ಗೆ ಇಂಗ್ಲೆಂಡ್, ದ.ಆಫ್ರಿಕಾ

ಸೂಪರ್ 8ನ ಬಿ ಗುಂಪಿನ ಎಲ್ಲ ಪಂದ್ಯಗಳು ಮುಗಿದಿದ್ದು, ಆ ನಿಟ್ಟಿನಲ್ಲಿ ದ.ಆಫ್ರಿಕಾ 6 ಅಂಕಗಳೊಂದಿಗೆ ಮೊದಲ ಸೆಮಿಫೈನಲಿಸ್ಟ್ ಅದರೆ, 4 ಅಂಕದೊಂದಿಗೆ ಇಂಗ್ಲೆಂಡ್ 2ನೇ ಸ್ಥಾನದಲ್ಲಿದೆ. ಹಾಗಾಗಿ ಆತಿಥ್ಯ ವಹಿಸಿದ್ದ ಅಮೆರಿಕ ಹಾಗೂ ವೆಸ್ಟ್‌ಇಂಡೀಸ್ ಪಯಣ ಅಂತ್ಯಗೊಂಡಿದೆ. ಸೆಮಿಫೈನಲ್‌ಗಳಲ್ಲಿ ದ.ಆಫ್ರಿಕಾ ಎ ಗುಂಪಿನ 2ನೇ ತಂಡವನ್ನು ಎದುರಿಸಲಿದ್ದು, ಇಂಗ್ಲೆಂಡ್ ಮೊದಲನೇ ತಂಡವನ್ನು ಎದುರಿಸಲಿದೆ.

ಸ್ಕೋರ್

ವೆಸ್ಟ್‌ಇಂಡೀಸ್: 135/8, ಚೇಸ್ 52,
ಮೆಯರ್ಸ್ 35, ಶಮ್ಸಿ 27/3
ಸೌತ್ ಆಫ್ರಿಕಾ- 124/7 (16.1)
ಸ್ಟಬ್ಸ್ 29, ಕ್ಲಾಸೆನ್ 22, ಚೇಸ್ 12

ತಿಣುಕಾಡಿದ ದ.ಆಫ್ರಿಕಾ

ಅದನ್ನು ಬೆನ್ನು ಹತ್ತಿದ ದ.ಆಫ್ರಿಕಾದ ಇನ್ನಿಂಗ್ಸ್ ಆರಂಭದಲ್ಲೇ ಮಳೆ ಬಂದಿದ್ದರಿಂದ ಕೆಲ ಹೊತ್ತು ಮ್ಯಾಚ್ ಅನ್ನು ಸ್ಥಗಿತಗೊಳಿಸಲಾಯಿತು. ಆ ಬಳಿಕ ಓವರ್‌ಗಳ ಕಡಿತದೊಂದಿಗೆ ದ.ಆಫ್ರಿಕಾ 17 ಓವರ್‌ಗಳಲ್ಲಿ 123 ರನ್‌ಗಳ ಗುರಿ ನೀಡಲಾಯಿತು.

ಈ ಗುರಿಯನ್ನು ಬೆನ್ನತ್ತಿದ ಹರಿಣರಿಗೆ ಉತ್ತಮ ಆರಂಭ ಸಿಗಲಿಲ್ಲ. ರೀಝ ಹೆಂಡ್ರಿಕ್ಸ್ (0) ಶೂನ್ಯಕ್ಕೆ ಔಟಾದರೆ, ಕ್ವಿಂಟನ್ ಡಿಕಾಕ್ 12 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಆ ಬಳಿಕ ಬಂದ ಐಡೆನ್ ಮಾರ್ಕ್ರಾಮ್ 18 ರನ್ ಗಳಿಸಿ ಔಟಾ ದರು. ಈ ಹಂತದಲ್ಲಿ ಜತೆಗೂಡಿದ ಹೆನ್ರಿಕ್ ಕ್ಲಾಸೆನ್ ಹಾಗೂ ಟ್ರಿಸ್ಟನ್ ಸ್ಟಬ್ಸ್ ಉತ್ತಮ ಜೊತೆಯಾಟ ನೀಡಿದರು. 10 ಎಸೆತಗಳಲ್ಲಿ 22 ರನ್ ಬಾರಿಸಿ ಅಪಾಯಕಾರಿಯಾಗುವ ಸೂಚನೆ ನೀಡಿದ್ದ ಕ್ಲಾಸೆನ್ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ಡೇವಿಡ್ ಮಿಲ್ಲರ್ (4) ವಿಕೆಟ್ ಒಪ್ಪಿಸಿ ದರು. ಟ್ರಿಸ್ಟನ್ ಸ್ಟಬ್ಸ್ (29) ಆಟ ನಿಲ್ಲಿಸಿದರು. ಪರಿಣಾಮ ಕೊನೆಯ 3 ಓವರ್‌ಗಳಲ್ಲಿ ಸೌತ್ ಆಫ್ರಿಕಾ ತಂಡಕ್ಕೆ ಗೆಲ್ಲಲು 19 ರನ್‌ಗಳ ಅವಶ್ಯಕತೆಯಿತ್ತು.

ರೋಚಕ ಅಂತ್ಯ

15ನೇ ಓವರ್ ಎಸೆದ ಅಲ್ಜಾರಿ ಜೋಸೆಫ್ ಕೇವಲ 6 ರನ್ ಮಾತ್ರ ನೀಡಿದರು. ಅದರಂತೆ ಕೊನೆಯ 12 ಎಸೆತಗಳಲ್ಲಿ 13 ರನ್‌ಗಳು ಬೇಕಿತ್ತು. ಈ ವೇಳೆ ದಾಳಿಗಿಳಿದ ರೋಸ್ಟನ್ ಚೇಸ್, ಕೇಶವ್ ಮಹಾರಾಜ್ (2) ವಿಕೆಟ್ ಪಡೆದರು. ಇನ್ನು ಕೊನೆಯ ಎಸೆತದಲ್ಲಿ ಕಗಿಸೊ ರಬಾಡ ಬೌಂಡರಿ ಮೂಲಕ ಪಂದ್ಯವನ್ನು ರೋಚಕ ಘಟ್ಟದತ್ತ ಕೊಂಡೊಯ್ದರು.

ಅದರಂತೆ ಅಂತಿಮ ಓವರ್‌ನಲ್ಲಿ ಕೇವಲ 5 ರನ್‌ಗಳ ಅವಶ್ಯಕತೆಯಿತ್ತು. ಒಬೆಡ್ ಮಕಾಯ್ ಎಸೆದ ಕೊನೆಯ ಓವರ್‌ನ ಮೊದಲ ಎಸೆತದಲ್ಲೇ ಭರ್ಜರಿ ಸಿಕ್ಸ್ ಸಿಡಿಸುವ ಮೂಲಕ ಮಾರ್ಕೊ ಯಾನ್ಸೆನ್ ದ.ಆಫ್ರಿಕಾ ತಂಡಕ್ಕೆ 3 ವಿಕೆಟ್‌ಗಳ ರೋಚಕ ಜಯ ತಂದು ಕೊಟ್ಟರು.

ವಿಶ್ವದ ಅತ್ಯಂತ ಸುಪ್ರಸಿದ್ಧ ಕ್ರೀಡಾಪಟುಗಳಲ್ಲಿ ಒಬ್ಬರಾದ ವಿರಾಟ್ ಕೊಹ್ಲಿ ಅವರ ವರ್ಚಸ್ಸು ಇದೀಗ ಅಮೆರಿಕದಲ್ಲೂ ಹೆಚ್ಚಿದ್ದು, ನ್ಯೂಯಾರ್ಕ್‌ನ ಪ್ರಸಿದ್ಧ ಟೈಮ್ಸ್ ಸ್ಕ್ವೈರ್‌ನಲ್ಲಿ ಮ್ಯಾಟ್ರೆಸ್ ಕಂಪನಿಯೊಂದರ ಮಾರ್ಕೆಟಿಂಗ್ ಅಭಿಯಾನದ ಭಾಗವಾಗಿ ವಿರಾಟ್ ಕೊಹ್ಲಿಯ ಆಳೆತ್ತರದ ಪ್ರತಿಮೆಯನ್ನು ನಿಲ್ಲಿಸಲಾಗಿದೆ.

ಕೊನೇ ಕ್ಷಣದಲ್ಲಿ ಗೋಲು ಸೋಲಿನಿಂದ ಜರ್ಮನಿ ಪಾರು

ಅಮೆರಿಕ: ಪಂದ್ಯದ ಹೆಚ್ಚುವರಿ ಆಟದಲ್ಲಿ ನಿಕೊಲಸ್ ಫುಲ್ ಕುರ್ಗ್ ಗಳಿಸಿದ ಗೋಲಿನ ನೆರವಿನಿಂದ ಮಾಜಿ ವಿಶ್ವ ಚಾಂಪಿಯನ್ ಜರ್ಮನಿ ತಂಡ ಯುರೋಕಪ್ ಫುಟ್‌ಬಾಲ್ ಪಂದ್ಯದಲ್ಲಿ ಸ್ವಿಜರ್ಲೆಂಡ್ ವಿರುದ್ಧ ಸೋಲಿನಿಂದ ಪಾರಾಗಿದೆ.

ಜರ್ಮನಿ ಮತ್ತು ಸ್ವಿಜರ್ಲೆಂಡ್ ನಡುವಿನ ಹೈವೋಲ್ಟೇಜ್ ಪಂದ್ಯದಲ್ಲಿ 1-1 ಗೋಲಿನಿಂದ ಸಮಬಲ ಸಾಧಿಸಿದವು. ಈ ಡ್ರಾನೊಂದಿಗೆ ಜರ್ಮನಿ 7 ಅಂಕದೊಂದಿಗೆ ಎ ಗುಂಪಿನ ಅಗ್ರಸ್ಥಾನಿಯಾಗಿ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಡ್ಯಾನ್ ನೊಡ್ಯೆ 28ನೇ ನಿಮಿಷದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಸ್ವಿಜರ್ಲೆಂಡ್ ತಂಡ ಮುನ್ನಡೆ ಸಾಧಿಸಿತ್ತು. ಅಲ್ಲದೇ ಕೊನೆಯವರೆಗೂ ಮೇಲುಗೈ ಸಾಧಿಸಿತ್ತು. ಜರ್ಮನಿ ಗೋಲು ಗಳಿಸಲು ಸಾಕಷ್ಟು ಹೋರಾಟ ನಡೆಸಿದರೂ ಫಲ ನೀಡಲಿಲ್ಲ. ನಿಗದಿತ ಅವಧಿಯ ಆಟ ಮುಕ್ತಾಯಗೊಂಡರೂ ಸ್ವಿಜರ್ಲೆಂಡ್ 1-0ಯಿಂದ ಮುನ್ನಡೆ ಸಾಧಿಸಿತ್ತು. ಆದರೆ ಪಂದ್ಯದ ಹೆಚ್ಚುವರಿ ಸಮಯದಲ್ಲಿ ಸುಮಾರು 92ನೇ ನಿಮಿಷದಲ್ಲಿ ನಿಕೊಲಸ್ ಫುಲ್ ಕುರ್ಗ್ ಗೋಲು ಸಿಡಿಸಿ ತಂಡವನ್ನು ಸೋಲಿನಿಂದ ಪಾರು ಮಾಡಿದರು.

ಇಕ್ವೆಡೊರ್‌ಗೆ ಭರ್ಜರಿ ಗೆಲುವು

ಮಧ್ಯಂತರದ ನಂತರ ಝೊಂಡರ್ ಕಾಡಿಝ್ ಮತ್ತು ಎಡ್ವಡ್ ಬೆಲ್ಲೊ ಗಳಿಸಿದ ಗೋಲುಗಳ ನೆರವಿನಿಂದ ವೆನೆಜುಯೇಲಾ ತಂಡವು ಹಿನ್ನಡೆಯಿಂದ ಚೇತರಿಸಿ 2-1 ಗೋಲುಗಳಿಂದ ಇಕ್ವೆಡೊರ್ ತಂಡವನ್ನು ಮಣಿಸಿದೆ. ಕೊಪಾ ಅಮೆರಿಕ 'ಬಿ' ಗುಂಪಿನ ಈ ಪಂದ್ಯದಲ್ಲಿ ಇಕ್ವೆಡೊರ್ ಹೆಚ್ಚಿನ ಅವಧಿ ಯಲ್ಲಿ 10 ಮಂದಿಯೊಡನೆ ಆಡಬೇಕಾ ಯಿತು. ಪಂದ್ಯದ ಮಧ್ಯೆ ಎನ್ನರ್ ವಲೆನ್ಸಿಯಾ ಅವರಿಗೆ 22 ನಿಮಿಷ ಕೆಂಪುಕಾರ್ಡ್ ದರ್ಶನವಾಗಿ ಪಂದ್ಯದಿಂದ ಹೊರನಡೆಯಬೇಕಾಯಿತು. ಆದರೆ 40ನೇ ನಿಮಿಷ ಇಕ್ವೆಡೊರ್ ತಂಡವೇ ಮುನ್ನಡೆ ಸಾಧಿಸಿತು. ಕೆಂಡ್ರಿ ಪೇಝ್ ಅವರು ಫ್ರೀಕಿಕ್‌ನಲ್ಲಿ ಒದ್ದ ಚೆಂಡನ್ನು ವೆನೆಜು ಯೇಲಾ ರಕ್ಷಣೆ ಆಟಗಾರರು ಸರಿಯಾಗಿ ದೂರಕ್ಕೆ ಕಳಿಸದ ಕಾರಣ ದೊರೆತ ಅವಕಾಶ ವನ್ನು ಜೆರೆಮಿ ಸರ್ಮಿಂಟೊ ಗೋಲಾಗಿ ಪರಿವರ್ತಿಸಿದರು. 64ನೇ ನಿಮಿಷ ಕಾಡಿಝ್ 15 ಗಜ ದೂರದಿಂದ ಒದ್ದ ಚೆಂಡು ಸೀದಾ ಗೋಳಿನೊಳಕ್ಕೆ ಹೋಯಿತು. ಆ ಮೂಲಕ ಇಕ್ವೆಡೊರ್ ಗೆಲುವು ಸಾಧಿಸಿತು.

ವಿಶ್ವ ಟೇಬಲ್ ಟೆನ್ನಿಸ್ ಸಿಂಗಲ್ಸ್ | ದಾಖಲೆ ಬರೆದ ಭಾರತೀಯ ನಾರಿ

ಶ್ರೀಜಾ ವಿಶ್ವ ಚಾಂಪಿಯನ್

ದೆಹಲಿ: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿರುವ ಟೇಬಲ್ ಟೆನಿಸ್ ಆಟಗಾರ್ತಿ ಶ್ರೀಜಾ ಅಕುಲಾ, ವಿಶ್ವ ಟೇಬಲ್ ಟೆನ್ನಿಸ್ ಸಿಂಗಲ್ಸ್ ಪ್ರಶಸ್ತಿ ಗೆದ್ದಿದ್ದು, ಇತಿಹಾಸ ನಿರ್ಮಿಸಿದ್ದಾರೆ.

ನೈಜೀರಿಯಾದ ಲಾಗೋಸ್‌ನಲ್ಲಿ ನಡೆದ ರೋಚಕ ಫೈನಲ್ ಪಂದ್ಯದಲ್ಲಿ ಶ್ರೀಜಾ ಅವರು ಚೀನಾದ ಪ್ರಬಲ ಡಿಂಗ್ ಯಿಜಿ ವಿರುದ್ಧ 10-12, 11-9, 11-6, 11-8, 11-6ರ ಅಂಕಗಳಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ. ಆ ಮೂಲಕ ಡಬ್ಲ್ಯುಟಿಟಿ ಸಿಂಗಲ್ಸ್ ಕಿರೀಟ ಗೆದ್ದ ಭಾರತದ ಮೊದಲ ಆಟಗಾರ್ತಿ ಎಂಬ ಇತಿಹಾಸ ನಿರ್ಮಿಸಿದ್ದಾರೆ. ಈ ಹಿಂದೆ ಅವರು ಸೆಮಿಫೈನಲ್ ಪಂದ್ಯದಲ್ಲಿ, ಭಾರತದ ಎದುರಾಳಿ ಸುತೀರ್ಥ ಮುಖರ್ಜಿ ವಿರುದ್ಧ 3-2 ಅಂತರದಿಂದ ಗೆದ್ದು ಫೈನಲ್‌ಗೆ ಲಗ್ಗೆ ಹಾಕಿದರು. ಮತ್ತೊಂದೆಡೆ ಸೆಮಿಫೈನಲ್‌ನಲ್ಲಿ, ಭಾರತದ ಅಹಿಕಾ ಮುಖರ್ಜಿ 2-3 ಅಂತರದಿಂದ ಡಿಂಗ್ ಯಿಜಿ ವಿರುದ್ಧ ಸೋಲನುಭವಿಸಿದರು. ಆ ಮೂಲಕ ಶ್ರೀಜಾ ಮತ್ತು ಡಿಂಗ್ ನಡುವಿನ ಐತಿಹಾಸಿಕ ಫೈನಲ್ ಪಂದ್ಯಕ್ಕೆ ಮುನ್ನುಡಿ ಸಿಕ್ಕಿತು.

ಮಹಿಳಾ ಡಬಲ್ಸ್ ವಿಭಾಗ

ಇನ್ನು ಮಹಿಳಾ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಅಕುಲಾ ಮತ್ತು ಅರ್ಚನಾ ಗಿರೀಶ್ ಕಾಮತ್ 3-0 ಅಂತರದಲ್ಲಿ ಯಶಸ್ವಿನಿ ಘೋರ್ಪಡೆ ಮತ್ತು ದಿಯಾ ಪರಾಗ್ ಚಿತಾಲೆ ಅವರನ್ನು ಸೋಲಿಸಿದರು.

ಯಶಸ್ವಿನಿ ಮತ್ತು ದಿಯಾ ಜೋಡಿ 11-9, 11-6, 12-10 ನೇರ ಸೆಟ್‌ಗಳಿಂದ ಭರ್ಜರಿ ಗೆಲುವು ಸಾಧಿಸಿತು. ಸೆಮಿಫೈನಲ್‌ನಲ್ಲಿ ಶ್ರೀಜಾ ಮತ್ತು ಅರ್ಚನಾ 3-0 (11-5, 11-7, 12-10) ಸೆಟ್ ಗಳಿಂದ ಐಹಿಕಾ ಮತ್ತು ಸುತೀರ್ಥ ಮುಖರ್ಜಿ ಅವರನ್ನು ಸೋಲಿಸಿದ್ದರು.

ಸಾಮಾಜಿಕ ತಾಣ ಪಯಣ

ರಾಧಾಮಾಧವ

ಪುಷ್ಪದುಯ್ಯಾಲೆಯಲಿ ಮೋದದಿ
ಜೀಕುತಿಹರು ರಾಧಾಮಾಧವರು
ಕಪ್ಪನೆ ಮೇಘ ಮಲ್ಹಾರ ತೇಲುತ
ಅಲೆ ಅಲೆಯಾಗಿ ಸಾಗಿರಲು

ರಾಧೆಯ ಹೆರಳು ಶ್ಯಾಮನ
ಕೊಳಲಗಾನಕೆ ಹಾರುತಾ ನರ್ತಿಸಿದೆ
ಮಾಧವ ಕೊರಳಲಿ ತೊಳಸಿಯ
ಮಾಲೆ ತಂಬೆಲರಿಗೆ ಬಾಗಿ ತೂಗುತಿದೆ

ಸುತ್ತಲು ಕತ್ತಲು ಮುತ್ತುತಲಿರಲು
ರಾಧೆ ಎದೆಯಲಿ ಕಳವಳವು
ಬತ್ತಿದ ಬೆಳಕಲಿ ಹೊಳೆಯುತಿಹ
ಚಂದ್ರಮ ಬೆಳ್ಳಿಯ ಬಟ್ಟಲು!

ತುಂಬಿತೊನೆದ ಫಲಪುಷ್ಪಗಳಿಂದ
ಕೂಡಿಹ ಪಚ್ಚೆಯ ತರುಲತೆಗಳು
ತಂಬಿಗೆಯಲಿ ಗೋಪಿಕೆಯರು
ತುಂಬಿ ತಂದ ಹಾಲು ಬೆಣ್ಣೆ ಮೊಸರು

ಇಬ್ಬನಿ ತುಂಬಿದ ಇರುಳಿನಲ್ಲಿ
ಇನಿಯನೆದೆಯ ಬಿಸುಪು
ಕಂಬನಿ ತುಂಬಿದ ರಾಧೆಯ ಕಂಗಳಲಿ
ಬರೀ ಕೃಷ್ಣನದೇ ಸವಿ ನೆನಪು!

ರಾಧಮಾಧವ ಜೋಡಿಗೆ
ಜೊತೆಯಾಗಿಹುದು ವೃಕ್ಷದ ತಣ್ಣೆಳಲು
ಮಧುರ ಭಾವದ ಮೋಡಿಗೆ
ತಂಪು ಯಮುನೆಯ ಕಾದ ಮಳಲೂ!

● **ಎಸ್.ಎಲ್.ವರಲಕ್ಷ್ಮೀ ಮಂಜುನಾಥ್**, ನಂಜನಗೂಡು

ಭಾವಗೀತೆ

ಬರೆದೆನೊಂದು ಭಾವಗೀತೆ
ನಿನ್ನ ನೆನಪಿನಲೆಯಲಿ
ಅರಳಿನಿಂತೆ ಹೃದಯದಲ್ಲಿ
ಕುಸುಮ ಬಿರಿದ ಹೊತ್ತಲಿ

ಬಿದಿಗೆ ಚಂದ್ರ ಮರಳಿ ಬಂದ
ಕೊಂಚ ಬೆಳಕು ಸೂಸುತ
ನದಿಯ ತಟದಿ ನಡೆಯುತಿರಲು
ತನ್ನ ಕಿರಣ ಹಾಸುತ

ಇಷ್ಟು ಕಾಲ ಜೊತೆಯಲಿದ್ದು
ನಮ್ಮ ಪ್ರೀತಿ ಶಾಶ್ವತ
ಎಷ್ಟು ಕಲಹ ಬಂದರೂನು
ಒಟ್ಟಿಗಿರುವೆ ನಿಶ್ಚಿತ

ನಿನ್ನ ನೆರಳಿನಡಿಯ ಬದುಕು
ಕೊನೆಯವರೆಗು ಬಯಸುವೆ
ಕಣ್ಣ ರೆಪ್ಪೆ ಕಾಯುವಂತೆ
ಜೊತೆಯಲೆಂದು ಬಳಸುವೆ.

● **ಚನ್ನಕೇಶವ ಜಿ ಲಾಳನಕಟ್ಟೆ.**

ಹೊದಿಸಿ ಬರೆಯಿರಿ

ಮುರಿದ ಮನಸುಗಳ ಬೆಸೆವ
ಸೇತುವೆಯ ವಿನ್ಯಾಸವನ್ನು
ಹೊಂದಿಸಿ ಬರೆಯಿರಿ

ಮರೆತ ಕವಿತೆಗಳ ನೆನಪು
ಮೂಡಿಸ ಹೊರಟ ಕವಲುದಾರಿಯನು
ಹೊಂದಿಸಿ ಬರೆಯಿರಿ

ನನ್ನನ್ನು ಬರಸೆಳೆವ ಅವಳ
ಕಂಗಳ ಹೊಳೆವ ನಕ್ಷತ್ರದೊಡನೆ
ಹೊಂದಿಸಿ ಬರೆಯಿರಿ

ಬೆಳದಿಂಗಳ ಚಂದ್ರಮನ
ಉಕ್ಕೇರುವ ಸಾಗರದಲೆಗಳೊಟ್ಟಿಗೆ
ಹೊಂದಿಸಿ ಬರೆಯಿರಿ

ಮೋಡದಿಂದುದುರುವ ಮಳೆಹನಿಯ
ಕಾದು ಕೆಂಡವಾದ ನೆಲದೊಡನೆ
ಹೊಂದಿಸಿ ಬರೆಯಿರಿ

ನಸುಕಿನ ಕನಸುಗಳನೊಮ್ಮೆ
ತಾಜಾ ಇಬ್ಬನಿಯ ಕೂಡಾ
ಹೊಂದಿಸಿ ಬರೆಯಿರಿ

ಕಂಪಿಸುವ ಅಧರಗಳೆರಡನ್ನೂ
ಒಮ್ಮೆ ಹೊಂದಿಸಿ ಬರೆಯಿರಿ

● **ಅಜಯ್ ಅಂಗಡಿ**

ಕಾರ್ಟೂನ್



ಸರ್ಕಾರದಲ್ಲಂತೂ ನಾವಿಬ್ಬರು ಗೃಹ ಮಂತ್ರಿ ಆಗಲಿಲ್ಲ.. ಇಲ್ಲಾದರೂ ನೀನು ಗೃಹ ಮಂತ್ರಿ ಆಗಿ ಆಸೆ ತೀರಿಸಿಕೋ..!!

● **ಎಚ್.ಎಸ್. ವಿಶ್ವನಾಥ್**

ತರ್ಲೆ-ತಿಮ್ಮಾ



ಕ್ಲಿಕ್ ಆಫ್ ದ ಡೇ

ಕಿವಿಯೋಲೆಯೊಂದು ಸೊಕ್ಕಿದೆ ನೋಡು, ನಿನ್ನೀ ಕಿವಿಯಲ್ಲಿ ಜೀಕಾಡುತ್ತಾ.. ಚಿತ್ರದಲ್ಲಿರುವವರು, ಆತ್ಮಿಕಾ

ಕೈಕೊಟ್ಟು ಹೋಗಲ್ಲ ತಾನೇ?

● **ಪೂರ್ಣಿಮಾ ಉಡುಪ.**

ಕೆಲವು ತಿಂಗಳ ಹಿಂದಿನ ಘಟನೆಯಿದು. ನಮ್ಮ ಮನೆಯವರ ಸ್ನೇಹಿತರೊಬ್ಬರ ಮರಣವಾರ್ತೆ ನನ್ನ ಮನಸ್ಸನ್ನು ತುಂಬಾ ಕಾಡತೊಡಗಿತ್ತು. ಆತ ಬಹಳ ಸಭ್ಯ ವ್ಯಕ್ತಿ. ಮಾತನಾಡುವ ಶೈಲಿ, ಪತ್ನಿಯನ್ನು ನೋಡಿಕೊಳ್ಳುವ ರೀತಿ..ಸಂಬಂಧಗಳ ಮೌಲ್ಯವನ್ನು ಅರ್ಥ ಮಾಡಿಕೊಂಡಿರುವ ಬಗೆ ಎಲ್ಲವೂ ಒಟ್ಟುಗೂಡಿ, ದೇವರಂಥ ಮನುಷ್ಯ ಅಂದ್ರೆ ಹೀಗೇ ಇರಬಹುದೇನೋ ಎಂಬ ಭಾವ ನನ್ನಲ್ಲಿ.

ಒಮ್ಮೆ ಅವರ ಬಗ್ಗೆಯೇ ಯೋಚಿಸ್ತಾ ಇದ್ದವಳು ನಮ್ಮವರಿಗೆ, ಅಲ್ಲಾ ರೀ ನಿಮ್ ಫ್ರೆಂಡ್ ಎಷ್ಟು ಒಳ್ಳೆಯವರು, ಎಲ್ಲ ಗಂಡಸರೂ ಅವರ ತರಹ ಇರ್ಬೇಕಪ್ಪ ಅಂತ ಯಾವಾಗ್ಲೂ ನಿಮ್ ಹತ್ರ ಹೇಳ್ತಾ ಇದ್ದೆ. ಆದರೆ ನೋಡಿ ಈಗ ಹೇಗೆ ಹೆಂಡತಿಗೆ ಕೈಕೊಟ್ಟು ಹೊರಟೋಗ್ಬಿಟ್ರಲ್ಲ ಎಣಿಸ್ಕೊಂಡ್ರೆ ಎಷ್ಟು ಬೇಜಾರಾಗತ್ತೆ. ನೀವ್ ಹಾಗ್ ಮಾಡಲ್ಲ ಅಲ್ವಾ? ಆಗಾಗ ಹೆಲ್ತ್ ಚೆಕಪ್ ಮಾಡಿಸ್ಕೊಂಡು, ಆರೋಗ್ಯದ ಬಗ್ಗೆ ನಿಗಾ ವಹಿಸ್ತೀರ ತಾನೇ? ಎಂದು ಕೇಳಿದೆ. ಅದಕ್ಕವರು, ಇಲ್ಲ ಕಣೆ ಅವನನ್ನು ನೋಡಿದ್ಮೇಲೆ ಆರೋಗ್ಯ ಚೆನಾಗಿಟ್ಕೊಳ್ಳೇಬೇಕು ಅನ್ನೋ ಪಾಠ ಕಲ್ತಿದೀನಿ. ಆರೋಗ್ಯ ಮೊದಲು, ದುಡ್ಡು ಕಾಸು ಎಲ್ಲ ನಂತರ. ನಾನು ನಿಂಗೆ ಮೋಸ ಮಾಡಲ್ಲ ಕಣೆ, ಎಂದು ಪ್ರೀತಿಯಿಂದಲೇ ಹೇಳಿ ಸಮಾಧಾನಪಡಿಸಿದ್ದರು.

ಇದೇ ರೀತಿ ನಾನು ಆಗಾಗ ಕೇಳೋದು, ಅವರು ಪ್ರಾಮಿಸ್ ಮಾಡೋದು ನಡೀತಾನೇ ಇತ್ತು. ಅದಾಗಿ ಸ್ವಲ್ಪ ದಿನಕ್ಕೆ, ಲೇಡಿ ಡಾಕ್ಟರ್ ಒಬ್ಬರು ಹೃದಯಾಘಾತದಿಂದ ತೀರ್ಕೊಂಡ್ರು. ಈ ವಿಷಯ ಕೇಳಿ ನನ್ನ ಮನದಲ್ಲಡಗಿದ್ದ

ಕಳವಳ ಇನ್ನೂ ಜಾಸ್ತಿಯಾಯ್ತು. ಡಾಕ್ಟರ್‌ಗಳಿಗೇ ಹೀಗಾದ್ರೆ, ಜನ ಸಾಮಾನ್ಯರ ಪರಿಸ್ಥಿತಿ ಏನು! ರಿಟೈರ್ ಆಗಿ ಎರಡು ವರ್ಷವಾಗಿತ್ತಷ್ಟೇ, ಅಷ್ಟಾಗಿ ಪರಿಚಯವಿಲ್ಲದಿದ್ದರೂ ವಯಸ್ಸಲ್ಲದ ವಯಸ್ಸಿನಲ್ಲಿ ಬಂದ ಈ ಸಾವು ತೀರಾ ಅನ್ಯಾಯ ಅನ್ನಿಸಿ, ಮನಸಿಗೆ ಬೇಸರವಾಗಿತ್ತು.

ಎಂದಿನಂತೆ ನಮ್ಮವರಿಗೆ, ಏನ್ರೀ ಇದು. ಹೀಗೆ ಮೇಲಿಂದ ಮೇಲೆ ಸಾವಿನ ವಿಷ್ಯ ಕೇಳಿ ಬೇಜಾರಾಗ್ತಿದ್ಯಪ್ಪ. ಆರೋಗ್ಯ ಚೆನ್ನಾಗ್ ನೋಡ್ಕೋಬೇಕು, ನೀವು ನನ್ನ ಮಾತನ್ನ ಅರ್ಥಕ್ಕೆ ತುಂಡರಿಸಿದ ನಮ್ಮವರು, ಇಲ್ಲ ಇಲ್ಲ, ನೀ ಯೋಚನೆ ಮಾಡಿ ತಲೆ ಕೆಡಿಸ್ಕೋಬೇಡ ಕಣೆ. ನಾ ಹಾಗೆಲ್ಲ ನಿನಗೆ ಕೈಕೊಟ್ಟು ಹೋಗಲ್ಲ. ನಿನ್ನನ್ನ ಕಳಿಸ್ಬಿಟ್ಟೇ ನಾ ಹೋಗೋದು. ಡೋಂಟ್ ವರಿ ಎಂದ್ಬಿಡೋದೇ!

ನಂಗೆ ಆ ನೋವಿನಲ್ಲೂ ನಗುವುಕ್ಕಿ ಬಂದಿತ್ತು. ಇನ್ನ್ಯಾವತ್ತೂ 'ನನ್ನನ್ನ ಬಿಟ್ಟು ಹೋಗಲ್ಲ ತಾನೇ' ಅಂತ ಕೇಳಲೇಬಾರದೆಂದು ನಿರ್ಧಾರ ಮಾಡ್ಬಿಟ್ಟೆ.

ನಿಂದಿಸುವ ನಾಲಿಗೆಗೆ ನಿರ್ಲಕ್ಷ್ಯ ಪ್ರತ್ಯುತ್ತರ

● **ಅಂಜಲಿ ಶ್ರೀನಿವಾಸ**

ಸದಾ ಇನ್ನೊಬ್ಬರ ದೋಷ ಹುಡುಕುವುದು ಒಂದು ರೀತಿಯ ಮನೋರೋಗವೇ ಸರಿ. ಈ ಪ್ರಪಂಚದಲ್ಲಿ ತಪ್ಪು ಹುಡುಕುವ ಜನರಿಗೇನು ಕಮ್ಮಿ ಇಲ್ಲ. ಬೇರೆಯವರ ಅಭ್ಯಾಸಗಳು, ರೀತಿ ನೀತಿಗಳು, ಜೀವನಶೈಲಿಗಳು ಇವರಿಗೆ ಹಿಡಿಸುವುದೇ ಇಲ್ಲ. ಈ ಕಾರಣದಿಂದ ಅವರು ಹೆಜ್ಜೆ ಹೆಜ್ಜೆಗೂ ತಪ್ಪು ಕಂಡುಹಿಡಿಯುತ್ತಾರೆ. ಅಡುಗೆಗೆ ಉಪ್ಪು ಹೆಚ್ಚಾಗಿದೆ, ಇವತ್ತು ಊಟ ರುಚಿಯಾಗಿರಲಿಲ್ಲ. ಊಟ ಮಾಡುವಾಗ ನೀರು ಇಟ್ಟಿಲ್ಲ, ಊಟದ ಜತೆ ಉಪ್ಪಿನಕಾಯಿ ಬಳಸಲಿಲ್ಲ. ಹೀಗೆ ಯಾವುದಾದರೊಂದು ಸಣ್ಣಪುಟ್ಟ ಕಾರಣಕ್ಕೆ ರಂಪಾಟ ಮಾಡುವುದು, ಹೊಟ್ಟೆಕಿಚ್ಚು ಪಡುವುದು, ನಿಂದಿಸುವುದು ಒಳ್ಳೆತನವಂತೂ ಅಲ್ಲ.

ಸಂಬಂಧವಿಲ್ಲದ ವಿಷಯಕ್ಕೆ ಒಂದಕ್ಕೊಂದು ಗಂಟುಹಾಕುವುದು, ತನ್ನ ತಪ್ಪಿಗೂ ಇನ್ನೊಬ್ಬರ ಮೇಲೆ ಗೂಬೆ ಕೂರಿಸುವುದಿದೆಯಲ್ಲ ಅದು ಶುದ್ಧ ಮೂರ್ಖತನ. ಇನ್ನೊಬ್ಬರಲ್ಲಿ ತಪ್ಪುಗಳನ್ನು ಹುಡುಕುವುದು ಮಹಾ ತಪ್ಪು. ಬರೀ ತಪ್ಪುಗಳನ್ನ ಕಾಣುವ ಕಣ್ಣಿಗೆ ಸರಿಯಾದದ್ದು ಕಾಣುವುದೇ ಇಲ್ಲ. ಇಂಥವರು, ಎಲ್ಲಾ ವಿಷಯದಲ್ಲೂ ಪರ್ಫೆಕ್ಟ್ ಆಗಿರುತ್ತಾರಾ? ಖಂಡಿತ ಇಲ್ಲ. ಸದಾ ಇನ್ನೊಬ್ಬರ ಹುಳುಕು ಹುಡುಕುವ ಮನ ಕೊಳಕು ಆಗುವುದು. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಸ್ವಭಾವ, ತನ್ನದೇ ಆದ ರೀತಿನೀತಿ, ದೃಷ್ಟಿಕೋನ ಹಾಗೂ ಆಸಕ್ತಿ ಇರುತ್ತವೆ. ಎಲ್ಲರೂ ಒಂದೇ ರೀತಿಯ ಸ್ವಭಾವ ಹೊಂದಿರುವುದಿಲ್ಲ. ಹೀಗಾಗಿ ಯಾರೊಬ್ಬರೂ ಪರಿಪೂರ್ಣರಲ್ಲ ಎಂದು ತಿಳಿಯಬೇಕು.

ಕೆಲವರಿಗೆ ಇತರರ ವಿಷಯದಲ್ಲಿ ಮೂಗು ತೂರಿಸುವ ಅಭ್ಯಾಸ. ಪ್ರತಿಯೊಬ್ಬರಿಗೂ ಅವರದೇ ಆದ ವೈಯಕ್ತಿಕ ಬದುಕು ಇರುತ್ತದೆ. ಹಾಗಾಗಿ ಅವರಷ್ಟ

ಕ್ಕೆ ಬಿಟ್ಟುಬಿಡಬೇಕು. ಕೂತರು ತಪ್ಪು ನಿಂತರೂ ತಪ್ಪು ಎಂಬ ಧೋರಣೆಗಳಿಂದ ಇನ್ನೊಬ್ಬರಿಗೆ ಕಿರಿ ಕಿರಿ ಉಂಟಾಗುತ್ತದೆ, ಖಿನ್ನತೆಗೊಳಗಾಗುತ್ತಾರೆ, ಮನಸ್ತಾಪಗಳು ಹೆಚ್ಚಾಗುತ್ತದೆ. ಬರೀ ನಿಂದಿಸುವ ನಾಲಿಗೆಗೆ ನಿರ್ಲಕ್ಷ್ಯವೇ ಪ್ರತ್ಯುತ್ತರವಾಗುತ್ತದೆ. ನಂತರ ನನಗೆ ಎಲ್ಲರೂ ನಿರ್ಲಕ್ಷಿಸುತಿದ್ದಾರೆ, ಗೌರವ ಕೊಡುತ್ತಿಲ್ಲವೆಂದು ಗೊಣಗುತ್ತಾರೆ. ಗೌರವ ಕೇಳಿ ಪಡೆಯುವಂತಹ ಉಡುಗೊರೆಯಂತೂ ಅಲ್ಲ.

ತೆಗಳುವುದನ್ನು ಕಡಿಮೆ ಮಾಡಿ ಹೊಗಳಲು ಸಿದ್ಧರಾಗಿ. ಬದಲಾವಣೆ ನೀವೇ ಗಮನಿಸುವಿರಿ. ಮಕ್ಕಳು ಆಟದಲ್ಲಿ ಗೆದ್ದಾಗ ಹೊಗಳಿದರೆ ಅವರಿಗೂ ಹುರುಪು ಹೆಚ್ಚಾಗುವುದು. ಹಾಗಂತ ಅನಾವಶ್ಯಕವಾಗಿ ಹೊಗಳಿಕೆ ಬೇಡ. ಹೆಂಡತಿಗೆ ಅಡುಗೆ ಚೆನ್ನಾಗಿದೆ ಅಂದರೆ ಸಾಕು ಅವಳ ಆಯಾಸ ಮಾಯವಾಗುತ್ತದೆ. ಗೃಹಿಣಿಗೆ ನೂರು ಕೆಲಸಗಳಿರುತ್ತದೆ. ಪ್ರತಿಯೊಂದಕ್ಕೂ ಅವಳ ನಿಂದಿಸುವುದನ್ನು ಬಿಟ್ಟು, ಸಣ್ಣಪುಟ್ಟ ಕೆಲಸಗಳಿಗೆ ಕೈಜೋಡಿಸಿ. ನಿಮ್ಮಿಂದ ತಪ್ಪಾಗದಂತೆ ಅಚ್ಚುಕಟ್ಟಾಗಿ ನಿಮ್ಮ ಪಾಡಿಗೆ, ಕೆಲಸ ಮಾಡುತ್ತಿರಿ. ಬೇರೆಯವರ ತಪ್ಪುಗಳಿಗೆ ತಲೆ ಕೆಡಿಸಿಕೊಳ್ಳಬೇಡಿ. ಸಂತೋಷವಾಗಿರಿ, ಇತರರನ್ನೂ ಸಂತೋಷವಾಗಿರಲು ಬಿಡಿ.

ವಿಟಾಕೀಸ್

ಲವ್ ಲಿ ಮೆಚ್ಚಿದ ಸಚಿವರು



ವಸಿಷ್ಠ ಸಿಂಹ ನಟನೆಯ ಲವ್ ಲಿ ಕಳೆದ ವಾರ ಬಿಡುಗಡೆಯಾಗಿತ್ತು. ರಾಜ್ಯದಾದ್ಯಂತ ಯಶಸ್ವಿ ಪ್ರದರ್ಶನ ಕಾಣುತ್ತಿರುವ ಈ ಚಿತ್ರವನ್ನು ಆರೋಗ್ಯ ಸಚಿವ ದಿನೇಶ್ ಗುಂಡುರಾವ್ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಮಾಜದಲ್ಲಿ ನಡೆಯುವ ಕೆಲವು ಸನ್ನಿವೇಶಗಳನ್ನು ನೈಜವಾಗಿ ತೆರೆಯ ಮೇಲೆ ತಂದಿರುವ ಚಿತ್ರತಂಡದ ಶ್ರಮ ನಿಜಕ್ಕೂ ಶ್ಲಾಘನೀಯ. ಏಡ್ಸ್ ಒಂದು ಮಾರಕ ರೋಗ. ಅದನ್ನು ನಿಯಂತ್ರಿಸಲು ಸರಕಾರ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಇದೀಗ ಸಿನಿಮಾದ ಮೂಲಕ ಜನರನ್ನು ಜಾಗೃತಿಗೊಳಿಸುವ ಕೆಲಸ ಲವ್ ಲಿ ತಂಡದಿಂದ ಆಗಿದೆ. ಹೀಗೆ ಸಾಮಾಜಿಕ ಸಂದೇಶದ ಜತೆಗೆ ಜಾಗೃತಿ ಮೂಡಿಸುವ ಸಿನಿಮಾಗಳು ಹೆಚ್ಚಾಗಿ ಮೂಡಿಬರಲಿ ಎಂದು ದಿನೇಶ್ ಗುಂಡೂರಾವ್ ಹೇಳಿದರು. ಅನುವಾದ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ರವೀಂದ್ರ ಕುಮಾರ್ ನಿರ್ಮಿಸಿರುವ ಈ ಚಿತ್ರ ರಾಜ್ಯ ಮಾತ್ರವಲ್ಲದೆ ಬೇರೆ ಬೇರೆ ರಾಜ್ಯ ಹಾಗೂ ದೇಶಗಳಲ್ಲೂ ತೆರೆಕಂಡಿದೆ. ಭಾನುವಾರ ದುಬೈನಲ್ಲಿ ಹೌಸ್‌ಫುಲ್ ಪ್ರದರ್ಶನ ಕಂಡಿದೆ ಎಂಬುದು ವಿಶೇಷ. ಹಾಗೆಯೇ ರಾಜ್ಯದ ಹಲವೆಡೆ ತುಂಬಿದ ಗೃಹಗಳಲ್ಲಿ ಪ್ರದರ್ಶನ ಕಾಣುತ್ತಿದೆ. ವಸಿಷ್ಠ ಸಿಂಹಗೆ ಜತೆಯಾಗಿ ಸ್ಟೆಫಿ ಪಟೇಲ್ ನಟಿಸಿದ್ದಾರೆ. ದತ್ತಣ್ಣ, ಮಾಳವಿಕಾ, ಸಾಧುಕೋಕಿಲ, ಅಚ್ಯುತ್ ಕುಮಾರ್, ವಂಶಿಕಾ ಮುಂತಾದವರು ತಾರಾಗಣದಲ್ಲಿದ್ದಾರೆ. ಅಶ್ವಿನ್ ಕೆನಡಿ ಛಾಯಾಗ್ರಹಣ, ಅನೂಪ್ ಸೀಳಿನ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಆಗಸ್ಟ್‌ಗೆ ಪ್ರಣಯ ಸಖಿ

> ನಮ್ಮ ಚಿತ್ರದಲ್ಲಿ ಏಳು ಹಾಡುಗಳಿದ್ದು ಅರ್ಜುನ್ ಜನ್ಯ ಸಂಗೀತದಲ್ಲಿ ಎಲ್ಲಾ ಹಾಡಗಳು ಮಧುರವಾಗಿ ಮೂಡಿಬಂದಿವೆ. ಈ ಹಿಂದೆ ಬಿಡುಗಡೆಯಾದ ಮೊದಲ ಹಾಡಿಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಎರಡನೇ ಹಾಡು ಕೂಡ ಸಿನಿಪ್ರಿಯರನ್ನು ಸೆಳೆಯಲಿದೆ. ಕೃಷ್ಣಂ ಪ್ರಣಯ ಸಖಿ ಅಪರೂಪದ ಪ್ರೇಮಕಥೆಯನ್ನು ಹೊಂದಿದ್ದು, ಕೌಟುಂಬಿಕ ಸ್ಟೋರಿಯೂ ಬೆರೆತಿದೆ.
>
> -ಶ್ರೀನಿವಾಸರಾಜು ನಿರ್ದೇಶಕ

ಶ್ರೀನಿವಾಸರಾಜು ನಿರ್ದೇಶನದಲ್ಲಿ ಸಿದ್ಧವಾಗಿರುವ ಕೃಷ್ಣಂ ಪ್ರಣಯ ಸಖಿ ಚಿತ್ರೀಕರಣ ಮುಗಿಸಿದ್ದು ಇದೇ ಆಗಸ್ಟ್ 15 ರಂದು ತೆರೆಗೆ ಬರಲಿದೆ. ಈಗ ಈ ಚಿತ್ರದ ಚಿನ್ನಮ್ಮ... ಹಾಡು ಬಿಡುಗಡೆಯಾಗಿದ್ದು, ಸಂಗೀತ ಪ್ರಿಯರ ಮನಗೆದ್ದಿದೆ. ನಟ ಶಶಿಕುಮಾರ್ ಈ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಕವಿರಾಜ್ ಸಾಹಿತ್ಯದ ಚಿನ್ನಮ್ಮ.. ಹಾಡಿಗೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದು,

ಕೈಲಾಶ್ ಖೇರ್ ಹಾಗೂ ಇಂದು ನಾಗರಾಜ್ ಅವರ ಇಂಪಾದ ದನಿಯಲ್ಲಿ ಮೂಡಿಬಂದಿದೆ. ಕೃಷ್ಣಂ ಪ್ರಣಯ ಸಖಿ ಗಣೇಶ್ ಅಭಿನಯದ ನಲವತ್ತೊಂದನೇ ಚಿತ್ರವಾಗಿದ್ದು, ಗಣೇಶ್ ಲವ್ವರ್ ಬಾಯ್ ಆಗಿ ಮಿಂಚಿದ್ದಾರೆ. ಗಣೇಶ್‌ಗೆ ನಾಯಕಿಯಾಗಿ ಮಾಳವಿಕಾ ನಾಯರ್ ನಟಿಸಿದ್ದಾರೆ. ಶರಣ್ಯಾ ಶೆಟ್ಟಿ, ಶ್ರೀನಿವಾಸಮೂರ್ತಿ, ಸಾಧುಕೋಕಿಲ, ರಂಗಾಯಣ ರಘು, ಶಶಿಕುಮಾರ್, ಶ್ರುತಿ, ಭಾವನಾ, ಅಶೋಕ್, ರಾಮಕೃಷ್ಣ, ಶಿವಧ್ವಜ್, ರಘುರಾಮ್, ಮಾನಸಿ ಸುಧೀರ್, ಅಂಬುಜಾ, ಗಿರಿ ಶಿವಣ್ಣ ಮುಂತಾದವರು ತಾರಾಬಳಗದಲ್ಲಿದ್ದಾರೆ. ತ್ರಿಶೂಲ್ ಎಂಟರ್‌ಟೇನ್‌ಮೆಂಟ್ ಲಾಂಛನದಲ್ಲಿ ಪ್ರಶಾಂತ್.ಜಿ.ರುದ್ರಪ್ಪ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಲೋನ್ ರಿಕವರಿಗಿಳಿದ ಪ್ರವೀಣ

ನಟ ಪ್ರವೀಣ್ ತೇಜ್ ಬ್ಯಾಗ್ ಹೆಗಲಿಗೇರಿಸಿಕೊಂಡು ಲೋನ್ ರಿಕವರಿಗೆ ಇಳಿದಿದ್ದಾರೆ. ಇದೇನು ಪ್ರವೀಣ ಸಿನಿಮಾ ಬಿಟ್ಟು ಬೇರೆ ಕೆಲಸಕ್ಕೆ ಸೇರಿದ್ರ, ಅಂಥ ಅಚ್ಚರಿ ಪಟ್ಟುಕೊಳ್ಳಬೇಡಿ ಜಿಗರ್ ಚಿತ್ರದಲ್ಲಿ ನಟಿಸಿರುವ ಪ್ರವೀಣ್ ತೇಜ್ ಫೈನ್ಸಾನ್ಸ್‌ನಲ್ಲಿ ಸಾಲ ವಸೂಲಾತಿ ಮಾಡುವ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹಾಗಂತ ಈ ಪಾತ್ರಕ್ಕೆ ಸೀಮಿತವಾಗಿಲ್ಲ ಪ್ರವೀಣ್ ಪಕ್ಕಾ ಆ್ಯಕ್ಷನ್‌ನಲ್ಲಿಯೂ ಮಿಂಚಿದ್ದಾರೆ. ಇದೆಲ್ಲವೂ ಸದ್ಯ ಬಿಡುಗಡೆಯಾಗಿರುವ ಟ್ರೇಲರ್‌ನಲ್ಲಿದೆ. ಸೂರಿ ಕುಂದರ್ ನಿರ್ದೇಶನದ ಜಿಗರ್ ಚಿತ್ರದ ಟ್ರೇಲರನ್ನು ಪಿ.ಆರ್.ಓ ಸುಧೀಂದ್ರ, ವೆಂಕಟೇಶ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ಹಲವು ವರ್ಷಗಳಿಂದ ಚಿತ್ರರಂಗದಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ಸೂರಿ ಕುಂದರ್ ಈ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಜಿಗರ್ ಎಂದರೆ ಎರಡು ಗುಂಡಿಗೆಯುಳ್ಳವನು ಹಾಗೂ ಯಾವುದಕ್ಕೂ ಅಂಜದವನು ಎಂದು ಅರ್ಥ. ಇಲ್ಲಿ ಮಾಸ್ ಕ್ಲಾಸ್ ಅಂಶಗಳಿವೆ, ಇದುವರೆಗೂ ನೋಡದ ಪ್ರವೀಣ್ ಅವರನ್ನು ತೆರೆಯಲ್ಲಿ ನೋಡಬಹುದು ಎನ್ನುತ್ತಾರೆ ನಿರ್ದೇಶಕರು. ವಿಜಯಶ್ರೀ ನಾಯಕಿಯಾಗಿ ಕಾಣಿಸಿಕೊಂಡಿ ದ್ದಾರೆ. ಯಶ್ ಶೆಟ್ಟಿ ಇಲ್ಲಿಯೂ ಖಳನಾಗಿ ಖದರ್ ತೋರಿದ್ದಾರೆ. ರಿತ್ವಿಕ್ ಮುರಳಿಧರ್ ಸಂಗೀತ ನಿರ್ದೇಶನ, ಗಣೇಶ್ ಸಾಹಿತ್ಯ, ಶಿವಸೇನ ಛಾಯಾಗ್ರಹಣ ಈ ಚಿತ್ರಕ್ಕಿದೆ. ಮಲ್ಪೆ, ಉಡುಪಿ, ಕುಂದಾಪುರ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಜುಲೈ 5 ರಂದು ಜಿಗರ್ ರಾಜ್ಯಾದ್ಯಂತ ರಿಲೀಸ್ ಆಗಲಿದೆ.

> ಈ ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಜೀವ. ಉತ್ಸಾಹಿ ಯುವಕನೊಬ್ಬ ಫಿಶ್ ಟೆಂಡರ್ ಶಿಪ್‌ನಲ್ಲಿ ಭಾಗಿಯಾಗುತ್ತಾನೆ. ಆ ಮೂಲಕ ಭೂಗತ ಲೋಕಕ್ಕೂ ಕಾಲಿಡುತ್ತಾನೆ. ಅಲ್ಲಿ ಮೂರು ನಾಲ್ಕು ಸಂಘಗಳಿರುತ್ತದೆ. ಸಂಘಗಳ ನಡುವೆ ಸಂಘರ್ಷವೂ ನಡೆಯುತ್ತಿರುತ್ತದೆ ಇದು ಚಿತ್ರದ ಪ್ರಮುಖ ಕಥಾಹಂದರ. ಇದರೊಂದಿಗೆ ಲವ್, ಆ್ಯಕ್ಷನ್, ಕಾಮಿಡಿ ಕೂಡ ನಮ್ಮ ಚಿತ್ರದಲ್ಲಿದೆ.
>
> -ಪ್ರವೀಣ್ ತೇಜ್ ನಟ

ಕಂಠೀರವದಲ್ಲಿ ದಿ ಪ್ರಸೆಂಟ್

ಹೊಸಬರೇ ಸೇರಿ ಗ್ಲೋಬಲ್ ಎಂಟರ್‌ಟೇನ್‌ಮೆಂಟ್ ನಿರ್ಮಾಣ ಸಂಸ್ಥೆಯನ್ನು ಆರಂಭಸಿದ್ದು, ಈ ಸಂಸ್ಥೆಯ ಬ್ಯಾನರ್‌ನಲ್ಲಿ ದಿ ಪ್ರಸೆಂಟ್ ಸಿನಿಮಾ ನಿರ್ಮಾಣವಾಗುತ್ತಿದೆ. ಈ ಚಿತ್ರದ ಮುಹೂರ್ತ ಕಂಠೀರವ ಸ್ಟುಡಿಯೋದಲ್ಲಿ ಅದ್ದೂರಿಯಾಗಿ ನೆರವೇರಿತು. ಇದು ಮೈಥಲಾಜಿಕಲ್ ಸ್ಟೋರಿಯ ಸಿನಿಮಾವಾಗಿದ್ದು, ಶಿವಪೂರ್ಣ ನಿರ್ದೇಶನದ ಸಾರಥ್ಯ ವಹಿಸಿಕೊಂಡಿದ್ದಾರೆ. ಒಂದು ಆತ್ಮದ ಮೂರು ಜನ್ಮದ ಕಥೆ ಇಲ್ಲಿದ್ದು, ಪ್ರಸೆಂಟ್, ಪಾಸ್ಟ್ ಹಾಗೂ ಫ್ಯೂಚರ್ ಎಂದು ಮೂರು ಭಾಗಗಳಲ್ಲಿ ಬರಲಿದೆ. ಭಾಗ-1 ಪ್ರಸೆಂಟ್‌ನಲ್ಲಿ ನಡೆಯಲಿರುವ ಅಂಶಗಳನ್ನು ಹೇಳಲಾಗುತ್ತಿದೆ. ನಂತರ ಪಾಸ್ಟ್, ಫ್ಯೂಚರ್ ಟೇಕ್ ಆಫ್ ಆಗುತ್ತದೆ. ಕಾಲ್ಪನಿಕ ಆದರೂ ನೋಡುಗರಿಗೆ ಹೊಸತನ ಕೊಡಬೇಕೆಂದು ಪ್ಲಾನ್ ಮಾಡಲಾಗಿದೆ. ಬೆಂಗಳೂರು, ಕೇರಳ ಸುತ್ತಮುತ್ತ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಳ್ಳಲಾಗಿದೆ. ಇದು ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಕನ್ನಡ ಸೇರಿದಂತೆ ತಮಿಳು, ತೆಲುಗು, ಹಿಂದಿ ಹಾಗೂ ಮಲೆಯಾಳಂ ಭಾಷೆಗಳಲ್ಲಿ ನಿರ್ಮಾಣವಾಗಲಿದೆ ಎಂದು ನಿರ್ದೇಶಕರು ತಿಳಿಸಿದರು. ರಾಜೀವ್ ರಾಥೋಡ್ ನಾಯಕನಾಗಿ ನಟಿಸುತ್ತಿದ್ದು, ದಿಯಾ, ಮಾನಸಾ ಗೌಡ ನಾಯಕಿಯರಾಗಿ ಅಭಿನಯಿಸಲಿದ್ದಾರೆ. ಬೇಬಿ ಆರಾಧ್ಯಾ, ರಾಬರ್ಟ್, ಅವಿನಾಶ್, ಶ್ರೀಧರ್, ದುಬೈ ರಫೀಕ್, ಮಂಜೇಶ್ ಗೌಡ, ಸಹನಾ, ಭುವನಾ, ಮಾಧುರಿರೆಡ್ಡಿ, ಆಶಾ, ಭಾವನಾ, ಸಮೃದ್ದಿ, ಶೌರ್ಯ, ಅರುಣ್, ಮಮತಾ ಮುಂತಾದವರು ಚಿತ್ರ ತಾರಾಬಳಗದಲ್ಲಿದ್ದಾರೆ.

ದಿನ ಭವಿಷ್ಯ

ಮೇಷ: ಹಳೆಯ ಸ್ನೇಹಿತ ಅಥವಾ ಸಂಬಂಧಿಕ ಹಠಾತ್ ಭೇಟಿ. ವಿಶೇಷ ವ್ಯಕ್ತಿಯ ಸಹಾಯದಿಂದ ಸಮಸ್ಯೆಗೆ ಪರಿಹಾರ. ಪೋಷಕರ ಸಹಕಾರದಿಂದ ಪ್ರಯೋಜನ.

ವೃಷಭ: ಕುಟುಂಬ ಮತ್ತು ವ್ಯಾಪಾರ ಸಂಬಂಧಿತ ಚಟುವಟಿಕೆಗಳ ನಡುವೆ ಸಮತೋಲನ ಕಾಪಾಡುವುದು ಒಳ್ಳೆಯದು. ಮುಂಗೋಪವನ್ನು ನಿಯಂತ್ರಿಸಿ.

ಮಿಥುನ: ಪತಿ ಪತ್ನಿಯರ ನಡುವೆ ಜಗಳವಾಗಬಹುದು. ಕೆಲಸದ ಸ್ಥಳದ ಸಮಸ್ಯೆಗಳನ್ನು ಪರಿಹರಿಸಲು ಆತ್ಮಾವಲೋಕನ ಅಗತ್ಯ.

ಕಟಕ: ಉದ್ಯಮಿಗಳು ಪ್ರಾಯೋಗಿಕ ಕೌಶಲ್ಯದಿಂದ ಅಡೆತಡೆಗಳನ್ನು ನಿವಾರಿಸುವಿರಿ. ಕುಟುಂಬದೊಂದಿಗೆ ಹೆಚ್ಚು ಸಮಯ ಕಳೆಯಲು ಅವಕಾಶವಿದೆ.

ಸಿಂಹ: ಸಂಗಾತಿಯೊಂದಿಗೆ ಯಾವುದೇ ರೀತಿಯ ವಾದದಿಂದ ದೂರವಿರಿ. ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸುವಿರಿ.

ಕನ್ಯಾ: ಸಂಘ ಸಂಸ್ಥೆಗಳಿಂದ ಬೆಂಬಲ ಪಡೆಯುತ್ತೀರಿ. ರಿಯಲ್ ಎಸ್ಟೇಟ್ ಬಗ್ಗೆ ನಿರ್ಣಯಿಸಲು ಇಂದು ಅನುಕೂಲಕರ ದಿನವಲ್ಲ.

ತುಲಾ: ನಿಮ್ಮ ಇಚ್ಛೆಯುಳ್ಳ ಕ್ಷೇತ್ರದಲ್ಲಿ ಅವಕಾಶ ಪಡೆಯುವಿರಿ. ನಿಮ್ಮ ಪ್ರಯತ್ನಗಳನ್ನು ಸಹ ಪ್ರಶಂಸಿಸಲಾಗುತ್ತದೆ. ವಿದೇಶದಲ್ಲಿ ಕೆಲಸ ಮಾಡುವವರಿಗೆ ಯಶಸ್ಸಿನ ದಿನವಾಗಿರುತ್ತದೆ.

ವೃಶ್ಚಿಕ: ನೆರೆಹೊರೆಯವರೊಂದಿಗಿನ ವ್ಯಾಜ್ಯ ಹಿರಿಯರ ಸಹಾಯದಿಂದ ಪರಿಹಾರ. ಆಸ್ತಿ ಖರೀದಿಸಲು ಯೋಜಿಸುವಿರಿ.

ಧನು: ಕುಟುಂಬದ ಸದಸ್ಯರ ಆಶಯಗಳ ಬಗ್ಗೆ ಜಾಗರೂಕರಾಗಿರಿ. ಕೆಲಸದ ಸ್ಥಳದಲ್ಲಿ ವಿರೋಧಿಗಳನ್ನು ಎದುರಿಸಬೇಕಾಗಬಹುದು.

ಮಕರ: ವಸ್ತು ವಿಷಯಗಳಿಗೆ ಹಣವನ್ನು ಖರ್ಚು ಮಾಡುವಿರಿ. ದಿನದ ಆರಂಭದಲ್ಲಿ, ಬಹಳಷ್ಟು ಓಡಾಟ . ಯಾವುದೋ ತಪ್ಪಿನ ವಿರುದ್ಧ ಧ್ವನಿ ಎತ್ತಬಹುದು.

ಕುಂಭ: ವಿದ್ಯಾರ್ಥಿಗಳು ಅಧ್ಯಯನವನ್ನು ನಿರ್ಲಕ್ಷಿಸಬಾರದು, ಇಲ್ಲದಿದ್ದರೆ ತೊಂದರೆ ಉಂಟಾಗಬಹುದು.

ಮೀನ: ದಿನವಿಡೀ ಒಂದಲ್ಲ ಒಂದು ಕೆಲಸದಲ್ಲಿ ನಿರತರಾಗಿರುತ್ತಾರೆ. ಆದರೆ ಸಂಜೆಯ ವೇಳೆಗೆ ಸ್ವಲ್ಪ ಸಮಾಧಾನವಿರುತ್ತದೆ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1966– ಕನ್ನಡದ ನಟಿ ವಿನಯಾ ಪ್ರಸಾದ್ ಜನನ
- 1975– ಇಂದಿರಾ ಗಾಂಧಿ ಸರ್ಕಾರ ಭಾರತದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿತು.
- 1529 – ಮೊಘಲ್ ದೊರೆ ಬಾಬರ್ ಬಂಗಾಳವನ್ನು ವಶಪಡಿಸಿಕೊಂಡು, ತನ್ನ ರಾಜಧಾನಿ ಆಗ್ರಾಕ್ಕೆ ಹಿಂದಿರುಗಿದನು.
- ಅಂತರರಾಷ್ಟ್ರೀಯ ನಾವಿಕರ ದಿನ

ಚಿತ್ರಸ್ಫೂರ್ತಿ

ದಿನ ದರ್ಶಿಕೆ

ಜೇಷ್ಠ ಮಾಸ, ನಕ್ಷತ್ರ ಶ್ರವಣ, ಕೃಷ್ಣಪಕ್ಷ, ಚೌತಿ, ಯೋಗ ವೈಧೃತಿ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಕೊತ್ತಂಬರಿ, ಜೀರಿಗೆ, ಸೋಂಪು, ಕಾಳು ಮೆಣಸನ್ನು ರುಬ್ಬಿ ಪೌಡರ್ ರೀತಿ ಮಾಡಿ. ಒಂದು ಪಾತ್ರೆಯಲ್ಲಿ ನೀರನ್ನು ಕುದಿಸಿ ಅದಕ್ಕೆ ಒಂದು ಚಮಚ ಕಷಾಯ ಪುಡಿ ಬೆರೆಸಿ ಕುಡಿಯಿರಿ. ಇದನ್ನು ಎರಡು ಹೊತ್ತು ತೆಗೆದುಕೊಳ್ಳುವುದರಿಂದ ಮಳೆಗಾಲದಲ್ಲಿ ಕಾಡುವ ಶೀತ, ನೆಗಡಿ ಕಡಿಮೆಯಾಗುವುದು.

ಸೌಂದರ್ಯ ಸೂತ್ರ

ಇಂಗು ಮತ್ತು ಜೇನುತುಪ್ಪ ಬ್ಯಾಕ್ಟೀರಿಯಾ ವಿರೋಧಿ ಗುಣಗಳಿಂದ ಸಮೃದ್ಧವಾಗಿವೆ. ಇಂಗನ್ನು ಜೇನುತುಪ್ಪದಲ್ಲಿ ಸೇರಿಸಿ, ಅದಕ್ಕೆ ಚಮಚ ಅಲೋವೆರಾ ಜೆಲ್ ಮಿಕ್ಸ್ ಮಾಡಿ. ಈ ಪೇಸ್ಟ್‌ನ್ನು ಮುಖಕ್ಕೆ ಹಚ್ಚಿ, ಸ್ವಲ್ಪ ಹೊತ್ತು ಮಸಾಜ್ ಮಾಡಿದ ನಂತರ ಮುಖವನ್ನು ತೊಳೆಯಿರಿ. ಇದರಿಂದ ಮೊಡವೆ ನಿವಾರಣೆಯಾಗುವುದು.



ಬಯಲ ಗಾಳಿಗೆ ತಲೆದೂಗುತ್ತಿರುವ ಹುಲ್ಲಿಗೆ ಬಿಸಿಲ ತಾಪ ತಾಕದ ಹಾಗೆ ಹಾಕಿರುವ ಮೋಡದ ಚಪ್ಪರ.

ಚಿತ್ರ ಬರಹ: ಶ್ರೀ ತಲಗೇರಿ

ರಂತಿದೇವನ ದಾನಗುಣದಿಂದ ಸಂಪ್ರೀತರಾದ ದೇವತೆಗಳು

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಭರದ್ವಾಜನಿಂದ ಮುಂದುವರಿಸಲ್ಪಟ್ಟ ಭರತನ ಸಂತತಿಯಲ್ಲಿ ಹುಟ್ಟಿದವನು ರಂತಿದೇವ. ಈತನ ದಿವ್ಯ ಚರಿತ್ರೆ ಮೂರೂ ಲೋಕಗಳಲ್ಲಿ ಖ್ಯಾತವೆನಿಸಿತು. ರಂತಿದೇವನು ಹುಟ್ಟುವಾಗಲೇ ಬಾಯಲ್ಲಿ ಚಿನ್ನದ ಚಮಚವನ್ನಿಟ್ಟುಕೊಂಡು ಹುಟ್ಟಿದವನು ಎಂದು ವದಂತಿ. ಇಷ್ಟಾದರೂ ಕೊಡುಗೈ ಕರ್ಣನನ್ನು ದಾನದಲ್ಲಿ ಮೀರಿಸಿದವನು ಎಂದೇ ಹೇಳಬಹುದು. ಈತನ ಕೊಡುಗೈ ಮುಂದೆ ಯಾವ ಐಶ್ವರ್ಯವೂ ಸಾಟಿ ಎನಿಸದಂತಾಯಿತು. ಈತನಿಂದ ದಾನ ಪಡೆದವರು ಶ್ರೀಮಂತರಾದರು. ರಂತಿದೇವನೇ ದಟ್ಟದಾರಿದ್ರ್ಯ ಎನಿಸಿದ. ಬಡತನ ಬಲವಾಗಿ ಕಾಡತೊಡಗಿದರೂ ಆ ಬಗ್ಗೆ ಯಾವುದೇ ಕಿರಿಕಿರಿ ಇವನಲ್ಲಿರಲಿಲ್ಲ. ಇವನ ಪುಣ್ಯ ವಿಶೇಷವೆಂದರೆ ಮಡದಿ ಮಕ್ಕಳಿಗೂ ಇವನ ದಾನ-ಕಾರ್ಯಗಳಲ್ಲಿ ಎಂದೂ ಅಡ್ಡಿಬಂದವರಲ್ಲ. ಇವನೊಂದಿಗೆ ಈ ವಿಚಾರದಲ್ಲಿ ಮನೆಮಂದಿ ಎಲ್ಲಾ ಸಂಪೂರ್ಣ ಸಹಕಾರ ನೀಡುತ್ತಿದ್ದರು. ಹೀಗಿರಲು ಒಂದು ಬಾರಿ ಇವನಿಗೂ ಇವನ ಮನೆಮಂದಿಗೂ ನಲವತ್ತೊಂದು ದಿನಗಳವರೆಗೆ ಕುಡಿಯಲು ನೀರು ಸಹ ದೊರೆಯದಂತಾಯಿತು. ನಲವತ್ತೊಂಬತ್ತನೆಯ ದಿನ ಬೆಳಿಗ್ಗೆ ದೇವರ ಕೃಪೆಯಿಂದ ಸ್ವಲ್ಪ ತುಪ್ಪ, ಗೋಧಿ, ಅನ್ನ ಪಾಯಸ ಸಿಹಿನೀರು ಸಿಕ್ಕಿದುವು.

ಊಟಕ್ಕೆ ತೊಂದರೆ ಇದ್ದರೂ ಅನುದಿನದ ಸ್ನಾನ, ಜಪ-ತಪಗಳು ರಂತಿದೇವನಿಂದ ಯಾವ ಅಡ್ಡಿ ಆತಂಕವೂ ಇಲ್ಲದೆ ನಡೆಯುತ್ತಿದ್ದುವು. ನಲವತ್ತೊಂಬತ್ತನೆಯ ದಿನ ರಂತಿದೇವ ಸ್ನಾನಾಹ್ನಿಕಗಳನ್ನು ಮುಗಿಸಿ, ತನ್ನ ಹೆಂಡತಿ ಮಕ್ಕಳೊಂದಿಗೆ ಊಟಕ್ಕೆ ಕುಳಿತ. ಅಷ್ಟರಲ್ಲಿ ಒಬ್ಬ ಬ್ರಾಹ್ಮಣ ಮನೆಬಾಗಿಲ ಬಳಿ ಕಾಣಿಸಿಕೊಂಡ. ರಂತಿದೇವ ಮೊದಲಿಂದಲೂ ಅತಿಥಿಯನ್ನು ದೇವರೆಂದು ಕಾಣುತ್ತಿದ್ದವನು. ಬಾಗಿಲು ಬಳಿ ನಿಂತಿದ್ದ ಬ್ರಾಹ್ಮಣ ಅತಿಥಿಯನ್ನು ಒಳಗೆ ಬರಮಾಡಿಕೊಂಡ. ಭಕ್ತಿಯಿಂದ ಪೂಜಿಸಿ, ತನ್ನ ಪಾಲಿನ ಅನ್ನಪಾಯಸವನ್ನು ಬ್ರಾಹ್ಮಣನಿಗೆ ಅರ್ಪಿಸಿದ. ಬ್ರಾಹ್ಮಣ ತೃಪ್ತಿಯಿಂದ ಸಂತುಷ್ಟನಾಗಿ ಮನೆಮಂದಿಯವರನ್ನೆಲ್ಲಾ ಹೃತ್ಪೂರ್ವಕವಾಗಿ ಹಾರೈಸಿ, ತನ್ನ ದಾರಿ ಹಿಡಿದ. ಮನೆಯಲ್ಲಿ ಈಗ ಉಳಿದಿರುವುದನ್ನೇ ಎಲ್ಲರೂ ಈಗ ಹಂಚಿಕೊಂಡು, ಊಟಕ್ಕೆ ಕುಳಿತರು, ಇನ್ನೇನು ತುತ್ತುಬಾಯಿಗೆ ಹಾಕಿಕೊಳ್ಳಬೇಕು ಅನ್ನುವಷ್ಟರಲ್ಲಿ ಶೂದ್ರನೊಬ್ಬನು ಬಾಗಿಲ ಬಳಿ ಕೂಗಿಟ್ಟ. ಅಮ್ಮಾ ತಾಯೀ, ಕವಳ ತಾಯೀ ಎಂದು ಹಸಿದು ಬಂದವರಿಗೆ ಅನ್ನ ಹಾಕದಿರುವುದು ರಂತಿದೇವನಿಗೆ ತಿಳಿಯದ ವಿಷಯ. ತಮ್ಮಲ್ಲಿದ್ದುದರಲ್ಲಿ ಅರ್ಧವನ್ನು ಸಂತೋಷದಿಂದ ಶೂದ್ರನಿಗೆ ಉಣಿಸಿದ. ಅವನೂ ಸಹ ತಿಂದು ತೇಗುತ್ತಾ ತನ್ನ ದಾರಿ ಹಿಡಿದ ನಂತರ ಮಿಕ್ಕಿರುವುದನ್ನೇ ಮನೆಮಂದಿ ಎಲ್ಲಾ ಹಂಚಿಕೊಳ್ಳಲು ಯೋಚಿಸುತ್ತಿರುವಷ್ಟರಲ್ಲಿ ಇನ್ನೊಬ್ಬ ನಾಲ್ಕು ನಾಯಿಗಳೊಂದಿಗೆ ಹಾಜರಾದ.

ಸ್ವಾಮಿ, ಒಂದು ವಾರದಿಂದ ಒಂದಗಳು ಅನ್ನ ಸಿಕ್ಕಿಲ್ಲ, ತುಂಬಾ ಹಸಿದು ಹೋಗಿದ್ದೇನೆ. ಏನಾದ್ರೂ ಇದ್ದರೆ ಕೊಡಿ ಸ್ವಾಮಿ. ಅಲಾಪಿಸಿದ. ಅವನು ಅಂಗಲಾಚುತ್ತಿರುವುದನ್ನು ಕಂಡು, ರಂತಿದೇವನಿಗೆ ಕರುಳೇ ಬಾಯಿಗೆ ಬಂದಂತಾಯಿತು. ಉಳಿದಿದ್ದ ಆಹಾರವನ್ನೆಲ್ಲಾ ಅವನಿಗೂ ಅವನ ನಾಯಿಗಳಿಗೂ ಹಾಕಿಬಿಟ್ಟ. ಈಗ ಸ್ವಲ್ಪ ನೀರು ಮಾತ್ರ ಉಳಿದಿತ್ತು. ಅದನ್ನೇ ಎಲ್ಲರೂ ಕುಡಿದು ಅಂದಿನ ಹಸಿವನ್ನು ಹಿಂಗಿಸಿಕೊಳ್ಳೋಣ ಅನ್ನುವಷ್ಟರಲ್ಲಿ ಒಬ್ಬ ಚಂಡಾಲ ಮನೆ ಮುಂದೆ ಬಂದು ನಿಂತು ಕೂಗಿಕೊಂಡ. ತುಂಬಾ ಬಾಯಾರುತ್ತಿದೆ. ಸ್ವಲ್ಪ ನೀರು ಕೊಡಿ ತಂದೆ ಎಂದು ಕೂಗಿಟ್ಟ. ಚಂಡಾಲನ ಕೂಗಿಗೆ ರಂತಿದೇವನ ಮನ ಕರಗಿತು. ಇದ್ದ ನೀರೆಲ್ಲವನ್ನೂ ಅವನಿಗೆ ಕುಡಿಸುತ್ತಾ ಕಣ್ಣು ಮುಚ್ಚಿಕೊಂಡು ಕೃಷ್ಣಾರ್ಪಣ ಮಸ್ತು ಅಂದ. ಕಣ್ಣು ಬಿಡುತ್ತಿದ್ದಂತೆ ಚಂಡಾಲ ಸಾಕ್ಷಾತ್ ಪರಮೇಶ್ವರ ಆಗಿದ್ದ. ದತ್ತಾತ್ರೇಯ ನಾಲ್ಕು ನಾಯಿಗಳೊಂದಿಗೆ ಮುಗುಳು ನಗುತ್ತಾ ನಿಂತಿದ್ದಾನೆ. ಇಂದ್ರ, ಅಗ್ನಿ ಪ್ರತ್ಯಕ್ಷರಾಗಿದ್ದಾರೆ. ರಂತಿದೇವನಿಗೆ ಅಲೌಕಿಕ ಆನಂದ ಉಂಟಾಯಿತು. ಅವರೆಲ್ಲರೂ ಅವನನ್ನು ಹರಿಸಿದರು.

ನಮ್ಮ ಬಳಿ ಸಕಲವೂ ಇದ್ದಾಗ ದಾನ ಧರ್ಮ ಮಾಡುವುದು ವಿಶೇಷವಲ್ಲ. ಆದರೆ ನಾವೇ ಕಷ್ಟದಲ್ಲಿರುವಾಗ ಮತ್ತೊಬ್ಬರಿಗೆ ಮಿಡಿದು ಸಹಾಯ ಮಾಡುವುದು ಅತ್ಯಂತ ವಿಶೇಷ ಗುಣವಾಗುತ್ತದೆ.

ಸಹಾಯ ಮಾಡಲು ಹಣಕಾಸಿನ ಅವಶ್ಯಕತೆ ಇರುವುದಿಲ್ಲ ಆದರೆ ಒಳ್ಳೆಯ ಮನಸ್ಸಂತೂ ಖಂಡಿತ ಬೇಕು. ಇಂತಹ ಮನಸ್ಸಿನಿಂದ ಮತ್ತೊಬ್ಬರಿಗೆ ಸಹಾಯ ಮಾಡಿದರೆ ಭಗವಂತ ಖಂಡಿತ ನಮ್ಮ ಮೇಲೆ ಕೃಪೆ ತೋರುತ್ತಾನೆ.

ಒಂದೊಳ್ಳೆ ಮಾತು

ಪ ದ ಬಂ ಧ



ಎಡದಿಂದ ಬಲಕ್ಕೆ

1. ದೇಶವೊಂದರ ಪ್ರಜೆ (4)
4. ಮೋಸಮಾಡು ಎನ್ನುವುದನ್ನು ಧ್ವನಿಸುವ ಪದ (4)
6. ಬರಿಯ ಅಗಲ ಬಾಯಿಯ ಪಾತ್ರೆ (3)
8. ನಮ್ಮನ್ನು ಹೆತ್ತ ತಾಯಿ (3)
9. ಮಾಡಿದ ಕೆಲಸಕ್ಕೆ ತಕ್ಕ ಸಂಬಳ (3)
10. ಭೂಮಿಗೆ ಮತ್ತೊಂದು ಹೆಸರು (3)
12. ಮತ್ತೊಂದು ತಿಳುವಳಿಕೆ (2)
13. ನೀರಿಗೆ ಪರ್ಯಾಯ ಪದ (2)
15. ಅಸ್ತವ್ಯಸ್ತವಾದ ಮದ್ದಾನೆ (3)
18. ಗರ್ವಕ್ಕೆ ಮತ್ತೊಂದು ಹೆಸರು (3)
19. ಮುಂದೆ ಬರಲಿರುವ ಕಾಲವಿದು (3)
20. ಆರಂಭದ್ದಲ್ಲ, ಕೊನೆಯದ್ದು (3)
22. ಅವನು ತೋರಿದ ಪ್ರೀತಿ (4)
23. ತನಗೆ ಸಾಮರ್ಥ್ಯವಿರುವಷ್ಟು (4)

ಮೇಲಿನಿಂದ ಕೆಳಕ್ಕೆ

2. ಆನೆ ಮೊಗದ ದೇವರು (4)
3. ಸಾಲಕ್ಕೆ ಇನ್ನೊಂದು ಹೆಸರು (2)
4. ಊರಿನಲ್ಲಿ ಸಿಕ್ಕಿದ ಮಹಿಳೆ (2)
5. ಜನರನ್ನು ನಗಿಸುವ ವಿದೂಷಕ (4)
7. ಶ್ರೀಮಂತನಲ್ಲ, ಕಡಿಮೆ ಧನವಿರುವಾತ (3)
10. ಮತ್ತೊಂದು ಬೆಂಕಿ (3)
11. ವಾಸಿಸುವ ಮನೆ (3)
14. ತಲೆಕೆಳಗಾಗಿ ಬಂದಿರುವ ವಿಶೇಷ ಅರ್ಥವುಳ್ಳ ಪದಪುಂಜ (4)
16. ಗತಿ ಕಾಣಿಸಿದ ಪತಿವ್ರತೆ (3)
17. ನಾಶವಿಲ್ಲದ್ದು (4)
20. ದೇಹದ ಭಾಗ (2)
21. ರಾಕ್ಷಸರ ಶಿಲ್ಪಿ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ

1. ಪಂಕಜ 3. ಕಾರಂಜಿ 6. ಲಲಾಟ 7. ನವಿಲು 10. ತವರ 12. ಕನ್ನಡಕ 13. ಸಂತಾಪ 14. ಸಂಪಾದಕ 15. ಮದನ 17. ತಕಲಿ 19. ಮೂಷಿಕ 20. ಪಿನಾಕ 21. ರಸಿಕ

ಮೇಲಿನಿಂದ ಕೆಳಕ್ಕೆ

1. ಪಂಚಾಮೃತ 2. ಜಲಗಾರ 3. ಕಾಟ 4. ಜನ 5. ಪಾಲು 8. ವಿತಂಡವಾದ 9. ಟೆಕಪ 11. ವನಪಾಲಕ 13. ಸಂಕಟ 15. ಮಧುಕರ 16. ನಳಪಾಕ 17. ತಲೆ 18. ಲಿಪಿ 19. ಮೂಕ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಬೆಳೆಯುತ್ತಿರುವ ಐಸ್‌ಲ್ಯಾಂಡ್

ಒಂದು ದೇಶವು ಕಾಲಾನಂತರ ದಲ್ಲಿ ಗಾತ್ರದಲ್ಲಿ ಬೆಳೆಯುತ್ತದೆ ಎಂದರೆ ನಂಬಲು ಅಸಾಧ್ಯ. ಆದರೆ ಇದು ನಿಜ. ಗ್ರೀನ್‌ಲ್ಯಾಂಡ್ ಮತ್ತು ನಾರ್ವೆ ನಡುವೆ ಆರ್ಕ್‌ಟಿಕ್ ವೃತ್ತದ ಬಳಿ ಇರುವ ಅಟ್ಲಾಂಟಿಕ್ ಮಹಾ ಸಾಗರದ ದ್ವೀಪ ರಾಷ್ಟ್ರವಾದ ಐಸ್‌ಲ್ಯಾಂಡ್. ದೇಶವು ವರ್ಷಕ್ಕೆ ಸುಮಾರು 2.5 ಸೆಂ.ಮೀ ಬೆಳೆಯು ತ್ತಿದೆ. ಭೂಮಿಯ ಹೊರಪದರವನ್ನು ವಿಭಜಿಸುವ ಬೃಹತ್ ಘನ ಬಂಡೆಯ ಫಲಕಗಳು ಭೂಮಿಯ ಭೂದೃಶ್ಯವನ್ನು ಮರುರೂಪಿಸಲು ನಿರಂತರವಾಗಿ ಚಲಿಸುತ್ತವೆ. ಆ ಸಂದರ್ಭದಲ್ಲಿ ಅವುಗಳ ಗಾತ್ರವು ಕೆಲವು ನೂರರಿಂದ ಸಾವಿರಾರು ಕಿಲೋಮೀಟರ್‌ಗಳವರೆಗೆ ಬಹಳವಾಗಿ ಬದಲಾಗ ಬಹುದು. ಈ ಫಲಕಗಳು ಐಸ್‌ಲ್ಯಾಂಡ್ ಮಧ್ಯ ಅಟ್ಲಾಂಟಿಕ್ ರಿಡ್ಜ್ ಟೆಕ್ಟೋನಿಕ್ ಪ್ಲೇಟ್ ಗಡಿಯ ಮೇಲೆ ಕುಳಿತಿದೆ. ಹಾಗಾಗಿ ಈ ರೀತಿಯ ಪ್ರಕ್ರಿಯೆ ಸಂಭವಿಸುತ್ತದೆ.



ಪುಸ್ತಕ ಲೋಕ



ಅಂತು

ಪ್ರಕಾಶ್ ನಾಯಕ್ ಬರೆದಿರುವ 'ಅಂತು' ಕೃತಿ ತನ್ನ ವಸ್ತು ಮತ್ತು ಕಥನತಂತ್ರ ಎರಡೂ ದೃಷ್ಟಿಗಳಿಂದ ಕನ್ನಡ ಕಾದಂಬರಿಲೋಕಕ್ಕೆ ಒಂದು ವಿಶಿಷ್ಟ, ಮೌಲಿಕ ಸೇರ್ಪಡೆ. ಸದ್ಯದ ಅತ್ಯಾಧುನಿಕವಾದ ಕಾರ್ಪೊರೇಟ್ ಜಗತ್ತಿನ ರೋಚಕ ವಿದ್ಯಮಾನಗಳನ್ನು ಲವಲವಿಕೆ ಯಿಂದ ನಿರೂಪಿಸುತ್ತಲೇ, ಅವುಗಳನ್ನೂ ಮೀರಿದ ನಿತ್ಯಸತ್ಯಗಳನ್ನು ಸ್ಪರ್ಶಿಸಿಬಿಡುವ ಮಹತ್ವಾಕಾಂಕ್ಷೆ ಇಲ್ಲಿ ಕಂಡುಬರುತ್ತದೆ. ಒಂದು ಕುತೂಹಲಕಾರಿ ಪ್ರಾಜೆಕ್ಟಿನ ಪೂರ್ವಾಪರಗಳನ್ನು ಪತ್ತೇದಾರೀ ಶೈಲಿ ಯಲ್ಲಿ ಶೋಧಿಸುವಂತೆ ಆರಂಭವಾಗುವ ಈ ಬರಹವು ಕ್ರಮೇಣ ಹುಟ್ಟು-ಸಾವು-ಪುನರ್ಜನ್ಮಗಳಂಥ ಗಂಭೀರ ಪ್ರಶ್ನೆಗಳಿಗೆ ಎದು ರಾಗಿ ತಾತ್ವಿಕ ಎತ್ತರಗಳಿಗೆ ಬೆಳೆಯುವ ಪರಿ ಗಮನಾರ್ಹವಾಗಿದೆ.

ಟ್ವೀಟ್‌ಮೆಂಟ್

ಖುಷ್ಬೂ ವರ್ಮಾ

ಬೆಂಗಳೂರಿನಲ್ಲಿದ್ದಾಗಿನಿಂದ ನಾನು UPI ಅನ್ನೇ ಉಪಯೋಗಿಸುತ್ತಿರುತ್ತೇನೆ. ಹಾಗೆ ಕ್ಯಾಶ್ ಸಹ ಇಟ್ಟುಕೊಳ್ಳೋದಿಲ್ಲ. ಆದ್ರೆ, ಇವತ್ತು ನಾನು ಟೀ ಕುಡಿಯೋಕೆ ಹೋಗಿದ್ದೆ, ಆರ್ಡರ್ ಮಾಡಿದ ಮೇಲೆ ನಂಗೆ ಗೊತ್ತಾಗಿದ್ದು ಬ್ಯಾಂಕ್ ಸರ್ವರ್ ಇಲ್ಲಂತಾ. ಆಗ ಆದ ಮುಜುಗರ ಎಷ್ಟೆಂದು ಹೇಳಲೂ ಸಾಧ್ಯವಿಲ್ಲ!

ರೋಹಿತ್ ಕೋಕಟೆ

SBI ಕಸ್ಟಮರ್‌ಗಳಂತೂ ಇಂಥ ಕಾರಣಕ್ಕೆ ಕ್ಯಾಶ್ ಇಟ್ಕೊಂಡು ಓಡಾಡ್ತಾರೆ!

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ವಿಕ್ಟೋರಿಯಾ ಶಿ ಹೆಸರಿನ ಎಐ(ಕೃತಕ ಬುದ್ಧಿಮತ್ತೆ) ರಚಿತ ವಕ್ತಾರರನ್ನು ಯಾವ ದೇಶವು ಇತ್ತೀಚೆಗೆ ಪರಿಚಯಿಸಿದೆ?

- ಎ. ಬ್ರಿಟನ್
- ಬಿ. ಜಪಾನ್
- ಸಿ. ಉಕ್ರೇನ್
- ಡಿ. ಇಸ್ರೇಲ್

ಉತ್ತರ: ಸಿ. ಉಕ್ರೇನ್

ಮಾಹಿತಿ

ಉಕ್ರೇನ್‌ನ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ತನ್ನ ಡಿಜಿಟಲ್ ವಕ್ತಾರನನ್ನಾಗಿ ಎಐ- ರಚಿತ ಅವತಾರ ವಿಕ್ಟೋರಿಯಾ ಶಿಯನ್ನು ಪರಿಚಯಿಸಿದೆ. ಶಿ, ವೃತ್ತಿಪರ ಉಡುಪುಗಳನ್ನು ಧರಿಸಿ, ಸಾಮಾಜಿಕ ಮಾಧ್ಯಮದ ಮೂಲಕ ಕಾನ್ಸುಲರ್ ವ್ಯವಹಾರಗಳ ಕುರಿತು ನವೀಕರಣಗಳನ್ನು ಪ್ರಸ್ತುತಪಡಿಸುತ್ತದೆ. ಆಕೆಯ(ಶಿ) ನೋಟವು ಎಐ- ರಚಿತವಾಗಿದ್ದರೂ, ಅವಳು ನೀಡುವ ವಿಷಯವು ಮಾನವ-ಲಿಖಿತ ಮತ್ತು ಪರಿಶೀಲಿಸಲ್ಪಟ್ಟಿದೆ. ವಿದೇಶಾಂಗ ಸಚಿವ ಡಿಮಿಟ್ರೊ ಕುಲೆಬಾ ಅವರು ಶಿ ಅವರ ಪರಿಚಯವನ್ನು ಒಂದು ಅದ್ಭುತ ಕ್ರಮವೆಂದು ಶ್ಲಾಘಿಸುತ್ತಾರೆ, ಸಮಯ ಮತ್ತು ಸಂಪನ್ಮೂಲ ಉಳಿತಾಯವನ್ನು ಎತ್ತಿ ತೋರಿಸುತ್ತಾರೆ. ಉಕ್ರೇನ್ ರಾಜತಾಂತ್ರಿಕ ಕಾರ್ಯಾಚರಣೆಗಳಲ್ಲಿ ತನ್ನ ಈ ನವೀನ ತಂತ್ರಜ್ಞಾನದ ಬೆಳವಣಿಗೆಯನ್ನು ಜಗತ್ತಿಗೆ ತೋರಿಸುತ್ತಿದೆ.

ಅಡುಗೆ ಎಣ್ಣೆ ಮರುಬಳಕೆ ಆರೋಗ್ಯಕ್ಕೆ ಅಪಾಯ!

ಆರೋಗ್ಯವೇ ಭಾಗ್ಯ

ಬೆಂ. ಮು. ಮಾರುತಿ

ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಹೊರಡಿಸಿದ ಸುರಕ್ಷತಾ ಮಾರ್ಗಸೂಚಿಗಳ ಪ್ರಕಾರ, ಎಣ್ಣೆಯನ್ನು ಒಮ್ಮೆ ಬಿಸಿ ಮಾಡಿದ ಬಳಿಕ ಮತ್ತೆ ಬಿಸಿ ಮಾಡಬಾರದು. ಎಣ್ಣೆಯನ್ನು ಪದೇ ಪದೇ ಹೆಚ್ಚಿನ ತಾಪಮಾನಕ್ಕೆ ಒಳಪಡಿಸುವುದರಿಂದ ಕೆಲ ವಿಷಕಾರಿ ಅಂಶಗಳು ರೂಪುಗೊಳ್ಳುತ್ತವೆ. ಕರಿದ ತಿಂಡಿ ಮಾಡಿದ ಬಳಿಕ ಉಳಿದ ಎಣ್ಣೆಯಲ್ಲಿ ಕೆಲ ದಿನ ಬಿಟ್ಟು ಮತ್ತೊಮ್ಮೆ ತಿಂಡಿ ಕರಿಯಲು ಬಳಸುತ್ತೇವೆ.

ಹೀಗೆ ಒಮ್ಮೆ ಹೆಚ್ಚಿನ ತಾಪಮಾನದಲ್ಲಿ ಬೇಯಿಸಿದ ಎಣ್ಣೆಯು ಅನೇಕ ರೀತಿಯ ಬದಲಾವಣೆಗಳಿಗೆ ಒಳಗಾಗುತ್ತದೆ. ಇದನ್ನು ಮತ್ತೆ ಬೇಯಿಸಿ, ಅದರಲ್ಲಿ ತಯಾರಿಸಿದ ಅಡುಗೆ ತಿನ್ನುವುದರಿಂದ ದೇಹದಲ್ಲಿ ಕ್ಯಾನ್ಸರ್ ಕೋಶಗಳು ಉತ್ಪತ್ತಿಯಾಗುತ್ತವೆ. ಅಲ್ಲದೆ ಹೃದ್ರೋಗ ಸಮಸ್ಯೆ ಕೂಡಾ ಬರುವ ಸಾಧ್ಯತೆ ಇದೆ. ಇಷ್ಟೇ ಅಲ್ಲದೆ, ಮೇಲ್ನೋಟಕ್ಕೆ ತಿಳಿಯದ ಹಲವು ಆರೋಗ್ಯ ಸಮಸ್ಯೆಗಳು ಎದುರಾಗುತ್ತವೆ. ಈ ಎಣ್ಣೆಯು ಆಮ್ಲಜನಕರಹಿತವಾಗುವುದರಿಂದ, ಇದರಲ್ಲಿ ಕ್ಲೋಸ್ಟ್ರಿಡಿಯಮ್ ಬೊಟುಲಿನಮ್ ಉತ್ಪತ್ತಿಯಾಗುತ್ತದೆ. ಇದು ಆಹಾರದ ವಿಷಕ್ಕೆ ಕಾರಣವಾಗುತ್ತದೆ.

ಉರಿಯೂತ: ಒಮ್ಮೆ ಬಳಸಿದ ಅಡುಗೆ ಎಣ್ಣೆಯನ್ನು ಮತ್ತೆ ಬಳಸಿ ಅಡುಗೆ ಮಾಡುವುದರಿಂದ, ಅಂತಹ ಆಹಾರ ಸೇವಿಸಿದಾಗ ಸ್ವತಂತ್ರ ರಾಡಿಕಲ್‌ಗಳು ಹೆಚ್ಚುತ್ತವೆ. ಇದು ಉರಿಯೂತವನ್ನು ಉಂಟುಮಾಡುತ್ತದೆ. ಇದು ಹೃದ್ರೋಗ ಮತ್ತು ಮಧುಮೇಹದಂತಹ ಕಾಯಿಲೆಗಳ ಅಪಾಯವನ್ನು ಹೆಚ್ಚಿಸುತ್ತದೆ. ಈ ಉರಿಯೂತವು ಪ್ರತಿರಕ್ಷಣಾ ವ್ಯವಸ್ಥೆಯನ್ನು ಸಹ ಕಡಿಮೆ ಮಾಡುತ್ತದೆ. ಇದು ದೇಹದಲ್ಲಿ ಅನೇಕ ಸೋಂಕುಗಳಿಗೆ ಕಾರಣವಾಗುತ್ತದೆ.

ಕ್ಯಾನ್ಸರ್ ಕಾರಕ: ಆರೋಗ್ಯ ತಜ್ಞರ ಪ್ರಕಾರ, ಅಡುಗೆ ಎಣ್ಣೆಯನ್ನು ಪದೇ ಪದೇ ಬಳಸುವುದರಿಂದ ಕ್ಯಾನ್ಸರ್ ಕಾರಕ ಅಂಶಗಳು ಹುಟ್ಟುತ್ತವೆ. ಎಣ್ಣೆಯನ್ನು ಮತ್ತೆ ಬಿಸಿ ಮಾಡುವುದರಿಂದ ಅಡಾಲ್ಡಿಹೈಡ್‌ಗಳು ಉತ್ಪತ್ತಿಯಾಗುತ್ತವೆ. ಈ ಎಣ್ಣೆಯಿಂದ ತಯಾರಿಸಿದ ಆಹಾರವನ್ನು ಸೇವಿಸುವುದರಿಂದ ದೇಹದಲ್ಲಿ ಕ್ಯಾನ್ಸರ್ ಕೋಶಗಳು ರೂಪುಗೊಳ್ಳುತ್ತವೆ.

ಬ್ಯಾಕ್ಟೀರಿಯಾ: ಎಣ್ಣೆಯನ್ನು ಬಿಸಿ ಮಾಡಿದ ನಂತರ, ಅದನ್ನು ಸಂಗ್ರಹಿಸುವುದರಿಂದ ಎಣ್ಣೆಯಲ್ಲಿರುವ ಸೂಕ್ಷ್ಮ ಆಹಾರ ಕಣಗಳ ಮೇಲೆ ಬ್ಯಾಕ್ಟೀರಿಯಾಗಳು ಬೆಳೆಯುತ್ತವೆ. ಇದು ಅಪಾಯಕಾರಿ ಸೋಂಕುಗಳಿಗೆ ಕಾರಣವಾಗಬಹುದು. ಮತ್ತೆ ಈ ಎಣ್ಣೆಯನ್ನು ಬಳಸಿದಾಗ ದೇಹದಲ್ಲಿ ಫ್ರೀರ‍್ಯಾಡಿಕಲ್‌ಗಳು ಶೇಖರಗೊಳ್ಳುತ್ತವೆ. ಅವು ಜೀವಕೋಶಗಳನ್ನು ಹಾನಿಗೊಳಿಸುತ್ತವೆ. ಕ್ಯಾನ್ಸರ್‌ನಂತಹ ಮಾರಣಾಂತಿಕ ಕಾಯಿಲೆಗಳ ಅಪಾಯವನ್ನು ಹೆಚ್ಚಿಸುತ್ತದೆ.

ಆಹಾರ ಕಲುಷಿತ: ಹೆಚ್ಚಿನ ತಾಪಮಾನದ ಕಾರಣ ಬಿಸಿ ಎಣ್ಣೆಯಿಂದ ಅಡುಗೆ ಮಾಡುವ ಮೂಲಕ ಆಹಾರವು ಕೆಲವೊಮ್ಮೆ ಕಲುಷಿತಗೊಳ್ಳುತ್ತದೆ. ಅದು ನಮಗೆ ಗೊತ್ತಾಗುವುದಿಲ್ಲ. ನಾವು ಹಾಗೆಯೇ ತಿನ್ನುತ್ತೇವೆ. ಯಾವುದೇ ಕಾಯಿಲೆ ಬಂದರೂ ಅದು ಆ ಎಣ್ಣೆಯಿಂದಲೇ ಎಂಬ ಅರಿವು ಕೂಡ ನಮಗಾಗುವುದಿಲ್ಲ.

ಅಸಿಡಿಟಿ, ಅಜೀರ್ಣ: ಎಣ್ಣೆಯ ಮರುಬಳಕೆಯು ಆಮ್ಲೀಯತೆ, ಎದೆಯುರಿ, ಜೀರ್ಣಕಾರಿ ಸಮಸ್ಯೆಗಳ ಅಪಾಯವನ್ನು ಹೆಚ್ಚಿಸುತ್ತದೆ. ಇವು ತಾತ್ಕಾಲಿಕ ಸಮಸ್ಯೆಗಳು. ಆದರೆ ಪುನರಾವರ್ತನೆಯದರೆ, ದೀರ್ಘಕಾಲಿಕ ಸಮಸ್ಯೆಯಾಗಿ ಬದಲಾಗಬಹುದು. ಆ ಬಳಿಕ ತುಂಬಾ ಅಪಾಯ ಎದುರಿಸಬೇಕಾಗಬಹುದು.

ಕೊಲೆಸ್ಟ್ರಾಲ್: ಎಣ್ಣೆ ಮರುಬಳಕೆ ಮಾಡಿದಾಗ ಟ್ರಾನ್ಸ್ ಕೊಬ್ಬಿನಾಮ್ಲಗಳು ಹೆಚ್ಚಾಗುತ್ತವೆ. ಅವು ಅನಾರೋಗ್ಯಕ್ಕೆ ಕಾರಣವಾಗುತ್ತವೆ. ಈ ಕೊಬ್ಬು ಹೃದಯ ಸಂಬಂಧಿ ಸಮಸ್ಯೆಗಳನ್ನು ಉಂಟುಮಾಡುತ್ತವೆ. ಹೀಗೆ ಹತ್ತು ಹಲವು ಆರೋಗ್ಯ ತೊಂದರೆಗಳಿಗೆ ಸೋಪಾನವಾಗಿರುವ ಒಮ್ಮೆ ಬಳಸಿದ ಅಡುಗೆ ಎಣ್ಣೆ ಯನ್ನು ಹಣ ಉಳಿಸುವ ದೃಷ್ಟಿಯಿಂದ ಏಕೆ ಬಳಸಬೇಕು? ಅಲ್ಲವೇ!

ಕೋಸ್ಟಾಕಾನ್ ಕಾರ್ಡಿಯಾ ದುರಂತ

ವಿಜ್ಞಾನ ವಿಸ್ಮಯ

ಕೆ. ನಟರಾಜ್

ಮನುಷ್ಯ ಇತಿಹಾಸದಿಂದ ಪಾಠ ಕಲಿಯುತ್ತಾನೋ ಇಲ್ಲವೋ ಗೊತ್ತಿಲ್ಲ, ಆದರೆ ಇತಿಹಾಸವಂತೂ ಮನುಷ್ಯನಿಗೆ ಪಾಠ ಕಲಿಸುತ್ತಲೇ ಇರುತ್ತದೆ! ಇದಕ್ಕೆ ಸಾಕ್ಷಿ ಇತ್ತೀಚೆಗೆ ಇಟಲಿಯ ಬಳಿ ನಡೆದ ಐಷಾರಾಮಿ ಹಡಗು 'ಕೋಸ್ಟಾಕಾನ್ ಕಾರ್ಡಿಯಾ'ದ ದುರಂತವೇ ಸಾಕ್ಷಿ. ಟೈಟಾನಿಕ್ ಮುಳುಗಿ ನೂರು ವರ್ಷವಾಗುತ್ತಿರುವಾಗಲೇ ಈಗ 'ಕೋಸ್ಟಾಕಾನ್ಕಾರ್ಡಿಯಾ' ಮುಳುಗಿದ್ದು ವಿಪರ್ಯಾಸ. 'ಕಾನ್ಕಾರ್ಡಿಯಾ' ಹಡಗು ಇತ್ತೀಚಿನ ಹಡಗುಗಳಿಗಿಂತ ಎರಡು ಪಟ್ಟು ದೊಡ್ಡದಿತ್ತು. ಅತ್ಯಂತ ಹೆಚ್ಚು ಉದ್ದವಾದ, ಎತ್ತರವಾದ ಹಡಗು ಅದಾಗಿತ್ತು. ಈ ಹಡಗಿನ ತಳಭಾಗ ಇತರೆ ಹಡಗುಗಳಿಗಿಂತಲೂ ಅಗಲವಾಗಿತ್ತು. ಈ ಹಡಗನ್ನು ನೋಡುವವರು ತಮ್ಮ ಕುತ್ತಿಗೆಗೆ ಅತೀ ಹೆಚ್ಚು ಶ್ರಮವನ್ನು ಕೊಡಬೇಕಾಗುತ್ತಿತ್ತು. 6 ಸಾವಿರ ಜನರನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯವಿತ್ತು. ಜತೆಗೆ ಅತ್ಯಂತ ವೈಭವೋಪೇತವಾಗಿತ್ತು. ಇಂಥ ಹಡಗು ಜ.14ರಂದು ಇಟಲಿಯ ಬಳಿ ಮುಳುಗಿ ದುರಂತ ಕಂಡದ್ದು ಆಧುನಿಕ ಹಡಗುಯಾನದ ಬಗ್ಗೆ ಜನರಲ್ಲಿ ಭಯ ಹುಟ್ಟಿಸಿದೆ.

ಕಾನ್ಕಾರ್ಡಿಯಾದ ಭವ್ಯತೆ

ಈ ಹಡಗಿನ ಉದ್ದವೇ 952 ಅಡಿಗಿಂತಲೂ ಹೆಚ್ಚು. ಅಗಲ 116 ಅಡಿಗೂ ಜಾಸ್ತಿ. ಭಾರ 114.137 ಗಿಗಾಟನ್‌ಗಳು. ಈ ಹಡಗಿನಲ್ಲಿ ಒಟ್ಟು 17 ಅಂತಸ್ತುಗಳಿದ್ದವು. ಅವುಗಳಲ್ಲಿ 13 ಅಂತಸ್ತುಗಳು ಮಾತ್ರ ಪ್ರಯಾಣಿಕರ ಬಳಕೆಗಿದ್ದು, ಉಳಿದ 4 ಅಂತಸ್ತುಗಳು ಯಂತ್ರಗಳು ಮತ್ತು ಸಿಬ್ಬಂದಿ ವರ್ಗದವರಿಗೆ ಮೀಸಲಾಗಿದ್ದವು. ಪ್ರಯಾಣಿಕರಿಗಾಗಿ ಈ ಹಡಗಿನಲ್ಲಿ ಒಟ್ಟು 1,500 ವಿಶಾಲ ಕೊಠಡಿಗಳನ್ನು ನಿರ್ಮಿಸಲಾಗಿತ್ತು. 505 ಖಾಸಗಿ ಬಾಲ್ಕನಿಗಳೂ ಇದ್ದವು. ಈ ಹಡಗಿನಲ್ಲಿ ಒಟ್ಟು 3780 ಪ್ರಯಾಣಿಕರಿಗೆ ಅವಕಾಶ ಕಲ್ಪಿಸಬಹುದಿತ್ತು. ಇಂಥ ಹಡಗಿನ ಸಿಬ್ಬಂದಿಯ ಸಂಖ್ಯೆಯೇ 1,100. ಇದರಲ್ಲಿ 5 ವೈಭವೋಪೇತ ರೆಸ್ಟೋರೆಂಟ್‌ಗಳು, 13 ಬಾರ್‌ಗಳು, 3 ಥಿಯೇಟರ್‌ಗಳು, 4 ಈಜುಕೊಳಗಳು, ಮಕ್ಕಳಿಗಾಗಿ ಆಟದ ಮೈದಾನಗಳು, ಯುವಕ-ಯುವತಿಯರಿಗಾಗಿ ಕ್ಯಾಸಿನೊ ಮತ್ತು ಡಿಸ್ಕೋಥೆಕ್‌ಗಳು, ಒಟ್ಟಿನಲ್ಲಿ ಸ್ವರ್ಗಲೋಕವೇ ಧರೆಗಿಳಿದಿದೆಯೋ ಎನ್ನುವಂತೆ ಭವ್ಯವಾಗಿತ್ತು.

ಇದು ತನ್ನ ಯಾನವನ್ನು ಆರಂಭಿಸಿದ್ದು ಜುಲೈ 2006ರಲ್ಲಿ. ಈ ಬೃಹತ್ ಹಡಗನ್ನು ನಡೆಸಲು 75600 ಕಿಲೋ ವ್ಯಾಟ್ ಸಾಮರ್ಥ್ಯವುಳ್ಳ ಆರು ಡೀಸೆಲ್ ಜಿನ್‌ಗಳನ್ನು ಅಳವಡಿಸಲಾಗಿತ್ತು. ವಿದ್ಯುತ್ ಉತ್ಪಾದನೆಗಾಗಿ 42 ಸಾವಿರ ಕಿಲೋವ್ಯಾಟ್ ಮರ್ಥ್ಯದ ಎರಡು ಎಲೆಕ್ಟ್ರಿಕ್ ಮೋಟಾರ್‌ಗಳನ್ನು ಸ್ಥಾಪಿಸಲಾಗಿತ್ತು. ಈ ಹಡಗಿನ ವೇಗ ಗಂಟೆಗೆ 39.8 ಕಿ.ಮೀ.

ಡಿಕ್ಕಿ ಹೊಡೆದದ್ದು ಹೇಗೆ ?

ಅದು ಜನವರಿ 13ರ ರಾತ್ರಿ 9.30ರ ಹೊತ್ತು. ಹಡಗು 'ಸಿವಿಟವೇಕಿಯಾ' ಬಂದರಿನಿಂದ ಹೊರಟು ಆಗಲೇ ಎರಡೂವರೆ ಗಂಟೆಗಳಾಗಿತ್ತು. ಅದು ಗಿಗ್ಲಿಯೋ ದ್ವೀಪವನ್ನು ಸಮೀಪಿಸುತ್ತಿತ್ತು. ಹಡಗಿನ ಕ್ಯಾಪ್ಟನ್ ನಿಯಮ ಮೀರಿ ದ್ವೀಪದ ಬಳಿ ಹಡಗನ್ನು ನಡೆಸುತ್ತಿದ್ದ. ಇದ್ದಕ್ಕಿದ್ದಂತೆಯೇ ಹಡಗು ಒಂದು ಬೃಹತ್ ನೀರ್ಗಲ್ಲಿನ ಬಂಡೆಗೆ ಅಪ್ಪಳಿಸಿಯೇ ಬಿಟ್ಟಿತು. ಪ್ರಯಾಣಿಕರಿಗೆ ಮತ್ತು ಸಿಬ್ಬಂದಿಗೆ ಹಡಗಿಗೆ ಏನೋ ಅಪಾಯ ಆಗಿದೆ ಎಂಬುದರ ಅರಿವಾಯಿತು. ತಕ್ಷಣವೇ ಕ್ಯಾಪ್ಟನನ್ನು ಸಂಪರ್ಕಿಸಿದಾಗ ' ಏನೂ ಭಯ ಪಡುವ ಅಗತ್ಯವಿಲ್ಲ. ವಿದ್ಯುತ್ ಸರ್ಕ್ಯೂಟ್‌ನಲ್ಲಿ ಆದ ತೊಂದರೆ ಅಷ್ಟೆ. ಅದನ್ನು ಸರಿಪಡಿಸಲಾಗಿದೆ' ಎಂದು ಅವರನ್ನು ಸಮಾಧಾನಪಡಿಸಿ ವಾಪಸ್ ಕಳಿಸಿದ. ಅಪಾಯವನ್ನರಿತು ಹಡಗನ್ನು ಬಂದರಿಗೆ ವಾಪಸ್ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಿದ. ಅಷ್ಟರಲ್ಲಾಗಲೇ ಹಡಗು ಓರೆಯಾಗಿ ಮುಳುಗತೊಡ ಗಿತ್ತು. ಕೋಸ್ಟ್‌ಗಾರ್ಡ್‌ಗಳ ಸಮಯಪ್ರಜ್ಞೆಯಿಂದ ಹಡಗಿನಲ್ಲಿದ್ದ ಬಹಳಷ್ಟು ಜನರ ಪ್ರಾಣ ರಕ್ಷಣೆಯಾಯ್ತು. ಅವರು ಸಾಕಷ್ಟು ದೋಣಿಗಳನ್ನು ಹಾಗೂ ಹೆಲಿಕಾಪ್ಟರ್‌ಗಳನ್ನು ತಕ್ಷಣವೇ ದುರಂತದ ಸ್ಥಳಕ್ಕೆ ಕಳಿಸಿಕೊಟ್ಟರು. ಬಹಳಷ್ಟು ಜನರನ್ನು ಜೀವರಕ್ಷಕ ದೋಣಿಗಳಲ್ಲಿ ಸಾಗಿಸಲಾಯ್ತು. ವಾಲುತ್ತಿರುವ ಹಡಗಿನಿಂದಾಗಿ ಈ ಕಾರ್ಯಕ್ಕೆ ಬಹಳ ತೊಡಕುಂಟಾಯಿತು. ಈ ದುರಂತದಲ್ಲಿ 16 ಜನ ಸಾವನ್ನಪ್ಪಿದ್ದು 17 ಜನ ಕಾಣೆಯಾಗಿದ್ದಾರೆ. ಕೋಸ್ಟ್‌ಗಾರ್ಡ್ ಕಮಾಂಡರ್ 12.42ಕ್ಕೆ ಕ್ಯಾಪ್ಟನ್ ಹಡಗಿಗೆ ವಾಪಸ್ ಬರಲು ಕರೆ ನೀಡಿದಾಗ ಕ್ಯಾಪ್ಟನ್ ಅದಾಗಲೇ ದಡ ಸೇರಿ ಪರಾರಿಯಾಗಿದ್ದ. ಸಾಮಾನ್ಯವಾಗಿ ಸಮುದ್ರಯಾನ ಸುರಕ್ಷಿತ ಎನ್ನು ವುದು ಬಹು ಜನರ ಅಭಿಪ್ರಾಯ. ಅದು ನಿಜ ಕೂಡ. ಇಂತಹ ದುರಂತಗಳು ವಿರಳವೆಂದೇ ಹೇಳಬೇಕು. ಅಂತ ರಾಷ್ಟ್ರೀಯ ಸಮುದ್ರಯಾನ ಸಂಸ್ಥೆ ಈ ದುರ್ಘಟನೆಯ ಬಗ್ಗೆ ತುಟಿ ಬಿಚ್ಚದಿರುವುದು ಆಶ್ಚರ್ಯ ತಂದಿದೆ.

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಮಂಗಳವಾರ
25 | 06 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಅಡುಗೆ ಎಣ್ಣೆ ಮರುಬಳಕೆ ಆರೋಗ್ಯಕ್ಕೆ ಅಪಾಯ!

ಲವ್ ಲಿ ಮೆಚ್ಚಿದ ಸಚಿವರು

ಬಿ ಪಾಸಿಟಿವ್

ದೊಡ್ಡವರು ಯಾರು?

ಉನ್ನತಸ್ಥಾನದಲ್ಲಿ ಇದ್ದೇವೆಂದು ಯಾರನ್ನೂ ನಿರ್ಲಕ್ಷಿಸುವುದು ಒಳ್ಳೆಯದಲ್ಲ, ಎಲ್ಲರೂ ಶೂನ್ಯದಿಂದಲೇ ಮೇಲೆ ಬಂದವರೇ ಆಗಿರುತ್ತಾರೆ. ಆಗರ್ಭ ಶ್ರೀಮಂತ, ಬಡವನಾಗುವುದು, ಏನೂ ಇಲ್ಲದವ ಶ್ರೀಮಂತನಾಗುವುದು ವಿಶೇಷವೇನಲ್ಲ, ಶಾಶ್ವತ ಯಾವುದಿದೆ? ನೀಡಿದ ಕೈ ಬೇಡುವುದೇ ಇಲ್ಲ ಎಂಬುದಕ್ಕೆ ಗ್ಯಾರಂಟಿ ಏನು? ಇದ್ದಾಗ ಇಲ್ಲದವನಿಗೂ ಗೌರವಿಸುವ ಮಾನವೀಯ ಗುಣ ನಮ್ಮೊಳಗಿರಬೇಕು. ಜೀವನವು ಏರಿಳಿತಗಳಿಂದ ಸಮ್ಮಿಳಿತಗೊಂಡಿರುವ ಕಗ್ಗಂಟು. ಅಧಿಕಾರದ ದರ್ಪದಿಂದ ನಡೆಸಿಕೊಂಡವನು ಮುಂದೊಂದು ದಿನ ಅವನೇ ಮೇಲಾಧಿಕಾರಿಯಾಗಿ ಬರಬಹುದು. ಅಹಂಕಾರವಿಲ್ಲದ ನಡುವಳಿಕೆಯು ಆಸ್ತಿಯಾಗಿ ಉಪಯೋಗಕ್ಕೆ ಬಂದೇ ಬರುವುದು. ತಪ್ಪೋ, ಸರಿಯೋ, ಕಪಟವಿಲ್ಲದೆ ನಿಷ್ಠೆಯಿಂದ ನಂಬಿಕೆಗೆ ಅರ್ಹವಾಗಿ ಕರ್ತವ್ಯ ನಿರ್ವಹಿಸಿದರೆ ಎಲ್ಲರೂ ನಮ್ಮವರೇ ಆಗುತ್ತಾರೆ. ಇದು ನಮ್ಮ ಏಳ್ಗೆಗೆ ಸಹಕಾರಿಯಾಗುತ್ತದೆ. ಸಂಪಾದನೆಯ ಮೊತ್ತದಲ್ಲಿ ಒಂದಷ್ಟು ಭಾಗವನ್ನು ಉಳಿಸಿ ಅದರಿಂದ ಬಡ್ಡಿ ಪಡೆದು ಬ್ಯಾಲೆನ್ಸ್ ಹೆಚ್ಚಿಸಿಕೊಳ್ಳುವುದು. ಉಳಿತಾಯದ ಮೊತ್ತದಿಂದ ಆಸ್ತಿ ಖರೀದಿಸುವುದು ಭವಿಷ್ಯದ ದೃಷ್ಟಿಯಿಂದ ಹಿತವೇ, ಇದು ಅವಶ್ಯವೂ ಹೌದು. ಇದಕ್ಕಿಂತ ಹೆಚ್ಚಿನ ಸಂತೋಷ ಕೊಡುವ ಮತ್ತೊಂದು ಮಾರ್ಗವೂ ಇದೆ, ಏನದು?, ಸಿಂಪಲ್! ಉಳಿತಾಯದ ಮೊತ್ತದಲ್ಲಿ ಸ್ವಲ್ಪ ಭಾಗವನ್ನು ಪ್ರತಿಫಲ ಬಯಸದೆ ಓದುವ ಬಡ ಮಕ್ಕಳಿಗೆ, ಕಷ್ಟದಲ್ಲಿರುವ ಬಂಧು ಬಳಗದವರಿಗೆ ವಿನಿಯೋಗಿಸಿದರೆ, ಅದರಿಂದ ಅನುಕೂಲ ಪಡೆದವರು ಜೀವಿತಾವಧಿಯವರೆಗೂ ನೆನಪಿಸಿಕೊಂಡಾರು. ಸಹಾಯ ಪಡೆದ ಮಕ್ಕಳು ಭವಿಷ್ಯದಲ್ಲಿ ಉನ್ನತ ಪದವಿಯನ್ನು ಪಡೆಯಲೂ ಬಹುದು, ಮುಂದೆ ಅವರೂ ಸಹ ನಿಮ್ಮಂತೆ ದುಡಿದ ಹಣದಲ್ಲಿ ಸ್ವಲ್ಪ ಭಾಗ ಸಮಾಜಕ್ಕೆ ನೀಡಬಹುದು. ದುರಾದೃಷ್ಟದಿಂದ ಸಂಕಷ್ಟಕ್ಕೆ ಸಿಲುಕಿದರೆ ಹೆತ್ತ ಮಕ್ಕಳಿಗಿಂತಲೂ ಸಹಾಯ ಪಡೆದ ಅನ್ಯರು ನಮ್ಮ ಬೆಂಬಲಕ್ಕೆ ನಿಲ್ಲುತ್ತಾರೆ. ವಿದ್ಯೆ ಇದ್ದವರು, ಅಧಿಕಾರದಲ್ಲಿದ್ದವರು ದೊಡ್ಡವರಲ್ಲ. ಕಷ್ಟದ ಸಮಯದಲ್ಲಿ ಅವಶ್ಯಕತೆ ಇರುವವರಿಗೆ ಸಹಾಯ ಮಾಡುವವರು ಎಲ್ಲರಿಗಿಂತ ದೊಡ್ಡವರು.

• ಮಿರ್ಲೆ ಚಂದ್ರಶೇಖರ

ಮನಸ್ಸಿನ ಮಾತಿಗೆ ಕಿವಿಗೊಡಿ!

ನಾನೂಂದ್ರೆ ನಂಗಿಷ್ಟ
• ಡಾ. ಡಿ.ಎಂ ಹೆಗಡೆ

ಹೆಂಡತಿ/ಗಂಡ, ಮಕ್ಕಳು, ಅಕ್ಕ-ತಂಗಿಯರು, ಅಣ್ಣ-ತಮ್ಮಂದಿರು, ಪಾಲಕರು, ಗೆಳೆಯರು, ನೆಂಟರು, ಮತ್ತೆ ಕೆಲವು ಸಲ ಮನೆ ಕೆಲಸದವರು ಸಹ ನಮ್ಮ ಮಾತನ್ನು ಕೇಳುವುದಿಲ್ಲ ಎಂದು ಅನ್ನಿಸಿ ಕೋಪಗೊಂಡಿರುತ್ತೇವೆ. ಅವರಿವರ ವಿಷಯ ಒತ್ತಟ್ಟಿಗಿರಲಿ. ನಮ್ಮೊಳಗಿನ ನಮ್ಮ ಮನಸ್ಸಿನ ನಾವು, ಬಹಳಷ್ಟು ಸಲ ಮನಸ್ಸಿನ ಮಾತನ್ನು ಕೇಳುವುದಿಲ್ಲ ಎನ್ನುವುದು ಸಹ ಅಷ್ಟೇ ಸರಳವಾದ ಉತ್ತರ. ಇದು ಎಲ್ಲರ ಅನುಭವಕ್ಕೂ ಬಂದಿರುತ್ತದೆ. ನಾವೆಲ್ಲರೂ ಮನಸ್ಸಿನ ಮಾತನ್ನು ಕೇಳದೇ ಇರುವುದನ್ನೇ ಅಭ್ಯಾಸವನ್ನೂ ಮಾಡಿಕೊಂಡಿರುತ್ತೀರಿ. ಅದರ ಪಾಡಿಗೆ ಅದು ಮಾತನಾಡುತ್ತಿರುತ್ತದೆ. ನಮ್ಮ ಪಾಡಿಗೆ ನಾವಿರುತ್ತೇವೆ! ಹೇಗಿದೆ ನೋಡಿ ನಮ್ಮ ಮತ್ತು ನಮ್ಮ ಮನಸ್ಸಿನ ಸಂಬಂಧ.

ಎಲ್ಲರೂ ನಮ್ಮ ಮಾತನ್ನು ಕೇಳಬೇಕು ಎಂದು ಬಯಸುತ್ತೇವೆ. ಆದರೆ ನಾವು ನಮ್ಮ ಮನಸ್ಸಿನ ಮಾತನ್ನೇ ಎಷ್ಟು ಕೇಳುತ್ತೇವೆ, ಎಂದು ಎಂದಾದರೂ ಆಲೋಚಿಸಿದ್ದೇವೆಯೇ?

ಈಗ ಸಾವಕಾಶವಾಗಿ ನಮ್ಮನ್ನು ನಾವೇ ವಿಚಾರಿಸಿಕೊಳ್ಳಬೇಕು. ನಮ್ಮ ಮನಸ್ಸಿನ ಮಾತನ್ನು ನೀವು ಕೇಳುವುದಿಲ್ಲ ಎಂದ ಮೇಲೆ ನಮ್ಮ ಮಾತನ್ನು ಉಳಿದವರು ಕೇಳಬೇಕು ಎಂದು ಆಸೆ ಪಡುವುದು ಎಷ್ಟು ಸರಿ?

ಅವರಿವರು ಕೇಳುತ್ತಿಲ್ಲ!

'ಅದೆಲ್ಲ ಗೊತ್ತಿಲ್ಲರೀ. ನಾನು ಹೇಳಿದಂತೆ ಎಲ್ಲರೂ ಕೇಳಬೇಕು. ನಾನು ಈ ಮನೆಯ ಯಜಮಾನ. ನನ್ನ ಮಾತಿಗೆ ಇಲ್ಲಿಯೇ ರವಷ್ಟೂ ಬೆಲೆ ಇಲ್ಲದಿದ್ದರೆ ನನ್ನ ಬದುಕಿಗೇನು ಬೆಲೆ? ನಾನು ನನ್ನವರ ಒಳಿತಿಗಾಗಿಯೇ ಹೇಳೋದು. ಅದನ್ನು ಅವರು ಅರ್ಥಮಾಡಿಕೊಳ್ಳುವುದಿಲ್ಲ. ಮಕ್ಕಳಿನ್ನೂ ಚಿಕ್ಕವರು. ಅವರಿಗೆ ಸ್ವಲ್ಪ ಸಮಾಧಾನದಿಂದ ಹೇಳಬಹುದು. ಆದರೆ, ಇವಳಿ(ರಿ)ಗೇನಾಗಿದೇರೀ ಧಾಡೀ, ನನ್ನ ಮಾತು ಅಂದ್ರೆ ಕಿತ್ತೋಗಿರೋ ಚಪ್ಲಿ ಥರಾ ಬಿಸಾಕ್ತಾರೆ.' ಅಂತೆಲ್ಲ ಗೋಳಾಡುತ್ತೀರಿ, ತಾನೆ? ನಿಮ್ಮ ಜೀವನಾನುಭವ, ನಿಮ್ಮ ವಿಚಾರ ಎಲ್ಲವೂ ಸರಿ. ಅದನ್ನು ಅವರ ಒಳಿತಿಗಾಗಿಯೇ ಹೇಳುತ್ತೀರಿ. ಅವರು ಅದನ್ನು ಕೇಳಬೇಕು. ನಿಮ್ಮ ಮಾತಿಗೆ ವ್ಯಕ್ತಿತ್ವಕ್ಕೆ ಗೌರವ ಕೊಡಬೇಕು. ಇವಿಷ್ಟೂ ಸರಿ. ಇದಕ್ಕಿಂತಲೂ ಒಂದಿಷ್ಟು ಮುಖ್ಯವಾದ ವಿಷಯವನ್ನು ನೀವು ಗಮನಿಸಿಲ್ಲ. ಅದೇನೆಂದರೆ, ನಿಮ್ಮ ಮನಸ್ಸಿನ ಮಾತನ್ನು ನೀವು ಕೇಳುತ್ತಿಲ್ಲ!

ಬಹಳ ಸೋಜಿಗ ಮತ್ತು ಸತ್ಯವಾದ ಸಂಗತಿ ಎಂದರೆ,

ನಮ್ಮ ಮನಸ್ಸು ಯಾವಾಗಲೂ ನಮ್ಮ ಒಳಿತನ್ನೇ ಆಶಿಸುತ್ತದೆ ಮತ್ತು ನಮಗೆ ಒಳಿತಾಗುವುದನ್ನೇ ಹೇಳುತ್ತ ಇರುತ್ತದೆ. ಆದರೂ, ನಾವು ಅದರ ಮಾತನ್ನು ಕೇಳುವುದಿಲ್ಲ. ಮನಸ್ಸಿನ ಮಾತುಗಳನ್ನು ಕೇಳದಿರುವುದನ್ನು ರೂಢಿ ಮಾಡಿಕೊಂಡಿದ್ದೀರಿ. ಅದರಿಂದಾಗಿ ನಮಗೆ ಬಹಳಷ್ಟು ನಷ್ಟವಾಗುತ್ತದೆ. ನೋವಾಗುತ್ತದೆ. ಹಾಗಾಗಿ ಚಿಂತೆ ಶುರುವಾಗುತ್ತದೆ. ಇಷ್ಟಾದ ಮೇಲ್ಮೆ ಆರೋಗ್ಯದಲ್ಲಿ ಏರುಪೇರಾಗುತ್ತದೆ. ಅಷ್ಟಾಗುವಷ್ಟರಲ್ಲಿ ದುರದೃಷ್ಟ ಶುರುವಾಗಿದೆ ಅಂತೆಲ್ಲ ಅನ್ನಿಸಲಿಕ್ಕೆ ಶುರುವಾಗುತ್ತದೆ. ಹಾಗೆಯೇ ಭಾವನಾತ್ಮಕವಾಗಿಯೂ, ಶಾರೀರಿಕವಾಗಿಯೂ ಸೋಲತೊಡಗುತ್ತೇವೆ. ಬದುಕಿನ ಬಣ್ಣಗಳು ಮಸಕಾದಂತೆ ಅನ್ನಿಸತೊಡಗುತ್ತವೆ. ಭರವಸೆ ಕಡಿಮೆಯಾದಂತೆ ಅನ್ನಿಸತೊಡಗುತ್ತದೆ. ಸಾಕಷ್ಟು ಹಿಂದೆಯೇ ಯಾವತ್ತೋ ಮನಸ್ಸು ಹೇಳಿದಂತೆ ಕೇಳಿರುತ್ತಿದ್ದರೆ ಖಂಡಿತ ಹೀಗಾಗುತ್ತಿರಲಿಲ್ಲ ಅಂತ ಅನ್ನಿಸುತ್ತದೆ!

ಅಂತರಂಗದ ಕರೆಗೆ ಓಗೊಡಿ

ನಮ್ಮ ಮನಸ್ಸಿನ ಮಾತು ಎಂದರೆ ಅದು ನಮ್ಮ ಅಂತರಂಗದ ಕರೆ; ಆ ಕರೆಗೆ ಓಗೊಡಬೇಕಾದವರು ನಾವೇ ಅಲ್ಲವೇ?



ನಮ್ಮ ಅಂತರಂಗದ ಕರೆಯೇ ನಮ್ಮ ಸಹಜ ಸ್ಪಂದನೆ; ಅದರಲ್ಲಿ ಕಪಟವಾಗಲಿ, ಕೃತಕೃತೆಯಾಗಲಿ ಇರದು.

ನಮ್ಮ ಮನಸ್ಸು, ನಮ್ಮ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳುವ ಬಗ್ಗೆ ಪದೇ ಪದೇ ಹೇಳುತ್ತಿರುತ್ತದೆ. ಪ್ರತಿದಿನ ಬೆಳಗ್ಗೆ ಬೇಗನೇ ಏಳಬೇಕು ಮತ್ತು ಆದರಿಂದ ಒಳ್ಳೆಯದು ಆಗುತ್ತದೆ ಎಂದು ಹೇಳಿರುತ್ತದೆ. ಬಹಳಷ್ಟು ಸಲ ರಾತ್ರಿ ಮಲಗುವಾಗ ಬೆಳಿಗ್ಗೆ ಐದಕ್ಕೋ, ಆರಕ್ಕೆ ಏಳಬೇಕು ಅಂತ ಅಂದುಕೊಂಡಿರುತ್ತೇವೆ. ಅದರಂತೆ ಬೆಳಿಗ್ಗೆ ನೀವಿಟ್ಟುಕೊಂಡ ಆಲಾರಾಮ್ ರಿಂಗಣಿಸುವುದಕ್ಕೆ ಒಂದೆರಡು ನಿಮಿಷ ಮೊದಲೇ ನಿಮಗೆ ಎಚ್ಚರವಾಗುತ್ತದೆ ಗಡಿಯಾರವನ್ನು ನೋಡಿಕೊಂಡು ಮತ್ತೆ ಅರ್ಧಗಂಟೆ ಮಲಗುವಾ ಎಂದು ಮುಸುಕೆಳೆದುಕೊಳ್ಳುತ್ತೇವೆ. ಒಂದು-ಒಂದೂವರೆ ತಾಸಿನ ನಂತರ ಎಚ್ಚರಾದಾಗ ತಡವಾಯಿತು ಎಂದು ಹಳಹಳಿಸುತ್ತೇವೆ. ಮನಸು ಒಳ್ಳೆಯ ಆಹಾರವನ್ನು ತಿನ್ನಬೇಕು, ಕುರುಕಲನ್ನು ತಿನ್ನಬಾರದು ಎಂದು ಹೇಳುತ್ತದೆ. ಆದರೆ ಅದೂ ಇದೂಂತ ಜಂಕು ತಿನ್ನುತ್ತೇವೆ. ತಿಂದಿದ್ದನ್ನು ಸಮರ್ಥಿಸಿಕೊಳ್ಳುವುದಕ್ಕೆ ಒಂದಿಷ್ಟು ಕಾರಣಗಳನ್ನು ಕೊಟ್ಟುಕೊಳ್ಳುತ್ತೇವೆ. ಸಿಗರೇಟು ಸೇದಬಾರದು, ನಾಳೆಯಿಂದ ಕುಡಿಯುವುದನ್ನು ಬಿಡಲೇಬೇಕು. ನಾಳೆಯಿಂದ ಪ್ರತಿದಿನ ಬೆಳಿಗ್ಗೆ ಅಥವಾ ಸಾಯಂಕಾಲ ಕನಿಷ್ಠ ಅರ್ಧಗಂಟೆ ಯೋಗಾಸನ ಮಾಡಬೇಕು. ಮನೆಯಲ್ಲಿ ಕೋಪ ಮಾಡಿಕೊಳ್ಳಬಾರದು. ಮಕ್ಕಳನ್ನು ಬೈಯ್ಯಬಾರದು, ಹೀಗೇ ಮನಸ್ಸು ಪ್ರತಿದಿವಸ ಸಾಕಷ್ಟು ಸದ್ಬೋಧನೆಯನ್ನು ಮಾಡುತ್ತ ಇರುತ್ತದೆ. ಆದರೆ ಅದರಂತೆ ನಾವು ಮಾಡುವುದಿಲ್ಲ.

ಮನಸ್ಸು ಮಾಡಬೇಕು ಅಂತ ಹೇಳಿದ್ದನ್ನ ಮಾಡಿದರೆ ಮುಗಿಯಿತು! ಆರೋಗ್ಯ, ಆಯುಷ್ಯ, ಸಂತೋಷ, ನೆಮ್ಮದಿ, ಶಾಂತಿ ಎಲ್ಲವೂ ಸಿಗುತ್ತದೆ.

ಮನದ ಮಾತು ಕೇಳುವುದರ ಅನುಕೂಲತೆ

ಮನಸ್ಸು ಹೇಳಿದ ಮಾತನ್ನು ಕೇಳಲಿಕ್ಕೆ ಸಾಧ್ಯವಾಗದಿರುವ ಬಗ್ಗೆ ಬುದ್ಧಿಗೆ ಸಾಕಷ್ಟು ಕಾರಣಗಳು ಸಿಗುತ್ತವೆ. ಅವಷ್ಟೂ ಕಾರಣಗಳನ್ನು ನಂಬಿಕೊಂಡವರಂತೆ ಇರುತ್ತೇವೆ. ಆದರೆ ಮನಸ್ಸು ಮಾತ್ರ ತನ್ನ ಕೆಲಸವನ್ನು ಮಾಡುತ್ತಲೇ ಇರುತ್ತದೆ. ಒಳಿತಾಗುವುದನ್ನು ಮಾಡಬೇಕು ಅಂತಲೂ, ಕೆಡಕಾಗುವುದನ್ನು ಮಾಡಬಾರದು ಅಂತಲೂ ಹೇಳುತ್ತಲೇ ಇರುತ್ತದೆ! ಸೂರ್ಯಚಂದ್ರರ ಹಾಗೆ ಮನನಿತ್ಯವೂ ತನ್ನ ಕೆಲಸವನ್ನು ಮಾಡುತ್ತದೆ. ಆದರೆ ನಾವು, ಅದೂ ಇದೂಂತ ಕಾರಣಗಳನ್ನು ಮುಂದಿಡುತ್ತಾ ಅದರ ಮಾತು ಕೇಳದಿರುವುದನ್ನು ರೂಢಿಸಿಕೊಂಡಿರುತ್ತೇವೆ. ಮನದ ಮಾತನ್ನು ಕೇಳುವುದರಿಂದ ನಮಗೆ ಆಗುವ ಅನುಕೂಲತೆಗಳೇನು ಎನ್ನುವುದನ್ನು ತಿಳಿದುಕೊಳ್ಳಬೇಕು. ಮನಸ್ಸಿನ ಮಾತುಗಳನ್ನು ಕೇಳುವುದಕ್ಕೆ ಕಾರಣಗಳನ್ನು ಹುಡುಕಿಕೊಳ್ಳಬೇಕು. ಇಷ್ಟರಲ್ಲಾಗಲೇ ಕೆಲವಷ್ಟು ಸಲವಾದರೂ, ಮನಸ್ಸು ಹೇಳಿದಂತೆ ಕೇಳಿರುತ್ತಿದ್ದರೆ ಸಾಕಷ್ಟು ಲಾಭವಾಗುತ್ತಿತ್ತು ಅಂತಲೋ ಅಥವಾ ಕೆಲವು ಅವಘಡಗಳಿಂದ ತಪ್ಪಿಸಿಕೊಳ್ಳಬಹುದಿತ್ತು ಅಂತಲೋ ಖಂಡಿತವಾಗಿಯೂ ಅನ್ನಿಸಿರುತ್ತದೆ.

ಹಾಗಾಗಿ, ಈಗಿನಿಂದಲೇ ಮನಸ್ಸಿನ ಮಾತುಗಳನ್ನು ಗಮನವಿಟ್ಟು ಕೇಳಿಸಿಕೊಳ್ಳಲಿಕ್ಕೆ ಶುರುಮಾಡಿ. ಅದು ಹೇಳಿದಂತೆ ಮಾಡುವುದನ್ನು ರೂಢಿಸಿಕೊಳ್ಳಿ. ಅದರಿಂದಾಗುವ ಅನುಕೂಲಗಳ ಪಟ್ಟಿ ಮಾಡಿ. ನಿಮ್ಮ ಜೀವನವನ್ನು ಸಂತೋಷಮಯವನ್ನಾಗಿಸಿಕೊಳ್ಳಲಿಕ್ಕೆ ನಿಮ್ಮೊಳಗೆ ಇರುವ ಅತ್ಯಮೂಲ್ಯ ಸಂಪತ್ತಿನ ಸದುಪಯೋಗಮಾಡಿಕೊಳ್ಳಿ.

ಎಲ್ಲರಿಗೂ ಭಗವಂತ ಒಂದಷ್ಟು ಪ್ಲಸ್, ಮೈನಸ್ ಕರುಣಿಸಿರುತ್ತಾನೆ. ಒಬ್ಬರಿದ್ದಂತೆ ಇನ್ನೊಬ್ಬರಿಲ್ಲ, ಚಿಂತನೆ, ಕಲ್ಪನೆಗಳಿರುವುದಿಲ್ಲ. ಆದರೆ, ಏನನ್ನಾದರೂ ಸಾಧಿಸಬೇಕು ಎಂಬ ಹಂಬಲ ಮಾತ್ರ ಇರುತ್ತದೆ. ಕೆಲವರಿಗದು ಕೇವಲ ಆಸೆಯಾಗಿ, ಕೈಗೆಟುಕದ ನಕ್ಷತ್ರವಾಗಿ, ನಮಗಲ್ಲ ಎಂಬ ನೆಪವಾಗಿ ಉಳಿಯುತ್ತದೆ. ಇನ್ನು ಕೆಲವರಿಗೆ ಮಾತ್ರವೇ ಸಾಧ್ಯವಾಗುತ್ತದೆ. ಕಾರಣ, ಅವರೆಲ್ಲರೂ ಕನಸುಗಾರರು. ಸಾಧಿಸಿಯೇ ತೀರಬೇಕೆಂಬ ಹಟದವರು. ಅಂತಹ ಮಕ್ಕಳು ನಮ್ಮೆಲ್ಲರ ಮನೆಗಳಲ್ಲಿದ್ದಾರೆ. ಮಕ್ಕಳಿಗೆ ಊಟ, ಬಟ್ಟೆ ಎಲ್ಲವನ್ನೂ ಕೊಟ್ಟೆವು, ಕೇಳಿದ್ದೆಲ್ಲ ಕೊಡಿಸಿದೆವು ಎಂದಷ್ಟೇ ಹೇಳಬೇಡಿ. ಹುಟ್ಟಿಸಿದ್ದಕ್ಕಾಗಿ ಅದನ್ನೆಲ್ಲ ಮಾಡಲೇಬೇಕು, ಮಾಡುತ್ತಿದ್ದೀರಿ ಅಷ್ಟೇ. ಮುಖ್ಯವಾಗಿ ಮಕ್ಕಳಿಗೆ ಬೇಕಿರುವುದು ನಿಮ್ಮ ನಂಬಿಕೆ, ಮೆಚ್ಚುಗೆ, ಸ್ವಾತಂತ್ರ್ಯ ಮತ್ತು ಗೌರವ. ಇಷ್ಟು ಕೊಟ್ಟು ನೋಡಿ ಸಾಕು..

ಮಕ್ಕಳಿಗೇನು ಕೊಡಬೇಕು?

• ಮೋಹನ್

ಕೆಲವರ ದೇಹಕ್ಕೆ ವಯಸ್ಸಾಗಿರುತ್ತದೆ, ಬುದ್ಧಿ ಬಲಿತಿರುವುದಿಲ್ಲ. ಇನ್ನೂ ಕೆಲವರಿಗೆ ದೇಹ ಮಾಗಿರುವುದಿಲ್ಲ, ಆದರೆ ಬುದ್ಧಿ ಮಾತ್ರ ಬುಲೆಟ್ ಟ್ರೈನ್! ಸಾಧನೆಗೆ ವಯಸ್ಸಿನ ಮಿತಿಯಿಲ್ಲ ಎಂಬುದನ್ನು ಮತ್ತೆ ಮನದಟ್ಟು ಮಾಡಬಲ್ಲ ಪುಟ್ಟ ವಯಸ್ಸಿನ ದೊಡ್ಡ ಸಾಧಕಿಯ ಕತೆಯಿದು. ಅವರೇ ಶ್ರೀಲಕ್ಷ್ಮಿ ಸುರೇಶ್, ಹೆಸರಲ್ಲಿ ಲಕ್ಷ್ಮಿಯಿದ್ದರೂ ಈ ಪೋರಿ ಸರಸ್ವತಿ ಕೃಪೆಯಿಂದ ಮಿನುಗಿದವರು.

ಕೇರಳದ ಕೋಜಿಕೋಡ್‌ನಲ್ಲಿ 1998ರಲ್ಲಿ ಜನಿಸಿದ ಶ್ರೀಲಕ್ಷ್ಮಿ ಅಪ್ಪ-ಅಮ್ಮನ ಮುದ್ದಿನ ಮಗಳು. ಅಪ್ಪ ಸುರೇಶ್ ವಕೀಲರಾಗಿದ್ದದರಿಂದ ಮನೆಯಲ್ಲಿ ಕಂಪ್ಯೂಟರ್ ಇತ್ತು. ಅಂಬೆಗಾಲಿನ ಲಕ್ಷ್ಮಿಗೆ ಬರೀ ಕಂಪ್ಯೂಟರ್‌ನತ್ತಲೇ ಕಣ್ಣು. ಒಂದು ಡಬ್ಬಿಯೊಳಗೆ ಏನೇನೆಲ್ಲ ಹೇಗೆ ಕಾಣುತ್ತದೆ ಎಂಬ ಕೌತುಕ. ಇದನ್ನು ಗಮನಿಸಿದ ಸುರೇಶ್, ಮಗಳಿಗೆ ಕಂಪ್ಯೂಟರ್‌ನ ಪುಸ್ತಕಗಳನ್ನು ತಂದು ದಿನವೂ ಅದರಲ್ಲಿನ ವಿಷಯಗಳ ಬಗ್ಗೆ ಹೇಳುತ್ತಿದ್ದರು. ಮಗಳಿಗೆ ನಾಲ್ಕೈದು ವರ್ಷವಾದ ನಂತರ ಶಾಲೆಗೂ ಸೇರಿಸಿದರು.

ಶಾಲೆಯಲ್ಲಿ ಚುರುಕಾಗಿದ್ದ ಶ್ರೀಲಕ್ಷ್ಮಿಗೆ ಕಂಪ್ಯೂಟರ್‌ನದ್ದೇ ಕನವರಿಕೆ. ಹಾಗಾಗಿ ಅದರ ಬಗ್ಗೆ ಹೆಚ್ಚಿನ ಮಾಹಿತಿ, ಅದರಲ್ಲಿನ ಸಾಧ್ಯತೆ ಬಗ್ಗೆ ನಿರಂತರವಾಗಿ ಮನೆಯಲ್ಲಿ ಅಪ್ಪ ಸುರೇಶ್ ತಿಳಿಸುತ್ತಲೇ ಇದ್ದರು. ಹೀಗೊಂದು ದಿನ ಮನೆಯಲ್ಲಿ ಟಿವಿ ನೋಡುತ್ತ ಕುಳಿತಿದ್ದಾಗ, ನಿಮಗೆ ಬೇಕಾದ ಎಲ್ಲ ಮಾಹಿತಿ ವೆಬ್ ಸೈಟ್‌ನಲ್ಲಿ ಪಡೆಯಿರಿ, ಯಾವ ಸಮಯವಾದರೂ, ವಿಶ್ವದ ಯಾವ ಪ್ರದೇಶವಾದರೂ ಅಡ್ಡಿಯಿಲ್ಲ ಎಂಬ ಜಾಹೀರಾತೊಂದು ಬಂತು. ಇದನ್ನು ನೋಡುತ್ತಿದ್ದ ಆರು ವರ್ಷದ ಶ್ರೀಲಕ್ಷ್ಮೀ ತನ್ನಪ್ಪನಿಗೆ ಅಪ್ಪಾ, ನಮ್ಮ ಸ್ಕೂಲಿಗೂ ಒಂದು ವೆಬ್ ಸೈಟ್ ಯಾಕಿಲ್ಲ ಎಂದು ಕೇಳಿಬಿಟ್ಟಳು, ಅಪ್ಪ ಕಕ್ಕಾಬಿಕ್ಕಿ!



ಅತಿಕಿರಿಯ ಶ್ರೀಮಂತ ವೆಬ್‌ಡಿಸೈನರ್

ಎಲ್ಲ ಕಂಪನಿ, ಶಾಲೆ, ಉದ್ಯಮಗಳಿಗೂ ವೆಬ್‌ಸೈಟ್ ಮಾಡಿಕೊಡುವ ಸಂಸ್ಥೆ ಆರಂಭದ ಪರಿಕಲ್ಪನೆ. ಅದರ ಸಾಕಾರವೇ ಇ-ಡಿಸೈನ್ ಕಂಪನಿ, ಸಿಇಒ ಆದಾಗ ಆಕೆಗಿನ್ನೂ ಜಸ್ಟ್ 9 ವರ್ಷ, ಇನ್ನೆರಡು ವರ್ಷದಲ್ಲೇ ಟೈನಿ ಡಿಸೈನ್ ಎಂಬ ಎರಡನೇ ಕಂಪನಿ ಸ್ಥಾಪಿಸಲಾಯಿತು. ವಿಶ್ವದ ಅತಿ ಕಿರಿಯ ಸಿಇಒ, ವೆಬ್ ಡಿಸೈನರ್, ಕೇರಳದ ಶ್ರೀಮಂತ ವೆಬ್‌ಡಿಸೈನರ್ ಎಂಬ ಕೀರ್ತಿಗೆ ಶ್ರೀಲಕ್ಷ್ಮೀ ಅವರದ್ದು. ಈಗ 25ರ ಪ್ರಾಯದಲ್ಲಿರುವ ಶ್ರೀಲಕ್ಷ್ಮಿಗೆ ದೇಶ, ವಿದೇಶಗಳ ಪ್ರಶಸ್ತಿ, ಪುರಸ್ಕಾರ, ಸನ್ಮಾನಗಳ ರಾಶಿಯಿದೆ. ಸರಸ್ವತಿಯನ್ನು ನಂಬಿ ಶ್ರೀಲಕ್ಷ್ಮೀ ಸಾಧಿಸಿದ ಕತೆಯಿದು.

ಪುಟ್ಟ ಪೋರಿಯ ದೊಡ್ಡ ಸಾಧನೆ

ಈ ಮಾತನ್ನೇ ಗಂಭೀರವಾಗಿ ಪರಿಗಣಿಸಿದ ಸುರೇಶ್, ಮಗಳಿಗೆ ವೆಬ್‌ಸೈಟ್ ಡಿಸೈನಿಂಗ್ ಬಗ್ಗೆ ಪುಸ್ತಕ ತಂದರು. ಇದನ್ನು ನೋಡಿಕೊಂಡು ನೀನೇ ಕಲಿತು, ನಿಮ್ಮ ಶಾಲೆಗೆ ನೀನೇ ವೆಬ್‌ಸೈಟ್ ಮಾಡಿಕೊಡು ಎಂದರು. ಶ್ರೀಲಕ್ಷ್ಮೀ ಕೂಡ ಅಷ್ಟೇ ಗಂಭೀರವಾಗಿ ಆಯ್ತು ಮಾಡ್ತೇನೆ ಎಂದರು. ಅಂದಿನಿಂದಲೇ ವೆಬ್‌ಸೈಟ್ ಕಲಿಕೆ ಆರಂಭವಾಯಿತು. ಸತತ ಒಂದೂವರೆ ವರ್ಷಗಳ ತಪಸ್ಸಿನ ಫಲವಾಗಿ ಶಾಲೆಯ ವೆಬ್‌ಸೈಟ್ ತಯಾರಾಗಿತ್ತು! ಪುಟ್ಟ ಪೋರಿಯ ಈ ಸಾಧನೆ ಮೆಚ್ಚಿ ರಾಜ್ಯದ ಶಿಕ್ಷಣ ಮಂತ್ರಿಗಳೇ ಲೋಕಾರ್ಪಣೆಗೆ ಬಂದರು. ಶ್ರೀಲಕ್ಷ್ಮಿಗೆ ಅಪಾರ ಹೆಸರು ಬಂತು. ಆದರೆ, ಈ ಪುಟ್ಟ ಪೋರಿಗೆ ಮುಂದಿನ ಹೆಜ್ಜೆಯತ್ತ ಗಮನ.

ಕುಸಿಯದೆ ಉಳಿದ ಪೀಸಾ ಗೋಪುರ !

• ಸುರೇಶ್ ಬಾಲಚಂದ್ರನ್

ಬಿಲ್ಡಿಂಗ್ ಬ್ಲಾಕ್ ಸೊಟ್ಟಕ್ಕಿಟ್ರೇನೇ ನಿಲ್ಲಲ್ಲ. ಅದು ಹೇಗೆ ಇಟಲಿಯಲ್ಲಿರುವ ಈ ಪೀಸಾ ಟವರ್ ಸೊಟ್ಟಕ್ಕಿದ್ದರು ಬೀಳದೆ ನಿಂತಿದೆ, ಹೀಗಾಗಿ ವಾಲಿರುವ ಪೀಸಾದ ಬಗ್ಗೆ ಸ್ವಲ್ಪ ಸಂಶೋಧನೆ ಕೆಳಗಿನ ಚಿಕ್ಕ ಮಾಹಿತಿಯಾಗಿ ಪರ್ಯಾವಸನಗೊಂಡಿದೆ. ಇಟಲಿ ದೇಶದಲ್ಲಿ ಎಷ್ಟೋ ಯೇಸುಮಂದಿರಗಳಿವೆ. ಅದರಲ್ಲೂ ಆಶ್ಚರ್ಯವೆಂದರೆ, ಪೀಸಾ ಎಂಬ ನಗರದಲ್ಲಿ ಯೇಸುಮಂದಿರದ ಬದಲಾಗಿ ಅದರ ಘಂಟೆ ಗೋಪುರ ಜಗದ್ವಿಖ್ಯಾತವಾಗಿದೆ, ಏಕೆ ಹೀಗೆ ಎನ್ನುವ ಬಗ್ಗೆ ಬನ್ನಿ ಇನ್ನಷ್ಟು ಮಾಹಿತಿ ಇಲ್ಲಿದೆ.

ಸಾಮಾನ್ಯವಾಗಿ ಪುರಾತನ ಯೇಸುಮಂದಿರಗಳ ಜತೆಗೆ ಘಂಟೆ ಗೋಪುರಗಳನ್ನು ಹಿಂದಿನಿಂದಲೂ ಕಟ್ಟುವ ವಾಡಿಕೆ ಇತ್ತು. ಕ್ರಿ.ಶ 1173 ಪೀಸಾದಲ್ಲಿ ಯೇಸುಮಂದಿರ ಹಾಗು ಘಂಟೆ ಗೋಪುರ ನಿರ್ಮಿಸಲು ಶಂಖುಸ್ಥಾಪನೆ ಆಯಿತು, ಕಾಮಗಾರಿ ಮುಗಿಸಲು ಬರೋಬ್ಬರಿ 199 ವರ್ಷಗಳಾಗಿವೆ.

ಅತಿ ವಿಶಿಷ್ಟವಾದ ಈ ಗೋಪುರದ ಪ್ರಮುಖ ಆಕರ್ಷಣೆಯೆಂದರೆ ಅನುದ್ದೇಶಿತ ವಾಲುವಿಕೆ. ಈಗಿನ ಸಂಶೋದನೆಗಳ ಪ್ರಕಾರ ನಿರ್ಮಾಣ ಮೊದಲನೆಯ ದಿನದಿಂದಲೆ ಈ ವಾಲುವಿಕೆ ಶುರುವಾಗಿದೆ. ಗೋಪುರ ಕಟ್ಟುವ ಜಾಗದ ಆಯ್ಕೆಯಿಂದಾದ ಚಿಕ್ಕ ತಪ್ಪು ಲೆಕ್ಕಾಚಾರ, ಅತ್ಯಂತ ಮೃದುವಾದ ಮತ್ತು ದುರ್ಬಲ ಅಡಿಪಾಯ ಕಟ್ಟಡದ ಭಾರಹೊರಲು ಅಸಮರ್ಥವಾಗಿರುವುದೇ ಮುಖ್ಯಕಾರಣ! ದಶಕಗಳು ಉರುಳಿದಂತೆ ಕಾಮಗಾರಿ ಮುಗಿಯುವ ಮುನ್ನ ವಾಲುವಿಕೆ ಹೆಚ್ಚಾಗಿದೆ. ಕ್ರಿ.ಶ 20 ಮತ್ತು 21ನೇ ಶತಮಾನಗಳಲ್ಲಾದ ಪ್ರಯತ್ನದ ಫಲವಾಗಿ ಇಂದು ವಾಲುವಿಕೆಯನ್ನು ಭಾಗಶಃ ಸರಿಪಡಿಸಲಾಗಿದೆ.

ಮೂರು ಹಂತದ 199 ವರ್ಷಗಳ ಕಾಲಾವಧಿಯಲ್ಲಿ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿತ್ತು. 1173ರಿಂದ 1198ರವರೆಗೆ 3 ಅಂತಸ್ತುಗಳನ್ನು ಕಟ್ಟಲಾಯಿತು. ಎರಡನೆಯ ಅಂತಸ್ತು ಕಟ್ಟುವ ಹೊತ್ತಿಗೆ ದೋಷಪೂರಿತವಾದ ವಿನ್ಯಾಸ, ಅಸ್ಥಿರವಾದ ನೆಲ ಮತ್ತು ಕೇವಲ ಮೂರು ಮೀಟರ್ ಆಳದ ಅಡಿಪಾಯದ ಕಾರಣಗಳಿಂದ ಗೋಪುರವು ನಿಧಾನವಾಗಿ ಒಂದೇ ಕಡೆಗೆ ಕುಗ್ಗಲು ಶುರುವಾಯಿತು. 1198ರ ಹೊತ್ತಿಗೆ ತಾತ್ಕಾಲಿಕವಾಗಿ ಮೂರನೆಯ ಅಂತಸ್ತಿನಲ್ಲಿ ಗಡಿಯಾರಗಳನ್ನು ಅಳವಡಿಸಲಾಯಿತು.

ಪೀಸಾ ಗಣರಾಜ್ಯ ಎಡಬಿಡದೆ ಯುದ್ಧ ನಿರತವಾಗಿದ್ದರಿಂದ ಸುಮಾರು ನೂರು ವರ್ಷಗಳವರೆಗೆ ನಿರ್ಮಾಣ ಸ್ಥಗಿತಗೊಂಡಿತು. ಈ ಮಧ್ಯೆ ಕಟ್ಟಡ ವಾಲುತ್ತಿದ್ದರು ಮಣ್ಣು ಮತ್ತು ಅಡಿಪಾಯ ಗಟ್ಟಿಯಾಗಿ ಭದ್ರಗೊಂಡು ಉರುಳಿ ಬೀಳದಂತೆ ತಡೆ ಹಿಡಿಯಿತು. ವಾಲುವಿಕೆಯನ್ನು ಸರಿಪಡಿಸಲೋಸುಗ ಕ್ರಿ.ಶ 1272ರಲ್ಲಿ ಶಿಲ್ಪಿ ಜಿಯೊವನ್ನಿ ಡಿ ಸೈಮೋನ್ ನೇತೃತ್ವವಹಿಸಿ ಮೇಲಿನ ಅಂತಸ್ತುಗಳ ಒಂದು ಭಾಗವನ್ನು ಇನ್ನೊಂದು ಭಾಗಕ್ಕಿಂತ ತುಸು ಎತ್ತರಿಸಿ ಕಟ್ಟಿಸಿದನು. ಇದರ ಫಲವಾಗಿಯೇ ಕಟ್ಟಡ ಒಂದು ಭಾಗ ಸ್ವಲ್ಪ ಡೊಂಕಾಗಿದೆ, ಸೂಕ್ಷ್ಮವಾಗಿ ಗಮನಿಸಿದರೆ ತಿಳಿಯುತ್ತದೆ. ಬರಿಯ 55.86 ಮೀಟರ್ ಉದ್ದವಿದ್ದರೂ ವಾಲಿರುವ ಕಾರಣಕ್ಕಾಗಿ ಐರೋಪ್ಯದ ಮಹೋನ್ನತ ಸ್ಮಾರಕವಾಗಿ ಮತ್ತು ವಿಶ್ವವಿಖ್ಯಾತ ಗೋಪುರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ತಪ್ಪನ್ಯಾಕೆ ಸರಿಪಡಿಸಿಲ್ಲ?

ಗೋಪುರದ ಉದ್ದ 183 ಅಡಿ ವಾಲಿರುವ ಕಡೆಯಾದರೆ, 186 ಅಡಿಗಳು ಇನ್ನೊಂದು ಕಡೆ, 14,500 ಮೆಟ್ರಿಕ್ ಟನ್ ಇದರ ಅಂದಾಜು ತೂಕ. ಹಾಲುಗಲ್ಲು ಮತ್ತು ಬಂಡೆಗಳನ್ನು ಕಟ್ಟಡ ನಿರ್ಮಾಣದಲ್ಲಿ ಬಳಸಲಾಗಿದೆ. ಸೋಜಿಗದ ಸಂಗತಿಯೆಂದರೆ 1990 ಮತ್ತು 2001 ಇಸವಿಯ ಜೀರ್ಣೋದ್ಧಾರದ ಪರಿಣಾಮವಾಗಿ 5.5 ಡಿಗ್ರಿಯಷ್ಟು ವಾಲುತ್ತಿದ್ದ ಕಟ್ಟಡ ಇಂದು 3.99 ಡಿಗ್ರಿಯಷ್ಟು ಮಾತ್ರ ವಾಲಿದೆ. ದಾಖಲೆ, ಪ್ರಮಾಣ ಮತ್ತು ಆಧಾರಗಳ ಬಗ್ಗೆ ಗೊಂದಲಗಳಿರುವುದರಿಂದ ಈ ಕಟ್ಟಡದ ಮುಖ್ಯ ಶಿಲ್ಪಿಗಳು ಯಾರು, ಅವರ್ಯಾರು ಗಂಭೀರವಾದ ಈ ತಪ್ಪನ್ನು ಸರಿಪಡಿಸುವುದಕ್ಕೆ ಪ್ರಯತ್ನಿಸಲಿಲ್ಲವೆ ಎಂದು ಪ್ರಸ್ತಾಪ ಮಾಡಿಲ್ಲ.

ಲವ್‌ಎವೆರಿ ಬಾಡಿ

ರಕ್ತದೊತ್ತಡ ಹೆಚ್ಚಾಗುವುದು ಅಥವಾ ಕಡಿಮೆಯಗುವುದು ಮನುಷ್ಯನ ದೇಹಾರೋಗ್ಯದ ಮೇಲೆ ಅತ್ಯಂತ ದೊಡ್ಡ ಪರಿಣಾಮ ಬೀರುವುದು ನಮಗೆಲ್ಲ ಗೊತ್ತಿದೆ. ಗರ್ಭಿಣಿಯರ ಮೇಲೆ ಇದರ ಪರಿಣಾಮ ಮತ್ತಷ್ಟು ಅಧಿಕ. ಗರ್ಭಿಣಿಯಾಗಿದ್ದಾಗ ರಕ್ತದೊತ್ತಡದಲ್ಲೇನಾದರೂ ಏರುಪೇರಾದರೆ ಅದು ತಾಯಿ ಮತ್ತು ಮಗು ಇಬ್ಬರ ಮೇಲೂ ಪರಿಣಾಮ ಬೀರುತ್ತದೆಯಂತೆ. ಅಷ್ಟೇ ಅಲ್ಲದೆ ಹುಟ್ಟುವ ಮಗು ಹೃದಯ ಸಂಬಂಧಿ ಕಾಯಿಲೆಗಳಿಂದ ಬಾಳಬೇಕಾಗಬಹುದು ಎಂಬುದು ತಜ್ಞರ ಅಭಿಪ್ರಾಯ. ಆದ್ದರಿಂದ ಗರ್ಭಿಣಿಯರು ತಮ್ಮ ಮನಸ್ಸನ್ನು ಸದಾ ಒತ್ತಡ ರಹಿತವಾಗಿಟ್ಟುಕೊಳ್ಳುವುದಲ್ಲದೆ, ಸೇವಿಸುವ ಆಹಾರದಲ್ಲೂ ಒಂದಷ್ಟು ನಿಯಮಗಳನ್ನು ಹಾಕಿಕೊಳ್ಳಬೇಕು. ಹಸಿ ತರಕಾರಿ, ಹಣ್ಣುಗಳಿಗೇ ಹೆಚ್ಚು ಒತ್ತುಕೊಡಬೇಕು. ಕರಿದ, ಬೇಕರಿ ತಿನಿಸುಗಳು ಆರೋಗ್ಯವನ್ನು ಮತ್ತಷ್ಟು ಹದಗೆಡಿಸುತ್ತವೆ. ಅಲ್ಲದೆ ಹೆಚ್ಚು ಖಾರವಿರುವ, ಉಪ್ಪಿರುವ ಆಹಾರವನ್ನು ಸೇವಿಸಬೇಡಿ.

• ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೂರನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ಸಣ್ಣದಲ್ಲದ ಕತೆಗಳು

• ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಫೋಟೋ

ಬಸವಂತಪ್ಪನಿಗೆ ಬಹಳ ವರ್ಷಗಳ ನಂತರ ಕುಲಪುತ್ರ ಜನಿಸಿದ್ದ. ಮಗು ಬಹಳ ಚೂಟಿ. ನೋಡಲು ಬಲು ಅಂದ. ಅವನ ಜಾತಕ ಲೆಕ್ಕಾಚಾರ ಹಾಕಿ ನೋಡಿದ ರಾಮಾಶಾಸ್ತ್ರಿಗಳು ಹೇಳಿದ್ದು. ನಿಮ್ಮ ಮಗನಿಗೆ ಭರ್ಜರಿ ಭವಿಷ್ಯವಿದೆ. ಮುಂದೆ ಅವನು ಜಗತ್ಪ್ರಸಿದ್ಧನಾಗಿ ದೇಶ ವಿದೇಶಗಳ ಪತ್ರಿಕೆಗಳಲ್ಲಿ ಅವನ ಫೋಟೋ ರಾರಾಜಿಸುತ್ತದೆ. ಬಸವಂತಪ್ಪ ದಂಪತಿಗಳಿಗೆ ಹರ್ಷಕ್ಕೆ ಪಾರವೇ ಇಲ್ಲ ಮಗ ಬೆಳೆದ, ಬೆಳೆದು ದೊಡ್ಡವನಾದ. ಮೊಬೈಲ್ ಹಿಡಿದ ಕೈಗೆ ಗನ್ ಬಂತು. ಅಂಡರ್ ವರ್ಲ್ಡ್ ಡಾನ್ ಎನಿಸಿದ. ಇಂಟರ್ ಪೋಲ್ ಪೋಲೀಸರು 'ಬೇಕಾಗಿದ್ದಾರೆ' ಎಂದು ಜಾಹೀರಾತು ಕೊಟ್ಟರು. ದೇಶ ವಿದೇಶಗಳ ಪತ್ರಿಕೆಗಳಲ್ಲಿ ಅವನ ಫೋಟೋ ಅಚ್ಚಾಗಿತ್ತು. ರಾಮಾಶಾಸ್ತ್ರಿಗಳ ಭವಿಷ್ಯ ನಿಜವಾಗಿತ್ತು.

★★★

ಇದುವೇ ಜೀವನ

ಗೋಡೆಯ ಮೇಲೆ ಸೊಳ್ಳೆಯೊಂದು ಕುಳಿತಿತ್ತು. ಅದಕ್ಕೆ ಗೊತ್ತೇ ಆಗದಂತೆ ನಿಧಾನವಾಗಿ ಗೋಡೆಯ ಇನ್ನೊಂದು ಬದಿಯಿಂದ ಬಂದ ಹಲ್ಲಿ ಅದನ್ನು ಲಬಕ್ ಸ್ವಾಹಾ ಮಾಡಿತು. ಹಲ್ಲಿ ಹಾಗೇ ಗೋಡೆಯಿಂದ ಇಳಿದು ನೆಲಕ್ಕೆ ಬರುವಷ್ಟರಲ್ಲಿ ಗಡವ ಬೆಕ್ಕೊಂದು ಅದನ್ನು ಹಿಡಿದು ತಿಂದಿತ್ತು. 'ಅಬ್ಬಾ! ಎಷ್ಟೊಂದು ರುಚಿ!' ಎನ್ನುತ್ತಾ ಬೆಕ್ಕು ಮನೆಯ ಹೊರಬಾಗಿಲು ದಾಟುವಾಗ ಅದೆಲ್ಲಿತ್ತೋ ಬೀದಿ ನಾಯಿ ಬೆಕ್ಕಿನ ಕತ್ತಿಗೆ ಬಾಯಿಹಾಕಿ ಕುತ್ತಿಗೆ ಮುರಿದಿತ್ತು. ನಾಯಿ ತಿರುಗುತ್ತ ಊರ ಹೊರಗೆ ಬರಲು ತೋಳ ಎದುರಾಗಿತ್ತು. ನಾಯಿಯನ್ನು ಕೊಂದು ಉಂಡಿತ್ತು. ದೂರದಲ್ಲಿ ನೋಡುತ್ತಿದ್ದ ಹಸಿದಿದ್ದ ಚಿರತೆ ತೋಳದ ಮೇಲೆರಗಿ ಅದರ ಕತ್ತಿನ ರಕ್ತ ಹೀರಿತ್ತು. ಮರುಕ್ಷಣದಲ್ಲಿ ಆ ದಿಕ್ಕಿನಲ್ಲಿ ಬಂದ ಬೇಟೆಗಾರರ ಗುಂಪಿನ ಬಂದೂಕಿಗೆ ಚಿರತೆ ಬಲಿಯಾಗಿತ್ತು.ಇದಲ್ಲವೇ ಜೀವನ !?

★★★

ಬೇವುಬೆಲ್ಲ

ಅವಳು ಹುಟ್ಟು ಕುರುಡಿ. ತಂದೆ ತಾಯಿ ಬಂಧುಗಳಾರೂ ಇಲ್ಲದ ಅನಾಥೆ. ಭಿಕ್ಷೆ ಬೇಡಿ ಜೀವಿಸುತ್ತಿದ್ದಳು. ಒಂದು ದಿನ ಕೂಗಳತೆಯಲ್ಲಿ ಯಾವುದೋ ಪುರುಷ ಮೂಗನಂತೆ ಭಿಕ್ಷೆ ಕೇಳುತ್ತಿದ್ದುದು ಅರಿವಾಯಿತು. ಅವನೊಬ್ಬ ಮೂಗ. ಕುತೂಹಲ ಪರಿಚಯದ ಮೂಲಕ ಪರಸ್ಪರ ಮನ ಬೆರೆತು ಇಬ್ಬರೂ ಮದುವೆಯಾದರು. ಇದೀಗ ಅವರ ಪುಟ್ಟ ಗುಡಿಸಲಿನ ಗೋಡೆಗಳು ಅವಳು ಹಾಡುವ 'ನಾನು ಅಂಧಳಾದೆ, ನೀನು ಮೂಗನಾದೆ. ಬದುಕೆಲ್ಲ ಬೇವು ಬೆಲ್ಲದ ಹಾಗೆ' ಗೀತೆಗೆ ಸಾಕ್ಷಿಯಾಗಿವೆ.